ಸೋಮವಾರ, ಜೂನ್ 26, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಕೇಂದ್ರ ಭದ್ರತಾ ಪಡೆಗಳ ನಿಯೋಜನೆಗೆ ಆಕ್ಷೇಪಿಸಿರುವ ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಕೋಲ್ಕತ್ತದಲ್ಲಿ ಪ್ರತಿಭಟನೆ ನಡೆಯಿತು

34 years of excellence

Excellent Performance by SHAHEENIANS In NEET-2023

SHAHEEN
GROUP OF INSTITUTIONS

ADARSH
Neet Marks 696

All India Rank 368

Analysis NEET 2023

680+ 10	650+ 33	600+ 128

Expected MBBS Seets 500+

Total Qualified 1700

500 Above Marks in NEET 2023

Bidar	Aurangabad	Belagavi	Bhopal	Delhi	Gulbarga	Hubballi	Hyderabad	Jamshedpur	Kolkata
423	10	1	3	22	5	3	6	4	1

Lucknow	Malegaon	Mumbai	Muzaffarnagar	Nanded	Nizamabad	Patna	Vijaypur
3	70	7	3	3	2	6	2

Total: 587

696 Adarsh 2713080142	695 Sheema Firdous 3102050097	687 Aditya Nitture 2713010810	686 Naba Ahmad 2713060027	685 ABHISHEK 2713110054	685 Owais Mohammed Taqiuddin 2713110255	685 Mohammed Zahid Akmal 2713010964	682 Sameer Kumar Jena 2713080225	680 Nihal Halange 2713010057	680 Mirza Saifullha Baig Arman 2713050488	676 Tahseen Shams Delhi Branch 4410020601	675 Shaikh Sadiya Shamsher 3114020021
671 Amogh Bhande 2713030548	670 Shaikh Maheen Aurangabad 3104080555	670 Hafsah Darbar Aurangabad Branch 3104070482	670 Mohammed Waddo 2713160115	667 Rashida Tarannum Delhi Branch 2001030614	665 Vinay Ghale 2713110111	664 Sana Saeed 4408230239	663 Sarah Yameen 2713010774	671 Shaikh Aatif 2713120233	661 Ifrah Tahseen B 2713120017	660 Mohammad Sufiyan Atiq 3112290069	657 Syed Abdul Hasheer Meer 2713010751
657 Saim Rayyan 3112490226	655 Mohammad farooq Abidsab 2713020241	655 Ansari Kulsum Ejaz Malegaon 3135010482	655 Ansari Aaisha Siddiqua Aqueel Malegaon 3135011461	655 Soham Pasarge 2713010939	655 Samreen Fatima Delhi Branch 2001630485	651 Hammad Ali Khan Delhi Branch 4449080097	650 3001060159 Kashif Kamal . Bhopal Branch	650 Rajesh 2713010852	649 4410030471 Md Aqdas Noor Delhi Branch	648 2713040104 Haniya Zabi	647 Mohammed Azhan Junaid Nanded Branch 3130100087
646 Basavakiran Bidar Main Branch 2713070002	646 Ujamaanjum Hasansab Umachagi	645 Md Kaif 2713040481	645 Muhammed 2713020897	643 Iraah Gehlot Delhi Branch 2001210570	642 Muhammad Aazam 2713030437	642 Jagdish 2713110210	641 2713030811 Sharique Mahmood	640 Kavana H D 2713090247	640 Shaikh Nihalahmed Amirhamja 2713180007	639 Chaitanya 2713050431	639 Mohammad Hammad Nafees Malegaon 3135010286
638 Mohammad Shaheem Malegaon Branch 3135011431	637 Mariyam Qurayshi 2713020498	637 Md Ishaque 2713020381	636 Ghulam Waris 2713020530	636 Tazeen Ashfaqahmed Dafedar 2713130220	635 Aditya Basavaraj 2713020074	635 Abdullah Ansari Saba Malegaon Branch 3135010701	632 Sumaiya Fatima Delhi Branch 2001810110	631 Shaikh Maqdoom Ali 2713130213	630 Abdul Hafeez 2713030793	630 Touheed Saifi Delhi Branch 2001270206	628 Abdul Aziz Siddiqui 2713150151
628 Sifa A Tamboli 2713120140	627 Mohammed Abrar 2713130217	627 Mehar Taj A N 2713010707	626 Mohammed Sohail 2713040549	626 Momin Abdullah Ateeque Ahmad 2713040246	626 Saif Mohammed Ejaz Ahmed Malegaon Branch 3135011476	626 Mohammad Farhan Patna Branch 502010233	625 Shaikh Tameem Aleem 3104020938	625 Syeda Iram Kaif 2713020263	625 Ameer Mohammed Saquib Sabeeh Malegaon Branch 3135010598	624 Saware Keshav 2713140094	623 Nehan Banu 2713050059
623 Ritika Tomar Muzafarnagar Branch	622 Sk Rihan 3605010659	622 Md Nazeem Khan 2713030266	622 Momin Noman Naeem Akhtar Malegaon Branch 3135011754	621 Kafeel Ali 2713020116	621 Mohammad Mahtab Ishteyaque Delhi Branch 4410080431	620 Vedant 2713150009	620 Mulla Mohammad Umar 2713010490	620 Sofia Arif Kolkata Branch 3604130039	620 Habeeba Tasneem Lucknow Branch 4408150534	619 Abdur Rahman Khan 4450030329	619 Shahuquee Shaheera Marghub Malegaon Branch 3135011084
619 Hafiz Abdul Rahman Muzafarnagar Branch	618 Faiza Khanum Bidar Main Branch 2713140175	618 Momin Sariya Sadaf Farooque Malegaon Branch 3135010950	616 Mohammed Huzaifa Abdul Wahab Malegaon Branch 3135011312	615 Bhagyavanti 2713160161	614 Ibrahim Ahmed Bhopal Branch 3001070164	614 Nida Faizi 2712080136	614 Md Owais Farough Ahmed Malegaon Branch 3135010274	613 Zarreen Kausar Sajid Akhtar Malegaon Branch 3135011567	612 Bhoomika Veershette 2713040059	612 Rakesh S Malannavar Hubli Branch 2706010730	611 Abdulmateen Husainbava 2713010798
611 Noor Fatima Delhi Branch 2001520198	610 Shaikh Tasneem Sadaf Yunus Aurangabad Branch 3101020762	610 Haripriya 2713010109	610 Syed Mohammed Muzammil 2713120158	610 Abdullah Sultan 2713180051	609 Shaikh Abdul Jawwad Abdul Malegaon 3135010753	607 Noorain Fathima Aazmi 2713140188	607 Muhammadrehan Chittapur 2713110153	606 Atiya Sarwar 2713030361	606 Shaik Ihasan 2713140232	606 Syed Tousif 2713020127	605 Ashwini 2713080097
605 Syed Shehbaaz Ali 2713060343	605 Chaudhary Hanzala Rahman Malegaon Branch 3114010116	605 Shaikh Lareb Danish Mumbai Branch 3114040138	605 Mohd Azhar Muzafarnagar Branch	604 Abhishek Yamaji Patil 3109040056	604 Abhishek Yamaji Patil 3109040056	604 Hasibullah Ansari Jamshedpur Branch 2602010558	604 Layas Ayyub Khan Malegaon Branch 3135010892	602 Vivek 2713160012	602 Bharath D 2713030851	602 Mohammed Sufiyan 2713050329	602 Ansari Azizurrahman Shahid Malegaon Branch 3135010685
601 Ghulam Zeeshan Rasool 2713100048	601 Sujit Chandesurye 2713070194	601 Mohammed Abbas Hussain 2713070140	601 Zainab Tasneem Hamid Hasan Malegaon Branch 3135010040	601 Mirza Aiman Arif Baig Malegaon Branch 3135010517	600 Abdullah Zaki 2713160010	600 SNEHA 2713010381	600 MOHD SAIF HUSSAIN 2713040112	600 MAVIA KHAN DELHI BRANCH 2001060723			

1800 121 6235
www.shaheengroup.org

Admission Open NEET Repeaters Batch

Scholarship for NEET Repeater Based on Marks Scored in 2023

NEET Marks	% Scholarship
500+	60%
475-499	50%
450-474	40%
400-449	30%
375-399	20%

Residential Campus	
Bidar	- 1800 121 6235
Gulbarga	- 8123918693, 9108911014
Bijapur	- 8660264965, 9900481112
Hyderabad	- 9391421556
Delhi	- 8329720392

Register @ www.shaheengroup.org

Narayana Health Scholarship for NEET Repeaters

Eligibility:

- A minimum score of 530 for general candidates & 400 for SC/ST/OBC in NEET 2023
- Annual income of the student's family from all the sources combined should not be more than 5 lacs (income proof required)
- Preference will be given to Kalyana Karnataka Students

ಯತ್ನಾಳ್– ಬೊಮ್ಮಾಯಿ ವಾಕ್ಸಮರ

ಬೆಳಗಾವಿ: ನಗರದಲ್ಲಿ ಭಾನುವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನೀಡಿದ ಮಾತಿನೇಟಿಗೆ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಷ್ಟೇ ತೀಕ್ಷ್ಣವಾಗಿ ತಿರುಗೇಟು ಕೊಟ್ಟರು.

‘ವಿರೋಧಿಗಳನ್ನು ಮನೆಗೆ ಬಿಟ್ಟುಕೊಳ್ಳಬೇಡಿ’

‘ಕಾಂಗ್ರೆಸ್ ಸರ್ಕಾರ ಐದು ವರ್ಷ ಉಳಿಯುವುದಿಲ್ಲ. ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡುವುದಿಲ್ಲ. ಆಗ ಡಿ.ಕೆ.ಶಿವಕುಮಾರ ಅವರು ಬಸವರಾಜ ಬೊಮ್ಮಾಯಿ ಅವರ ಮನೆಗೆ ಬರುತ್ತಾರೆ. ಆ ಮೂಲಕ ಸೋನಿಯಾ ಗಾಂಧಿ ಅವರನ್ನು ಹೆದರಿಸಲು ಯತ್ನಿಸುತ್ತಾರೆ. ಬೊಮ್ಮಾಯಿ ಅವರೇ ಇಂಥದ್ದಕ್ಕೆ ಅವಕಾಶ ಕೊಡಬೇಡಿ. ಅಂಥವರನ್ನು ಮನೆಯೊಳಗೆ ಬಿಟ್ಟುಕೊಳ್ಳಬೇಡಿ’ ಎಂದು ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

‘ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂ ಶಾಮನೂರು ಶಿವಶಂಕರಪ್ಪ ಅವರು ಈಚೆಗೆ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ಮನೆಗೆ ಭೇಟಿ ನೀಡಿದ್ದಾರೆ. ಸೌಜನ್ಯದ ಭೇಟಿ ಎನ್ನುತ್ತಾರೆ. ಆದರೆ, ಉದ್ದೇಶವೇ ಬೇರೆ. ಮುಖ್ಯಮಂತ್ರಿ ಕುರ್ಚಿಗಾಗಿ ಬರುವ ಅವರನ್ನು ನಾವೇಕೆ ಮನೆಗೆ ಬಿಟ್ಟುಕೊಳ್ಳಬೇಕು’ ಎಂದೂ ಪ್ರಶ್ನಿಸಿದರು.

‘ವಿರೋಧ ಪಕ್ಷದವರ ಜತೆಗೆ ಮಾತನಾಡುವುದಿಲ್ಲ, ಮನೆಗೆ ಹೋಗುವುದಿಲ್ಲ, ಅವರ ಮುಖವನ್ನೂ ನೋಡುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಅದೇ ರೀತಿ ನಾವು ಕೂಡ ಇನ್ನು ಮುಂದೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಅವರ ಮನೆಗೆ ಹೋಗುವುದಿಲ್ಲ, ಫೋನಿನಲ್ಲಿ ಮಾತನಾಡುವುದಿಲ್ಲ, ಹಲ್ಲು ಕಿಸಿಯುವುದಿಲ್ಲ ಎಂದು ನಿರ್ಧಾರ ಮಾಡೋಣ. ಹಾಗಾದರೆ ಮಾತ್ರ ಪಕ್ಷ ಉಳಿಯುತ್ತದೆ. ನೀವು ಸ್ವಾಗತ-ಸುಸ್ವಾಗತ ಎಂದರೆ ನಮ್ಮ ಕಾರ್ಯಕರ್ತರು ಮಲಗಿ ಬಿಡುತ್ತಾರೆ’ ಎಂದರು.

‘ಮನೆಗೆ ಬರುವವರನ್ನು ಬೇಡ ಎನ್ನಲು ಆಗುವುದಿಲ್ಲ’

‘ನಾನು ಎಂದಿಗೂ ರಾಜಿ ರಾಜಕಾರಣ ಮಾಡಿಲ್ಲ. ಮಾಡುವುದೂ ಇಲ್ಲ. ಮನೆಗೆ ಬರುವವರನ್ನು ಬೇಡ ಎನ್ನಲು ಆಗುವುದಿಲ್ಲ. ಅದು ಕನ್ನಡಿಗರ ಸೌಜನ್ಯ. ಯಾರೋ ಮನೆಗೆ ಬಂದ ತಕ್ಷಣ ನಾವು ರಾಜಿ ಆಗುವುದಿಲ್ಲ ಗೌಡ್ರೆ. ನೀವು ತಲೆ ಕೆಡಿಸಿಕೊಳ್ಳಬೇಡಿ. ಕೆಲವರು ಮನೆಗೆ ಹೋಗದೆಯೇ ಒಳಗೊಳಗೇ ರಾಜಿ ಆಗಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ನಾವು ಬಹಿರಂಗವಾಗಿ, ಸ್ಪಷ್ಟವಾಗಿದ್ದೇವೆ’ ಎಂದು ಬಸವರಾಜ ಬೊಮ್ಮಾಯಿ, ಹೇಳಿದರು.

‘ಬಿಜೆಪಿ ತಾಯಿಯ ಸಮಾನ. ಕಾರ್ಯಕರ್ತರು ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರ ಸಮಾನ. ಕಾರ್ಯಕರ್ತರಿಗೆ ದ್ರೋಹ ಮಾಡುವ ಕೆಲಸ ಮಾಡಿಲ್ಲ’ ಎಂದರು.



‘ಅಕ್ಕಿ ಖರೀದಿಯಲ್ಲಿದೆ ಕರಾಳ ಮುಖ’

ಬೆಳಗಾವಿ: ‘ವಿವೇಚನೆ ಇಲ್ಲದೇ ಕಾಂಗ್ರೆಸ್‌ನವರು ಉಚಿತ ಅಕ್ಕಿ ಘೋಷಿಸಿದ್ದಾರೆ. ಅಕ್ಕಿ ಖರೀದಿಯಲ್ಲಿ ಕೆಲ ಸಚಿವರು ‘ಪರ್ಸೆಂಟೇಜ್’ ಹಂಚಿಕೊಳ್ಳುತ್ತಿದ್ದಾರೆ. ಖರೀದಿಯಲ್ಲಿ ಏನೆಲ್ಲ ಹುನ್ನಾರ ನಡೆದಿದೆ ಎಂದು ನನಗೆ ಗೊತ್ತಿದೆ. ಶೀಘ್ರದಲ್ಲೇ ಇವರ ಕರಾಳ ಮುಖ ಬಯಲಾಗುತ್ತದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

‘ಕಾಂಗ್ರೆಸ್‌ಗೆ ಇರುವುದು ಎರಡೇ ಪ್ರಶ್ನೆ. ಒಂದು ಮೋದಿ ಅವರನ್ನು ಹೇಗೆ ಸೋಲಿಸುವುದು? ಇನ್ನೊಂದು ರಾಹುಲ್ ಗಾಂಧಿ ಮದುವೆ ಯಾವಾಗ ಮಾಡುವುದು? ಇವೆರಡೂ ಸಾಧ್ಯವಿಲ್ಲ’ ಎಂದು ಅವರು ಲೇವಡಿ ಮಾಡಿದರು.

‘ಮೋದಿ ಅವರನ್ನು ಎದುರಿಸುವಂಥ ವಿರೋಧ ಪಕ್ಷವೂ ಇಲ್ಲ, ವಿರೋಧ ನಾಯಕನೂ ಇಲ್ಲ. ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೂ 25 ಸಂಸದ ಸ್ಥಾನ ಗೆಲ್ಲಿಸಿದ್ದೇವೆ. ಈ ಬಾರಿ ಎಲ್ಲ 28 ಸ್ಥಾನಗಳನ್ನೂ ಗೆಲ್ಲಿಸೋಣ’ ಎಂದು ಅವರು ಕರೆ ನೀಡಿದರು.

‘ವರ್ಗಾವಣೆ: ಪೇಸಿಎಂ, ಪೇ ಡಿಸಿಎಂ ಶುರು’

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ‘ರಾಜ್ಯದಲ್ಲಿ ವರ್ಗಾವಣೆ ದಂಧೆ ಆರಂಭವಾಗಿದೆ. ಹಲವು ಅಧಿಕಾರಿಗಳು ಆಯಕಟ್ಟಿನ ಸ್ಥಳದಲ್ಲಿ ವರ್ಗಾವಣೆಗಾಗಿ ಮುಂಗಡವನ್ನೂ ನೀಡಿದ್ದಾರೆ. ಪೇ ಸಿಎಂ, ಪೇ ಡಿಸಿಎಂ ವ್ಯವಸ್ಥೆ ಜಾರಿಗೊಂಡಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ತಾಲ್ಲೂಕಿನ ಯಕ್ಸಂಬಾದ ಬೀರೇಶ್ವರ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಚಿಕ್ಕೋಡಿ ಲೋಕಸಭೆ ಕ್ಷೇತ್ರ ವ್ಯಾಪ್ತಿಯ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

‘ರಾಜ್ಯದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನೇ ತಡೆ ಹಿಡಿದಿರುವುದರಿಂದ ನೀಡಿರುವ ಮುಂಗಡವನ್ನು ಅಧಿಕಾರಿಗಳು ಹಿಂದಕ್ಕೆ ಪಡೆಯುವ ಸ್ಥಿತಿ ನಿರ್ಮಾಣವಾಗಿದೆ. ಮುಂಬರುವ ದಿನಗಳಲ್ಲಿ ಶಾಸಕರಿಗೆ ಕ್ಷೇತ್ರದ ಅಭಿವೃದ್ಧಿಗಾಗಿ ನಯಾಪೈಸೆಯೂ ದೊರಕುವುದಿಲ್ಲ’ ಎಂದರು.

ಸುದ್ದಿ 2 ನಿಮಿಷ

ಡಾ. ಎಚ್‌.ಟಿ. ಪೋತೆ ದಲಿತ ಸಾಹಿತ್ಯ ಸಮ್ಮೇಳನಾಧ್ಯಕ್ಷ

ವಿಜಯಪುರ: ನಗರದಲ್ಲಿ ಜೂನ್ 29 ಮತ್ತು 30 ರಂದು ನಡೆಯಲಿರುವ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಗುಲಬರ್ಗಾ ವಿವಿ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಚ್.ಟಿ. ಪೋತೆ ಅವರನ್ನು ಆಯ್ಕೆ ಮಾಡಲಾಗಿದೆ.

‘ಪೋತೆ ಅವರು ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಹಂಜಗಿಯವರು. ಕನ್ನಡ ಹಾಗೂ ದಲಿತ ಸಾಹಿತ್ಯದಲ್ಲಿ ಕೆಲಸ ಮಾಡಿದ್ದು, ಜಾನಪದ ವಿದ್ವಾಂಸರೂ ಆಗಿದ್ದು ಅವರನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ’ ಎಂದು ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ ಗೊಳಸಂಗಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ವಾಧ್ಯಕ್ಷರ ಮೆರವಣಿಗೆಯಲ್ಲಿ ಸಂವಿಧಾನ ಪುಸ್ತಕಗಳು ಪ್ರಮುಖ ಆಕರ್ಷಣೆ. ‘ಪ್ರಬುದ್ಧ ಭಾರತ’ ಎಂಬ ಆಶಯದಲ್ಲಿ ಸಮ್ಮೇಳನ ನಡೆಯಲಿದ್ದು, ಉಪನ್ಯಾಸ, ನಮ್ಮ ಸಂವಿಧಾನ ನಮ್ಮ ರಕ್ಷಣೆ–ಸಂವಾದ ಆಯೋಜಿಸಲಾಗಿದೆ. ನಗರದ ಕಂದಗಲ್ ಹಣಮಂತರಾಯ ರಂಗಮಂದಿರಲ್ಲಿ ನಡೆಯಲಿದೆ. ದಲಿತ ಸಾಹಿತ್ಯ ಗೋಷ್ಠಿ ಹಾಗೂ ಎರಡು ಕವಿಗೋಷ್ಠಿ, ಪುಸ್ತಕ ಪ್ರದರ್ಶನ, ಮಾರಾಟ ವ್ಯವಸ್ಥೆ ಇದೆ ಎಂದರು.

ದಲಿತ ಸಾಹಿತ್ಯ ಪರಿಷತ್ ಬೆಳ್ಳಿ ಹಬ್ಬದ ಸಂಭ್ರಮದ ಸಮ್ಮೇಳನದಲ್ಲಿ 25 ಜನ ದಲಿತ ಸಾಹಿತಿಗಳಿಗೆ ‘ಬೆಳ್ಳಿ ಸಂಭ್ರಮ ಪುಸ್ತಕ ಪ್ರಶಸ್ತಿ’ ಹಾಗೂ ನಾನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೂ ‘ಬೆಳ್ಳಿ ಸಂಭ್ರಮ ಪ್ರಶಸ್ತಿ’ ಪ್ರದಾನ ಮಾಡಲಾಗುವುದು ಎಂದರು.

ಕಳೆದುಕೊಂಡಿದ್ದನ್ನು ಪಡೆಯುವ ಶಪಥ ಮಾಡಿದ್ದೇನೆ: ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷ ನೀಡಿದ ಕೆಲಸ ಒಪ್ಪಿಕೊಂಡ ಕಾರಣಕ್ಕಾಗಿ ನಾನು ಈಗ ನಿರುದ್ಯೋಗಿಯಾಗಿದ್ದೇನೆ. ಆದರೆ, ಸುಮ್ಮನೆ ಕೂರುವವನಲ್ಲ. ಪಕ್ಷ ಯಾವುದೇ ಜವಾಬ್ದಾರಿ ನೀಡಿದರೂ ನಿರ್ವಹಿಸಲು ಸಿದ್ಧ’ ಎಂದು ಮಾಜಿ ಸಚಿವ ವಿ. ಸೋಮಣ್ಣ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಭಾನುವಾರ ನಡೆದ ಪಕ್ಷದ ಕಾನೂನು ಪ್ರಕೋಷ್ಠದ ರಾಜ್ಯ ಕಾರ್ಯಕಾರಿಣಿಯಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬಿಜೆಪಿ ಸೇರಿದ ಬಳಿಕ ಅನೇಕ ಸವಾಲುಗಳನ್ನು ಎದುರಿಸಿದ್ದೇನೆ. ಯಾವುದಕ್ಕೂ ವಿಚಲಿತನಾಗಿಲ್ಲ. ನಾನು ಸನ್ಯಾಸಿ ಅಲ್ಲ ಎಂದು ಈಗಾಗಲೇ ಹೇಳಿರುವೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯೂ ಹೌದು ಎಂಬುದನ್ನು ಬಹಿರಂಗಪಡಿಸಿದ್ದೇನೆ’ ಎಂದರು.

‘ಅಧಿಕಾರ ಇರಲಿ, ಇಲ್ಲದಿರಲಿ ಜನರ ಜತೆಗಿದ್ದು ಕೆಲಸ ಮಾಡುತ್ತೇನೆ. ಒಳಗೊಂದು, ಹೊರಗೊಂದು ಮಾತನಾಡಲು ನನಗೆ ಬರುವುದಿಲ್ಲ. ಹಿಂದೆ,

ವಿ.ಸೋಮಣ್ಣ

ಮುಂದೆ ಮಾತನಾಡಿದವರ ನೀತಿ ಪಾಠ ನನಗೆ ಗೊತ್ತಿದೆ. ಪಕ್ಷದ ವರಿಷ್ಠರು ನಿರ್ಧಾರ ಕೈಗೊಳ್ಳುವವರೆಗೆ ಕಾಯೋಣ. ನನಗಿಂತ ಬುದ್ಧಿವಂತರು ಯಾರಾದರೂ ಇದ್ದರೆ ಅವರಿಗೇ ಅಧ್ಯಕ್ಷ ಸ್ಥಾನ ನೀಡಲಿ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಳೆದುಕೊಂಡಿದ್ದನ್ನು ಪಡೆಯುವೆ: ‘ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರೆ ನಾನು ನಿರಾಯಾಸವಾಗಿ ಗೆಲ್ಲುತ್ತಿದ್ದೆ. ಪಕ್ಷದ ವರಿಷ್ಠರ ಸೂಚನೆಯಂತೆ ‘ಫೋರ್’, ‘ಸಿಕ್ಸ್’ ಹೊಡೆಯಲು ಹೋಗಿ ಎರಡೂ ಕಡೆ ಸೋತು, ನಿರುದ್ಯೋಗಿಯಾಗಿದ್ದೇನೆ’ ಎಂದು ಹೇಳಿದರು.

‘ಈಗ ನಾನು ಸುಮ್ಮನೆ ಕೂರುವುದಿಲ್ಲ. ಏನನ್ನು ಕಳೆದುಕೊಂಡಿದ್ದೇನೊ ಅದನ್ನು ಪಡೆದೇ ತೀರಬೇಕು ಎಂಬ ಶಪಥ ಮಾಡಿದ್ದೇನೆ. ರಾಜಕೀಯ ಮಾಡುವುದಕ್ಕಾಗಿ ಬಂದಿದ್ದೇನೆ. ಮುಂದೆಯೂ ರಾಜಕೀಯದಲ್ಲಿ ಇರುತ್ತೇನೆ’ ಎಂದರು.

ಸ್ನೇಹಿತನ ಕತ್ತು ಕೊಯ್ದು ರಕ್ತ ಕುಡಿದ!

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಪತ್ನಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಸ್ನೇಹಿತನ ಕತ್ತು ಸೀಳಿ ರಕ್ತ ಕುಡಿದಿದ್ದ ಚಿಂತಾಮಣಿಯ ಬಟ್ಟೆ ವ್ಯಾಪಾರಿಯೊಬ್ಬನನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ವಾರದ ಹಿಂದೆ ಚಿಂತಾಮಣಿ ತಾಲ್ಲೂಕಿನ ಸಿದ್ದೇಪಲ್ಲಿ ಕ್ರಾಸ್ ನಿರ್ಜನ ಪ್ರದೇಶದಲ್ಲಿ ನಡೆದಿರುವ ಈ ಕೃತ್ಯವನ್ನು ಬಟ್ಟೆ ವ್ಯಾಪಾರಿ ವಿಜಯ್ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದ. ಆರೋಪಿ ವಿಜಯ್‌ನನ್ನು ಕೆಂಚಾರ್ಲಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಕತ್ತು ಸೀಳಿದ್ದರಿಂದ ತೀವ್ರ ರಕ್ತಸ್ರಾವವಾಗಿ ಗಾಯಗೊಂಡಿರುವ ಆತನ ಸ್ನೇಹಿತ ಮಾರೇಶ್ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾನೆ.

ಘಟನೆ ಹಿನ್ನೆಲೆ: ಬಟ್ಟೆ ವ್ಯಾಪಾರಿಗಳಾದ ಚಿಂತಾಮಣಿ ತಾಲ್ಲೂಕಿನ ಬಟ್ಲಹಳ್ಳಿ ಗ್ರಾಮದ ವಿಜಯ್ ಮತ್ತು ಬಾಗೇಪಲ್ಲಿ ತಾಲ್ಲೂಕು ಮಂಡ್ಯಂಪಲ್ಲಿ ಗ್ರಾಮದ ಮಾರೇಶ್ ಚಿಂತಾಮಣಿಯ ಗಾಂಧಿನಗರದಲ್ಲಿ ವಾಸಿಸುತ್ತಿದ್ದರು.

ವಿಜಯ್

ವಿಜಯ್ ಪತ್ನಿ ಜೊತೆ ಮಾರೇಶ್ ಅಕ್ರಮ ಸಂಬಂಧ ಹೊಂದಿದ್ದ. ಈ ವಿಷಯ ವಿಜಯ್‌ಗೂ ಗೊತ್ತಿತ್ತು. ವಿಜಯ್ ಮತ್ತು ಆತನ ಸ್ನೇಹಿತ ಜಾನ್ ಜೂನ್ 19ರಂದು ಮಾರೇಶ್‌ನನ್ನು ಸಿದ್ದೇಪಲ್ಲಿ ಕ್ರಾಸ್‌ನ ಅರಣ್ಯಕ್ಕೆ ಕರೆದೊಯ್ದಿದ್ದರು. ಅಲ್ಲಿ ವಿಜಯ್ ಚಾಕುವಿನಿಂದ ಮಾರೇಶನ ಕುತ್ತಿಗೆ ಭಾಗ ಕೊಯ್ದು ರಕ್ತ ಕುಡಿದಿದ್ದಾನೆ. ಇದನ್ನು ಜಾನ್ ವಿಡಿಯೊ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ತೆರಳಿದ್ದ ಮಾರೇಶ್‌ನ ಸಹೋದರ ಆತನನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದ್ದ. ಗ್ರಾಮದ ಹಿರಿಯರು ಇಬ್ಬರನ್ನೂ ಕರೆಸಿ ರಾಜಿ ಪಂಚಾಯಿತಿ ಮಾಡಿಸಿ ಪ್ರಕರಣವನ್ನು ಇತ್ಯರ್ಥಗೊಳಿಸಿದ್ದರು.

ಆರೋಪಿಗಳಾದ ವಿಜಯ್ ಮತ್ತು ಜಾನ್ ವಿರುದ್ಧ ಮಾರೇಶ್ ಸಹೋದರ ಕೆಂಚಾರ್ಲಹಳ್ಳಿ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ.

ರೈತರ ಮೇಲೆ ದಾಳಿ: ಕೊಡಲಿಯಿಂದ ಹೊಡೆದು ಕರಡಿ ಕೊಂದ ಮಹಿಳೆ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ತಾಲ್ಲೂಕಿನ ಬಸನಕಟ್ಟಿಯ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ರೈತರ ಮೇಲೆ ದಾಳಿ ಮಾಡಿದ ಕರಡಿಯನ್ನು ಮಹಿಳೆಯೊಬ್ಬರು ಕೊಂದು ಹಾಕಿದ್ದಾರೆ.

ಬಸೀರಸಾಬ್ ಸವದತ್ತಿ ಹಾಗೂ ಮುಂಡಗೋಡದ ರಜಾಕ್ ನಾಲಬಂದ ಅವರ ಮೇಲೆ ಎರಡು ಹೆಣ್ಣು, ಒಂದು ಗಂಡು ಕರಡಿ ಶನಿವಾರ ದಾಳಿ ನಡೆಸಿದ್ದವು.

ಈ ಸಂದರ್ಭದಲ್ಲಿ ಬಸೀರಸಾಬ್ ಸವದತ್ತಿ ಅವರ ಪತ್ನಿ ಸಬೀನಾ ಕೊಡಲಿಯಿಂದ ಕರಡಿ ತಲೆಗೆ ಹೊಡೆದಿದ್ದರು. ತೀವ್ರ ಗಾಯಗೊಂಡ ಕರಡಿ ಭಾನುವಾರ ಮೃತಪಟ್ಟಿದೆ.

‘ಕರಡಿಗಳು ಇದ್ದಕ್ಕಿದ್ದಂತೆ ಜಮೀನಿಗೆ ನುಗ್ಗಿ ಪತಿ ಮೇಲೆ ದಾಳಿ ನಡೆಸಿದಾಗ ಏನು ಮಾಡಬೇಕೆಂದು ತೋಚದೇ, ಅವರ ರಕ್ಷಣೆಗಾಗಿ ಅಲ್ಲಿದ್ದ ಕೊಡಲಿಯಿಂದ ಕರಡಿ ತಲೆಗೆ ಹೊಡೆದೆ’ ಎಂದು ಸಬೀನಾ ತಿಳಿಸಿದ್ದಾರೆ. ಇವರು ಕೋಣನಕೇರಿ ಗ್ರಾಮ ಪಂಚಾಯಿತಿ ಸದಸ್ಯೆ.

ಕರಡಿಗಳು ನೀರು, ಆಹಾರ ಅರಸಿ ಅರಣ್ಯದಿಂದ ಗ್ರಾಮಗಳ ಕಡೆಗೆ ಬರುತ್ತಿದ್ದು, ರೈತರ ಮೇಲೆ ದಾಳಿಯಿಂದ ಭಯದ ವಾತಾವರಣ ಮೂಡಿದೆ. ‘ಕರಡಿಗಳ ಚಲನವಲನಗಳ ಬಗ್ಗೆ ಕಾರ್ಯಾಚರಣೆ ನಡೆಸಲಾಗಿದೆ’ ಎಂದು ದುಂಢಸಿ ವಲಯ ಅರಣ್ಯ ಇಲಾಖೆ ಅಧಿಕಾರಿ ರವಿಕುಮಾರ ಪುರಾಣಿಕಮಠ ತಿಳಿಸಿದ್ದಾರೆ.

ವಿಚಾರಣಾಧೀನ ಕೈದಿ ಸಾವು: ಇನ್‌ಸ್ಪೆಕ್ಟರ್ ಸೇರಿ ಐವರ ಅಮಾನತು

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಪೊಲೀಸ್ ಠಾಣೆಯಲ್ಲಿ ಶನಿವಾರ ವಿಚಾರಣಾಧೀನ ಕೈದಿಯ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್‌ಸ್ಪೆಕ್ಟರ್ ಸೇರಿ ಐವರು ಪೊಲೀಸ್ ಸಿಬ್ಬಂದಿಯನ್ನು ಭಾನುವಾರ ಅಮಾನತು ಮಾಡಲಾಗಿದೆ.

ಇನ್‌ಸ್ಪೆಕ್ಟರ್ ಮಂಜುನಾಥ, ಅಪರಾಧ ವಿಭಾಗದ ಎಸ್‌ಐ ಮಂಜೇಶ್ವರ ಚಂದಾವರ, ಕಾನ್‌ಸ್ಟೆಬಲ್‌ಗಳಾದ ಮಹಾವೀರ, ರಮೇಶ ಹಾಗೂ ಸಂತೋಷ ಅಮಾನತುಗೊಂಡವರು.

‘ಘಟನೆಗೆ ಸಂಬಂಧಿಸಿ ವಿಚಾರಣೆ ನಡೆಸಿ ನೀಡಲಾದ ವರದಿ ಆಧರಿಸಿ ಐಜಿ ಚಂದ್ರಗುಪ್ತ ಅವರು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ತಿಳಿಸಿದ್ದಾರೆ.

‘ಬಂಗಾರದ ಆಭರಣ ಪಾಲೀಶ್ ಮಾಡಿಕೊಡುವ ನೆಪದಲ್ಲಿ ಇಬ್ಬರು ಅಪರಿಚಿತರು ತನ್ನನ್ನು ವಂಚಿಸಿದ್ದಾರೆ’ ಎಂದು ತುಳಸೀನಗರದ ಮಹಿಳೆ ನೀಡಿದ್ದ ದೂರು ಆಧರಿಸಿ ಬಿಹಾರ ಮೂಲದ ದಿಲೀಪ ಮಂಡಲ್ (37) ನನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಈತ ಠಾಣೆಯಲ್ಲೇ ತನ್ನ ಬ್ಯಾಗ್‌ನಲ್ಲಿದ್ದ ವಿಷಯುಕ್ತ ದ್ರಾವಣ ಸೇವಿಸಿ ಮೃತಪಟ್ಟಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸುಧಾಮ್ ದಾಸ್ ಆಯ್ಕೆಗೆ ತೀವ್ರ ವಿರೋಧ?

ಬೆಂಗಳೂರು: ವಿಧಾನ ಪರಿಷತ್‌ಗೆ ಮನ್ಸೂರ್ ಅಲಿ ಖಾನ್, ಎಂ.ಆರ್. ಸೀತಾರಾಮ್ ಮತ್ತು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಸಹ ಅಧ್ಯಕ್ಷರಾಗಿದ್ದ ಎಚ್.ಪಿ. ಸುಧಾಮ್ ದಾಸ್ ಅವರನ್ನು ನಾಮನಿರ್ದೇಶನ ಮಾಡಲು ಕಾಂಗ್ರೆಸ್ ಮುಂದಾಗಿರುವ ಬೆನ್ನಲ್ಲೆ, ಸುಧಾಮ್ ದಾಸ್ ಅವರ ಆಯ್ಕೆಗೆ ಪಕ್ಷದ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

ಅಲ್ಪಸಂಖ್ಯಾತ ಕೋಟಾದಿಂದ ಮನ್ಸೂರ್ ಅಲಿ ಖಾನ್, ಹಿಂದುಳಿದ ವರ್ಗಗಳ ಕೋಟಾದಿಂದ ಎಂ.ಆರ್. ಸೀತಾರಾಮ್, ಪರಿಶಿಷ್ಟ ಜಾತಿ ಎಡಗೈ ಬಣದಿಂದ ಸುಧಾಮ್ ದಾಸ್ ಹೆಸರನ್ನು ಕಾಂಗ್ರೆಸ್ ಹೈಕಮಾಂಡ್ ಬಹುತೇಕ ಅಂತಿಮಗೊಳಿಸಿದೆ. ಆದರೆ, ಸುಧಾಮ್ ದಾಸ್ ಅವರನ್ನು ನಾಮನಿರ್ದೇಶನ ಮಾಡಬಾರದೆಂದು ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ಎಡಗೈ ಬಣದ ಪ್ರಮುಖ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

‘ಪರಿಶಿಷ್ಟ ಸಮುದಾಯಕ್ಕೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಸುಧಾಮ್ ದಾಸ್ ಅವರು ಹೇಳಿಕೊಳ್ಳುವಂಥ ಯಾವುದೇ ಕೊಡುಗೆ ನೀಡಿಲ್ಲ. ಹೀಗಾಗಿ ಅವರನ್ನು ನೇಮಕ ಮಾಡಬಾರದು’ ಎಂದು ದಲಿತ ಎಡ ಸಮುದಾಯದ ಸಚಿವರು, ಶಾಸಕರು, ಮಾಜಿ ಶಾಸಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಸುಧಾಮ್ ದಾಸ್ ಅವರ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿರುವ ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಕೆಪಿಸಿಸಿ ಕಾರ್ಯಾಧ್ಯಕ್ಷ ಚಂದ್ರಪ್ಪ, ಮಾಜಿ ಸಚಿವ ಎಚ್. ಆಂಜನೇಯ ಅವರು ತಮ್ಮ ಅಭಿಪ್ರಾಯ ನೀಡಿದ್ದು, ಈ ಎಲ್ಲ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದೂ ಹೇಳಲಾಗಿದೆ.

ಜಮೀನಿನಲ್ಲೇ ಲ್ಯಾಂಡ್...

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಪೇಠಶಿರೂರಿನ ಜಮೀನಿನಲ್ಲಿ ತುರ್ತು ಭೂಸ್ಪರ್ಶ ಮಾಡಿದ ತರಬೇತಿ ವಿಮಾನ

ದೇವಲಾಪುರ: ವಾಂತಿ, ಭೇದಿಗೆ ಐವರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ದೇವಲಾಪುರದಲ್ಲಿ ಭಾನುವಾರ ವಾಂತಿ, ಭೇದಿ ಕಾಣಿಸಿಕೊಂಡಿದ್ದು ಐದು ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕಲುಷಿತ ನೀರು ಸೇವನೆ ಇದಕ್ಕೆ ಕಾರಣ ಎಂದು ಗ್ರಾಮಸ್ಥರು ದೂರಿದ್ದಾರೆ.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂವರು ಹಾಗೂ ಗಂಗಾವತಿ ತಾಲ್ಲೂಕು ಆಸ್ಪತ್ರೆಯಲ್ಲಿ ಇಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ. ಗಂಗಾವತಿಯ ಆಸ್ಪತ್ರೆಯಲ್ಲಿ ನಾಲ್ವರು ಹಾಗೂ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಬ್ಬರು ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿ ಮನೆಗೆ ಮರಳಿದ್ದಾರೆ.

ಗಂಗಾವತಿ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಶರಣಪ್ಪ ಚಕೋಟಿ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ವಾಹನ ಡಿಕ್ಕಿ: ಕರಡಿ ಸಾವು

ಪ್ರಜಾವಾಣಿ ವಾರ್ತೆ

ಕಂಪ್ಲಿ (ಬಳ್ಳಾರಿ ಜಿಲ್ಲೆ): ರಾಜ್ಯ ಹೆದ್ದಾರಿ-29ರ ಮೆಟ್ರಿ-ದೇವಲಾಪುರದ ಮಾರೆಮ್ಮ ದೇವಸ್ಥಾನ ಬಳಿ ಭಾನುವಾರ ನಸುಕಿನಲ್ಲಿ ವಾಹನ ಡಿಕ್ಕಿಯಿಂದ ಹೆಣ್ಣು ಕರಡಿ ಮೃತಪಟ್ಟಿದೆ.

ರಕ್ತಸ್ರಾವದಿಂದ ಕರಡಿ ಹೆದ್ದಾರಿ ಪಕ್ಕದ ಗದ್ದೆಯಲ್ಲಿ ನರಳುತ್ತಿರುವುದನ್ನು ಗಮನಿಸಿದ ವ್ಯಕ್ತಿಯೊಬ್ಬರು, ದರೋಜಿ ಕರಡಿಧಾಮದ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ನೀರು ಕುಡಿಸಿದ ಸ್ವಲ್ಪ ಸಮಯದಲ್ಲಿ ಕರಡಿ ಮೃತಪಟ್ಟಿತು.

‘ಹೆದ್ದಾರಿಯಲ್ಲಿ ಸೂಚನಾ ಫಲಕ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು‘ ಎಂದು ಹೊಸಪೇಟೆ ವಲಯ ಅರಣ್ಯ ಅಧಿಕಾರಿ ಕೆ.ಸಿ. ವಿನಯ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ದಶಪಥ ಅಪಘಾತ: ಇಬ್ಬರು ಯುವಕರ ಸಾವು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯ ಮೇಲ್ಸೇತುವೆಯಲ್ಲಿ ಅಪರಿಚಿತ ವಾಹನ ಭಾನುವಾರ ನಸುಕಿನಲ್ಲಿ ಡಿಕ್ಕಿ ಹೊಡೆದು ಬೈಕ್ ಸವಾರರಿಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೋಲಾರದ ಮಣಿ (25), ಹಿಂಬದಿ ಸವಾರ, ಕೊಪ್ಪಳ ಜಿಲ್ಲೆ, ಲಿಂಗದಮಂಡಿಯ ಜನಾರ್ದನ ಪೂಜಾರಿ (26) ಮೃತರು. ಇವರು ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ.

ಬೆಂಗಳೂರಿನಿಂದ ಮೈಸೂರಿಗೆ ಕಡೆಗೆ ಪಲ್ಸರ್ ಬೈಕ್‌ನಲ್ಲಿ ಹೋಗುವಾಗ ಹಿಂಬದಿಯಿಂದ ಬರುತ್ತಿದ್ದ ವಾಹನ ಡಿಕ್ಕಿ ಹೊಡೆದಿದೆ. ನಂತರ ಚಾಲಕ ವಾಹನ ನಿಲ್ಲಿಸದೇ ಪರಾರಿಯಾಗಿದ್ದಾನೆ.

ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದ್ದು, ಶೀಘ್ರ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದರು.

ಕಠುವಾ ಪ್ರಕರಣ: ಇಂದು ವಿಚಾರಣೆ

ಪಠಾಣ್‌ಕೋಟ್/ ನವದೆಹಲಿ (ಪಿಟಿಐ): ಕಠುವಾ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಪ್ರಮುಖ ಆರೋಪಿ ಶುಭಂ ಸಂಗ್ರಾ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲ್ಲಿನ ಸೆಷನ್ಸ್ ಕೋರ್ಟ್ ಸೋಮವಾರ ವಿಚಾರಣೆ ನಡೆಸಲಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಪ್ರಕರಣವು ಕಠುವಾದಿಂದ ಪಂಜಾಬ್‌ನ ಪಠಾಣ್‌ಕೋಟ್‌ಗೆ ವರ್ಗಾವಣೆಯಾಗಿದೆ.

ಸಂಗ್ರಾನನ್ನು ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕ ಎಂದು ಪರಿಗಣಿಸಬೇಕು ಎಂದು 2018 ಮಾರ್ಚ್ 27ರಂದು ದೆಹಲಿ ಹೈಕೋರ್ಟ್ ಆದೇಶ ನೀಡಿತ್ತು. 2022ರಲ್ಲಿ ಈ ಆದೇಶ ವಜಾಗೊಳಿಸಿದ್ದ ಸುಪ್ರೀಂಕೋರ್ಟ್, ಕೃತ್ಯ ನಡೆದ ಸಂದರ್ಭದಲ್ಲಿ ಸಂಗ್ರಾ ಅಪ್ರಾಪ್ತ ವಯಸ್ಸಿನ ಹುಡುಗ ಆಗಿರಲಿಲ್ಲ, ವಯಸ್ಕನಾಗಿದ್ದ ಎಂದು ಘೋಷಿಸಿತ್ತು.

14 ದಿನ: 7.15 ಕೋಟಿ ಮಹಿಳೆಯರ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ‘ಗ್ಯಾರಂಟಿ’ಗಳ ಪೈಕಿ, ‘ಶಕ್ತಿ’ ಯೋಜನೆ ಜಾರಿಯಾದ ದಿನದಿಂದ (ಜೂನ್ 11 ಮಧ್ಯಾಹ್ನ 1 ಗಂಟೆಯಿಂದ) ಶನಿವಾರ (ಜೂನ್ 24) ರಾತ್ರಿ 12 ಗಂಟೆಯವರೆಗೆ 4 ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ 7,15,58,775 ಮಹಿಳೆಯರು ಸಂಚರಿಸಿದ್ದಾರೆ. ಅವರು ಸಂಚರಿಸಿದ ಟಿಕೆಟ್‌ಗಳ ಒಟ್ಟು ಮೌಲ್ಯ ₹ 166,09,27,526 ಆಗಿದೆ.

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ 2,08,84,860 ಮಹಿಳೆಯರು ಪ್ರಯಾಣಿಸಿದ್ದು, ಟಿಕೆಟ್ ಮೌಲ್ಯ ₹ 62,08,10,316 ಆಗಿದೆ. ಬಿಎಂಟಿಸಿ ಬಸ್‌ಗಳಲ್ಲಿ 2,39,07,381 ಮಹಿಳೆಯರು ಉಚಿತ ಪ್ರಯಾಣ ಬಳಸಿಕೊಂಡಿದ್ದಾರೆ. ₹ 29,64,30,431 ಟಿಕೆಟ್ ಮೌಲ್ಯ. ಎನ್‌ಡಬ್ಲ್ಯುಕೆಆರ್‌ಟಿಸಿ ಬಸ್‌ಗಳಲ್ಲಿ 1,72,86,040 ಮಹಿಳೆಯರು ಸಂಚರಿಸಿದ್ದರು. ಅದರ ಟಿಕೆಟ್ ಮೌಲ್ಯ ₹ 43,30,64,686. ಕೆಕೆಆರ್‌ಟಿಸಿ ಬಸ್‌ಗಳಲ್ಲಿ 94,80,494 ಮಹಿಳೆಯರು ಪ್ರಯಾಣಿಸಿದ್ದರು. ಅದರ ಟಿಕೆಟ್ ಮೌಲ್ಯ ₹ 31,06,22,093 ಆಗಿದೆ ಎಂದು ಸಾರಿಗೆ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಂತಿಮ ಹಂತದಲ್ಲಿ ಯುಸಿಸಿ ವರದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತ ಉತ್ತರಾಖಂಡದ ತಜ್ಞರ ಸಮಿತಿಯು ರಾಜ್ಯ ಸರ್ಕಾರಕ್ಕೆ ತನ್ನ ವರದಿ ನೀಡುವುದರ ಜೊತೆ ಯುಸಿಸಿಯ ಮಾದರಿ ಕರಡು ಮಸೂದೆಯನ್ನು ನೀಡುವ ಸಾಧ್ಯತೆ ಇದೆ.

ವೈಯಕ್ತಿಕ ಕಾನೂನುಗಳನ್ನು ಸಾರ್ವತ್ರಿಕಗೊಳಿಸುವ ಇಚ್ಛೆ ಹೊಂದಿರುವ ಇತರ ರಾಜ್ಯಗಳಿಗೂ ಅನುಕೂಲವಾಗಲಿ ಎಂಬ ಉದ್ದೇಶದಿಂದ ಮಾದರಿ ಕರಡು ಮಸೂದೆ ನೀಡಲು ಸಮಿತಿ ನಿರ್ಧರಿಸಿದೆ.

ಕರಡು ಮಸೂದೆ ಮತ್ತು ವರದಿಗೆ ಅಂತಿಮ ಸ್ಪರ್ಶ ನೀಡಲಾಗುತ್ತಿದೆ. ಈ ಮಸೂದೆಯು ಮದುವೆಯ ಕನಿಷ್ಠ ವಯಸ್ಸು, ನಿಖಾ ಹಲಾಲಾ ಮತ್ತು ಜವಾಬ್ದಾರಿಯುತ ಪೋಷಕತ್ವದಂಥ ಹಲವು ವಿಚಾರಗಳನ್ನು ಹೊಂದಿದೆ.

ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು 2022ರ ಮೇನಲ್ಲಿ ಯುಸಿಸಿ ಕುರಿತು ಸಮಿತಿ ನೇಮಿಸಿದರು. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನಾ ದೇಸಾಯಿ ಅವರು ಈ ಸಮಿತಿಯ ನೇತೃತ್ವ ವಹಿಸಿದ್ದಾರೆ.

ಸಂಬಂಧಪಟ್ಟ ಹಲವರನ್ನು ಸಮಿತಿಯು ಕಳೆದ 12 ತಿಂಗಳಲ್ಲಿ ಸಂಪರ್ಕಿಸಿದೆ ಮತ್ತು 2.31 ಲಕ್ಷಕ್ಕೂ ಹೆಚ್ಚು ಲಿಖಿತ ಅಭಿಪ್ರಾಯವನ್ನು ಸ್ವೀಕರಿಸಿದೆ. ಮುಸ್ಲಿಂ ಮಹಿಳೆಯರೂ ಸೇರಿ 20 ಸಾವಿರಕ್ಕೂ ಹೆಚ್ಚು ಜನರು ಸಮಿತಿ ಎದುರು ಹಾಜರಾಗಿ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಕಡೆಯ ಬಾರಿ ಸಾರ್ವಜನಿಕ ಸಂವಾದವನ್ನು ಸಮಿತಿಯು ಜೂನ್ 14ರಂದು ದೆಹಲಿಯಲ್ಲಿ ಏರ್ಪಡಿಸಿತ್ತು. ಬಳಿಕವೇ ಸಮಿತಿಯು ವರದಿಗೆ ಅಂತಿಮ ರೂಪ ನೀಡಲು ಮುಂದಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ನೇಮಿಸಿರುವ ಸಮಿತಿಯೊಂದು ಅತ್ಯಂತ ವ್ಯಾಪಕವಾಗಿ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿ ತಯಾರಿಸುತ್ತಿರುವ ವರದಿ ಇದಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (ಎನ್‌ಸಿಎಫ್) ಅಭಿಪ್ರಾಯ ಸಂಗ್ರಹಣೆ ಪ್ರಕ್ರಿಯೆಗಿಂತ ಉತ್ತರಾಖಂಡ ಯುಸಿಸಿ ಸಮಿತಿಯ ಅಭಿಪ್ರಾಯ ಸಂಗ್ರಹಣೆ ಪ್ರಕ್ರಿಯೆಯು ಹೆಚ್ಚು ವಿಸ್ತೃತವಾಗಿದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಜವಾಬ್ದಾರಿಯುತ ಪೋಷಕತ್ವದ ಮೂಲಕ ಜನಸಂಖ್ಯೆ ನಿಯಂತ್ರಣವು ವರದಿಯ ಅತ್ಯಂತ ಪ್ರಮುಖ ಭಾಗಗಳಲ್ಲಿ ಒಂದು ಎಂದು ಹೇಳಲಾಗಿದೆ.

ಈ ವರ್ಷದ ಆರಂಭದಲ್ಲಿ ‘ಉತ್ತರಾಖಂಡ ಯುಸಿಸಿ ಸಮಿತಿ’ಯ ರಚನೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಈ ವಿಚಾರದಲ್ಲಿ ಮೂಗುತೂರಿಸಲಾಗುವುದಿಲ್ಲ ಎಂದು ಹೇಳುವ ಮೂಲಕ ಸುಪ್ರೀಂ ಕೋರ್ಟ್ ಅರ್ಜಿಯನ್ನು ತಳ್ಳಿ ಹಾಕಿತ್ತು.

ರಕ್ಷಣಾ ಮೂಲಸೌಕರ್ಯ: ಪಾಕ್‌ಗೆ ಚೀನಾ ನೆರವು

ನವದೆಹಲಿ (ಪಿಟಿಐ): ಗಡಿನಿಯಂತ್ರಣ ರೇಖೆಯುದ್ದಕ್ಕೂ ರಕ್ಷಣಾ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಪಾಕಿಸ್ತಾನಕ್ಕೆ ಚೀನಾವು ಸಹಾಯ ಮಾಡುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಚೀನಾವು ಪಾಕಿಸ್ತಾನಕ್ಕೆ ಮಾನವರಹಿತ ವೈಮಾನಿಕ ವಾಹನಗಳನ್ನು ಒದಗಿಸುತ್ತಿದೆ ಮತ್ತು ಸಂವಹನ ಗೋಪುರಗಳನ್ನು ಹಾಗೂ ಭೂಗತ ಕೇಬಲ್‌ಗಳನ್ನು ಸ್ಥಾಪಿಸಲು ನೆರವಾಗುತ್ತಿದೆ ಎಂದಿದ್ದಾರೆ. ಚೀನಾ - ಪಾಕಿಸ್ತಾನ ಆರ್ಥಿಕ ಕಾರಿಡಾರ್ ಮತ್ತು ಜಲವಿದ್ಯುತ್ ಯೋಜನೆಗಾಗಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಚೀನಾವು ತನ್ನ ಪ್ರಭಾವವನ್ನು ಹೆಚ್ಚಿಸುತ್ತಿದೆ ಎಂದಿದ್ದಾರೆ.

ಅನ್ನಭಾಗ್ಯ–2 ಅನುಷ್ಠಾನಕ್ಕೆ ಅಡ್ಡಿ: ಕಾಂಗ್ರೆಸ್

ನವದೆಹಲಿ (ಪಿಟಿಐ): ಕರ್ನಾಟದಲ್ಲಿ ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಧಕ್ಕೆ ತರುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ರಾಜ್ಯ ಸರ್ಕಾರದ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡುವ ಕಾರ್ಯಕ್ರಮವನ್ನು ಶೀಘ್ರ ಜಾರಿಗೆ ಮಾಡಲಾಗುವುದು ಎಂದು ಹೇಳಿದೆ.

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಉಚಿತ ಅಲ್ಲವೇ ಎಂದು ಪ್ರಶ್ನಿಸಿರುವ ಕಾಂಗ್ರೆಸ್, ಅನ್ನ ಭಾಗ್ಯ 2.0 ಯೋಜನೆ ಮೂಲಕ ಹತ್ತು ಕೆ.ಜಿ ಅಕ್ಕಿಯನ್ನು ಉಚಿತವಾಗಿ ನೀಡುವ ಕಾಂಗ್ರೆಸ್‌ನ ಗ್ಯಾರಂಟಿ ಹಾಳು ಮಾಡುವ ಯೋಜನೆಯೇ ಎಂದಿದೆ.

ತಮ್ಮ ಭವಿಷ್ಯ ಭದ್ರಪಡಿಸಿಕೊಳ್ಳಲು ಕಾಂಗ್ರೆಸ್‌ಗೆ ಮತ ಚಲಾಯಿಸಿದ ರಾಜ್ಯದ ಬಡವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶಿಕ್ಷಿಸುತ್ತಿರುವುದು ಕರ್ನಾಟಕದ ದುರಾದೃಷ್ಟವಲ್ಲದೆ ಬೇರೇನೂ ಅಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿಕೆಯಲ್ಲಿ ಆರೋಪಿಸಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ಬಳಿಕ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಬೆದರಿಕೆ ಹಿನ್ನಲೆಯಲ್ಲಿ ಹೆಚ್ಚುವರಿ ಅಕ್ಕಿ ನೀಡಲು ನಿರಾಕರಿಸಲಾಗಿದೆ ಎಂದು ಹೇಳಿದ್ದಾರೆ.

ವಾಲ್ಮೀಕಿ ನಾಯಕ ಸಮಾಜದ ಸಮಾರಂಭದಲ್ಲಿ ಶಾಸಕರಿಗೆ ಸನ್ಮಾನ

ಮೀಸಲಾತಿ: ಲೋಕಸಭೆ ಚುನಾವಣೆ ಗಡುವು

ಪ್ರಜಾವಾಣಿ ವಾರ್ತೆ

ತುಮಕೂರು: ಮುಂದಿನ ಲೋಕಸಭಾ ಚುನಾವಣೆಯ ಒಳಗಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳ ಶಾಸನವನ್ನು ಸಂವಿಧಾನದ ಪರಿಚ್ಛೇದ 9ಕ್ಕೆ ಸೇರಿಸಬೇಕು ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಪುರಿ ಸ್ವಾಮೀಜಿ ಗಡುವು ನೀಡಿದ್ದಾರೆ.

ನಗರದ ಗಾಜಿನ ಮನೆಯಲ್ಲಿ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ ಭಾನುವಾರ ಹಮ್ಮಿಕೊಂಡಿದ್ದ ಸಮುದಾಯದ ನೂತನ ಸಚಿವರು ಮತ್ತು ಶಾಸಕರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

‘ಇಲ್ಲದಿದ್ದರೆ ಸುಮ್ಮನೆ ಕೂರುವುದಿಲ್ಲ. ಪ್ರತಿ ಜಿಲ್ಲೆಗೂ ಭೇಟಿ ನೀಡಿ ಸಭೆ ನಡೆಸಿ ರಾಜಕೀಯ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದರು.

‘ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಭ್ರಮದಲ್ಲಿ ನಾವಿದ್ದೇವೆ. ಆದರೆ, ಇಲ್ಲಿಯ ತನಕ ನಿಜವಾದ ಅಮೃತ ಯಾರಿಗೆ ಸಿಕ್ಕಿದೆ? ಪರಿಶಿಷ್ಟ ಪಂಗಡಕ್ಕೆ ಸಂವಿಧಾನ ಬದ್ಧ ಹಕ್ಕು ನೀಡುವಲ್ಲಿ, ಸಮುದಾಯದ ಜನರ ಹಿತ ಕಾಯುವಲ್ಲಿ ಇದುವರೆಗೆ ಅಧಿಕಾರಕ್ಕೆ ಬಂದ ಯಾವ ಸರ್ಕಾರವೂ ಪ್ರಾಮಾಣಿಕ ಪ್ರಯತ್ನ ನಡೆಸಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪರಿಶಿಷ್ಟರ ಮೀಸಲಾತಿ ಹೆಚ್ಚಳದ ಸಮಯದಲ್ಲಿ ಸಮುದಾಯದ ಬಹಳಷ್ಟು ರಾಜಕೀಯ ನಾಯಕರು ನಾಟಕ ಮಾಡಿದರು. ಮೀಸಲಾತಿ ಹೆಚ್ಚಳ ಮಾಡುತ್ತೇವೆ. ಇದನ್ನು ‘ರಕ್ತದಲ್ಲಿ ಬರೆದು ಕೊಡುತ್ತೇನೆ’ ಎಂದವರನ್ನು ಜನರು ವಿಳಾಸ ಇಲ್ಲದಂತೆ ಮಾಡಿದ್ದಾರೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಮಾಜಿ ಸಚಿವ ಬಿ.ಶ್ರೀರಾಮುಲು ಹೆಸರು ಹೇಳದೆ ಟೀಕಿಸಿದರು.

ಸಮಾರಂಭದಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಪುರಿ ಸ್ವಾಮೀಜಿ ಮಾತನಾಡಿದರು. ಶಾಸಕಿ ಕರೆಮ್ಮ ಜಿ.ನಾಯಕ, ಶಾಂತಲಾ ರಾಜಣ್ಣ, ಸಹಕಾರ ಸಚಿವ ಕೆ.ಎನ್. ರಾಜಣ್ಣ, ಶಿಡ್ಲಕೋಣ ವಾಲ್ಮೀಕಿ ಶಾಖಾ ಮಠದ ಸಂಜಯಕುಮಾರ ಸ್ವಾಮೀಜಿ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಮಹಾನಗರ ಪಾಲಿಕೆ ಸದಸ್ಯ ಬಿ.ಜಿ. ಕೃಷ್ಣಪ್ಪ, ಶಾಸಕ ಬಿ.ದೇವೇಂದ್ರಪ್ಪ ಇದ್ದಾರೆ

ತಿಂಥಣಿಯಲ್ಲಿ ವಾಲ್ಮೀಕಿ ಮಠ

ಯಾದಗಿರಿ ಜಿಲ್ಲೆಯ ತಿಂಥಣಿಯಲ್ಲಿ ವಾಲ್ಮೀಕಿ ಸಮುದಾಯದ ಮತ್ತೊಂದು ಮಠ ಸ್ಥಾಪಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಆದಷ್ಟು ಶೀಘ್ರದಲ್ಲಿ ಈ ಕೆಲಸಕ್ಕೆ ಚಾಲನೆ ನೀಡಲಾಗುವುದು. ಮಠದ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ನೀಡಲಾಗುವುದು. ಐದರಿಂದ ಹತ್ತು ವರ್ಷದಲ್ಲಿ ಮಠ ಬೆಳವಣಿಗೆಯಾಗಲಿದೆ. ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಲಾಗುವುದು ಎಂದರು.

ಗಂಟೆ ಗಟ್ಟಲೆ ಭಾಷಣ ಮಾಡುವುದರಿಂದ ಸಮಸ್ಯೆ ಪರಿಹಾರ ಆಗುವುದಿಲ್ಲ. ಸಮಾಜ, ಕಾನೂನಿನ ಬಗ್ಗೆ ತಿಳಿವಳಿಕೆ ಇರಬೇಕು. ಯಾರೋ ಬರೆದುಕೊಟ್ಟ ಭಾಷಣ ಓದುವುದರಿಂದ ಸಮಾಜಕ್ಕೆ ಯಾವುದೇ ನ್ಯಾಯ ಸಿಗುವುದಿಲ್ಲ ಎಂದರು.

ಸೋಮವಾರ, ಜೂನ್ 26, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 176 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
'ಸಂಖ್ಯಾಶಾಸ್ತ್ರ' ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶ

ಆಳ-ಅಗಲ: ಉಚಿತ ಟಿಕೆಟ್ ಸ್ತ್ರೀಗೆ ಶಕ್ತಿ

ಭಾರತೀಯ ಯೋಧರ ಬಲಿದಾನ ಸ್ಮರಣೆ 8

ಮದ್ಯದ ಭದ್ರತಾ ಚೀಟಿ ವೆಚ್ಚ: ಆದೇಶ ವಾಪಸ್ 5

ಸಿಡಬ್ಲ್ಯುಸಿ ಸದಸ್ಯರ ನೇಮಕಕ್ಕೆ ಗ್ರಹಣ 9

ಚಿನ್ನ ಕಳವು: ಪಶುಪತಿ ದೇವಾಲಯ ಬಂದ್ 8

ಪಾಚಿ ತುಂಬಿದ ಕೊಳವೆಗಳಲ್ಲಿ ನೀರು ಸರಬರಾಜು • ಸಾವಿನ ಬಳಿಕ ಸುಣ್ಣ ಕಂಡ ತೊಟ್ಟಿಗಳು

ಜೀವಕ್ಕೆ ಮಲಿನ 'ಜಲ' ಕಂಟಕ

• ಪ್ರಮೋದ

ಕೊಪ್ಪಳ: 'ಮಕ್ಕಳ ಭವಿಷ್ಯ ರೂಪಿಸುವ ಸಲುವಾಗಿ ದುಡಿಯಲು ಬೆಂಗಳೂರಿಗೆ ಹೋಗಿದ್ದೆವು. ಹೋಗದಿದ್ದರೆ ಮಗಳು ನಮ್ಮ ಜೊತೆಗೇ ಇರುತ್ತಿದ್ದಳೇನೊ? ಜೀವನದಲ್ಲಿ ಇಷ್ಟೊಂದು ದುಃಖವನ್ನೂ ಅನುಭವಿಸುವ ಪರಿಸ್ಥಿತಿ ಬರುತ್ತಿರಲಿಲ್ಲವೇನೋ?'

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಬಿಜಕಲ್ ಗ್ರಾಮದಲ್ಲಿ ಮನೆಯ ಮುಂಭಾಗದಲ್ಲಿ ದಿಕ್ಕು ತೋಚದಂತಾಗಿ ಕುಳಿತಿದ್ದ ಈರಪ್ಪ ಹಾಗೂ ದೇವಮ್ಮ ದಂಪತಿಯ ನೋವಿನ ನುಡಿಗಳಿವು. ವಿಪರೀತ ವಾಂತಿ ಹಾಗೂ ಭೇದಿಯಿಂದ ಅಸ್ವಸ್ಥಳಾಗಿ ಈ ದಂಪತಿಯ ಒಂಬತ್ತು ವರ್ಷದ ಮಗಳು ನಿರ್ಮಲಾ ನಿಲ್ಲೂಟಿ ಮೃತಪಟ್ಟು ಎರಡು ವಾರಗಳು ಕಳೆದಿವೆ.

ದಿನಗಳು ಉರುಳಿದರೂ ಸಾಂತ್ವನ ಹೇಳಲು ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಗಂಟಲ ಸೆರೆ ಉಬ್ಬಿ ಬಂದಂತಾಗಿದ್ದ ದೇವಮ್ಮಗೆ, 'ದುಡಿಮೆಗಾಗಿ ಮಗಳನ್ನೇ ಕಳೆದುಕೊಳ್ಳಬೇಕಾಯಿತು. ಮಗಳು ನರಳಿ ಸತ್ತ ಸುದ್ದಿ ಕೇಳಿದರೆ ಈಗಲೂ ಕರುಳು ಕಿವುಚಿದಂತೆ ಆಗುತ್ತದೆ' ಎಂದು ಕಣ್ಣೀರಾದರು. ಈ ಘಟನೆ ಬಿಜಕಲ್ ಗ್ರಾಮಸ್ಥರನ್ನು ಬೆಚ್ಚಿ ಬೀಳಿಸಿದ್ದು ಒಂದು ಸಲ ವಾಂತಿ ಭೇದಿಯಾದರೂ ತಕ್ಷಣವೇ ಆಸ್ಪತ್ರೆಗೆ ಧಾವಿಸುವಂತೆ ಮಾಡಿದೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಬಿಜಕಲ್ ಗ್ರಾಮದ ಮನೆ ಮುಂದೆಯೇ ಚರಂಡಿ ನೀರು ಹರಿಯುತ್ತಿದ್ದು, ಇದರ ಅಡಿಯಲ್ಲಿಯೇ ಕುಡಿಯುವ ನೀರು ಪೂರೈಸುವ ಕೊಳವೆ ಇದೆ

ಇದೊಂದು ಉದಾಹರಣೆಯಷ್ಟೇ. ಜಿಲ್ಲೆಯ ಕನಕಗಿರಿ ತಾಲ್ಲೂಕಿನಲ್ಲಿಯೂ ಇದೇ ಪರಿಸ್ಥಿತಿ. ಈ ತಾಲ್ಲೂಕಿನಲ್ಲಿ ಮೂವರು ಮತ್ತು ಬಿಜಕಲ್‌ನಲ್ಲಿ ಒಬ್ಬರು ವಾಂತಿ ಭೇದಿಯಿಂದಾಗಿಯೇ ಮೃತಪಟ್ಟಿದ್ದಾರೆ ಎಂದು ಕುಟುಂಬದವರು ಹಾಗೂ ಗ್ರಾಮಸ್ಥರು ಆರೋಪಿಸುತ್ತಾರೆ. ಆದರೆ, ಜಿಲ್ಲಾಡಳಿತ ಇದನ್ನು ಅಲ್ಲಗಳೆಯುತ್ತಿದೆ. ಈ ಎರಡೂ ಗ್ರಾಮಗಳಲ್ಲಿನ ಕೆಲ ಬೋರ್‌ಗಳಲ್ಲಿ ಬರುತ್ತಿದ್ದ ನೀರು ಕುಡಿಯಲು ಯೋಗ್ಯವಲ್ಲ ಎನ್ನುವುದು ಪರೀಕ್ಷಾ ವರದಿಯಿಂದ ಸಾಬೀತಾಗಿದೆ. ಪಿಡಿಒಗಳ ತಲೆದಂಡವೂ ಆಗಿದೆ.

ಕಲುಷಿತಗೊಳ್ಳಲು ಕಾರಣಗಳೇನು?

- ನೀರು ಪೂರೈಸುವ ಕೊಳವೆಯಲ್ಲಿ ಪಾಚಿ
- ನೀರಿನ ಟ್ಯಾಂಕರ್‌ಗಳು ಹಲವು ವರ್ಷಗಳಿಂದ ಸ್ವಚ್ಛಗೊಂಡಿಲ್ಲ
- ಮನೆಯ ಮುಂದೆಯೇ ಚರಂಡಿ
- ಕುಡಿಯುವ ನೀರಿನ ಘಟಕಗಳು ಕೆಟ್ಟು ಹೋಗಿವೆ
- ತಗ್ಗು ಪ್ರದೇಶಗಳಲ್ಲಿರುವ ಬೋರ್‌ವೆಲ್‌ಗಳಿಗೆ ಚರಂಡಿ ನೀರು ಸೇರ್ಪಡೆ

ಬೇಸಿಗೆ ಸಮಯದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಕೊಪ್ಪಳ, ರಾಯಚೂರು, ಕಲಬುರಗಿ, ಬೀದರ್, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮೇಲಿಂದ ಮೇಲೆ ವಾಂತಿ ಭೇದಿ ಪ್ರಕರಣಗಳು ಕಂಡು ಬರುತ್ತಿವೆ. ಕೊಪ್ಪಳ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಇಂಥ ಘಟನೆಗಳು ಮರುಕಳಿಸಿವೆ. ಜೂನ್‌ನಲ್ಲಿ ಜಿಲ್ಲೆಯೊಂದರಲ್ಲಿಯೇ 400 ವಾಂತಿ ಭೇದಿ ಪ್ರಕರಣಗಳು ವರದಿಯಾಗಿವೆ.

5ನೇ ಪುಟ ನೋಡಿ

ವಾಂತಿ ಭೇದಿಯಿಂದಾಗಿ ನಾನು ಹಾಗೂ ಪತ್ನಿ ಐದು ದಿನ ಆಸ್ಪತ್ರೆಯಲ್ಲಿದ್ದುಕೊಂಡು ಚಿಕಿತ್ಸೆ ಪಡೆದಿದ್ದೇವೆ. ಮನೆಗೆ ಬಂದು ಒಂದು ವಾರವಾದರೂ ಸುಸ್ತು ಕಡಿಮೆಯಾಗಿಲ್ಲ. ನಿತ್ಯ ಆರೋಗ್ಯದ್ದೇ ಚಿಂತೆಯಾಗಿದೆ
ಬಾಳಪ್ಪ ಮೇಟಿ, ಬಿಜಕಲ್ ಗ್ರಾಮಸ್ಥ

ಏಕಾ ಏಕಿ ಹೊಟ್ಟೆ ನೋವು ಕಾಣಿಸಿಕೊಂಡು, ವಾಂತಿ ಬಂತು. ಮಗ ಔರಾದ್ ಆಸ್ಪತ್ರೆಗೆ ಸೇರಿಸಿದ. ನೀರು ಪೂರೈಸುವ ಕೊಳವೆ ಬಾವಿ ಸುತ್ತ ಹೊಲಸು ನಿಂತಿದೆ
ಮಾಧವರಾವ ಸಿಂಧೆ, ಚಿಕಿತ್ಸೆ ಪಡೆಯುತ್ತಿರುವ ಕರಕ್ಯಾಳ ಗ್ರಾಮಸ್ಥ

ಜಿ.ಪಂ. ಸಿಇಒಗಳ ಜೊತೆ ಸಭೆ ನಡೆಸಿ ನೀರಿನ ಮೂಲಗಳನ್ನು ಕಡ್ಡಾಯವಾಗಿ ಶುದ್ಧೀಕರಣ ಮಾಡಿಸಬೇಕು ಎಂದು ಸೂಚಿಸಿದ್ದೇನೆ. ಇವುಗಳ ಪರಿಶೀಲನೆಗೆ ಸಮಿತಿ ರಚಿಸಲಾಗುವುದು
ಎಲ್.ಕೆ. ಅತೀಕ್, ಗ್ರಾಮೀಣಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

ಒಳ ಪುಟಗಳು

ಅಪಘಾತ: ಬಲಗಾಲು ಕಳೆದುಕೊಂಡ ನಟ ಸೂರಜ್ 5

ಉಪಗ್ರಹ ತರಂಗಾಂತರ ಹರಾಜು ಬೇಡ: ಮಸ್ಕ್ 9

ಸಿರಿಯಾ: ವೈಮಾನಿಕ ದಾಳಿ 9 ಮಂದಿ ಸಾವು 8

ಏರುತ್ತಿದೆ ಟೊಮೆಟೊ ಧಾರಣೆ! 9

ಮಣಿಪುರ: 12 ಮಂದಿ ಮೈತೇಯಿ ಬಂಡುಕೋರರ ಬಿಡುಗಡೆ

ನಾರಿಯರ ಆಕ್ರೋಶಕ್ಕೆ ಸೇನೆ ಶರಣು

ಇಂಫಾಲ್/ಕೋಲ್ಕತ್ತ (ಪಿಟಿಐ): ಮಣಿಪುರದ ಪೂರ್ವ ಇಂಫಾಲ್ ಜಿಲ್ಲೆಯ ಇಥಾಮ್ ಗ್ರಾಮದಲ್ಲಿ ಮಹಿಳೆಯರ ಗುಂಪು ಮತ್ತು ಭದ್ರತಾ ಪಡೆಯ ನಡುವಣ ಮುಖಾಮುಖಿ ಕೊನೆಗೊಂಡಿದೆ. ಮಹಿಳೆಯರ ಆಕ್ರೋಶಕ್ಕೆ ಭದ್ರತಾ ಪಡೆಯು ಮಣಿದಿದೆ. ಬಂಧಿಸಿದ್ದ 12 ಮಂದಿ ಮೈತೇಯಿ ಬಂಡುಕೋರರನ್ನು ಶನಿವಾರ ಬಿಡುಗಡೆಗೊಳಿಸಿದೆ.

ಹೊತ್ತಿ ಉರಿಯುತ್ತಿರುವ ಕಣಿವೆ ರಾಜ್ಯದಲ್ಲಿ ಮತ್ತಷ್ಟು ಹಿಂಸಾಚಾರಕ್ಕೆ ಎಡೆಮಾಡಿ ಕೊಡಬಾರದು ಎಂದು ನಿರ್ಧರಿಸಿದ ಕಾರ್ಯಾಚರಣೆಯ ಹೊಣೆ ಹೊತ್ತ ಕಮಾಂಡರ್ 'ಪ್ರಬುದ್ಧ ನಿರ್ಧಾರ' ಕೈಗೊಂಡಿದ್ದಾರೆ ಎಂದು ಸೇನೆಯು ಶ್ಲಾಘಿಸಿದೆ.

ನಡೆದಿದ್ದು ಏನು?: ಇಥಾಮ್ ಗ್ರಾಮವು ಆಂಡ್ರೊ ಪಟ್ಟಣಕ್ಕೆ ಆರು ಕಿ.ಮೀ ದೂರದಲ್ಲಿದೆ. ನಿಷೇಧಿತ ಕಂಗ್ಲೀ ಯಾವೋಲ್ ಕನ್ನಾ ಲೂಪ್ (ಕೆವೈಕೆಎಲ್) ಗುಂಪಿಗೆ ಸೇರಿದ ಬಂಡುಕೋರರು ಈ ಹಳ್ಳಿಯಲ್ಲಿ ಅಡಗಿರುವ ಕುರಿತು ಯೋಧರಿಗೆ ಖಚಿತ ಮಾಹಿತಿ ಲಭಿಸಿತ್ತು. ಹಾಗಾಗಿ, ಕಾರ್ಯಾಚರಣೆಗೆ ಅಲ್ಲಿಗೆ ತೆರಳಿದ್ದರು.

ಶಸ್ತ್ರಸಜ್ಜಿತ ಬಂಡುಕೋರರನ್ನು ಬಂಧಿಸಿ ಅಲ್ಲಿಂದ ಕರೆದೊಯ್ಯಲು ಮುಂದಾದರು. ಆ ವೇಳೆ 1,500ಕ್ಕೂ ಹೆಚ್ಚು ಮಹಿಳೆಯರು ಯೋಧರನ್ನು ಸುತ್ತುವರಿದು ಉಗ್ರರ ರಕ್ಷಣೆಗೆ ನಿಂತರು. ಬಂಡುಕೋರರು ಮತ್ತು ಶಸ್ತ್ರಾಸ್ತ್ರಗಳನ್ನು ಗ್ರಾಮದ ಮುಖಂಡರಿಗೆ ಒಪ್ಪಿಸಿ ಅಲ್ಲಿಂದ ತೆರಳುವಂತೆ ಪಟ್ಟು ಹಿಡಿದರು.

9ನೇ ಪುಟ ನೋಡಿ

ಅಮಿತ್ ಶಾ–ಬಿರೇನ್ ಸಿಂಗ್ ಚರ್ಚೆ

ನವದೆಹಲಿ (ಪಿಟಿಐ): ಮಣಿಪುರದ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭಾನುವಾರ ಭೇಟಿ ಮಾಡಿ ಕಣಿವೆ ರಾಜ್ಯದಲ್ಲಿನ ಸದ್ಯದ ಸ್ಥಿತಿಗತಿ ಬಗ್ಗೆ ವಿವರಿಸಿದ್ದಾರೆ.

ಶನಿವಾರ ನಡೆದ ಸರ್ವಪಕ್ಷಗಳ ಸಭೆಯ ಬಳಿಕ ಶಾ ಅವರ ಕರೆಯ ಮೇರೆಗೆ ಬೆಳಿಗ್ಗೆ ಇಂಫಾಲ್‌ನಿಂದ ದೆಹಲಿಗೆ ಬಂದ ಬಿರೇನ್ ಸಿಂಗ್ ನೇರವಾಗಿ ಗೃಹ ಸಚಿವರ ನಿವಾಸಕ್ಕೆ ತೆರಳಿದರು. ಈ ಚರ್ಚೆಯಲ್ಲಿ ಬಿಜೆಪಿ ವಕ್ತಾರ ಸಂಬಿತ್ ಸ್ವರಾಜ್, ರಾಜ್ಯಸಭಾ ಸದಸ್ಯ ಮಹಾರಾಜ ಮಣಿಪುರ್, ಮಣಿಪುರ ವಿಧಾನಸಭೆಯ ಸ್ಪೀಕರ್ ಸತ್ಯಬ್ರತ ಸಿಂಗ್ ಹಾಜರಿದ್ದರು. 'ಅಮಿತ್ ಶಾ ಅವರ ಮೇಲ್ವಿಚಾರಣೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ಕಳೆದ ಒಂದು ವಾರದಿಂದ ಹಿಂಸಾಚಾರವನ್ನು ನಿಯಂತ್ರಿಸುವಲ್ಲಿ ಸಫಲವಾಗಿದ್ದು, ಇದೊಂದು ದೊಡ್ಡ ಹೆಜ್ಜೆಯಾಗಿದೆ' ಎಂದು ಬಿರೇನ್ ಸಿಂಗ್ ಟ್ವೀಟ್ ಮಾಡಿದ್ದಾರೆ.

'ಜೂನ್ 13ರಿಂದ ಯಾವುದೇ ಜೀವಹಾನಿ ಸಂಭವಿಸಿಲ್ಲ. ಶಾಂತಿ ಪುನರ್ ಸ್ಥಾಪನೆಗೆ ಸಂಬಂಧಿಸಿದಂತೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದಾಗಿ ಅಮಿತ್ ಶಾ ಭರವಸೆ ನೀಡಿದ್ದಾರೆ' ಎಂದು ತಿಳಿಸಿದ್ದಾರೆ.

'ಶಾಶ್ವತ ಶಾಂತಿ ನೆಲೆಸಲು ಅಗತ್ಯವಿರುವ ಕ್ರಮಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಇನ್ನೂ ಹೆಚ್ಚಿನ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ನೀಡಿದ್ದಾರೆ. ಈ ದಿಸೆಯಲ್ಲಿ ಎಲ್ಲರೂ ಸಹಕಾರ ನೀಡಬೇಕು' ಎಂದು ಕೋರಿದ್ದಾರೆ.

ಅಸ್ಸಾಂ ಪ್ರವಾಹ: ಸಂಕಷ್ಟದಲ್ಲಿ 2.70 ಲಕ್ಷ ಜನ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಭಾನುವಾರ ಸ್ವಲ್ಪ ಸುಧಾರಿಸಿದೆ. ನೀರಿನ ಮಟ್ಟ ಇಳಿಮುಖವಾಗುತ್ತಿದ್ದರೂ ಒಂಬತ್ತು ಜಿಲ್ಲೆಗಳಲ್ಲಿ 2.70 ಲಕ್ಷ ಜನರು ಸಂಕಷ್ಟದಲ್ಲಿದ್ದಾರೆ ಎಂದು ಅಧಿಕಾರಿ ಪ್ರಕಟಣೆ ತಿಳಿಸಿದೆ.

ಪ್ರವಾಹದಿಂದಾಗಿ ರಾಜ್ಯದಲ್ಲಿ ಈವರೆಗೂ ಮೂರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 120ಕ್ಕೂ ಹೆಚ್ಚು ಜನರನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದ್ದಾರೆ.

ಬಕ್ಸಾ, ದರಂಗ್, ಧುಬ್ರಿ, ಲಖಿಂಪುರ, ನಲ್ಬರಿ ಮತ್ತು ಉದಲ್ಗುರಿ ಸೇರಿ ಕೆಲ ಜಿಲ್ಲೆಗಳಲ್ಲಿ ಪ್ರವಾಹದಿಂದ ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಬಾಧಿತರಾಗಿದ್ದಾರೆ ಎಂದು ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಎಸ್‌ಡಿಎಂಎ) ತಿಳಿಸಿದೆ.

ಈ ನಡುವೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಜತೆ ಮಾತುಕತೆ ನಡೆಸಿದ್ದು, ಪ್ರವಾಹ ಪರಿಸ್ಥಿತಿ ಎದುರಿಸಲು ಸಾಧ್ಯವಿರುವ ನೆರವು ನೀಡುವ ಬಗ್ಗೆ ಭರವಸೆ ನೀಡಿದ್ದಾರೆ.

ಎತ್ತರಕ್ಕೇರಿದ ಭಾರತ–ಈಜಿಪ್ಟ್ ಬಂಧ

ಕೈರೊ (ಈಜಿಪ್ಟ್) (ಪಿಟಿಐ): ಭಾರತ ಮತ್ತು ಈಜಿಪ್ಟ್ ನಡುವಣ ಸಂಬಂಧವನ್ನು 'ರಕ್ಷಣಾ ಸಹಭಾಗಿತ್ವ'ದ ಮಟ್ಟಕ್ಕೆ ಏರಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್–ಸಿಸಿ ಅವರು ವಿಸ್ತೃತವಾದ ಮಾತುಕತೆಯನ್ನು ಭಾನುವಾರ ನಡೆಸಿದರು. ರಾಜಕೀಯ ಮತ್ತು ಭದ್ರತಾ ಸಹಕಾರವೇ ಈ ಮಾತುಕತೆಯ ಕೇಂದ್ರ ಬಿಂದುವಾಗಿತ್ತು. ಸಂಬಂಧವನ್ನು ರಕ್ಷಣಾ ಸಹಭಾಗಿತ್ವದ ಮಟ್ಟಕ್ಕೆ ಏರಿಸುವುದಕ್ಕೆ ಇಬ್ಬರೂ ನಾಯಕರು ಸಮ್ಮತಿಸಿದರು.

ಈಜಿಪ್ಟ್ ಪ್ರವಾಸದಲ್ಲಿದ್ದ ಪ್ರಧಾನಿ ಮೋದಿ ಅವರು, ದ್ವಿಪಕ್ಷೀಯ ಸಂಬಂಧ ವೃದ್ಧಿಸುವ ಕುರಿತು ಇತ್ತಿಹಾದಿಯಾ ಅರಮನೆಯಲ್ಲಿ ಅಧ್ಯಕ್ಷ ಎಲ್–ಸಿಸಿ ಅವರೊಂದಿಗೆ ಮಾತುಕತೆ ನಡೆಸಿದರು.

ರಕ್ಷಣಾ ಕ್ಷೇತ್ರ, ವ್ಯಾಪಾರ ಮತ್ತು ಹೂಡಿಕೆ, ಭದ್ರತೆ ವಿಷಯದಲ್ಲಿ ಸಹಕಾರ ಹೆಚ್ಚಿಸುವುದು, ವಿಜ್ಞಾನ ಮತ್ತು ಶೈಕ್ಷಣಿಕ ವಿನಿಮಯ ಕಾರ್ಯಕ್ರಮವನ್ನು ಮತ್ತಷ್ಟು ಬಲಪಡಿಸುವುದಕ್ಕೆ ಸಂಬಂಧಿಸಿದ ಒಪ್ಪಂದಗಳಿಗೆ ಉಭಯ ನಾಯಕರು ಸಹಿ ಹಾಕಿದರು.

ಪ್ರಧಾನಿ ಮೋದಿ ಅವರು ಹೆಲಿಯೊಪೊಲೀಸ್ ಕಾಮನ್‌ವೆಲ್ತ್ ಯುದ್ಧಸ್ಮಾರಕಕ್ಕೆ ತೆರಳಿ ಪ್ರಥಮ ಮಹಾಯುದ್ಧದ ಸಂದರ್ಭದಲ್ಲಿ ಈಜಿಪ್ಟ್, ಪ್ಯಾಲೆಸ್ತೀನ್ ನೆಲದಲ್ಲಿ ಹೋರಾಡಿ ಮಡಿದ ಭಾರತೀಯ ಯೋಧರಿಗೆ ಗೌರವ ನಮನ ಸಲ್ಲಿಸಿದರು.

'ಕೃಷಿ, ಸ್ಮಾರಕಗಳು ಹಾಗೂ ಪುರಾತತ್ವ ತಾಣಗಳ ಸಂರಕ್ಷಣೆ ಹಾಗೂ ಸ್ಪರ್ಧಾತ್ಮಕ ಕಾನೂನು ಕುರಿತ ಮೂರು ಮಹತ್ವದ ಒಪ್ಪಂದಗಳಿಗೆ ಎರಡೂ ದೇಶಗಳು ಸಹಿ ಹಾಕಿದವು' ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ತಿಳಿಸಿದ್ದಾರೆ. 'ಜಿ–20 ಗುಂಪಿನ ರಾಷ್ಟ್ರಗಳ ನಡುವೆ ಸಹಕಾರ ಹೆಚ್ಚಿಸುವುದು, ಆಹಾರ ಭದ್ರತೆ, ಹವಾಮಾನ ಬದಲಾವಣೆ ಹಾಗೂ ವಿಶ್ವದ ದಕ್ಷಿಣ ಭಾಗದಲ್ಲಿರುವ ದೇಶಗಳ ಪರವಾಗಿ ಒಕ್ಕೊರಲ ದನಿ ಎತ್ತುವ ಕುರಿತು ಮೋದಿ, ಅಬ್ದೆಲ್ ಚರ್ಚಿಸಿದರು.

'ಜಿ–20 ಶೃಂಗಸಭೆಗೆ ಅಬ್ದೆಲ್ ಅವರಿಗೆ ಮೋದಿ ಇದೇ ಸಂದರ್ಭದಲ್ಲಿ ಆಹ್ವಾನ ನೀಡಿದರು' ಎಂದಿದ್ದಾರೆ.

ಪುಟಿನ್ ರಕ್ಷಣೆಗೆ ಬೆಲರೂಸ್ ಸಂಧಾನ

ಮಾಸ್ಕೊ (ಎಪಿ): ರಷ್ಯಾದ ವಿರುದ್ಧ ಬಂಡಾಯವೆದ್ದಿದ್ದ ಖಾಸಗಿ ಸೇನಾ ಗುಂಪು 'ವ್ಯಾಗ್ನರ್' ವಾಪಸ್ ತೆರಳಲು ಬೆಲರೂಸ್‌ನ ಅಧ್ಯಕ್ಷ ಅಲೆಕ್ಸಾಂಡರ್ ಲುಕಾಶೆಂಕೊ ಅವರು ಸಂಧಾನ ಮಾತುಕತೆ ನಡೆಸಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ.

ಸಂಧಾನ ಮಾತುಕತೆಯ ಬಳಿಕ 'ವ್ಯಾಗ್ನರ್'ನ ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರಿಗೆ ಬೆಲರೂಸ್‌ನಲ್ಲಿ ಆಶ್ರಯ ನೀಡಲಾಗಿದೆ.

ಲುಕಾಶೆಂಕೊ ಅವರು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಆಪ್ತರಾಗಿದ್ದಾರೆ ಮತ್ತು ಬೆಲರೂಸ್‌ನ ಸೇನೆಯು ಉಕ್ರೇನ್ ಯುದ್ಧದಲ್ಲಿ ಭಾಗಿಯಾಗದಿದ್ದರೂ ಉಕ್ರೇನ್ ಜೊತೆ ಹೋರಾಡುತ್ತಿದ್ದ ರಷ್ಯಾದ ಪಡೆಗಳಿಗೆ ಆಶ್ರಯ ನೀಡಿತ್ತು. ರಷ್ಯಾದ ಅಣ್ವಸ್ತ್ರಗಳನ್ನು ತನ್ನ ದೇಶದಲ್ಲಿ ನಿಯೋಜನೆಗೊಳಿಸುವುದಕ್ಕೂ ಈ ವರ್ಷ ಒಪ್ಪಂದ ಮಾಡಿಕೊಂಡಿತ್ತು.

ಪುಟಿನ್ ಪ್ರಾಬಲ್ಯ ಕುಸಿತ?

ಎರಡು ದಶಕಗಳಿಂದ ಅಧಿಕಾರದಲ್ಲಿರುವ ಪುಟಿನ್ ಪ್ರಾಬಲ್ಯವನ್ನು ಯೆವ್ಗೆನಿ ಪ್ರಿಗೋಷಿನ್ ಅವರ ಬಂಡಾಯವು ಕುಗ್ಗಿಸಿದೆ ಎನ್ನಲಾಗುತ್ತಿದೆ.

ಪ್ರಿಗೋಷಿನ್ ನೇತೃತ್ವದ ಪಡೆ ರೊಸ್ಟೋವನ್ ಡಾನ್ ನಗರ ಪ್ರವೇಶಿಸಿ ಮಾಸ್ಕೊಗೆ ತೆರಳಲು ಮುಂದಾದಾಗ ದೇಶದ ರಾಜಧಾನಿಯನ್ನು ರಕ್ಷಿಸಲು ರಷ್ಯಾದ ಪಡೆಗಳು ಪರದಾಡಿವೆ ಎಂದು ಮೂಲಗಳು ತಿಳಿಸಿವೆ.

ರಷ್ಯಾದ ನಗರಗಳಿಂದ ಮರಳಲು ಪ್ರಿಗೋಷಿನ್ ಅವರು ಒಪ್ಪಿಕೊಂಡಿದ್ದಾರೆ ಎಂದು ಭಾನುವಾರ ರಷ್ಯಾ ಘೋಷಿಸಿದ ಬಳಿಕ ವ್ಯಾಗ್ನರ್ ಪಡೆಯು ಹಿಂದಿರುಗುತ್ತಿದ್ದಾಗಲೂ ಪ್ರಿಗೋಷಿನ್ ಮೌನವಾಗಿದ್ದರು. ಈ ವೇಳೆ ಅವರು ಎಲ್ಲಿದ್ದರು ಎಂಬುದೂ ಅಸ್ಪಷ್ಟವಾಗಿದೆ ಎಂದು ಮೂಲಗಳು ಹೇಳಿವೆ.

ತಮ್ಮ ಖಾಸಗಿ ಸೇನೆಯು ಮಾಸ್ಕೊ ಕಡೆಗೆ ತೆರಳುತ್ತಿದ್ದಾಗಲೂ ಪ್ರಿಗೋಷಿನ್ ಅವರು ಪುಟಿನ್ ಅವರನ್ನು ನೇರವಾಗಿ ಟೀಕಿಸಿರಲಿಲ್ಲ. ರಷ್ಯಾದ ರಕ್ಷಣಾ ವ್ಯವಸ್ಥೆಯ ವಿರುದ್ಧ ಬಂಡಾಯವೇಳುವುದು ತಮ್ಮ ಗುರಿ ಎಂದಿದ್ದರು. ರಷ್ಯಾದ ಸೇನೆಯು ಭ್ರಷ್ಟವಾಗಿದ್ದು, ಉಕ್ರೇನ್‌ನಲ್ಲಿ ತಮ್ಮ ಪಡೆಗಳಿಗೆ ಹಿನ್ನಡೆಯಾಗಲು ಕಾರಣವಾಗಿದೆ ಎಂದೂ ಪ್ರಿಗೋಷಿನ್ ಆರೋಪಿಸಿದ್ದರು. ಬೆಲರೂಸ್ ಒಪ್ಪಂದದಿಂದ ಪ್ರಿಗೋಷಿನ್‌ಗೆ 'ವ್ಯಾಗ್ನರ್' ಪಡೆಗಳ ಮೇಲಿದ್ದ ಹಿಡಿತ ಸಡಿಲಗೊಳ್ಳಲಿದೆ ಎಂದು ಹೇಳಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಿದ್ಯಾರ್ಥಿಗಳಿಗೆ ಸಾಹಿತ್ಯದ ಅರಿವು

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ದಾಸರಹಳ್ಳಿಯ ಮಂಜುನಾಥ ನಗರದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಈಚೆಗೆ ಸಾಹಿತ್ಯದ ಬಗ್ಗೆ ಅರಿವು ಮೂಡಿಸಲಾಯಿತು.

ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಕಾರ್ಯಕ್ರಮ ಉದ್ಘಾಟಿಸಿದರು. 'ಸುಧಾ' ವಾರಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ಚ.ಹ. ರಘುನಾಥ್, ದಾಸರಹಳ್ಳಿ ಕ್ಷೇತ್ರದ ಕಸಾಪ ಘಟಕದ ಅಧ್ಯಕ್ಷ ಕಾಳೇನಹಳ್ಳಿ ಲಿಂಗರಾಜ್, ಮುಖ್ಯಶಿಕ್ಷಕ ವೇಣುಗೋಪಾಲ್, ಕದಂಬ ನಾಗರಿಕ ವೇದಿಕೆಯ ಲಕ್ಷ್ಮಿವೆಂಕಟೇಶ್ ಇದ್ದರು.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ

bit.ly/40dPCqy



FARNAZ

ಸ್ಮಾರ್ಟ್‌ಸಿಟಿ ಯೋಜನೆ: ಆಮೆಗತಿಯಲ್ಲಿ ಸಾಗುತ್ತಿರುವ ಕಾಮಗಾರಿ: ಬಳಕೆಯಾಗದ ಎಸ್ಕಲೇಟರ್

ಸಮಸ್ಯೆಗಳ ಆಗರ ಕೆ.ಆರ್. ಮಾರುಕಟ್ಟೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಾಹನಗಳ ನಿಲುಗಡೆಗೆ ಸರಿಯಾದ ಜಾಗವಿಲ್ಲ. ಕುಡಿಯುವ ನೀರಿನ ಸೌಲಭ್ಯವಿಲ್ಲ. ಗಬ್ಬು ನಾರುತ್ತಿರುವ ಶೌಚಾಲಯ, ಮುಗಿಯದ ಸ್ಮಾರ್ಟ್ ಸಿಟಿ ಕಾಮಗಾರಿಗಳು...

ಇದು ಕೆ.ಆರ್.ಮಾರುಕಟ್ಟೆಯ ದುಃಸ್ಥಿತಿ. ರಸ್ತೆಯಲ್ಲೇ ವ್ಯಾಪಾರ ಮಾಡುವವರನ್ನು ಅಲ್ಲಿಂದ ಎಬ್ಬಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಪೊಲೀಸರು ಹರಸಾಹಸ ಮಾಡುತ್ತಿರುವುದು ಇಲ್ಲಿ ಪ್ರತಿದಿನ ಕಾಣುವ ದೃಶ್ಯ.

ಸ್ಮಾರ್ಟ್‌ಸಿಟಿ ಯೋಜನೆಯಡಿ ಕೆ.ಆರ್.ಮಾರುಕಟ್ಟೆ ಅಭಿವೃದ್ಧಿಪಡಿಸಲು ನಿರ್ಧರಿಸಿ, ₹ 34.67 ಕೋಟಿ ಅನುದಾನವನ್ನೂ ಮೀಸಲಿಟ್ಟಿತ್ತು. ಜತೆಗೆ ಮೊಬಿಲಿಟಿ ಹಬ್‌ಗಾಗಿ ₹ 18.68 ಕೋಟಿ ನಿಗದಿ ಮಾಡಿತ್ತು. 2016-17ನೇ ಸಾಲಿನಲ್ಲಿ ಅಭಿವೃದ್ಧಿಗೆ ಚಾಲನೆಯನ್ನೂ ನೀಡಿತ್ತು.

ಈ ಯೋಜನೆಯಡಿ ಪಾದಚಾರಿ ಸುರಂಗ ಮಾರ್ಗ ನಿರ್ಮಿಸಲಾಗಿದೆ. ಪಾದಚಾರಿಗಳ ಬಳಕೆಗಾಗಿ ಎಸ್ಕಲೇಟರ್ ಕೂಡ ಅಳವಡಿಸಲಾಗಿದೆ. ಇದಾಗಿ 9 ತಿಂಗಳು ಕಳೆದರೂ ಇನ್ನೂ ಎಸ್ಕಲೇಟರ್ ಚಾಲನೆಯಲ್ಲಿಲ್ಲ.

ಹೂವು, ತರಕಾರಿ, ಬಟ್ಟೆ, ಚಪ್ಪಲಿ, ಅಲ್ಯುಮಿನಿಯಂ ಪಾತ್ರೆ, ಸ್ಟೀಲ್ ಪಾತ್ರೆಗಳು, ದಿನಸಿ ಹೀಗೆ ನೂರಾರು ಅಂಗಡಿಗಳು ಇಲ್ಲಿವೆ. ಅಷ್ಟೇ ಪ್ರಮಾಣದಲ್ಲಿ ಬೀದಿಯಲ್ಲಿಯೂ ವ್ಯಾಪಾರ ನಡೆಯುತ್ತಿದೆ. ಆದರೆ, ಇಲ್ಲಿ ಕುಡಿಯಲು ನೀರಿನ ವ್ಯವಸ್ಥೆ ಇಲ್ಲ. ಶೌಚಾಲಯ ಇದೆಯಾದರೂ ಸ್ವಚ್ಛತೆ ಇಲ್ಲದ ಕಾರಣ ಮೂಗು ಮುಚ್ಚಿಕೊಂಡು ಹೋಗಬೇಕು ಎಂದು ಕೆ.ಆರ್. ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ಜಿ.ಎಂ. ದಿವಾಕರ್ ದೂರಿದರು.

ರಸ್ತೆಯಲ್ಲೇ ಮಳೆ ನೀರು: ಜೋರು ಮಳೆ ಸುರಿದರೆ ಮಾರುಕಟ್ಟೆಯ ಸಂಪರ್ಕದ ರಸ್ತೆಗಳೆಲ್ಲ ಕಾಲುವೆಗಳಂತಾಗುತ್ತವೆ. ಅವೆನ್ಯೂ ರಸ್ತೆಯಲ್ಲಿ ಮಳೆ ಬಂದಾಗ ಒಳಚರಂಡಿಯ ಚೇಂಬರ್‌ಗಳು ತೆರೆದುಕೊಂಡು ಹೊರಗೆ ಹರಿಯುತ್ತದೆ ಎಂದು ವ್ಯಾಪಾರಿಗಳು ಪರಿಸ್ಥಿತಿ ವಿವರಿಸಿದರು.

ಟ್ರಾಫಿಕ್ ಸಮಸ್ಯೆ: ವಿಧಾನಸೌಧ ಕಡೆಗೆ ಸಾಗುವ ಬಸ್‌ಗಳಿಗೆ ಬೆಳಿಗ್ಗೆ 9ರಿಂದ 11ರವರೆಗೆ ಅವೆನ್ಯೂ ರಸ್ತೆಯಲ್ಲಿ ಚಲಿಸಲು ಅವಕಾಶ ನೀಡಲಾಗುತ್ತದೆ. ಮುಂಜಾನೆಯೇ ಹೂವು, ಹಣ್ಣು ವ್ಯಾಪಾರಿಗಳು ರಸ್ತೆಯ ತುಂಬೆಲ್ಲ ತುಂಬಿಕೊಂಡಿರುತ್ತಾರೆ. ಅವರನ್ನು ಬೇರೆಡೆಗೆ ಕಳುಹಿಸಿ ಬೆಳಿಗ್ಗೆ 9ರ ಹೊತ್ತಿಗೆ ಬಸ್‌ಗಳು ಸಾಗಲು ವ್ಯವಸ್ಥೆ ಮಾಡಿಕೊಡುವ ಹೊತ್ತಿಗೆ ಸಂಚಾರಿ ಪೊಲೀಸರು ಹೈರಾಣ ಆಗುತ್ತಿದ್ದಾರೆ.

ಬೆಳಿಗ್ಗೆ 11ರ ನಂತರ ತಳ್ಳುಗಾಡಿಗಳಲ್ಲಿ ವ್ಯಾಪಾರ ಶುರುವಾಗುತ್ತದೆ. ಖರೀದಿಗಾಗಿ ಬರುವ ಗ್ರಾಹಕರಿಗೆ ವಾಹನಗಳನ್ನು ನಿಲ್ಲಿಸಲು ಇಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಸ್ಮಾರ್ಟ್‌ಸಿಟಿಯಲ್ಲಿ ವ್ಯಾಪಾರ ಮಳಿಗೆ ನಿರ್ಮಿಸುವ ಯೋಜನೆ ಇದೆ. 275ಕ್ಕೂ ಅಧಿಕ ದ್ವಿಚಕ್ರ ವಾಹನಗಳಿಗೆ, ಸುಮಾರು 170 ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆಯನ್ನೂ ಈ ಯೋಜನೆ ಹೊಂದಿದೆ. ಯೋಜನೆ ಜಾರಿಯಾಗಿ ಕಾಮಗಾರಿ ನಡೆದರೆ ಶೌಚಾಲಯದ ಸಮಸ್ಯೆ, ಲೋಡಿಂಗ್, ಅನ್‌ಲೋಡಿಂಗ್ ಬೇ ಸಮಸ್ಯೆ ಎಲ್ಲ ಇತ್ಯರ್ಥಗೊಳ್ಳಲಿದೆ. ವ್ಯಾಪಾರ ಮಳಿಗೆಯ ಜತೆಗೆ ಮೀನು ಮಾರುಕಟ್ಟೆ, ಮಾಂಸ ಮಾರುಕಟ್ಟೆಗಳೆಲ್ಲ ಇನ್ನೂ ಯೋಜನೆಯ ಹಂತದಲ್ಲೇ ಉಳಿದಿರುವುದರಿಂದ ಸಮಸ್ಯೆ ಹಾಗೇ ಮುಂದುವರಿದಿದೆ.

ಬೆಂಗಳೂರಿನ ಕೆ.ಆರ್ ಮಾರುಕಟ್ಟೆಯ ಬಳಿಯ ರಸ್ತೆಯಲ್ಲಿ ಮಳೆ ನೀರು, ಕೊಳಚೆ ನಿಂತಿರುವುದರಿಂದ ಮೂಗು ಮುಚ್ಚಿಕೊಂಡು ತೆರಳುತ್ತಿರುವ ಸಾರ್ವಜನಿಕರು (ಎಡಚಿತ್ರ), ಕೆ.ಆರ್ ಮಾರುಕಟ್ಟೆಯ ಬಸ್‌ನಿಲ್ದಾಣದ ಬದಿಯಲ್ಲಿ ಬಿದ್ದಿರುವ ಕಸದ ರಾಶಿ ಪ್ರಜಾವಾಣಿ ಚಿತ್ರಗಳು/ರಂಜು ಪಿ.

ಸದ್ಯ, ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಮಗಾರಿಗಳು ನಡೆಯುತ್ತಿವೆ. ಸ್ಮಾರ್ಟ್‌ಸಿಟಿಯಿಂದ ಬಿಬಿಎಂಪಿಗೆ ಹಸ್ತಾಂತರಿಸಿದ ಬಳಿಕ ನಾವು ನಿರ್ವಹಣೆ ಮಾಡಬೇಕು.

ತುಷಾರ್ ಗಿರಿನಾಥ್, ಬಿಬಿಎಂಪಿ ಮುಖ್ಯ ಆಯುಕ್ತ

ಮಳಿಗೆ ನಿರ್ಮಿಸಬೇಕಾದ ಜಾಗದಲ್ಲಿ ಎಸ್ಕಲೇಟರ್?

'ಮಳಿಗೆ ನಿರ್ಮಿಸಬೇಕಾದ ಜಾಗದಲ್ಲಿ ಎಸ್ಕಲೇಟರ್ ನಿರ್ಮಿಸಿದ್ದಾರೆ. ಇದರ ವಿರುದ್ಧ ಕೋರ್ಟ್‌ಗೆ ಹೋಗಿದ್ದೇನೆ. ಎಸ್ಕಲೇಟರ್ ತೆಗೆಯಲು ಕೋರ್ಟ್ ಹೇಳಿದೆ' ಎಂದು ಜಿ.ಎಂ.ದಿವಾಕರ್ ತಿಳಿಸಿದರು.

ರೈತರಿಗೆ ಸುಲಭದಲ್ಲಿ ಮಾರುಕಟ್ಟೆ ಸಿಗಬೇಕು. ಗ್ರಾಹಕರಿಗೆ ಕಡಿಮೆ ಬೆಲೆಗೆ ಹಣ್ಣು, ತರಕಾರಿ ಸಹಿತ ನಿತ್ಯ ಬಳಕೆಯ ವಸ್ತುಗಳು ಸಿಗಬೇಕು ಎಂಬ ದೂರದೃಷ್ಟಿ ಇಟ್ಟುಕೊಂಡು ನಾಲ್ವಡಿ ಕೃಷ್ಣರಾಜ ಒಡೆಯರ್ 1928ರಲ್ಲಿ ಈ ಮಾರುಕಟ್ಟೆ ಆರಂಭಿಸಿದ್ದರು. ಅವರಿಗೆ ಇರುವ ದೂರದೃಷ್ಟಿ ಈಗಿನವರಿಗೆ ಇಲ್ಲ. 7 ವರ್ಷಗಳಿಂದ ಸ್ಮಾರ್ಟ್‌ಸಿಟಿ ಹೆಸರಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಯಾವುದೂ ಮುಗಿಯುತ್ತಿಲ್ಲ ಎಂದು ದೂರಿದರು.

ಈ ಬಗ್ಗೆ ವಿವರ ಕೇಳಲು ಸ್ಮಾರ್ಟ್‌ಸಿಟಿ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದರು ಕರೆ ಸ್ವೀಕರಿಸಲಿಲ್ಲ.

ಸುಮನಾ

ಅಜ್ಜನ ಕಾಲದಿಂದ ಅಂದರೆ 70 ವರ್ಷಗಳಿಂದ ಇಲ್ಲಿ ನಮ್ಮ ಕುಟುಂಬ ವ್ಯಾಪಾರ ಮಾಡುತ್ತಿದೆ. ಐದು ವರ್ಷಗಳಿಂದ ನಾನು ವ್ಯಾಪಾರ ಮಾಡುತ್ತಿದ್ದೇನೆ. ಶೌಚಾಲಯ ಸರಿಪಡಿಸಬೇಕು. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

–ಸುಮನಾ, ಗೋಡಂಬಿ, ದ್ರಾಕ್ಷಿ ವ್ಯಾಪಾರಿ

30 ವರ್ಷಗಳಿಂದ ಹೂವು ಮಾರುತ್ತಿದ್ದೇನೆ. ಸಣ್ಣ ಮಳೆ ಬಂದರೆ ಕೊಡೆ ಹಿಡ್ಕೊಂಡು ವ್ಯಾಪಾರ ಮಾಡುತ್ತೇನೆ. ಜೋರಾಗಿ ಬಂದರೆ ಪಕ್ಕದ ಕಟ್ಟಡದ ಅಡಿ ನಿಲ್ಲಬೇಕು. ಮಳೆ ನಿಂತ ಮೇಲೆ ಮತ್ತೆ ವ್ಯಾಪಾರ ಮಾಡಬೇಕು.

ಶಾಂತಮ್ಮ, ಹೂವಿನ ವ್ಯಾಪಾರಿ

ರಸ್ತೆ ಬದಿಯಲ್ಲೇ ತರಕಾರಿ ಇಟ್ಟುಕೊಂಡು 30 ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದೇವೆ. ಎಲ್ಲಿ ಜಾಗ ಕೊಡುತ್ತಾರೋ ಅಲ್ಲಿ ವ್ಯಾಪಾರ ಮಾಡೋದು.

ವೆಂಕಟಮ್ಮ, ತರಕಾರಿ ವ್ಯಾಪಾರಿ

ಪ್ರಕಾಶನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್.

ನಂ.113, 9ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಪ್ರಕಾಶನಗರ, ಬೆಂಗಳೂರು-560021

ಪ್ರಕಾಶನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಬೆಂಗಳೂರು ಇದರ ಆಡಳಿತ ಮಂಡಳಿಯ ಚುನಾವಣಾ ಪ್ರಕಟಣೆ

ಮೇಲ್ಕಂಡ ಸಂಘದ ಆಡಳಿತ ಮಂಡಳಿ 2023-24ದಿಂದ ಮುಂದಿನ 5 ವರ್ಷದ ಅವಧಿಗೆ ಚುನಾವಣೆಯನ್ನು **ದಿನಾಂಕ 09/07/2023 ಭಾನುವಾರ ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ ಶ್ರೀನಿವಾಸ ಕಲ್ಯಾಣ ಮಂಟಪ ನಂ. 619, 2ನೇ ಬ್ಲಾಕ್, ಆಂಜನೇಯ ಸ್ವಾಮಿ ದೇವಸ್ಥಾನದ ರಸ್ತೆ, ರಾಜಾಜಿನಗರ, ಬೆಂಗಳೂರು-560010.** ಈ ಆವರಣದಲ್ಲಿ ನಡೆಸುವ ಸಂಬಂಧ ಈಗಾಗಲೇ ಚುನಾವಣಾ ವೇಳಾ ಪಟ್ಟಿಯನ್ನು ಸದಸ್ಯರುಗಳ ವಿಳಾಸಕ್ಕೆ ಅಂಚೆ ಮೂಲಕ ಕಳಿಸಲಾಗಿರುತ್ತವೆ ಅರ್ಹ ಸದಸ್ಯರುಗಳು ಸಂಘದ ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಕೋರಿದೆ .

ರಿಟರ್ನಿಂಗ್ ಅಧಿಕಾರಿಗಳ ಸೂಚನೆ ಮೇರೆಗೆ

ಸಹಿ/- ಕಾರ್ಯದರ್ಶಿ

27ರಂದು ಅದ್ಧೂರಿ ಕೆಂಪೇಗೌಡ ಜಯಂತಿ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಜೂನ್ 27ರಂದು ಸಾಂಸ್ಕೃತಿಕ ಉತ್ಸವದೊಂದಿಗೆ ವೈಭವಯುತವಾಗಿ ಆಚರಿಸಲು ರಾಜ್ಯ ಒಕ್ಕಲಿಗರ ಸಂಘ ನಿರ್ಧರಿಸಿದೆ.

ಅಂದು ಸಂಘದ ಆವರಣದಿಂದ ವಿಧಾನಸೌಧದವರೆಗೆ ಜಾನಪದ ಕಲಾ ತಂಡಗಳ ಮೆರವಣಿಗೆ ನಡೆಯಲಿದೆ. ಬಳಿಕ ವಿಧಾನಸೌಧದಲ್ಲಿ ಮಧ್ಯಾಹ್ನ 12ಕ್ಕೆ ಜಯಂತಿ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಿ.ಕೆಂಚಪ್ಪಗೌಡ ಮನವಿ ಮಾಡಿದ್ದಾರೆ.

ಆ ದಿನದಂದು ಸಂಘದ ಎಲ್ಲ ಶಾಲಾ - ಕಾಲೇಜುಗಳಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ, ಪೂಜೆ ಸಲ್ಲಿಸಲು ನಿರ್ದೇಶನ ನೀಡಲಾಗಿದೆ. ಕೆಂಪೇಗೌಡ ಆಸ್ಪತ್ರೆಯ ಆವರಣದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಅಂದು ಬೆಳಿಗ್ಗೆ 9ಕ್ಕೆ ಚಾಲನೆ ನೀಡಲಾಗುವುದು ಎಂದು ಹೇಳಿದ್ದಾರೆ.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಶಾಸಕ ಆರ್. ಅಶೋಕ ಪಾಲ್ಗೊಳ್ಳಲಿದ್ದಾರೆ. ಮೆರವಣಿಗೆಯಲ್ಲಿ ಡೊಳ್ಳುಕುಣಿತ, ಪೂಜಾಕುಣಿತ, ವೀರಗಾಸೆ ಇತ್ಯಾದಿ ಆಕರ್ಷಣೆ ಆಗಿರಲಿವೆ ಎಂದು ಹೇಳಿದರು.

'ಫಾಂದ್ರುಕ್' ಕಾದಂಬರಿ ಬಿಡುಗಡೆಯಲ್ಲಿ ಶ್ರೀಧರ ಬಳಗಾರ ಅಭಿಮತ

'ಸಿದ್ಧಾಂತಗಳಿಂದ ಬದುಕು ನಲುಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಬದುಕು ಸಿದ್ಧಾಂತಗಳ ಭಾರದಿಂದ ನಲುಗಿ ಹೋಗಿದೆ. ವಾದಗಳು, ಸಿದ್ಧಾಂತಗಳಿಗೆ ಜೀವನದ ವಾಸ್ತವವನ್ನು ತೆರೆಸಿ ತೋರಿಸಲು ಸಾಧ್ಯವಿಲ್ಲ' ಎಂದು ಕಾದಂಬರಿಕಾರ ಶ್ರೀಧರ ಬಳಗಾರ ತಿಳಿಸಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸತೀಶ್ ಚಪ್ಪರಿಕೆ ಅವರ 'ಫಾಂದ್ರುಕ್' ಕಾದಂಬರಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಆಧುನಿಕ ಜೀವನ ವಿಘಟಿತವಾಗಿ ಸಣ್ಣ ಕಥೆಗಳಾಗಿವೆ. ಈ ವೇಳೆ ಜೀವನವನ್ನು ಸಮಗ್ರವಾಗಿ ನೋಡಲು ಕಾದಂಬರಿ ಮೊರೆ ಹೋಗಲಾಗುತ್ತಿದೆ. ಲೌಕಿಕ ಜಗತ್ತಿನಲ್ಲಿ ಕಾಲ್ಪನಿಕವಾದಂತಹ ಅವಕಾಶಗಳನ್ನು ನೀಡುತ್ತಿರುವುದು ಕಾದಂಬರಿ. ಯಾವುದನ್ನು ಕಾರ್ಪೋರೇಟ್ ಜಗತ್ತು ಅಂತ ಕರೆಯುತ್ತೇವೆಯೋ, ಅದು ನಮ್ಮ ಅಂತಃಕರಣದ ಮಾಹಿತಿ ನಾಶ ಮಾಡುತ್ತದೆ. ಅಂತಃಕರಣದ ಮನುಷ್ಯತ್ವ ಹುಡುಕುವ ಪ್ರಯತ್ನವನ್ನು ಕಾದಂಬರಿ ಮಾಡುತ್ತದೆ. ಇತ್ತೀಚಿನ ದಿನಗಳಲ್ಲಿ ಕಾದಂಬರಿಗಳು ದೊಡ್ಡ ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಲೇಖಕ ಸತೀಶ್ ಚಪ್ಪರಿಕೆ ಅವರ 'ಫಾಂದ್ರುಕ್' ಪುಸ್ತಕವನ್ನು ಶ್ರೀಧರ ಬಳಗಾರ ಬಿಡುಗಡೆ ಮಾಡಿದರು. ರಂಜನಿ ರಾಘವನ್, ಎಂ.ಎಸ್. ಆಶಾದೇವಿ ಹಾಗೂ ಗಿರಿಜಾ ರೈಕ್ವಾ ಇದ್ದಾರೆ —ಪ್ರಜಾವಾಣಿ ಚಿತ್ರ

ಕಿರುತೆರೆ ನಟಿ ರಂಜನಿ ರಾಘವನ್, 'ಅತ್ಯುತ್ತಮ ಕಾದಂಬರಿಯ ಓದು ಹೊಸ ಜೀವನ ಬದುಕಿ ಬಂದಂತೆ ಅನಿಸುತ್ತದೆ. ಕಾದಂಬರಿ ಅಥವಾ ಕತೆಯನ್ನು ನಾವು ಹೀಗೆಯೇ ಬರೆಯಬೇಕು ಅಂದುಕೊಂಡರೆ ಬರೆಯುತ್ತಾ ಹೋದಂತೆ ಅದರ ಸ್ವರೂಪವೇ ಬದಲಾಗುತ್ತದೆ' ಎಂದು ಹೇಳಿದರು.

ಕೃತಿಯ ಕುರಿತು ಮಾತನಾಡಿದ ವಿಮರ್ಶಕಿ ಡಾ. ಎಂ.ಎಸ್. ಆಶಾದೇವಿ, 'ಕೃತಿಗೆ ಕಾಲದ ನೆಲೆ ಹಾಗೂ ಕಾಲದ ಚಲನೆಯಿದೆ. ತನ್ನ ಕಾಲವನ್ನು ಅರ್ಥಮಾಡಿಸಿಕೊಳ್ಳುವುದರ ಜೊತೆಗೆ ಕಾಲವನ್ನು ಶೋಧಿಸುವ ಪರಿ ಇಲ್ಲಿ ಕಂಡಿದೆ. ಬದುಕು ಅನ್ನುವುದು ಕಾದು ಗೆಲ್ಲಬೇಕಾದ ಯುದ್ಧವೋ ಅಥವಾ ನಿರ್ವಹಿಸಬೇಕಾದ ಅಮಿಷವೋ ಅನ್ನುವುದನ್ನು ಈ ಕಾದಂಬರಿ ಪ್ರಶ್ನಿಸುತ್ತದೆ' ಎಂದರು.

ಲೇಖಕ ಸತೀಶ್ ಚಪ್ಪರಿಕೆ, 'ಏಳು ವರ್ಷಗಳ ಮಾನಸಿಕ ತೊಳಲಾಟದ ಬಂಧನ ಈ ಕಾದಂಬರಿ. ಮನುಷ್ಯ ಹಾಗೂ ಮನುಷ್ಯತ್ವದ ನಡುವೆ ನಡೆಯುವ ಪಯಣ ಈ ಒಂದು ಜೀವನ. ಹಲವು ಆಯಾಮಗಳಲ್ಲಿ ಈ ಕೃತಿಯು ಕವಲೊಡೆದಿದೆ' ಎಂದರು.

ನಗರದಲ್ಲಿ ಇಂದು

ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ: ಉಪಸ್ಥಿತಿ: ಶಾಲಿನಿ ರಜನೀಶ್, ಆಯೋಜನೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳಿಂದ ಕಂಠೀರವ ಕ್ರೀಡಾಂಗಣದವರೆಗೆ, ಬೆಳಿಗ್ಗೆ 9

ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಕಳ್ಳಸಾಗಣೆ ವಿರುದ್ಧ ಅಂತರರಾಷ್ಟ್ರೀಯ ದಿನಾಚರಣೆ ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಜೈಶಂಕರ್, ದೀಪಕ್ ಆರ್.ಎಲ್., ಲೋಕನಾಥ್, ರಜನಿ ಪಿ., ವೂಡೇ ಪಿ. ಕೃಷ್ಣ, ಆಯೋಜನೆ: ಲಯನ್ಸ್ ಕ್ಲಬ್ ಆಫ್ ಬೆಂಗಳೂರು ನಾರ್ಥ್ ಚಾರಿಟಬಲ್ ಟ್ರಸ್ಟ್, ಶೇಷಾದ್ರಿಪುರ ಸಂಯುಕ್ತ ಪದವಿ ಪೂರ್ವ ಕಾಲೇಜು, ಸ್ಥಳ: ಶೇಷಾದ್ರಿ ಪುರ ಸಂಯುಕ್ತ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ದಿನೇಶ್ ಗುಂಡೂರಾವ್

ವಿಶ್ವ ಮಾದಕ ವಸ್ತುಗಳ ಸೇವನೆ ಮತ್ತು ಕಳ್ಳಸಾಗಣೆ ವಿರೋಧಿ ದಿನಾಚರಣೆ, ವಶಪಡಿಸಿಕೊಂಡ ಮಾದಕ ವಸ್ತುಗಳ ನಾಶಪಡಿಸುವ ಕಾರ್ಯಕ್ರಮ: ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಸಮ್ಮೇಳನ ಸಭಾಂಗಣ, ಪೊಲೀಸ್ ಕಮಿಷನರ್ ಕಚೇರಿ, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ 11

ಅಂಗನವಾಡಿಗಳ ಉದ್ಘಾಟನೆ: ಎಸ್. ರಘು, ಅಜಿತ್ ಕುಮಾರ್ ರೈ, ಆಯೋಜನೆ ಮತ್ತು ಸ್ಥಳ: ರೋಟರಿ ಬೆಂಗಳೂರು ಇಂದಿರಾನಗರ, ಬಾಬಾಸಾಹೇಬ್ ಕಾಲೊನಿ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಳಿಗ್ಗೆ 11.45

ಚಂಪಾ ಸಿರಿಗನ್ನಡ ಪ್ರಶಸ್ತಿ ಪ್ರದಾನ: ಬಸವರಾಜ ಎಸ್. ಹೊರಟ್ಟಿ, ಪ್ರಶಸ್ತಿ ಪುರಸ್ಕೃತರು: ಕೆ.ಎಸ್. ಭಗವಾನ್, ಅತಿಥಿ: ಹೇಮಲತಾ ಮಹಿಷಿ, ಅಧ್ಯಕ್ಷತೆ: ಧರಣೇಂದ್ರ ಕುರಕುರಿ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಸ್ಥಳ: ಕರ್ನಾಟಕ ಸ್ವಾಭಿಮಾನಿ ವೇದಿಕೆ, ಸ್ಥಳ: ಅಕ್ಕಮಹಾ ದೇವಿ ಸಭಾಂಗಣ, ಕಸಾಪ ಚಾಮರಾಜಪೇಟೆ, ಸಂಜೆ 5.30

ಹೇಮಲತಾ ಮಹಿಷಿ

ವಿದ್ಯೇಶ ನಾದೋತ್ಸವ: ಸಾನ್ನಿಧ್ಯ: ವಿದ್ಯೇಶತೀರ್ಥ ಸ್ವಾಮೀಜಿ, ಅತಿಥಿಗಳು: ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ, ಸುಬುಧೇಂದ್ರ ತೀರ್ಥ ಸ್ವಾಮೀಜಿ, ವಿದ್ಯಾಸಾಗರ ತೀರ್ಥ ಸ್ವಾಮೀಜಿ, ಗಾಯನ: ಶುಭಾ ಸಂತೋಷ್, ಆಯೋಜನೆ: ಭಂಡಾರಕೇರಿ ಮಠ, ಸ್ಥಳ: ಭಾಗವತ ಕೀರ್ತಿಧಾಮ, ಗಿರಿನಗರದ 2ನೇ ಹಂತ, ಸಂಜೆ 5

ತಿದ್ದುಪಡಿ

'ನಗರದಲ್ಲಿ ಇಂದು' ಅಂಕಣದಲ್ಲಿ ಕನ್ನಡ ಜನ ಶಕ್ತಿ ಕೇಂದ್ರ ಆಯೋಜಿಸಿರುವ ಕರ್ನಾಟಕದ ಕಸ್ತೂರಿಬಾ ಯಶೋಧರಮ್ಮ ದಾಸಪ್ಪ ಸಮಾಜ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಭಾನುವಾರ (ಜೂನ್ 25) ನಡೆಯಲಿದೆ ಎಂದು ಪ್ರಕಟವಾಗಿತ್ತು. ಈ ಕಾರ್ಯಕ್ರಮವು ಬುಧವಾರ (ಜೂನ್ 28) ನಡೆಯಲಿದೆ.

भारतीय ताराभौतिकी संस्थान
INDIAN INSTITUTE OF ASTROPHYSICS
(विज्ञान और प्रौद्योगिकी विभाग, भारत सरकार)
(Department of Science & Technology, Government of India)
कोरमंगला Koramangala, बेंगलुरू Bangalore - 560034

निविदा आमंत्रण सूचना NOTICE INVITING TENDER

मुहरबंद निविदाएं निम्नवत कार्य के लिए आमंत्रित की जाती हैं

(1) आईआईए परिसर, II ब्लॉक, कोरमंगला, बेंगलूरु स्थित मुख्य प्रयोगशाला भवन तथा नया मुख्य प्रयोगशाला भवन में एमएस खिड़कियों को यूपीवीसी खिड़कियों से प्रतिस्थापन करना और संबद्ध सिविल कार्य।

निविदा सूचना संख्या 064/आईआईए/सिविल/बेंगलूरु/एमएस व यूपीवीसी खिड़कियाँ/2023-24 दिनांक जून 26, 2023

(2) आईआईए परिसर, II ब्लॉक, कोरमंगला, बेंगलूरु स्थित मुख्य प्रयोगशाला भवन के प्रथम तल में कमरा नंबर 124, 125, 127 और 128 का नवीनीकरण ।

निविदा सूचना संख्या 065/आईआईए/सिविल/बेंगलूरु/कमरों का नवीनीकरण/2023-24 दिनांक जून 26, 2023.

(3) आईआईए परिसर, II ब्लॉक, कोरमंगला, बेंगलूरु स्थित मुख्य प्रयोगशाला भवन में सामान्य शौचालयों (पुरुष एवं महिला) का नवीनीकरण ।

निविदा सूचना संख्या 066/आईआईए/सिविल/बेंगलूरु/ शौचालयों का नवीनीकरण/2023-24 दिनांक जून 26, 2023

विस्तृत निविदा दस्तावेज को संस्थान की वेबसाइट **www.iiap.res.in/tenders.htm** से डाउनलोड किया जा सकता है। उपरोक्त बोलियां प्राप्त करने की अंतिम तारीख **जुलाई 26, 2023** को या उससे पहले **15:00** बजे तक है।

Sealed Tenders are invited for the following works:

(1) Replacement of MS Windows with UPVC Windows and allied Civil Works in Main Lab Building and New Main Lab Building at IIA Campus, Bengaluru.
Tender Notice No.064/IIA/CIVIL/BNG/MS & UPVC WINDOWS/2023-24 Dated 26th June 2023.

(2) Renovation of Room No.124, 125, 127 and 128 in First Floor, Main Lab Building at IIA Campus, Bengaluru.
Tender Notice No.065/IIA/CIVIL/BNG/RENOVATION OF ROOMS/2023-24 Dated 26th June 2023.

(3) Renovation of General Toilets (Gents & Ladies Toilets) in Main Lab Building at IIA Campus, Bengaluru.
Tender Notice No.066/IIA/CIVIL/BNG/RENOVATION OF TOILETS/2023-24 Dated 26th June 2023.

Detailed Tender Documents can be downloaded from Institute's Website **www.iiap.res.in/tenders.htm.** Last date for receipt of bids is **on or before 26th July 2023 at 15:00 hours.**

प्रशासनिक अधिकारी
Administrative Officer

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

BEST INVESTMENT For Petrol Bunk Lease Cum Sale or Partnership Kanakapura Road NH-209 Highway Call:9035963540

Business Offers

Finance

NRI'S INVESTMENT And Finance Now funds are Available on Lowinterest against properties mortgage Land/Building, Land development/ projects Contract-7204995189

JOB OPPORTUNITIES

General

AMAZING OPPORTUNITY, Retired, VRS, Business/ Professionals, Senior Citizens, Earn Lakhs. International Recognition. SUPERB RETIRED LIFE CAREER. 97400-90431/ 97400-76517

REAL ESTATE SELLING

Sites

Mysore

CORNER SITE For Sale, with Old House, 71.5'x46', Saraswathipuram, Mysuru. Brokers Excuse. Contact: 9632418363

RENTAL PROPERTIES

Accommodation Available

Commercial

FULLY FURNISHED Office for Doctors, C.A.'s, Advocates available on Rent/ Mortgage 1200 sft. Three Chambers Lounge, Reception at R.P.C. Layout, Vijaynagar, Bengaluru. Contact:- 8618730793.

TOURS & TRAVEL

Travel

CONTACT ORCHID Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

EDUCATIONAL

Diploma Courses

DIPLOMA IN Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

HEALTH SPECIAL

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

Book Your Classifieds Ads

Online Log in to

dhclassifieds.com

Contact :

9845114560 : 9731810277
9901641752 : 9886213331
080 - 45557163 / 164

DH DECCAN HERALD ಪ್ರಜಾವಾಣಿ

ಮಾಸ್ಟರ್ ಆನಂದ್‌ಗೆ ₹ 18.50 ಲಕ್ಷ ವಂಚನೆ

ಕೊಮ್ಮಘಟ್ಟ ರಾಮಸಂದ್ರದಲ್ಲಿನ ನಿವೇಶನ ಖರೀದಿ ಒಪ್ಪಂದ ● ಮಲ್ಟಿ ಲೀಪ್ ವೆಂಚರ್ಸ್ ಕಂಪನಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರನಟ, ನಿರ್ದೇಶಕ ಮಾಸ್ಟರ್ ಆನಂದ್ ಅವರಿಂದ ನಿವೇಶನ ಹೆಸರಿನಲ್ಲಿ ₹18.50 ಲಕ್ಷ ಮುಂಗಡ ಹಣ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ಚಂದ್ರಾಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಕೆಂಗೇರಿ ಉಪನಗರ ಅರುಣಾಚಲ ಬಡಾವಣೆಯ ನಿವಾಸಿ ಎಚ್.ಆನಂದ್ ಉರುಫ್ ಮಾಸ್ಟರ್ ಆನಂದ್ (39) ವಂಚನೆ ಬಗ್ಗೆ ದೂರು ನೀಡಿದ್ದಾರೆ. ಚಂದ್ರಾಲೇಔಟ್‌ನ ಇನ್‌ಕಮ್ ಟ್ಯಾಕ್ಸ್ ಬಡಾವಣೆಯಲ್ಲಿರುವ ಮಲ್ಟಿ ಲೀಪ್ ವೆಂಚರ್ಸ್ ಕಂಪನಿಯ ಮಾಲೀಕ ಎಸ್.ಸುಧೀರ್, ಆಪ್ತ ಸಹಾಯಕಿ ಮನಿಕಾ ಕೆ.ಎಂ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2020ರ ಸೆಪ್ಟೆಂಬರ್ 23ರಿಂದ 2021ರ ಅಕ್ಟೋಬರ್ 7ರ ಅವಧಿಯಲ್ಲಾದ ವಂಚನೆ ಇದಾಗಿದೆ. ಹಣ ವರ್ಗಾವಣೆ ದಾಖಲೆ, ಖರೀದಿ ಕರಾರು ಪತ್ರ ಹಾಗೂ ಇತರೆ

ಅಪರಾಧ ಸುದ್ದಿ

ಮಾಸ್ಟರ್ ಆನಂದ್

ಪುರಾವೆಗಳನ್ನು ಪರಿಶೀಲಿಸಲಾಗುತ್ತಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ದೂರಿನ ವಿವರ: 'ಕೊಮ್ಮಘಟ್ಟದ ರಾಮಸಂದ್ರ ಗ್ರಾಮಕ್ಕೆ 2020ರ ಜುಲೈನಲ್ಲಿ ಚಿತ್ರೀಕರಣಕ್ಕೆಂದು ಹೋದಾಗ, ನಿವೇಶನಗಳನ್ನು ನೋಡಿದ್ದೆ. ಅಲ್ಲಿಯ ಕಚೇರಿಯಲ್ಲಿ ಮನಿಕಾ ಕೆ.ಎಂ ಅವರನ್ನು ಭೇಟಿಯಾಗಿದ್ದೆ. ನಿವೇಶನ ಖರೀದಿಸಲು ಸಾಲ ಸೌಲಭ್ಯ ಹಾಗೂ ಆಕರ್ಷಕ ಕೊಡುಗೆ ಇರುವುದಾಗಿ ಮನಿಕಾ ಆಮಿಷವೊಡ್ಡಿದ್ದರು' ಎಂದು ಮಾಸ್ಟರ್ ಆನಂದ್ ದೂರಿನಲ್ಲಿ ತಿಳಿಸಿದ್ದಾರೆ.

'ಮನಿಕಾ ಹಾಗೂ ಇತರರು ಪದೇ ಪದೇ ಕರೆ ಮಾಡಿ ನಿವೇಶನ ಖರೀದಿಸಲು ಮನವೊಲಿಸಿದರು. ಮಲ್ಟಿ ಲೀಪ್ ವೆಂಚರ್ಸ್ ಕಂಪನಿ ಕಚೇರಿಗೆ ಹೋಗಿ, ಆರೋಪಿಗಳನ್ನು ಭೇಟಿಯಾಗಿದ್ದೆ. ರಾಮಸಂದ್ರದಲ್ಲಿರುವ 2000 ಅಡಿ ವಿಸ್ತೀರ್ಣದ ನಿವೇಶನ ತೋರಿಸಿದ್ದರು. ₹ 70 ಲಕ್ಷಕ್ಕೆ ಖರೀದಿ ಒಪ್ಪಂದವಾಯಿತು. ಹಂತ ಹಂತವಾಗಿ ₹ 18.50 ಲಕ್ಷ ಮುಂಗಡ ಹಣ ನೀಡಿದ್ದೆ. ಉಳಿದ ಹಣಕ್ಕೆ ಸಾಲ ಕೊಡಿಸುವುದಾಗಿ ಆರೋಪಿಗಳು ಭರವಸೆ ನೀಡಿದ್ದರು. ನನ್ನ ಹಾಗೂ ಪತ್ನಿ ಯಶಸ್ವಿನಿ ಹೆಸರಿನಲ್ಲಿ ಖರೀದಿ ಕರಾರು ಪತ್ರ ಮಾಡಿಕೊಟ್ಟಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಆರೋಪಿಗಳು ಎಲ್ಲಿಯೂ ಸಾಲ ಕೊಡಿಸಲಿಲ್ಲ. ಈ ಮಧ್ಯೆ ಆರೋಪಿಗಳು ನಿವೇಶನವನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಈ ಬಗ್ಗೆ ನನಗೆ ಮಾಹಿತಿ ನೀಡಿಲ್ಲ, ಮುಂಗಡ ಹಣವನ್ನೂ ಮರಳಿಸಿಲ್ಲ. ವಿಚಾರಿಸಿದಾಗ ಆರೋಪಿಗಳು ಸ್ಪಂದಿಸಲಿಲ್ಲ. ಸುಳ್ಳು ಭರವಸೆ, ಕೊಡುಗೆಗಳ ಆಮಿಷವೊಡ್ಡಿ ನಿವೇಶನ ಮಾರಾಟದ ಹೆಸರಿನಲ್ಲಿ ಹಲವರನ್ನು ವಂಚಿಸಿರುವ ಅವರ ವಿರುದ್ಧ ಕ್ರಮಕೈಗೊಳ್ಳಿ' ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

'ಆಮಿಷವೊಡ್ಡಿ ವಂಚನೆ: ಬುಡ್ಸ್ ಕಾಯ್ದೆಯಡಿ ಪ್ರಕರಣ'

'ನಿವೇಶನ ಹೂಡಿಕೆ ಹಾಗೂ ಇತರೆ ಆಮಿಷವೊಡ್ಡಿ ಮಾಸ್ಟರ್ ಆನಂದ್ ರೀತಿಯಲ್ಲಿ ಮತ್ತಷ್ಟು ಮಂದಿಗೆ ಆರೋಪಿಗಳು ವಂಚನೆ ಮಾಡಿರುವ ಅನುಮಾನವಿದೆ. ಅನಿಯಂತ್ರಿತ ಉಳಿತಾಯ ಯೋಜನೆಗಳ ನಿಷೇಧ (ಬಿಯುಡಿಎಸ್) ಕಾಯ್ದೆ 2019ರಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳಿಂದ ನಿವೇಶನ ಹೆಸರಿನಲ್ಲಿ ಯಾರಿಗಾದರೂ ವಂಚನೆಯಾಗಿದ್ದರೆ, ಠಾಣೆಗೆ ದೂರು ನೀಡಬಹುದು' ಎಂದು ತಿಳಿಸಿವೆ.

ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ: ವ್ಯಕ್ತಿ ಸಾವು

ಕುಣಿಗಲ್: ರಾಷ್ಟ್ರೀಯ ಹೆದ್ದಾರಿ 75ರ ಗೊಟ್ಟಿಕೆರೆ ಬಳಿ ಭಾನುವಾರ ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಬೆಂಗಳೂರು ನಿವಾಸಿ ಚೇತನ್ (29) ಎಂಬುವರು ಮೃತಪಟ್ಟಿದ್ದಾರೆ.

ಕೊಡಗು ಜಿಲ್ಲೆಯ ಗೋಪಾಲಪುರದವರಾದ ಚೇತನ್ ಬೆಂಗಳೂರಿನಲ್ಲಿ ನೆಲೆಸಿದ್ದರು. ಕೊಡಗಿನಿಂದ ಬೆಂಗಳೂರಿಗೆ ಹಿಂದಿರುಗುವಾಗ ಅಪಘಾತ ಸಂಭವಿಸಿದೆ. ಪತ್ನಿ ಜಯಂತಿ ಮತ್ತು ಪುತ್ರ ವಿಹಾನ್ ತೀವ್ರವಾಗಿ ಗಾಯಗೊಂಡಿದ್ದಾರೆ. ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾದಚಾರಿ ಸಾವು: ಕಾರು ಚಾಲಕ ಬಂಧನ

ಬೆಂಗಳೂರು: ರಾಜಾಜಿನಗರದ ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ಭಾನುವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಪಾದಚಾರಿ ಮೃತಪಟ್ಟಿದ್ದು, ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಚಾಲಕ ಅರುಣ್ (31) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಮೃತರ ವಯಸ್ಸು 50 ವರ್ಷ ಎಂದು ಅಂದಾಜಿಸಿದ್ದು, ಗುರುತು ಪತ್ತೆಯಾಗಿಲ್ಲ. ಶವವನ್ನು ಆಸ್ಪತ್ರೆಯಲ್ಲಿರಿಸಲಾಗಿದೆ. ಆರೋಪಿ ಅರುಳ್ ಕಾರು ಚಲಾಯಿಸುತ್ತಿದ್ದು, ಸುಗುಣ ಆಸ್ಪತ್ರೆ ಎದುರಿನ ಸಿಗ್ನಲ್‌ನಲ್ಲಿ ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ಡಿಕ್ಕಿ ಹೊಡೆದಿದ್ದು, ಗಾಯಗೊಂಡಿದ್ದ ವ್ಯಕ್ತಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದು ರಾಜಾಜಿನಗರ ಸಂಚಾರ ಪೊಲೀಸರು ವಿವರಿಸಿದರು.

ಮದ್ಯದ ಪಾರ್ಟಿ: ಸ್ನೇಹಿತನ ಕೊಲೆ

ಬೆಂಗಳೂರು: ಬೆಳ್ಳಂದೂರು ಠಾಣೆ ವ್ಯಾಪ್ತಿಯಲ್ಲಿ ಪರಸ್ ನೇಪಾಳಿ ಉರುಫ್ ಡೇವಿಡ್ (18) ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಸ್ನೇಹಿತರೇ ಕೃತ್ಯ ಎಸಗಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

'ಮೂಲತಃ ನೇಪಾಳದ ಪರಸ್ ಹೋಟೆಲೊಂದರಲ್ಲಿ ಅಡುಗೆ ಕೆಲಸ ಮಾಡುತ್ತಿದ್ದು, ಹರಳೂರು ಬಳಿ ಸ್ನೇಹಿತರ ಜೊತೆ ವಾಸವಿದ್ದರು. ಇತ್ತೀಚೆಗೆ ಪರಸ್, ಬೇರೆ ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಸ್ನೇಹಿತರ ಜೊತೆ ಬಾರ್‌ನಲ್ಲಿ ಮದ್ಯ ಕುಡಿದು ಕೊಠಡಿಗೆ ವಾಪಸು ಬರುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಶನಿವಾರ ರಾತ್ರಿ ಪರಸ್ ಹಾಗೂ ಸ್ನೇಹಿತರು ಬಾರ್‌ನಲ್ಲಿ ಮದ್ಯದ ಪಾರ್ಟಿ ಮಾಡಿದ್ದರು. ಮಾತಿಗೆ ಮಾತು ಬೆಳೆದು ಗಲಾಟೆ ಶುರುವಾಗಿತ್ತು. ಸ್ನೇಹಿತರನ್ನು ಅವಾಚ್ಯವಾಗಿ ನಿಂದಿಸಿದ್ದ ಪರಸ್, ಬಾರ್‌ನಿಂದ ಹೊರಟು ಕೊಠಡಿಗೆ ಬಂದಿದ್ದರು. ಹಿಂಬಾಲಿಸಿಕೊಂಡು ಬಂದಿದ್ದ ಸ್ನೇಹಿತರು ಪುನಃ ಜಗಳ ತೆಗೆದಿದ್ದರು. ಆಗ ಚಾಕುವಿನಿಂದ ಇರಿದಿದ್ದರು' ಎಂದು ಪೊಲೀಸರು ಹೇಳಿದರು.

ಸ್ನಾನದ ವಿಡಿಯೊ ಚಿತ್ರೀಕರಣ, ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೇಯಿಂಗ್ ಗೆಸ್ಟ್ ಕಟ್ಟಡದ (ಪಿ.ಜಿ) ಕೊಠಡಿಯಲ್ಲಿ ಯುವತಿಯರ ಸ್ನಾನದ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಆರೋಪಿ, ಮೂಲತಃ ಚಿಕ್ಕಬಳ್ಳಾಪುರದ ಅಶೋಕ್ ಎಂಬವನನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಬ್ಯಾಂಕೊಂದರ ಕ್ರೆಡಿಟ್ ಕಾರ್ಡ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ವಿಡಿಯೊ ಚಿತ್ರೀಕರಣ ಮಾಡುತ್ತಿದ್ದಾಗ ಸ್ಥಳೀಯರೇ ಹಿಡಿದು ಒಪ್ಪಿಸಿದ್ದಾರೆ. 7 ಯುವತಿಯರ ಸ್ನಾನದ ವಿಡಿಯೊಗಳು ಈತನ ಮೊಬೈಲ್‌ನಲ್ಲಿ ಪತ್ತೆಯಾಗಿವೆ' ಎಂದು ಪೊಲೀಸರು ಹೇಳಿದರು.

'ಈತ ಪುರುಷರ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ವಾಸವಿದ್ದ. ಅದೇ ಕಟ್ಟಡಕ್ಕೆ ಹೊಂದಿಕೊಂಡು ಯುವತಿಯರ ಪೇಯಿಂಗ್ ಗೆಸ್ಟ್ ಕಟ್ಟಡವಿದೆ. ಯುವತಿಯರು ಸ್ನಾನ ಮಾಡುವಾಗ ಕಿಟಕಿ ಬಳಿ ಅಡಗಿ ಚಿತ್ರೀಕರಣ ಮಾಡುತ್ತಿದ್ದು, ಇದು, ಯುವತಿಯರಿಗೆ ಗೊತ್ತಾಗಿರಲಿಲ್ಲ' ಎಂದು ಪೊಲೀಸರು ತಿಳಿಸಿದರು.

'ಜೂನ್ 21ರಂದು ಕಿಟಕಿ ಬಳಿ ಕುಳಿತು ಚಿತ್ರೀಕರಿಸುತ್ತಿದ್ದನ್ನು ಗಮನಿಸಿದ ಸ್ಥಳೀಯರೊಬ್ಬರು ಬೆನ್ನಟ್ಟಿ ಹಿಡಿದಿದ್ದರು. ಮೊಬೈಲ್ ಪರಿಶೀಲಿಸಿದಾಗ ಆತನ ಕೃತ್ಯಗೊತ್ತಾಗಿದ್ದು, ಅತನನ್ನು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ವಶಕ್ಕೆ ಒಪ್ಪಿಸಿದ್ದರು' ಎಂದು ಅವರು ಹೇಳಿದರು.

'ನಾಲ್ಕು ತಿಂಗಳಲ್ಲಿ ಏಳು ಬಾರಿ ಆರೋಪಿ ಯುವತಿಯರ ವಿಡಿಯೊ ಚಿತ್ರೀಕರಣ ಮಾಡಿದ್ದಾನೆ. ಆರೋಪಿಯ ಮೊಬೈಲ್ ಜಪ್ತಿ ಮಾಡಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಚಿಂತಾಮಣಿ ಬಳಿ ₹45 ಲಕ್ಷ ಮೌಲ್ಯದ ಗಾಂಜಾ ವಶ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಆಂಧ್ರಪ್ರದೇಶದ ಮದನಪಲ್ಲಿಯಿಂದ ಬೆಂಗಳೂರಿಗೆ ಸಾಗಿಸುತ್ತಿದ್ದ 154 ಕೆ.ಜಿ ಗಾಂಜಾವನ್ನು ಚಿಂತಾಮಣಿ ನಗರದ ಬಳಿ ಚಿಕ್ಕಬಳ್ಳಾಪುರ ಸಿಇಎನ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇದರ ಒಟ್ಟು ಮೌಲ್ಯ ₹ 45 ಲಕ್ಷ ಎಂದು ಅಂದಾಜಿಸಲಾಗಿದೆ.

ಈ ಸಂಬಂಧ ಮದನಪಲ್ಲಿಯ ಚಂದ್ರ ನಗರದ ಶ್ರೀರಾಮುಲು (27) ಎಂಬಾತನನ್ನು ಬಂಧಿಸಲಾಗಿದೆ. ವಿಶಾಖಪಟ್ಟಣದಿಂದ ಗಾಂಜಾವನ್ನು ಮದನಪಲ್ಲಿ ಮೂಲಕ ಬೆಂಗಳೂರಿಗೆ ಸಾಗಿಸಲಾಗುತ್ತಿತ್ತು. ಆರೋಪಿ ಗೃಹಬಳಕೆ ವಸ್ತುಗಳ ಮಾರಾಟಗಾರನ ಸೋಗಿನಲ್ಲಿ ಗಾಂಜಾ ಸಾಗಿಸುತ್ತಿದ್ದ.

ಗೂಡ್ಸ್ ಆಟೊ ಒಂದು ಬದಿಯಲ್ಲಿ ಗೃಹಬಳಕೆ ವಸ್ತುಗಳಿಟ್ಟು ಅದರ ಕೆಳಗೆ ಗಾಂಜಾ ಸೊಪ್ಪು ಇರಿಸಲಾಗಿತ್ತು. ಖಚಿತ ಮಾಹಿತಿ ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ಟ್ರಾಮಾ ಕೇರ್ ಸೆಂಟರ್ ಒದಗಿಸಲು ಆಗ್ರಹ

ಬೆಂಗಳೂರು: ಬೆಂಗಳೂರು-ಮೈಸೂರು ದಶಪಥ ಹೆದ್ದಾರಿ ಮಧ್ಯೆ ಟ್ರಾಮಾ ಕೇರ್ ಸೆಂಟರ್, ಆಂಬುಲೆನ್ಸ್ ಸೇವೆ ಒದಗಿಸಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ ಗೂಳಿಗೌಡ ಒತ್ತಾಯಿಸಿದ್ದಾರೆ.

ಈ ದಶಪಥ ಹೆದ್ದಾರಿಯು ಎರಡು ಮಹಾನಗರಗಳ ನಡುವೆ ಶೀಘ್ರ ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ. 3 ತಾಸಿನ ಸಂಚಾರದ ಅವಧಿ ಒಂದೂವರೆ ತಾಸಿಗೆ ಇಳಿಸಿದೆ. ಇದರ ಜೊತೆಗೆ ಅಪಘಾತದ ಪ್ರಮಾಣ ಹೆಚ್ಚಾಗಿದೆ. 2022ರ ಸೆಪ್ಟೆಂಬರ್‌ನಿಂದ 2023ರ ಜೂನ್ ವರೆಗೆ 9 ತಿಂಗಳಲ್ಲಿ 595 ಅಪಘಾತಗಳು ಸಂಭವಿಸಿವೆ. 158 ಜನ ಜೀವ ಕಳೆದುಕೊಂಡಿದ್ದಾರೆ.

ಅತಿ ವೇಗದಿಂದಾಗಿ ಅಪಘಾತಗಳು ಉಂಟಾಗುತ್ತಿವೆ. ಗಾಯಾಳುಗಳನ್ನು ಬೆಂಗಳೂರು ಇಲ್ಲವೇ ಮೈಸೂರಿಗೆ ಸಾಗಿಸಬೇಕು. ಈ ನಗರಗಳು ದೂರ ಇರುವುದರಿಂದ ದಾರಿಮಧ್ಯೆ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚಿದೆ.

ಹೀಗಾಗಿ ಬೆಂಗಳೂರು ಮೈಸೂರು ನಡುವೆ ಸುಸಜ್ಜಿತ ಟ್ರಾಮಾ ಕೇರ್ ಸೆಂಟರ್, ಆಸ್ಪತ್ರೆ ಪ್ರಾರಂಭಿಸಬೇಕು. ಪ್ರತಿ 30 ಕಿ.ಮೀ.ಗೆ ಒಂದು ಆಂಬುಲೆನ್ಸ್ ಇಡಬೇಕು ಎಂದು ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಆರ್‌ಇಸಿಎಲ್‌ನಿಂದ ₹3,045 ಕೋಟಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ಯೋಜನೆಯಡಿ ಹಳಿಗಳ ನಿರ್ಮಾಣ ಮತ್ತು ಅಭಿವೃದ್ಧಿಗೆ ಕೇಂದ್ರ ಇಂಧನ ಸಚಿವಾಲಯದ 'ಆರ್‌ಇಸಿಎಲ್' ಕಂಪನಿ ₹3,045 ಕೋಟಿ ನೆರವು ನೀಡಲು ನಿರ್ಧರಿಸಿದೆ.

ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಸಲ್ಲಿಸಿದ್ದ ₹ 3,045 ಕೋಟಿ ನೆರವು ಕೋರುವ ಪ್ರಸ್ತಾವಕ್ಕೆ ನಗರದಲ್ಲಿ ಶನಿವಾರ ನಡೆದ ಆರ್‌ಇಸಿ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ನಮ್ಮ ಮೆಟ್ರೊ ಪೂರ್ವ-ಪಶ್ಚಿಮ ಕಾರಿಡಾರ್ ಹಾಗೂ ಉತ್ತರ-ದಕ್ಷಿಣ ಕಾರಿಡಾರ್‌ಗಳ ವಿಸ್ತರಣೆ ಕಾರ್ಯವನ್ನು ಎರಡನೇ ಹಂತದ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ. ಜೊತೆಗೆ ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರದ ವರೆಗೆ ಮತ್ತು ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ ಎರಡು ಹೊಸ ಮಾರ್ಗಗಳ ಕಾಮಗಾರಿ ಸೇರಿಸಲಾಗಿದೆ. ಈ ಮಾರ್ಗಗಳು ಹೆಚ್ಚು ಜನಸಂದಣಿ, ವಾಹನ ದಟ್ಟಣೆಯ ಭಾಗಗಳಲ್ಲಿ ಹಾದು ಹೋಗಲಿದೆ.

ನಮ್ಮ ಮೆಟ್ರೋ namma metro

ಬೆಂಗಳೂರಿನ ಜನದಟ್ಟಣೆಯ ಪ್ರದೇಶಗಳಲ್ಲಿ ವಾಹನ ಸಂದಣಿ ಮತ್ತು ಜನಸಂದಣಿಯು ಈ ಎರಡನೇ ಯೋಜನೆಯ ಅನುಷ್ಠಾನದಿಂದ ಕುಗ್ಗುವ ನಿರೀಕ್ಷೆ ಇದೆ. ಎರಡನೇ ಹಂತದಲ್ಲಿ 72.9 ಕಿಲೋಮೀಟರ್ ಹಳಿ ನಿರ್ಮಾಣಗೊಳ್ಳಲಿದೆ. ಮೊದಲ ಹಂತದ ಕಾಮಗಾರಿಯು ಒಳಗೊಂಡಂತೆ ನಮ್ಮ ಮೆಟ್ರೊದ ಒಟ್ಟು ಹಳಿ ಮಾರ್ಗ 101 ನಿಲ್ದಾಣಗಳೊಂದಿಗೆ 114.39 ಕಿಲೋಮೀಟರ್‌ನಷ್ಟು ಆಗಲಿದೆ.

ಪೂರ್ವ-ಪಶ್ಚಿಮ ಕಾರಿಡಾರ್ ಹಾಗೂ ಉತ್ತರ-ದಕ್ಷಿಣ ಕಾರಿಡಾರ್‌ಗಳ ವಿಸ್ತರಣೆ ಕಾಮಗಾರಿಗಳನ್ನು 2025ರ ಜೂನ್ ಒಳಗೆ, ಹೊಸ ಮಾರ್ಗಗಳನ್ನು 2026ರ ಜೂನ್ ಒಳಗೆ ಪೂರ್ಣಗೊಳಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ವಿದ್ಯಾರ್ಥಿವೇತನ ನೀಡದ ಸರ್ಕಾರ'

ಬೆಂಗಳೂರು: ಕಳೆದ ನಾಲ್ಕು ವರ್ಷಗಳಲ್ಲಿ ವಿವಿಧ ನೆಪ ಹೇಳಿ, ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡದೇ ಸರ್ಕಾರ ವಂಚನೆ ಮಾಡಿದೆ ಎಂದು ಪ್ರಜಾಸತ್ತಾತ್ಮಕ ದಲಿತ ವಿದ್ಯಾರ್ಥಿ ಒಕ್ಕೂಟ ಆರೋಪಿಸಿದೆ.

ಅರ್ಜಿ ಸಲ್ಲಿಸಿದ್ದ ವಿದ್ಯಾರ್ಥಿಗಳಲ್ಲಿಅನುಮೋದನೆಗೊಂಡವರಲ್ಲ ಕೆಲವರಿಗಷ್ಟೇ ವಿದ್ಯಾರ್ಥಿ ವೇತನ ನೀಡಿದೆ. ಎಸ್‌ಸಿ ವಿಭಾಗದಲ್ಲಿ 2018–19ರಲ್ಲಿ 1,03,582, 2019–20ರಲ್ಲಿ 1,13,568, 2020–21ರಲ್ಲಿ 54,630, 2021–22ರಲ್ಲಿ 57,863 ಹಾಗೂ 2022–23ರಲ್ಲಿ 1,29,029 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿಲ್ಲ ಎಂದು ಒಕ್ಕೂಟದ ರಾಜ್ಯ ಪ್ರಧಾನ ಸಂಚಾಲಕ ವೇಣುಗೋಪಾಲ್ ಮೌರ್ಯ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಐದು ವರ್ಷಗಳಲ್ಲಿ ಒಟ್ಟು ಎಸ್‌ಟಿ ಸಮುದಾಯದ 2,87,783, ಮೂರು ವರ್ಷಗಳಲ್ಲಿ ಒಬಿಸಿ ಸಮುದಾಯದ 26,92,023 ವಿದ್ಯಾರ್ಥಿಗಳಿಗೆ ವೇತನ ನೀಡಲು ಬಾಕಿ ಇದೆ. ಎಸ್‌ಸಿ,ಎಸ್‌ಟಿ, ಹಿಂದುಳಿದ ವರ್ಗದ ಮಕ್ಕಳು ವಿದ್ಯಾಭ್ಯಾಸ ಮಾಡಬಾರದು ಎಂಬ ಹುನ್ನಾರ ಇದರಲ್ಲಿ ಅಡಗಿದೆ ಎಂದರು.

ಜಾಲಿಮ್ ಲೋಷನ್® + ಗ್ರೀನ್ ಆಯಿಂಟ್ಮೆಂಟ್
ಈ ಜೋಡಿಯು ಗಜಕರ್ಣ, ಇಸಬು ಮತ್ತು ಗರಿಕಜ್ಜಿ ತುರಿಕೆಯಿಂದ ತಕ್ಷಣ ಆರಾಮ ನೀಡುತ್ತದೆ.
BUY ONLINE: www.zalimlotion.in | amazon | meesho | Flipkart | TATA 1mg
ANIL PUB.

ಕರ್ನಾಟಕ ಸರ್ಕಾರ

ಅಂತರರಾಷ್ಟ್ರೀಯ ಮಾದಕವಸ್ತು ವಿರೋಧಿ ದಿನ

ಸ್ವಾತಂತ್ರ್ಯದ ಅಮೃತಮಹೋತ್ಸವ | G20 ಭಾರತ 2023 INDIA ONE EARTH • ONE FAMILY • ONE FUTURE

26ನೇ ಜೂನ್ 2023

ಜನರು ಮೊದಲು : ಕಳಂಕ ಮತ್ತು ತಾರತಮ್ಯವನ್ನು ನಿಲ್ಲಿಸಿ, ತಡೆಗಟ್ಟುವಿಕೆಯನ್ನು ಬಲಪಡಿಸಿ.

PEOPLE FIRST : stop stigma and discrimination, strengthen prevention.



ಮಾದಕವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳು

ಮಾದಕವಸ್ತು ನಿಮ್ಮ ಮನಸ್ಸಿನ ಸ್ತಿಮಿತವನ್ನು ಕೆಡಿಸುತ್ತದೆ

ನೀವು ಸಿಕ್ಕಿಹಾಕಿಕೊಂಡರೆ ಜೈಲಿಗೆ ಹೋಗುತ್ತೀರಿ

ಮಾದಕ ವಸ್ತು ಬಳಸಿದವರು ಶಾಲೆಯಲ್ಲಿ ಮಂಕಾಗಿರುತ್ತಾರೆ

ಮಾದಕ ವಸ್ತುಗಳು ನಿಮ್ಮ ದೇಹದ ಸ್ತಿಮಿತವನ್ನು ಹಾಳುಮಾಡುತ್ತದೆ

ಮಾದಕವಸ್ತು ಬಳಕೆದಾರರು ಇತರರಿಗೆ ನೋವು ನೀಡುತ್ತಾರೆ

ನಿಮ್ಮ ನೆರೆಹೊರೆಯಲ್ಲಿ ಅಪರಾಧಗಳನ್ನು ಹೆಚ್ಚಿಸುತ್ತದೆ

ಮಾದಕವಸ್ತು ಬಳಕೆದಾರರು ನಷ್ಟವನ್ನನುಭವಿಸುತ್ತಾರೆ

ಮಾದಕವಸ್ತು ಖರೀದಿಯಿಂದ ಹಣ ವ್ಯರ್ಥ

ಮಾದಕವಸ್ತು ವ್ಯಸನಿಯಾಗಬಹುದು

ಮಾದಕವಸ್ತು ನಿಮ್ಮ ಪ್ರಾಣ ತೆಗೆಯಬಹುದು

"ಮಾದಕವಸ್ತುಗಳ ದುರ್ಬಳಕೆ ತಡೆಗಟ್ಟಲು ಎಲ್ಲರೂ ಕೈ ಜೋಡಿಸೋಣ"

ಮಾದಕವಸ್ತುಗಳಿಂದ ಯುವಜನರ ರಕ್ಷಣೆ, ನಮ್ಮೆಲ್ಲರ ಹೊಣೆ.

ಮಾದಕವಸ್ತುಗಳಿಂದ ಯುವಜನರನ್ನು ರಕ್ಷಿಸಲು:

- ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ.
- ಶಾಲಾ-ಕಾಲೇಜುಗಳಲ್ಲಿ ಮಕ್ಕಳ ನಡವಳಿಕೆಯ ಬಗ್ಗೆ ಹಾಗೂ ಅವರ ಸ್ನೇಹಿತರ ಬಗ್ಗೆ ತಿಳಿದುಕೊಳ್ಳಿ.
- ಪಲಾಯನವಾದ, ಕೀಳರಿಮೆ, ಸಹವರ್ತಿಗಳ ಒತ್ತಡ, ಮಾನಸಿಕ ಒತ್ತಡ, ಪರೀಕ್ಷೆಗಳ ಒತ್ತಡ, ಕೆಲಸದ ಒತ್ತಡ, ವ್ಯವಹಾರದಲ್ಲಿ ಒತ್ತಡ, ಮಿತಿಮೀರಿದ ಸ್ಪರ್ಧಾತ್ಮಕ ಮನೋಭಾವ ಮೊದಲಾದವುಗಳಿಂದ ಹೊರಬರುವ ಮಾರ್ಗಗಳನ್ನು ತಿಳಿಯಿರಿ.
- ಕೆಲವು ಔಷಧಗಳ ಸೇವನೆ ಅವಲಂಬನೆಯನ್ನು ಉಂಟುಮಾಡುತ್ತದೆ. ವೈದ್ಯರ ಸಲಹೆ ಇಲ್ಲದೆ ಔಷಧಗಳ ಬಳಕೆ ಮಾಡಬೇಡಿ.
- ಪೋಷಕರು ಮಕ್ಕಳನ್ನು ನಿಯಮಿತವಾಗಿ ಗಮನಿಸಿ. ಅನವಶ್ಯವಾಗಿ ಔಷಧ ಸೇವಿಸುತ್ತಿದ್ದರೆ, ಕೂಡಲೇ ವೈದ್ಯರನ್ನು ಭೇಟಿ ಮಾಡಿ.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ರವರು ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಔಷಧ ಮಾರಾಟಗಾರರೇ, ಮಾದಕವಸ್ತು ಬಳಕೆ ನಿಯಂತ್ರಿಸುವಲ್ಲಿ ನಿಮ್ಮ ಜವಾಬ್ದಾರಿ ಕೆಳಕಂಡಂತಿದೆ

- ವೈದ್ಯರ ಸಲಹಾ ಚೀಟಿ ಇಲ್ಲದೆ ಯಾವುದೇ ಔಷಧಗಳ ವಿತರಣೆ ಮಾಡಬೇಡಿ.
- ಅನುಸೂಚಿ (Schedule) ಔಷಧಗಳನ್ನು ಮಾರಾಟ ಮಾಡುವ ಮುನ್ನ ವೈದ್ಯರ, ರೋಗಿಯ ಹೆಸರು ಮತ್ತು ವಿಳಾಸ, ಮಾರಾಟ ಮಾಡಿದ ಔಷಧಿಯ ಬ್ಯಾಚ್ ಸಂಖ್ಯೆ, ಔಷಧಿಯ ಪ್ರಮಾಣ ಮೊದಲಾದ ಮಾಹಿತಿಯನ್ನು ಕಡ್ಡಾಯವಾಗಿ ನಿಮ್ಮ ರಸೀದಿಯಲ್ಲಿ ದಾಖಲಿಸುವುದು.
- ನಿಯಮಗಳನ್ನು ಉಲ್ಲಂಘಿಸಿ ಔಷಧಿಗಳನ್ನು ನೀವು ಮಾರಾಟ ಮಾಡಿದಲ್ಲಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮಗಳ ಅಡಿ ಶಿಕ್ಷಾರ್ಹ ಅಪರಾಧವಾಗುತ್ತದೆ.

"ನಿಮ್ಮ ಸ್ವಾಸ್ಥ್ಯ ದೇಶಕ್ಕೆ ಶಕ್ತಿ. ಮಾದಕ ವ್ಯಸನಿಗಳಾಗುವ ಮುನ್ನ ಬಳಸಿ ನಿಮ್ಮ ಯುಕ್ತಿ!"

"ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಹಾಯವಾಣಿ: 104

ಔಷಧ ನಿಯಂತ್ರಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು – 560 001 ದೂರವಾಣಿ ಸಂಖ್ಯೆ: 080–22262846, 22264760, 22264788 ಇ–ಮೇಲ್: dckarnataka@gmail.com

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018.

ಕಛೇರಿ ದೂರವಾಣಿ: 26678572 : 26600512 : 26609066. ಟೆಲಿಫ್ಯಾಕ್ಸ್: (080) 26617980. E-mail : gm@bccbl.co.in, bccb_2005@yahoo.co.in, Web : bccbl.co.in

ದಿನಾಂಕ: 01.04.2022 ರಿಂದ 31.03.2023 ರವರೆಗಿನ ಲಾಭ ಮತ್ತು ನಷ್ಟದ ತ:ಖ್ತೆ / Profit & Loss A/c for the period from 01.04.2022 to 31.03.2023

2021-22ರ ಸಾಲಿಗೆ Financial Year	ನಷ್ಟ / Loss	ಮೊಬಲಗು / Amount ರೂ./Rs. ಪೈ/Ps.	2021-22ರ ಸಾಲಿಗೆ Financial Year	ಲಾಭ / Profit	ಮೊಬಲಗು / Amount ರೂ./Rs. ಪೈ/Ps.
153,85,21,701.00	1. ಠೇವಣಿಗಳ ಮೇಲೆ ಬಡ್ಡಿ ಪಾವತಿಸಿದ್ದು / Interest Paid on Deposits	149,34,69,487.80	229,78,04,409.40	1. ಸಾಲಗಳ ಮೇಲೆ ಬಡ್ಡಿ ಮತ್ತು ಸುಸ್ತಿ ಬಡ್ಡಿ / Interest on loans / O.D. Interest	200,21,77,501.51
14,36,35,180.00	1.i ಉತ್ಪಾದಕ ಸಾಲಗಳ ಮೇಲೆ ಬಡ್ಡಿ ಅವಕಾಶಗಳು / Provn. for Interest receivable on Stand. Assets	4,34,87,266.00	69,33,53,940.38	2. ಗುಂತಾಯಗಳ ಮೇಲಿನ ಬಡ್ಡಿ / ಡಿವಿಡೆಂಡ್ ಆದಾಯ / Interest on Investments - Dividend Income	77,33,79,317.38
29,89,21,911.11	2. ಸಿಬ್ಬಂದಿ ವೇತನ, ಸಿಬ್ಬಂದಿ ಭವಿಷ್ಯ ನಿಧಿ ಮತ್ತು ಇತರೆ / Staff Salary, PF & others	31,71,71,453.32	41,55,605.33	3. ದಳ್ಳಾಳಿ ವಿನಿಮಯ ಮತ್ತು ದಳ್ಳಾಳಿ ರುಸುಂ / Brokerage & Commission Income	41,42,986.16
13,49,420.00	3. ನಿರ್ದೇಶಕರ ಸಭಾ ಭತ್ಯೆ ಹಾಗೂ ಇತರೆ ಭತ್ಯೆಗಳು / Directors sitting fees & other expenses	16,11,020.00	10,00,011.00	4. ದಾನಗಳು / Donations	-
5,05,37,635.00	4. ಆಡಳಿತಾತ್ಮಕ ವೆಚ್ಚಗಳು / Administrative Expenses	5,30,61,434.57	12,600.00	5. ಬ್ಯಾಂಕಿಗೆ ಸೇರಿದ ಕಟ್ಟಡಗಳಿಂದ ಬಾಡಿಗೆ ಬಂದದ್ದು / Rent Income on Building (Damage Charges)	6,775.42
1,53,690.00	5. ಕಾನೂನು ಶುಲ್ಕಗಳು / Legal Expenses	3,76,240.00	53,45,97,375.00	6. ಶಾಖೆಗಳ ಲೆಕ್ಕಗಳ ಮೇಲೆ ಬಡ್ಡಿ / Interest on Branch Balances	62,20,54,000.00
12,01,756.21	6. ಅಂಚೆ ಮತ್ತು ದೂರವಾಣಿ / Post & Telephone Expenses	11,79,798.56	9,76,08,516.48	7. ಇತರೆ ಆದಾಯಗಳು / Miscellaneous Income	20,31,33,572.43
30,62,637.50	7. ಲೆಕ್ಕ ಪರಿಶೋಧನಾ ವೆಚ್ಚಗಳು / Audit Expenses	27,88,650.00			
99,35,980.41	8. ಸ್ವತ್ತಿನ ಸವಕಳಿ / Depreciation provisions	97,83,889.00			
17,12,912.94	9. ಮುದ್ರಣ ಮತ್ತು ಲೇಖನ ಸಾಮಗ್ರಿ / Printing & Stationery Expenses	19,84,365.19			
53,45,97,375.00	10. ಶಾಖೆಗಳ ಲೆಕ್ಕಗಳ ಮೇಲೆ ಬಡ್ಡಿ / Interest on Branch Balances	62,20,54,000.00			
4,31,01,879.29	11. ಇತರೆ ಖರ್ಚುಗಳು / Other expenses	10,63,34,075.31			
53,79,32,195.80	12. ಅವಕಾಶಗಳು / Provisions	47,41,02,444.48			
1,53,86,767.96	13. ಕಂಪ್ಯೂಟರ್ (ಗಣಕೀಕರಣ) ವೆಚ್ಚಗಳು / Computerization expenses	1,25,61,603.59			
20,69,65,017.10	14. ಆದಾಯ ತೆರಿಗೆ ಪಾವತಿಸಲು ಕಾದಿರಿಸಿದ್ದು / Provision for Income Tax Payable	18,19,66,328.33			
24,15,16,398.27	15. ನಿವ್ವಳ ಲಾಭ (ಆದಾಯ ತೆರಿಗೆ ಅವಕಾಶಗಳ ನಂತರ) / Net Profit (After Tax Provisions)	28,29,62,096.75			
362,85,32,457.59	**ಒಟ್ಟು / Total**	**360,48,94,152.90**	**362,85,32,457.59**	**ಒಟ್ಟು / Total**	**360,48,94,152.90**

ದಿನಾಂಕ 31.03.2023 ರಂದು ಇದ್ದಂತೆ ಬ್ಯಾಂಕಿನ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ (ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯಿದೆ 1949ರ ಕಲಂ 29 ಫಾರಂ ಎ-3ನೇ ಷೆಡ್ಯೂಲ್)/Balance Sheet as on 31.03.2023 (as per B.R. Act 1949 Column 29 Form A - 3rd Schedule)

ದಿನಾಂಕ: 31.03.2022 ರಲ್ಲಿದ್ದ ಮೊಬಲಗು Amount as on 31.03.2022 ರೂ./Rs. ಪೈ/Ps.	ಬಂಡವಾಳ ಹಾಗೂ ಜವಾಬ್ದಾರಿಗಳು / Capital & Liabilities	ದಿನಾಂಕ: 31.03.2023 ರಲ್ಲಿದ್ದ ಮೊಬಲಗು Amount as on 31.03.2023 ರೂ./Rs. ಪೈ/Ps.	ದಿನಾಂಕ: 31.03.2022 ರಲ್ಲಿದ್ದ ಮೊಬಲಗು Amount as on 31.03.2022 ರೂ./Rs. ಪೈ/Ps.	ಆಸ್ತಿ ಹಾಗೂ ಸ್ವತ್ತುಗಳು / Assets & Properties	ದಿನಾಂಕ: 31.03.2023 ರಲ್ಲಿದ್ದ ಮೊಬಲಗು Amount as on 31.03.2023 ರೂ./Rs. ಪೈ/Ps.
91,54,98,527.00	1. ಪಾವತಿಯಾದ ಷೇರು ಬಂಡವಾಳ / Paid up share capital	95,44,98,322.00		1. ನಗದು ಹಾಗೂ ಬ್ಯಾಂಕಿನಲ್ಲಿ ಶಿಲ್ಕು / Cash & Bank Balances	
326,10,57,405.32	2. ಕಾಯ್ದಿರಿಸಿದ ಮತ್ತು ಇತರೆ ನಿಧಿಗಳು / Reserves and other funds	445,69,99,641.37	7,62,44,021.00	I. ನಗದು ಶಿಲ್ಕು / Cash Balances	6,39,82,722.00
2353,08,35,407.22	3. ಠೇವಣಾತಿಗಳು ಹಾಗೂ ಇತರೆ ಖಾತೆಗಳು / Deposits & other accounts	2264,67,56,536.41	87,93,55,669.06	II. ಬ್ಯಾಂಕಿನಲ್ಲಿ ಶಿಲ್ಕುಗಳು (ನಗದು ಮೀಸಲು ಸಂಬಂಧ) / Bank Balances (C.R.R)	98,24,49,906.86
2,40,305.48	4. ಶಾಖಾ ಹೊಂದಾಣಿಕೆಗಳು / Branch Adjustments	14,28,036.16	6,38,20,529.45	2. ಇತರೆ ಬ್ಯಾಂಕುಗಳಲ್ಲಿ ಬಾಕಿಗಳು ಹಾಗೂ ಠೇವಣಿಗಳು / Bank Balances with other Banks	10,33,40,468.47
54,35,00,996.00	5. ವಸೂಲಾಗಬೇಕಾದ ಸಾಲ ಬಡ್ಡಿ ರಿಸರ್ವ್ / Over due Interest Recevables Reserves	61,19,93,155.12	42,28,00,000.00	3. ಕರೆ ಹಾಗೂ ಅಲ್ಪ ಸೂಚನೆ ಮೇಲೆ ಪಡೆಯಬಹುದಾದ ಠೇವಣಿ / Call Money & Short Term Notice Deposits	27,32,00,000.00
1,81,57,374.00	6. ಪಾವತಿಸಬೇಕಾದ ಬಡ್ಡಿ / Interest payable on Deposits	1,57,56,402.00	1028,03,92,323.28	4. ಹೂಡಿಕೆಗಳು / Investments	1153,90,21,285.43
87,87,42,693.02	7. ಇತರೆ ಜವಾಬ್ದಾರಿಗಳು / Other Liablities	1,08,85,15,913.83	1592,52,05,347.36	5. ಸಾಲಗಳು ಮತ್ತು ಮುಂಗಡಗಳು / Loans & Advances	1448,08,72,110.86
24,15,16,398.27	8. 2022-23ನೇ ಸಾಲಿನ ನಿವ್ವಳ ಲಾಭ / Profit for the year 2022-23	28,29,62,096.75	54,35,00,996.00	6. ವಸೂಲಾಗಬೇಕಾದ ಸಾಲ ಬಡ್ಡಿ ರಿಸರ್ವ್ / Over Due Interest Receivables Reserves	61,19,93,155.12
			6,13,06,635.00	7. ನಿವೇಶನ ಮತ್ತು ಕಟ್ಟಡ/ Land & Building	69,57,42,150.00
			2,44,16,197.79	8. ಪೀಠೋಪಕರಣಗಳು ಮತ್ತು ಮರಮುಟ್ಟುಗಳು / Furniture & Fixtures	2,38,01,843.63
			1.00	9. ಗ್ರಂಥಾಲಯ / Library A/c	1.00
			2,31,800.20	10. ಜನರೇಟರ್ / Generator	69,000.20
			3.00	11. ವಾಹನ / Vehicles	3.00
			28,16,677.89	12. ಗಣಕ ಯಂತ್ರ / Computer Hardware	52,96,196.27
			110,94,58,905.28	13. ಇತರೆ ಆಸ್ತಿಗಳು / Other Assets	127,91,41,260.80
2938,95,49,106.31	**ಒಟ್ಟು / Total**	**3005,89,10,103.64**	**2938,95,49,106.31**	**ಒಟ್ಟು / Total**	**3005,89,10,103.64**

NOTES FORMING PART OF BALANCE SHEET AS AT 31st MARCH, 2023 & PROFIT & LOSS ACCOUNT FOR THE YEAR ENDED 31st MARCH, 2023

Notes to Accounts

1. Regulatory Capital (Rs. in Lakhs)

Sl.No.	Particulars	Current Year 31.03.2023	Previous Year 31.03.2022
i)	Paid up share capital and reserves (net of deductions, if any)	24549.65	20129.69
ii)	Other Tier 1 capital	-	-
iii)	Tier 1 capital (i + ii)	24549.65	20129.69
iv)	Tier 2 capital	3502.89	3409.29
v)	Total capital (Tier 1+Tier 2)	28052.54	23538.98
vi)	Total Risk Weighted Assets (RWAs)	142531.52	151745.32
vii)	Paid-up share capital and reserves as percentage of RWAs	17.22%	13.26 %
viii)	Tier 1 Ratio (Tier 1 capital as a percentage of RWAs)	17.22%	13.26%
ix)	Tier 2 Ratio (Tier 2 capital as a percentage of RWAs)	2.46 %	2.25 %
x)	Capital to Risk Weighted Assets Ratio (CRAR) (Total Capital as a percentage of RWAs)	19.68%	15.51 %
xii)	Amount of paid-up equity capital raised during the year	389.96	117.08
xiv)	Amount of non-equity Tier 1 capital raised during the year	4030.00	1008.74
xv)	Amount of Tier 2 capital raised during the year	93.60	195.34

2. Asset liability management: *a) Maturity pattern of certain items of assets and liabilities* (Rs. in Crores)

	Day 1	2 to 7 days	8 to 14 days	15 to 30 Days	31 days to 2 months	Over 2 months and to 3 months	Over 3 months and up to 6 Months	Over 6 months and up to 1 year	Over 1 year and up to 3 years	Over 3 years and up to 5 years	Over 5 years	Total
Deposits[9]	41.67	5.49	4.46	13.97	23.18	75.86	411.10	848.31	741.55	80.57	18.51	2264.67
Advances	11.88	1.01	0.64	2.76	4.93	4.24	25.69	63.23	24.20	45.16	1264.34	1448.08
Investments	72.54	163.46	128.34	122.46	93.46	-	22.75	74.45	57.25	73.86	372.65	1181.22
Borrowings	-	-	-	-	-	-	-	-	--	-	-	-

3. Investments

a) Composition of Investment Portfolio I)(As at 31-03-2023 (current year balance sheet date) (Rs.in Lakhs)

	Investments in India						
	Government Securities	Other Approved Securities	Shares	Debentures and Bonds	Subsidiaries and/or joint ventures	Others	Total investments in India
Held to Maturity							
Gross	53495.71		70.25				53565.96
Less: Provision for non-performing investments (NPI)							
Net	53495.71		70.25				53565.96
Available for Sale							
Gross	37384.23			618.18		4521.61	42524.02
Less: Provision for depreciation and NPI	1263.95						1263.95
Net	36120.28			618.18		4521.61	41260.07
Held for Trading							
Gross							
Less: Provision for depreciation and NPI							
Net							
Total Investments	90879.94		70.25	618.18		4521.61	96089.98
Less: Provision for non-performing investments							
Less: Provision for depreciation and NPI	1263.95		-	-			1263.95
Net	89615.99		70.25	618.18		4521.61	94826.03

(Note : Excludes Investments in Bank Deposits)

ii) As at 31-03-2022 (previous year balance sheet date) (Rs.in Lakhs)

	Investments in India						
	Government Securities	Other Approved Securities	Shares	Debentures and Bonds	Subsidiaries and/or joint ventures	Others	Total investments in India
Held to Maturity							
Gross	55606.92		20.25				55627.17
Less: Provision for non-performing investments (NPI)							
Net	55606.92		20.25				55627.17
Available for Sale							
Gross	29836.81					4574.76	34411.57
Less: Provision for depreciation and NPI	417.66						417.66
Net	29419.15					4574.76	33993.91
Held for Trading							
Gross							
Less: Provision for depreciation and NPI							
Net							
Total Investments	85443.73		20.25			4574.76	90038.74
Less: Provision for non-performing investments							
Less: Provision for depreciation and NPI	417.66						417.66
Net	85026.07		20.25				89621.08

(Note : Excludes Investments in Bank Deposits)

b) Movement of Provisions for Depreciation and Investment Fluctuation Reserve (Rs.in Lakhs)

Particulars	Current Year 31.03.2023	Previous Year 31.03.2022
I) Movement of provisions held towards depreciation on investments		
a) Opening balance	417.66	-
b) Add: Provisions made during the year	846.29	417.66
c) Less: Write off / write back of excess provisions during the year	-	-
d) Closing balance	1263.95	417.66
ii) Movement of Investment Fluctuation Reserve		
a) Opening balance	1513.29	1250.29
b) Add: Amount transferred during the year	208.00	263.00
c) Less: Drawdown	-	-
d) Closing balance	1721.29	1513.29
iii) Closing balance in IFR as a percentage of closing balance of investments in AFS and HFT/ Current category	4.05%	4.40%

c) Transfer of Securities to/from HTM Category (Rs.in Lakhs)

Sl No	Particulars	Book Value	Market Value	Provisions Made
1	From HTM to AFS Category	32124.04	34400.20	Nil
2	From AFS to HTM Category	-	-	-

d) Non-SLR investment portfolio *I) Non-performing non-SLR investments* As on 31-03-2022 and as on 31-03-2023 - **Nil**

ii) Issuer composition of non-SLR investments (Rs. In Lakhs)

Sr. No.	Issuer	Amount	
(1)	(2)	(3)	
		Current Year 31.03.2023	Previous Year 31.03.2022
a)	PSUs	618.18	388.18
b)	Private Corporates	70.25	20.25
c)	Others	4521.60	4186.58
	Total *	5210.03	4595.01

e) Book value, Face value & Market Value of Investments for the period ending 31-03-2023

Particulars	Govt. Securities	Mutual Funds	Tax free Bonds & others
Book value	90879.94	4521.61	688.43
Face value	91360.00	4521.61	688.43
Market Value	88846.69	4863.45	749.99

4. Asset quality *a) Classification of advances and provisions held* *(Rs. in Lakhs)*

	Standard	Non-Performing				Total
	Total Standard Advances	Sub-standard	Doubtful	Loss	Total Non-Performing Advances	
Gross Standard Advances and NPAs						
Opening Balance	146510.27	4704.24	7890.89	146.65	12741.78	159252.05
Add: Additions during the year					13044.74	
Less: Reductions during the year					7004.49	
Closing balance	126026.69	12229.24	6406.14	146.65	18782.03	144808.72
Reductions in Gross NPAs due to:						
I) Upgradation					6092.67	
ii) Recoveries (excluding recoveries from upgraded accounts)					911.82	
iii) Write-offs						
Provisions (excluding Floating Provisions)						
Opening balance of provisions held	996.28	5569.51	7550.58	147.15	13267.24	14263.52
Add: Fresh provisions made during the year		-	-	-	4444.35	
Less: Excess provision reversed/ Write-off loans						
Closing balance of provisions held	696.28	10013.86	7550.58	147.15	17711.59	18407.87
Net NPAs						
Opening Balance		-865.27	340.31	-0.50	-525.46	
Add: Fresh additions during the year					1595.90	
Less: Reductions during the year						
Closing Balance		2215.38	-1144.44	-0.50	1070.44	
Floating Provisions						
Opening Balance						4958.98
Add: Additional provisions made during the year						(-)693.35
Less: Amount drawn down during the year						
Closing balance of floating provisions						4265.63

Ratios (in per cent)	Current Year 31.03.2023	Previous Year 31.03.2022
Gross NPA to Gross Advances	12.97 %	8.00%
Net NPA to Net Advances	0.84 %	0%
Provision coverage ratio	94.30 %	105.34%

b) Sector-wise Advances and Gross NPAs (Rs.in Lakhs)

Sr. No.	Sector*	Current Year 31.03.2023			Previous Year 31.03.2022		
		Outstanding Total Advances	Gross NPAs	Percentage of Gross NPAs to Total Advances in that sector	Outstanding Total Advances	Gross NPAs	Percentage of Gross NPAs to Total Advances in that sector
i)	**Priority Sector**						
a)	Agriculture and allied activities	861.91	29.83	3.46%	1083.73	106.03	9.78 %
b)	Advances to industries sector eligible as priority sector lending	2939.91	697.51	23.73%	15656.87	1527.04	9.75 %
c)	Services	103075.13	15873.88	15.40%	104753.22	9190.37	8.77 %
d)	Personal loans/other loans	14207.83	1141.84	8.04%	15657.18	957.96	6.11 %
	Sub-total (i)	121084.78	17743.06	14.65%	137151.00	11781.40	8.59 %
ii)	**Non-priority Sector**						
a)	Agriculture and allied activities	0.63	0	0	1.92	-	-
b)	Industry						
c)	Services	652.94	26.93	4.12%	1180.31	12.04	1.02 %
d)	Personal loans (other loans)	23070.37	1012.04	4.39%	20918.82	948.34	4.53 %
	Sub-total (ii)	23723.94	1038.97	4.38%	22101.05	960.38	4.35 %
	Total (I + ii)	**144808.72**	**18782.03**	**12.97 %**	**159252.05**	**12741.78**	**8.00 %**

c) Particulars of resolution plan and restructuring : NIL

d) Divergence in assets Classification and Provisioning

Sr.	Particulars	Amount
1.	Gross NPAs as on March 31, 2022* as reported by the bank	12741.78
2.	Gross NPAs as on March 31, 2022 as assessed by Reserve Bank of India	31628.00
3.	Divergence in Gross NPAs (2-1)	18886.22
4.	Net NPAs as on March 31, 2022 as reported by the bank	0
5.	Net NPAs as on March 31, 2022 as assessed by Reserve Bank of India	18361.00
6.	Divergence in Net NPAs (5-4)	18361.00
7.	Provisions for NPAs as on March 31, 2022 as reported by the bank	13267.24
8.	Provisions for NPAs as on March 31, 2022 as assessed by Reserve Bank of India	8023.23
9.	Divergence in provisioning (8-7)	-
10	Reported Profit before Provisions and Contingencies for the year ended March 31, 2022	9758.02
11.	Reported Net Profit after Tax (PAT) for the year ended March 31, 2022	2415.16
12.	Adjusted (notional) Net Profit after Tax (PAT) for the year ended March 31, 2022 after considering the divergence in provisioning	2415.16

e) Fraud accounts

Particulars	Opening bal 31.03.2023	During year	Closing Balance 31.03.2022
Number of frauds	3	-	3
Amount involved in fraud (₹ crore)	1.47	-	1.47
Amount of provision made for such frauds (₹ crore)	1.47	-	1.47
Amount of Unamortised provision debited from 'other reserves' as at the end of the year (₹ crore)	-	-	-

f) Disclosure under Resolution Framework for COVID-19-related Stress: Format for disclosures to be made half yearly starting 31.03.2023

Balance as on 30.09.2022 (Rs.in Lakhs)

Type of borrower	Exposure to accounts classified as Standard consequent to implementation of resolution plan– Position as at the end of the previous half-year (A)	Of (A), aggregate debt that slipped into NPA during the half- year	Of (A) amount written off during the half-year	Of (A) amount paid by the borrowers during the half- year 01.10.2022 to 31.03.2023	Exposure to accounts classified as Standard consequent to implementation of resolution plan – Position as at the end of this half-year
Personal Loans					
Corporate persons*					
Of which MSMEs	57388.12	8864.52		16292.41	39126.93
Others	7913.80	353.19		2448.43	5968.00
Total	**65301.92**	**9217.71**		**18740.84**	**45094.93**

g) Exposure to real estate sector (Rs.in Lakhs)

Category	Current Year 31.03.2023	Previous Year 31.03.2022
i) Direct exposure		
a) Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	**24884.69**	**25307.98**
b) Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB)limits;	**1731.75**	**1597.74**
c) Investments in Mortgage-Backed Securities (MBS) and othersecuritized exposures – i) Residential, ii) Commercial Real Estate, iii) Indirect Exposure. Fund based and non-fund-based exposures on National Housing Bankand Housing Finance Companies.		
Total Exposure to Real Estate Sector	**26616.44**	**26905.72**

Continued...

ರಾಜಕಾಲುವೆ ದುರಸ್ತಿಗೆ 2019–21ರ ಸಾಲಿನಲ್ಲಿ ₹490 ಕೋಟಿ ವೆಚ್ಚ

ಕಾಮಗಾರಿಗಳಲ್ಲಿ ಲೋಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಲವು ಕಾಮಗಾರಿಗಳಿಗೆ ಸಾಕ್ಷ್ಯಾಧಾರಗಳಿಲ್ಲ
- ₹ 287 ಕೋಟಿ ವೆಚ್ಚ ಕುರಿತಂತೆ ಆಕ್ಷೇಪ
- ಗಂಭೀರ ವ್ಯತ್ಯಾಸಗಳಿಂದ ಕೂಡಿಲ್ಲ –ಆಯುಕ್ತ

ಬೆಂಗಳೂರು: ರಾಜಕಾಲುವೆಗಳ ದುರಸ್ತಿಗಾಗಿ 2019ರ ಏಪ್ರಿಲ್‌ನಿಂದ 2021ರ ಮಾರ್ಚ್‌ವರೆಗಿನ ಅವಧಿಯಲ್ಲಿ ವೆಚ್ಚ ಮಾಡಿರುವ ಒಟ್ಟು ₹490 ಕೋಟಿ ಮೊತ್ತದ ಕುರಿತು ಲೆಕ್ಕಪರಿಶೋಧಕರು ಗಂಭೀರ ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಪ್ರತಿ ವರ್ಷ ಬಿಬಿಎಂಪಿಯ ವಿವಿಧ ವಿಭಾಗಗಳ ಆಡಿಟ್ ಕೈಗೊಳ್ಳುತ್ತದೆ

ಹಲವು ಕಾಮಗಾರಿಗಳನ್ನು ಕೈಗೊಂಡಿರುವ ಬಗ್ಗೆ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲ ಮತ್ತು ಡಬಲ್ ಬಿಲ್ಲಿಂಗ್‌ಗೆ ಅವಕಾಶ ಕಲ್ಪಿಸಿರುವ ಕುರಿತ ಲೋಪಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆರ್‌ಟಿಐ ಅಡಿಯಲ್ಲಿ ಪಡೆದಿರುವ ಮಾಹಿತಿಯಲ್ಲಿ ಈ ವಿಷಯಗಳು ಗೊತ್ತಾಗಿವೆ.

ಈ ಅವಧಿಯಲ್ಲಿ ಕೈಗೊಂಡಿರುವ 91 ಕಾಮಗಾರಿಗಳಲ್ಲಿ ವ್ಯತ್ಯಾಸಗಳನ್ನು ಲೆಕ್ಕಪರಿಶೋಧಕರು ಪತ್ತೆ ಮಾಡಿದ್ದು, ₹287 ಕೋಟಿ ಮೊತ್ತ ವೆಚ್ಚ ಕುರಿತು ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹೆಚ್ಚುವರಿ ಪಾವತಿಸಿರುವ ₹14.19 ಕೋಟಿ ವಸೂಲಿ ಮಾಡುವಂತೆ ಬಿಬಿಎಂಪಿಗೆ ಸೂಚಿಸಲಾಗಿದೆ.

2018–19ರ ಅವಧಿಯ ಲೆಕ್ಕ-ಪರಿಶೋಧನಾ ವರದಿಯಲ್ಲೂ ₹202 ಕೋಟಿ ಮೊತ್ತದ 41 ಕಾಮಗಾರಿಗಳಲ್ಲಿನ ವ್ಯತ್ಯಾಸಗಳನ್ನು ಪತ್ತೆ ಮಾಡಲಾಗಿತ್ತು. ಹೀಗಾಗಿ, ₹6.65 ಕೋಟಿ ವಸೂಲಿ ಮಾಡಲು ಸೂಚಿಸಲಾಗಿತ್ತು.

ಬೊಮ್ಮನಹಳ್ಳಿ, ಕೆ.ಆರ್.ಪುರ, ಮಹದೇವಪುರ, ಆರ್.ಆರ್. ನಗರ, ಯಶವಂತಪುರ, ಸರ್ವಜ್ಞನಗರ, ಯಲಹಂಕ, ಜಯನಗರ ಮತ್ತು ಚಾಮರಾಜಪೇಟೆ ಕ್ಷೇತ್ರಗಳಲ್ಲೇ ಅತಿ ಹೆಚ್ಚು ಲೋಪಗಳು ಪತ್ತೆಯಾಗಿವೆ.

'ಲೆಕ್ಕಪರಿಶೋಧನೆಯಲ್ಲಿನ ಪ್ರಸ್ತಾಪಿಸಿದ ಎಲ್ಲವೂ ಗಂಭೀರವಾದ ವ್ಯತ್ಯಾಸಗಳಿಂದ ಕೂಡಿಲ್ಲ. ಈ ಬಗ್ಗೆ ಸಾರ್ವಜನಿಕ ಲೆಕ್ಕಸಮಿತಿ ಪರಿಶೀಲನೆ ನಡೆಸಲಿದೆ' ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

'ನೈಸ್' ದೌರ್ಜನ್ಯ ವಿರೋಧಿಸಿ 28ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನೂತನ ಸರ್ಕಾರ ಬಂದ ಬಳಿಕ ರೈತರ ಮೇಲೆ 'ನೈಸ್' ಕಂಪನಿಯ ದೌರ್ಜನ್ಯ ಹೆಚ್ಚಾಗಿದೆ. ಇದನ್ನು ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಮತ್ತು ನೈಸ್ ಭೂ ಸಂತ್ರಸ್ತ ರೈತ ಹೋರಾಟ ಸಮಿತಿ ವತಿಯಿಂದ ಜೂನ್ 28ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಹೋರಾಟ ಸಮಿತಿಯ ಅಧ್ಯಕ್ಷ ಎನ್. ವೆಂಕಟಾಚಲಯ್ಯ ತಿಳಿಸಿದರು.

'ಕಾನೂನು ಹೋರಾಟದಲ್ಲಿ ನೈಸ್ ಕಂಪನಿಯ ವಿರುದ್ಧವೇ ತೀರ್ಪುಗಳು ಬಂದಿವೆ. ವಿವಿಧ ಸಮಿತಿಗಳು ಕೂಡ ರೈತರ ಪರವಾಗಿ ವರದಿ ನೀಡಿವೆ. ರೈತರಿಗೆ ಭೂಮಿ ವಾಪಸ್ ಮಾಡಬೇಕು. ಇಲ್ಲವೇ ಎಕರೆಗೆ ₹ 3 ಕೋಟಿಯಂತೆ ಪರಿಹಾರ ನೀಡಬೇಕು ಎಂದು ತಿಳಿಸಿವೆ. ಇತ್ತೀಚೆಗೆ ರೈತರಿಗೆ ಕಿರುಕುಳ ಆರಂಭವಾಗಿದೆ. ಗೂಂಡಾಗಳನ್ನು, ಪೊಲೀಸ್ ಇಲಾಖೆಯನ್ನು ಬಳಸಿಕೊಂಡು ಹಿಂಸೆ ನೀಡಲಾಗುತ್ತಿದೆ. ಅಶೋಕ್ ಖೇಣಿ ಅವರ ಮಿತ್ರ ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿ ಆಗಿರುವುದರಿಂದ ಈ ಬೆಳವಣಿಗೆಗಳು ನಡೆಯುತ್ತಿವೆ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ನೈಸ್ ರಸ್ತೆಯನ್ನು ಹೊರತುಪಡಿಸಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನು ರೈತರಿಗೆ ವಾಪಸ್ ನೀಡಬೇಕು. ರೈತರಿಗೆ ಹಿಂಸೆ ನೀಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಫೆಡರೇಷನ್ ಆಫ್ ಕೊಂಕಣಿ ಕ್ಯಾಥೊಲಿಕ್ ಅಸೋಸಿಯೇಷನ್‌ನ 'ಬೆಳ್ಳಿ ಹಬ್ಬ'

'ಶಿಕ್ಷಣ, ಆರೋಗ್ಯಕ್ಕೆ ಕ್ರೈಸ್ತರ ಕೊಡುಗೆ ಅನನ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತ್ತೊಂದು ಧರ್ಮ ಹಾಗೂ ವ್ಯಕ್ತಿಗಳನ್ನು ನಿಂದಿಸುವುದೇ ದೇಶಪ್ರೇಮವೆಂದು ಕೆಲವರು ಭಾವಿಸಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಸಮಾಜದಲ್ಲಿ ಬದಲಾವಣೆ ತರುವುದೇ ನೈಜ ದೇಶಪ್ರೇಮ' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ನಡೆದ ಫೆಡರೇಷನ್ ಆಫ್ ಕೊಂಕಣಿ ಕ್ಯಾಥೊಲಿಕ್ ಅಸೋಸಿಯೇಷನ್‌ನ 'ಬೆಳ್ಳಿ ಹಬ್ಬ' ಹಾಗೂ ಸಾಧಕರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸರ್ವ ಜನಾಂಗದ ವಿದ್ಯಾರ್ಥಿ-ಗಳಿಗೆ ಶಿಕ್ಷಣ ಕೊಟ್ಟು ಬದಲಾವಣೆ ತರುವುದು ಮುಖ್ಯ. ಸರ್ವ ಜನರೂ ಬಲಿಷ್ಠರಾದರೆ ಮಾತ್ರವೇ ಆ ರಾಷ್ಟ್ರವು ಅಭಿವೃದ್ಧಿ ಹೊಂದಲು ಸಾಧ್ಯ' ಎಂದು ಹೇಳಿದರು.

'ರಾಜ್ಯದಲ್ಲಿ ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಕ್ರೈಸ್ತ ಸಮುದಾಯದ ಕೊಡುಗೆ ಅಪಾರ. ಇದು ಬೇರೆ ಸಮಾಜಕ್ಕೂ ಮಾದರಿ. ಇದರ ಸೌಲಭ್ಯವನ್ನು ಎಲ್ಲ ಸಮಾಜಗಳೂ ಪಡೆದುಕೊಳ್ಳುತ್ತಿವೆ. ದಕ್ಷಿಣ ಕನ್ನಡ, ಬೆಂಗಳೂರು, ಮೈಸೂರು ಜಿಲ್ಲೆಗಳು ಶೈಕ್ಷಣಿಕ ಕ್ಷೇತ್ರದ ಸ್ವರ್ಗವಾಗಿದೆ. ಈ ಜಿಲ್ಲೆಗಳು ಅಭಿವೃದ್ಧಿ ಹೊಂದಲು ಹೆಚ್ಚಿನ ಶಿಕ್ಷಣ ಸಂಸ್ಥೆಗಳಿರುವುದೂ ಮತ್ತೊಂದು ಕಾರಣವಾಗಿದೆ' ಎಂದು ಹೇಳಿದರು.



ನಗರದಲ್ಲಿ ಭಾನುವಾರ ನಡೆದ ಫೆಡರೇಷನ್ ಆಫ್ ಕೊಂಕಣಿ ಕ್ಯಾಥೊಲಿಕ್ ಅಸೋಸಿಯೇಷನ್‌ನ 'ಬೆಳ್ಳಿ ಹಬ್ಬ' ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಸನ್ಮಾನಿಸಲಾಯಿತು. ಬಳ್ಳಾರಿಯ ಬಿಷಪ್ ಹೆನ್ರಿ ಡಿಸೋಜಾ, ಸಿಲ್ವಿಯನ್ ನರೋನ, ಡಾ.ಎಡ್ವರ್ಡ್ ಆನಂದ್ ಡಿಸೋಜಾ, ಆಂಥೋಣಿ ಗೋನ್ಸಾಲ್ವೆಸ್ ಇದ್ದರು – ಪ್ರಜಾವಾಣಿ ಚಿತ್ರ

> ಯಾವುದೇ ಪಕ್ಷದ ಪ್ರಾಥಮಿಕ ಸದಸ್ಯತ್ವವಿಲ್ಲದ ನಾನೀಗ ಪ್ರತಿಪಕ್ಷದ ಮಿತ್ರ. ವಿರೋಧಪಕ್ಷದ ಜತೆಗೆ ಎಷ್ಟೇ ಸ್ನೇಹಮಯವಾಗಿ ವರ್ತಿಸಿದ್ದರೂ ಅವರು ನನ್ನ ಮೇಲೆ ಸಂದೇಹ ಪಡುವುದು ತಪ್ಪುವುದಿಲ್ಲ.
> **ಯು.ಟಿ.ಖಾದರ್,** ವಿಧಾನಸಭಾಧ್ಯಕ್ಷ

ಇದೇ ವೇಳೆ ಜೀವಮಾನ ಸಾಧನೆಗೆ ಮಾನವ ಹಕ್ಕುಗಳ ಹೋರಾಟಗಾರ ಡಾ.ಕಿರಣ್ ಕಮಾಲ್ ಪ್ರಸಾದ್, ವೃತ್ತಿಪರ ಸಾಧನೆ ಪುರಸ್ಕಾರವನ್ನು ಬರಹಗಾರ ಸ್ಟೀಫನ್ ಕ್ವಾಡ್ರೋಸ್, ವರ್ಷದ ಉದ್ಯಮಿ ಪ್ರಶಸ್ತಿಯನ್ನು ಮೈಕಲ್ ಡಿಸೋಜ ಅವರಿಗೆ ಪ್ರದಾನ ಮಾಡಲಾಯಿತು. ಬಳ್ಳಾರಿ ಬಿಷಪ್ ಹೆನ್ರಿ ಡಿಸೋಜಾ, ಸಿಲ್ವಿಯನ್ ನೊರೋನ, ಡಾ. ಎಡ್ವರ್ಡ್ ಆನಂದ್ ಡಿಸೋಜಾ, ಆಂಥೋಣಿ ಗೋನ್ಸಾಲ್ವೆಸ್ ಇದ್ದರು.

ಇಂಧನ ಸಚಿವ ಕೆ.ಜೆ.ಜಾರ್ಜ್ ಇದ್ದರು.

ವಿಶ್ವ ಸಂವಾದ ಕೇಂದ್ರ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ವಿ.ಎಸ್‌ಕೆ.ಮೀಡಿಯಾ ಅವಾರ್ಡ್ಸ್' ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ರವಿಪ್ರಕಾಶ್ ಎಸ್. ಮತ್ತು ಜಯಪ್ರಕಾಶ್ ಶೆಟ್ಟಿ ಅವರಿಗೆ 'ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿ', ಎಂ. ಶ್ರೀನಿವಾಸನ್ ಅವರಿಗೆ 'ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ', ಹೆಬ್ರಿ ಬಾಲಕೃಷ್ಣ ಮಲ್ಯ ಮತ್ತು ಕಾ. ರಮಾನಂದ ಆಚಾರ್ಯ ಅವರಿಗೆ 'ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ' ಮತ್ತು ಎಂ.ಎಸ್. ರಾಘವೇಂದ್ರ ಅವರಿಗೆ 'ವಿ.ಎಸ್‌ಕೆ. ಡಿಜಿಟಲ್ ಮಾಧ್ಯಮ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ಎಡದಿಂದ ನಿಂತವರು) ವಿಶ್ವ ಸಂವಾದ ಕೇಂದ್ರದ ಅಧ್ಯಕ್ಷ ಶ್ರೀಧರ್, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ಬಳ್ಳಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣಮಧ್ಯ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಇದ್ದರು – ಪ್ರಜಾವಾಣಿ ಚಿತ್ರ

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿ-ಗಳಿಗೆ ಸರೋಜಿನಿ ದಾಮೋದರಂ ಫೌಂಡೇಷನ್ ವತಿಯಿಂದ 'ವಿದ್ಯಾದಾನ್' ವಿದ್ಯಾರ್ಥಿ ವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಇನ್ಫೋಸಿಸ್ ಸಹಸಂಸ್ಥಾಪಕ ಎಸ್.ಡಿ. ಶಿಬುಲಾಲ್–ಕುಮಾರಿ ಶಿಬುಲಾಲ್ ಅವರು 'ವಿದ್ಯಾದಾನ್' ವಿದ್ಯಾರ್ಥಿವೇತನವನ್ನು 1999ರಲ್ಲಿ ಆರಂಭಿಸಿದ್ದರು.ಶೇ 90ಕ್ಕಿಂತ ಅಧಿಕ ಅಂಕ ಗಳಿಸಿರುವವರು, ಶೇ 75ಕ್ಕಿಂತ ಅಧಿಕ ಅಂಕ ಗಳಿಸಿರುವ ಅಂಗವಿಕಲ ವಿದ್ಯಾರ್ಥಿಗಳು, ಕುಟುಂಬದ ಆದಾಯ ₹ 2 ಲಕ್ಷಕ್ಕಿಂತ ಕಡಿಮೆ ಇರುವವರು www.vidyadhan.org ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ vidyadhan.karnataka@sdfoundationindia.com ಅಥವಾ ಹೆಲ್ಪ್ ಡೆಸ್ಕ್ (96635 17131) ಸಂಪರ್ಕಿಸಬಹುದು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

ಸಪ್ತಗಿರಿನಗರ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯ ದುಃಸ್ಥಿತಿ.

'ಹೊಳೆಯಂತಾಗುವ ರಸ್ತೆ'

ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ನಗರ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಅವೈಜ್ಞಾನಿಕವಾಗಿ ರಸ್ತೆ ಕಾಮಗಾರಿ ನಡೆಸಲಾಗಿದೆ. ರಾಜಕಾಲುವೆ ನಿರ್ಮಿಸಿದ ಸೇತುವೆಗೆ ಕಳೆದ ಮಾರ್ಚ್ ತಿಂಗಳಲ್ಲಿ ಎರಡು ಹಂತದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಸಲಾಗಿತ್ತು. ಆದರೆ, ರಸ್ತೆಯನ್ನು ಸಮರ್ಪಕವಾಗಿ ಜೋಡಿಸದಿದ್ದರಿಂದ ಎತ್ತರ, ತಗ್ಗು ಆಗಿದೆ. ಮಳೆ ಬಂದಲ್ಲಿ ಇಲ್ಲಿ ನೀರು ನಿಲ್ಲಲಿದ್ದು, ವಾಹನ ಸವಾರರಿಗೆ ಈ ಸ್ಥಳದಲ್ಲಿ ಪ್ರಯಾಣ ಕಷ್ಟವಾಗಿದೆ. ಸೇತುವೆ ಬಳಿ ರಸ್ತೆಗೆ ಬಳಸಿದ ಕಬ್ಬಿಣದ ಕಂಬಿಗಳನ್ನು ಸಮರ್ಪಕವಾಗಿ ಮುಚ್ಚಿಲ್ಲ. ಇದರಿಂದ ಈ ಕಂಬಿಗಳು ವಾಹನಗಳ ಚಕ್ರಗಳಿಗೆ ತಗುಲಿ, ಹಾನಿ ಮಾಡಲಿವೆ. ವಾಹನಗಳು ಪಂಚರ್ ಆಗುವ ಸಾಧ್ಯತೆಯೂ ಇದೆ. ಆದ್ದರಿಂದ ಕೂಡಲೇ ಈ ಬಗ್ಗೆ ಕ್ರಮವಹಿಸಿ, ನೀರು ನಿಲ್ಲದಂತೆ ನೋಡಿಕೊಳ್ಳಬೇಕು.

ಮಂಜುನಾಥ್, ಸಪ್ತಗಿರಿ ನಗರ

ಚಿಕ್ಕಬಿದರಕಲ್ಲು ಗ್ರಾಮದಿಂದ ರೆಡ್ಡಿಕಟ್ಟೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಕಸದ ರಾಶಿ

'ರಸ್ತೆಯಲ್ಲಿನ ಕಸ ತೆರವುಗೊಳಿಸಿ'

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಚಿಕ್ಕಬಿದರಕಲ್ಲು ಗ್ರಾಮದಿಂದ ರೆಡ್ಡಿಕಟ್ಟೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ರಾಶಿಗಟ್ಟಲೆ ಕಟ್ಟಡ ತ್ಯಾಜ್ಯ, ಮನೆಯಲ್ಲಿ ಉತ್ಪತ್ತಿಯಾಗುವ ಹಸಿ, ಒಣ ಕಸವನ್ನು ಸುರಿಯಲಾಗುತ್ತಿದೆ. ರಸ್ತೆ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಸಾಂಕ್ರಾಮಿಕ ರೋಗ ಹರಡುವ ಭೀತಿ ಶುರುವಾಗಿದೆ. ಈ ರಸ್ತೆಯಲ್ಲಿಯೇ ಶ್ರೀರಾಮ ಪಬ್ಲಿಕ್ ಶಾಲೆ ಇದ್ದು, ಮಕ್ಕಳು, ಪೋಷಕರು ಮೂಗು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಅನುರಾಧ ಎಸ್.ಎಚ್., ವಿನಾಯಕನಗರ ನಿವಾಸಿ

ಲಕ್ಕಸಂದ್ರದ ಸುಬ್ಬರಾಜು ಬಡಾವಣೆಯ 9ನೇ ಮುಖ್ಯರಸ್ತೆ ದುಃಸ್ಥಿತಿ

'ರಸ್ತೆ ಕಾಮಗಾರಿ ಪೂರ್ಣಗೊಳಿಸಿ'

ಲಕ್ಕಸಂದ್ರದ ಸುಬ್ಬರಾಜು ಬಡಾವಣೆಯ 9ನೇ ಮುಖ್ಯರಸ್ತೆಯ 15ನೇ ಕ್ರಾಸ್‌ನ ಕಾಂಕ್ರೀಟ್ ರಸ್ತೆಯ ಕಾಮಗಾರಿ ಅರ್ಧಕ್ಕೆ ಸ್ಥಗಿತವಾಗಿದೆ. ರಸ್ತೆಗೆ ಅಳವಡಿಸಿದ್ದ ಕಬ್ಬಿಣದ ಸರಳುಗಳು ಹೊರಬಂದಿದ್ದು, ವಾಹನಗಳ ಸಂಚಾರ, ಪಾದಚಾರಿಗಳ ಓಡಾಟಕ್ಕೆ ಅನನುಕೂಲವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಆರ್.ವೈ. ಪವನ್ ರೆಡ್ಡಿ, ಲಕ್ಕಸಂದ್ರ

'ಹೇರೋಹಳ್ಳಿ: ರಸ್ತೆ ದುರಸ್ತಿಗೊಳಿಸಿ'

ಹೇರೋಹಳ್ಳಿಯ ಮಾರುತಿನಗರದ 1ನೇ ಅಡ್ಡ-ರಸ್ತೆಯಿಂದ 7ನೇ ಅಡ್ಡರಸ್ತೆ-ಯವರೆಗಿನ ರಸ್ತೆ ಸಂಪೂರ್ಣ ಹದಗೆಟ್ಟಿದೆ. ರಸ್ತೆ ದುರಸ್ತಿಗಾಗಿ ಮೂರು ತಿಂಗಳ ಹಿಂದೆಯೇ ಬಿಬಿಎಂಪಿ ಸಿಬ್ಬಂದಿ ಅಗೆದು ಜಲ್ಲಿ ಹಾಕಿ ಹೋಗಿದ್ದಾರೆ. ಈವರೆಗೆ ಕಾಮಗಾರಿ ಆರಂಭವಾಗಿಲ್ಲ. ಇದರಿಂದ ವಾಹನ ಸವಾರರಿಗೆ ನಿತ್ಯ ದೂಳಿನ ಮಜ್ಜನವಾಗು-ತ್ತಿದೆ. ಈಗ ಮಳೆಗಾಲ ಪ್ರಾರಂಭವಾಗಿದೆ. ವಾಹನ ಸವಾರರ ಪರದಾಡುವ ಪರಿಸ್ಥಿತಿ ನಿರ್ಮಾಣವಾಗು-ವುದಕ್ಕಿಂತ ಮುಂಚಿತವಾಗಿ ಈ ರಸ್ತೆಯನ್ನು ದುರಸ್ತಿಗೊಳಿಸಬೇಕು.

ತೇಜು, ಸ್ಥಳೀಯ ನಿವಾಸಿ



ಹೇರೋಹಳ್ಳಿಯ ಮಾರುತಿನಗರದ ರಸ್ತೆಗೆ ಹಾಕಿರುವ ಜಲ್ಲಿ

'ಶೌಚಾಲಯ ಸ್ವಚ್ಛಗೊಳಿಸಿ'

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಐಟಿಐ ದೂರವಾಣಿನಗರದ ಬೆಸ್ಕಾಂ ಉಪವಿಭಾಗ ಕಚೇರಿಯ ಆವರಣದಲ್ಲಿರುವ ಸಾರ್ವಜನಿಕ ಶೌಚಾಲಯ ನಿರ್ವಹಣೆಯಿ-ಲ್ಲದೆ ದುರ್ನಾತ ಬೀರುತ್ತಿದೆ. ನಿತ್ಯ ಕಚೇರಿಗೆ ಭೇಟಿ ನೀಡುವ ವೃದ್ಧರಿಗೆ, ಮಹಿಳೆಯರಿಗೆ ಈ ಶೌಚಾಲಯ ಬಳಸಲು ಆಗದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಗೃಹಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಸಲು ನಿತ್ಯ ನೂರಾರು ಜನ ಕಚೇರಿಗೆ ಭೇಟಿ ನೀಡುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಶೌಚಾಲಯದ ಸ್ವಚ್ಛತೆ ಕ್ರಮವಹಿಸಿ, ಜನರ ಬಳಕೆಗೆ ಅನುಕೂಲ ಮಾಡಿಕೊಡಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ (ಕೃಷ್ಣರಾಜಪುರ)

ಐಟಿಐ ದೂರವಾಣಿನಗರದ ಬೆಸ್ಕಾಂ ಉಪವಿಭಾಗ ಕಚೇರಿ ಆವರಣದಲ್ಲಿನ ಸಾರ್ವಜನಿಕ ಶೌಚಾಲಯ.

...Continuation from previous page

h) Unsecured advances (Rs.in Lakhs)

Particulars	Current Year 31.03.2023	Previous Year 31.03.2022
Total unsecured advances of the bank	670.95	816.78
Out of the above, amount of advances for which intangible securities such as charge over the rights, licenses, authority, etc. have been taken	-	-
Estimated value of such intangible securities	-	-

5) Concentration of deposits, advances, exposures and NPAs ***a) Concentration of deposits*** (Rs.in Lakhs)

Particulars	Current Year 31.03.2023	Previous Year 31.03.2022
Total deposits of the twenty largest depositors	10713.79	16461.74
Percentage of deposits of twenty largest depositors to totaldeposits of the bank	4.73%	7.00%

b) Concentration of advances (Rs. in Lakhs)

Particulars	Current Year 31.03.2023	Previous Year 31.03.2022
Total advances to the twenty largest borrowers	10381.92	10895.04
Percentage of advances to twenty largest borrowers to totaladvances of the bank	7.17%	6.79%

c) Concentration of NPAs (Rs. in Lakhs)

	Current Year 31.03.2023	Previous Year 31.03.2022
Total Exposure to the top twenty NPA accounts	5697.18	3451.19
Percentage of exposures to the twenty largest NPA exposure to total Gross NPAs.	30.33%	27.09%

6. Transfers to Depositor Education and Awareness Fund (DEA Fund) (Amount in Lakhs)

Sr. No.	Particulars	Current Year 31.03.2023	Previous Year 31.03.2022
i)	Opening balance of amounts transferred to DEA Fund	401.77	381.67
ii)	Add: Amounts transferred to DEA Fund during the year	182.78	21.27
iii)	Less: Amounts reimbursed by DEA Fund towards claims	1.18	1.17
iv)	Closing balance of amounts transferred to DEA Fund	583.37	401.77

7. Disclosure of complaints:
a) Summary information on complaints received by the bank from customers and from the Offices of Ombudsman

Sr. No		Particulars	Current Year 31.03.2023	Previous Year 31.03.2022
	Complaints received by the bank from its customers			
1.		Number of complaints pending at beginning of the year		
2.		Number of complaints received during the year	1	
3.		Number of complaints disposed during the year	1	
	3.1	Of which, number of complaints rejected by the bank		
4.		Number of complaints pending at the end of the year		
	Maintainable complaints received by the bank from Office of Ombudsman			
5.		Number of maintainable complaints received by the bank from Office of Ombudsman	6	
	5.1.	Of 5, number of complaints resolved in favour of the bank by Office of Ombudsman	6	
	5.2	Of 5, number of complaints resolved through conciliation/mediation/advisories issued by Office of Ombudsman	-	
	5.3	Of 5, number of complaints resolved after passing of Awards by Office of Ombudsman against the bank	-	
6.		Number of Awards unimplemented within the stipulated time (other than those appealed)	-	

Note: Maintainable complaints refer to complaints on the grounds specifically mentioned in Integrated Ombudsman Scheme, 2021 (Previously Banking Ombudsman Scheme, 2006) and covered within the ambit of the Scheme.

b) Top five grounds of complaints received by the bank from customers

Grounds of complaints, (i.e. complaints relating to)	Number of complaints pending at the beginning of the year	Number of complaints received during the year	% increase/ decrease in the number of complaints received over the previous year	Number of complaints pending at the end of the year	Of 5, number of complaints pending beyond 30 days
Current Year					
Ground – 1 / ATM					
Ground – 2 / Deposits		1		NIL	NIL
Ground – 3 / Loans and Advances		4		NIL	NIL
Ground – 4 / Levy of charges					
Ground – 5 / Staff Behavior		1		NIL	NIL
Others		1		NIL	NIL
Total					
Previous Year - NIL					

8. **Disclosure of penalties imposed by the Reserve Bank of India** - Nil
9. **Other Disclosures** ***a) Business ratios***

Particular	Current Year 31.03.2023	Previous Year 31.03.2022
i) Interest Income as a percentage to Working Funds	9.68%	10.48%
ii) Non-interest income as a percentage to Working Funds	0.46%	0.28%
iii) Cost of Deposits	6.43%	6.70%
iv) Net Interest Margin	4.64%	4.82%
v) Operating Profit as a percentage to Working Funds	3.25%	3.63%
vi) Return on Assets	1.00%	0.89%
vii) Business (deposits plus advances) per employee (in ₹ Lakhs)	1527.88	1571.95
viii) Profit per employee (in ₹ Lakhs)	11.64	9.62
ix) Average working fund	281956.93	271678.12

b) Details of Fees / Commissions earned in respect of Insurance Business (Rs.in Lakhs)

Particulars	Current Year 31.03.2023	Previous Year 31.03.2022
Commission Received	8.66	9.80

c) Disclosures regarding Priority Sector Lending Certificates (PSLCs) sold & purchased sector wise As on 31-03-2022 and As on 31-03-2023 - **Nil**

d) Provisions and contingencies (Rs. in Lakhs)

Provision debited to Profit and Loss Account	Current Year 31.03.2023	Previous Year 31.03.2022
i) Provisions for NPI	--------	---------
ii) Provision towards NPA	--------	---------
iii) Provision made towards Income tax	1819.66	2069.65
iv) Other Provisions and Contingencies (with details)		
v) Provision towards SPL BDDR (IT)	716.00	796.00
vi) Provision towards SPL BDDR (IT Housing)	120.00	125.00
vii) Provision towards SPL BDDR (Covid-19 related)	-	3903.09
viii) Provision of Int. Remission	150.00	10.00
ix) Provision of Co-op. Edu Fund	64.20	55.00
x) Provision for Exgratia Int. Subvention (Covid-19 related) -	16.00	-
xi) Provision for Court cost receivables	63.34	41.11
xii) Provision for BDDR (Std Assets)	2735.00	-
xiii) Provision for IDR	846.29	417.66
xiv) Provision for Deferred Tax	30.20	31.46
Total	**6560.69**	**7448.97**

e) Payment of DICGC Insurance Premium (Rs. in Lakhs)

Sr. No.	Particulars	Current Year 31.03.2023	Previous Year 31.03.2022
i)	Payment of DICGC Insurance Premium	333.77	301.04
ii)	Arrears in payment of DICGC premium	-	-

f) Disclosure of facilities granted to directors and their relatives As on 31-03-2022 and As on 31-03-2023 - **Nil**

ಎ.ವಿ. ವಲ್ಲಭ ರಾಜು ಶಾಖಾ ವ್ಯವಸ್ಥಾಪಕರು	ಸಿ.ಎನ್. ಅಪ್ಪಾಜಯ್ಯ ಉಪ ಪ್ರಧಾನ ವ್ಯವಸ್ಥಾಪಕರು(ಪ್ರಭಾರ)	ಪಿ. ಮಂಜುನಾಥ ಪ್ರಧಾನ ವ್ಯವಸ್ಥಾಪಕರು (ಪ್ರಭಾರ)	"ದೃಢೀಕರಣ"	ಕೆ. ಕೃಷ್ಣಪ್ಪ ನಿರ್ದೇಶಕರು	ಡಾ॥ ದೇವರಾಜ್.ಟಿ.ಎಂ ಉಪಾಧ್ಯಕ್ಷರು	ಆವಲಹಳ್ಳಿ ಚಂದ್ರಪ್ಪ ಆರ್. ಅಧ್ಯಕ್ಷರು

ಈ ಮೇಲ್ಕಂಡ "ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಚಾಮರಾಜಪೇಟೆ, ಬೆಂಗಳೂರು–18" ಇದರ **2022–23** ನೇ ಸಾಲಿನ ಲೆಕ್ಕ ಪತ್ರಗಳನ್ನು ನಾವು ಪರಿಶೀಲಿಸಿರುತ್ತೇವೆ. ಈ ಬಗ್ಗೆ ಅವಶ್ಯಕವಾದ ಮಾಹಿತಿಗಳನ್ನು ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತದೆ. ಸದರಿ ಆಸ್ತಿ–ಜವಾಬ್ದಾರಿ ತ:ಖ್ತೆಯು ಬ್ಯಾಂಕಿನಲ್ಲಿರತಕ್ಕ ಲೆಕ್ಕ ಪುಸ್ತಕಗಳಿಗೆ ಅನುಸಾರವಾಗಿಯೂ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಒದಗಿಸಿದ ಸಮಜಾಯಿಷಿಗಳಿಗೆ ಅನುಗುಣವಾಗಿಯೂ ಹಾಗೂ ಅಲಾಯಿದೆ ಲಗತ್ತಿಸಿರತಕ್ಕ ನಮ್ಮಗಳ ಲೆಕ್ಕ ಪರಿಶೋಧನಾ ವರದಿಗೆ ಒಳಪಟ್ಟು **ದಿನಾಂಕ: 31.03.2023** ರಲ್ಲಿದ್ದಂತೆ ಬ್ಯಾಂಕಿನ ನಿಜವಾದ ಹಾಗೂ ಕರಾರುವಕ್ಕಾದ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯಪಡುತ್ತೇವೆ.

ಸ್ಥಳ : ಬೆಂಗಳೂರು
ದಿನಾಂಕ : 14.06.2023

ಸಹಿ/– ರವೀಂದ್ರ ಎಸ್ ಕೋರೆ, ಪಾಲುದಾರರು
ಮೆ॥ ಬಿ.ಆರ್.ಆರ್ ಅಂಡ್ ಕೋ., ಚಾರ್ಟರ್ಡ್ ಅಕೌಂಟೆಂಟ್ಸ್, FRN: 012266S MN: 218915 UDIN No. 23218915BGTGYZ9136

ರಾಜಧಾನಿಗೆ ಸಂಪರ್ಕ ಕಲ್ಪಿಸುವ ಹೊಸೂರು, ತುಮಕೂರು, ಬಳ್ಳಾರಿ ಮಾರ್ಗವೇ ಅತ್ಯಂತ ಅಪಾಯಕಾರಿ

ಅಪಘಾತಗಳ ಮಾರ್ಗವಾದ ಹೆದ್ದಾರಿಗಳು

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜಧಾನಿಯ ಮೂಲಕ ಹಾದುಹೋಗಿರುವ (ಕಮಿಷನರೇಟ್ ವ್ಯಾಪ್ತಿಯಲ್ಲಿ) ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳು, ಹೊರವರ್ತುಲ, ನೈಸ್ ರಸ್ತೆ ಹಾಗೂ ಮುಖ್ಯರಸ್ತೆಗಳು ಅಪಘಾತ ಮಾರ್ಗಗಳಾಗಿವೆ. ವರ್ಷದಿಂದ ವರ್ಷಕ್ಕೆ ಇಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಿವೆ.

ನಗರವನ್ನು ಸಂಪರ್ಕಿಸುವ ಈ ರಸ್ತೆಗಳಲ್ಲಿ 2020ರಲ್ಲಿ 632, 2021ರಲ್ಲಿ 618, 2022ರಲ್ಲಿ ಒಟ್ಟು 752 ಅಪಘಾತಗಳು ಸಂಭವಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ರಸ್ತೆಗಳ ಮೂಲಕವೇ ನಿತ್ಯ ಸಾವಿರಾರು ಸಂಖ್ಯೆಯ ವಾಹನಗಳು ರಾಜಧಾನಿ ಪ್ರವೇಶಿಸುತ್ತವೆ.

ರಾತ್ರಿಯ ವೇಳೆ ಸರಕು ಸಾಗಣೆ ಲಾರಿಗಳು ನಗರಕ್ಕೆ ಬರುತ್ತವೆ. ರಾತ್ರಿ ಹೆದ್ದಾರಿಗಳಲ್ಲಿ ಸಂಚಾರ ಪೊಲೀಸರು ಇರುವುದಿಲ್ಲ. ಹೀಗಾಗಿ, ವಾಹನಗಳ ಅತಿವೇಗಕ್ಕೆ ಕಡಿವಾಣವೂ ಇಲ್ಲವಾಗಿದೆ. ಇದೇ ಕಾರಣಕ್ಕೆ ನಿತ್ಯ ಈ ಮಾರ್ಗಗಳಲ್ಲಿ ಅಪಘಾತ ಸಂಭವಿಸುತ್ತಿವೆ. ಹೆದ್ದಾರಿಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲದಿರುವುದೂ ಅಪಘಾತಕ್ಕೆ ಕಾರಣವಾಗಿದ್ದು, ಸಾವು–ನೋವು ತಂದೊಡ್ಡುತ್ತಿದೆ.

ನಗರದಲ್ಲಿ ಅಂದಾಜು 1.20 ಕೋಟಿ ವಾಹನಗಳಿದ್ದು, ನಿತ್ಯ ಎರಡು ಸಾವಿರ ಹೊಸ ವಾಹನಗಳು ಸೇರ್ಪಡೆಯಾಗುತ್ತಿವೆ. ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳ ಸಂಖ್ಯೆಯೂ ಏರಿದ್ದು, ಅದಕ್ಕೆ ತಕ್ಕಂತೆ ವ್ಯವಸ್ಥೆಯಿಲ್ಲ ಎಂದು ಚಾಲಕರು ದೂರಿದ್ದಾರೆ.

ತುಮಕೂರು ಹಾಗೂ ಹಾಸನ ಕಡೆಗೆ ಸಂಪರ್ಕಿಸುವ ಗೊರಗುಂಟೆಪಾಳ್ಯ ಮೇಲ್ಸೇತುವೆ ಮೇಲೆ ಬೃಹತ್ ವಾಹನಗಳ ಸಂಚಾರ ನಿರ್ಬಂಧಿಸಿ ವರ್ಷವೇ ಕಳೆದಿದೆ. ಪರಿಣಾಮ, ಕೆಳ-ಮಾರ್ಗದಲ್ಲೇ ವಾಹನ ದಟ್ಟಣೆ ಹೆಚ್ಚಿದೆ. ದಿನದ 24 ಗಂಟೆಯೂ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ಭಾರಿ ವಾಹನಗಳ ಅಡ್ಡಾದಿಡ್ಡಿ ಸಂಚಾರದಿಂದ ಅಪಘಾತ ಸಂಖ್ಯೆ ಹೆಚ್ಚುತ್ತಿದೆ ಎಂದು ನಾಗರಿಕರು ದೂರುತ್ತಾರೆ.

ಮೂರು ಅಪಾಯಕಾರಿ ಮಾರ್ಗಗಳು: ಬಳ್ಳಾರಿ ರಸ್ತೆ, ಹೊಸೂರು ರಸ್ತೆ ಹಾಗೂ ತುಮಕೂರು ರಸ್ತೆಗಳಲ್ಲಿ ಮೂರು ವರ್ಷಗಳಲ್ಲಿ ಹೆಚ್ಚಿನ ಅಪಘಾತ ಸಂಭವಿಸಿವೆ. ಈ ಮಾರ್ಗದಲ್ಲಿ ಅಪಘಾತಗಳನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಕ್ಯಾಮೆರಾ ಅಳವಡಿಕೆ, ವೈಜ್ಞಾನಿಕವಾಗಿ ಹಂಪ್ಸ್ ನಿರ್ಮಾಣ, ಬೆಳಕಿನ ವ್ಯವಸ್ಥೆ ಮಾಡಲಾಗುತ್ತಿದೆ. ರಸ್ತೆಗಳಲ್ಲಿನ ಗುಂಡಿ ಗುರುತಿಸಿ ಮುಚ್ಚಲು ತಕ್ಷಣವೇ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಪೊಲೀಸರು ಹೇಳುತ್ತಾರೆ.

ರಸ್ತೆ ಬದಿಯಲ್ಲೇ ಲಾರಿಗಳು: ಹಗಲು ವೇಳೆಯಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಬರುವ ಲಾರಿಗಳಿಗೆ ಪ್ರವೇಶದ ನಿರ್ಬಂಧವಿದೆ. ಹೀಗಾಗಿ, ತುಮಕೂರು ರಸ್ತೆಯ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಮೈದಾನ (ಬಿಐಇಸಿ) ಬಳಿಯ ಹೆದ್ದಾರಿ ಪಕ್ಕದಲ್ಲೇ ವಾಹನಗಳು ಬೀಡುಬಿಟ್ಟಿರುತ್ತವೆ. ರಾತ್ರಿ ವೇಳೆ ಅವುಗಳು ಒಮ್ಮೆಲೇ ಕೈಗಾರಿಕಾ ಪ್ರದೇಶಕ್ಕೆ ಬರುವ ಕಾರಣಕ್ಕೆ ಅಪಘಾತ ನಡೆಯುತ್ತಿವೆ ಎಂದು ಸ್ಥಳೀಯರು ಹೇಳುತ್ತಾರೆ.

ಬೆಂಗಳೂರಿನ ಹೆಬ್ಬಾಳ ರಸ್ತೆಯಲ್ಲಿ ಸಂಚಾರ ದಟ್ಟಣೆ

3 ವರ್ಷಗಳಲ್ಲಿ ನಡೆದ ಅಪಘಾತ ವಿವರ

ರಸ್ತೆ ವಿಧ	2020	2021	2022
ರಾಷ್ಟ್ರೀಯ ಹೆದ್ದಾರಿ	119	108	123
ರಾಜ್ಯ ಹೆದ್ದಾರಿ	52	43	42
ಜಿಲ್ಲಾ ಮುಖ್ಯರಸ್ತೆ	2	5	7
ಗ್ರಾಮೀಣ ರಸ್ತೆಗಳು	5	11	15
ಮುಖ್ಯರಸ್ತೆ	175	193	263
ಉಪ ರಸ್ತೆ	171	123	154
ವರ್ತುಲ ರಸ್ತೆ	65	78	90
ಹೊರ ವಲಯ ರಸ್ತೆ	1	...	4
ನೈಸ್ ರಸ್ತೆ	24	40	27
ಫ್ಲೈಓವರ್	18	17	17
ಒಟ್ಟು	632	618	752

‘ಸ್ಪೀಡ್ ಟ್ರ್ಯಾಪ್ ಕ್ಯಾಮೆರಾ’ ಅಳವಡಿಕೆ

ಹೆದ್ದಾರಿಗಳಲ್ಲಿ ಅತಿವೇಗದ ಚಾಲನೆಯಿಂದ ಅಪಘಾತಗಳು ಸಂಭವಿಸುತ್ತಿವೆ. ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಎಲಿವೇಟೆಡ್ ಕಾರಿಡಾರ್‌ನಲ್ಲಿ 12 ‘ಸ್ಪೀಡ್ ಟ್ರ್ಯಾಪ್ ಕ್ಯಾಮೆರಾ’ ಹಾಕಲಾಗಿದೆ. ವೇಗದ ಮಿತಿ ದಾಟಿದ ಎಲ್ಲ ವಾಹನಗಳ ಚಾಲಕರಿಗೂ ದಂಡ ವಿಧಿಸಲಾಗುತ್ತಿದೆ. ಹೊಸೂರು ರಸ್ತೆಯಲ್ಲೂ (ಎಲೆಕ್ಟ್ರಾನಿಕ್ ಸಿಟಿ) ಸ್ಪೀಡ್ ಟ್ರ್ಯಾಪ್ ಕ್ಯಾಮೆರಾ ಅಳವಡಿಸಲಾಗುವುದು. ಅಗತ್ಯವಿರುವ ಬೇರೆ ಮಾರ್ಗದಲ್ಲೂ ಕ್ಯಾಮೆರಾ ಹಾಕಲಾಗುವುದು.

ಎಂ.ಎನ್.ಅನುಚೇತ್, ಜಂಟಿ ಕಮಿಷನರ್, ಸಂಚಾರ ವಿಭಾಗ

ಸುದ್ದಿ 2 ನಿಮಿಷ

ಗೃಹಜ್ಯೋತಿ ಯೋಜನೆ: 50 ಲಕ್ಷ ದಾಟಿದ ನೋಂದಣಿ

ಬೆಂಗಳೂರು: ಗೃಹಬಳಕೆಯ ವಿದ್ಯುತ್‌ಗೆ 200 ಯುನಿಟ್‌ವರೆಗೆ ಉಚಿತವಾಗಿ ನೀಡುವ ಗೃಹಜ್ಯೋತಿ ಯೋಜನೆಗೆ ನೋಂದಣಿ ಮಾಡಿಕೊಂಡವರ ಸಂಖ್ಯೆ 50 ಲಕ್ಷ ದಾಟಿದೆ.

ಜೂನ್ 18ರಂದು ನೋಂದಣಿ ಪ್ರಕ್ರಿಯೆ ಆರಂಭಗೊಂಡಿತು. ಭಾನುವಾರ ಸಂಜೆ 4ರ ವರೆಗೆ 51,17,693 ಗ್ರಾಹಕರು ನೋಂ-ದಾಯಿಸಿಕೊಂಡಿದ್ದಾರೆ.

ಗೃಹ ಜ್ಯೋತಿ ಯೋಜನೆಗೆ ವಿದ್ಯುತ್ ಕಚೇರಿ, ನಾಡಕಚೇರಿ, ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳಲ್ಲಿ ಅಧಿಕೃತ ಪೋರ್ಟಲ್ https://sevasindhugs.karnataka.gov.in ಮೂಲಕ ನೋಂದಣಿ ಮಾಡಿಕೊಳ್ಳಬಹುದು.

ಬೆಂಗಳೂರು ಒನ್, ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಗ್ರಾಮ ಪಂಚಾಯಿತಿ ಕಚೇರಿಗ-ಳಲ್ಲಿಯೂ ನೋಂದಾಯಿಸಿಕೊ-ಳ್ಳಬಹುದು. ಹೆಚ್ಚುವರಿ ಹಣಕ್ಕೆ ಯಾರಾದರೂ ಬೇಡಿಕೆಯಿಟ್ಟಲ್ಲಿ ಗ್ರಾಹಕರು 24x7 ಸಹಾಯವಾಣಿ 1912ಕ್ಕೆ ಕರೆಮಾಡಿ ತಿಳಿಸಬಹುದು.

ಯೋಜನೆ ಕುರಿತಾದ ಮಾಹಿತಿಗಾಗಿ ಗ್ರಾಹಕರು ಇಂಧನ ಇಲಾಖೆಯ ಅಧಿಕೃತ ವೆಬ್‌ಸೈಟ್ https://energy.karnataka.gov.in ಗೆ ಭೇಟಿ ನೀಡಬಹುದು.

‘ಸಮಾಜದ ಚಿತ್ರಣ ನೀಡುವ ಸಣ್ಣಕತೆ’

ಮಂಡ್ಯ: ‘ಸಣ್ಣಕತೆಗಳು ಸಮಾಜ, ಸಂಸ್ಕೃತಿಯ ಚಿತ್ರಣವನ್ನು ಪರಿಣಾಮಕಾ-ರಿಯಾಗಿ ಕಟ್ಟಿಕೊಡುತ್ತವೆ. ಕತೆಗಾರ ತನ್ನ ಕತೆಗಳ ಮೂಲಕ ಇಡೀ ದೇಶದ ದರ್ಶನ ಮಾಡಲು ಸಾಧ್ಯವಿದೆ’ ಎಂದು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಪ್ರೊ.ಹಿ.ಶಿ.ರಾಮಚಂದ್ರೇಗೌಡ ಹೇಳಿದರು.

ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದಿಂದ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಕಥಾಸಂಕಲನ ಪ್ರಶಸ್ತಿ ಪ್ರದಾನ, ‘ಹಿಂಗಿದ್ದ ನಮ್ಮ ರಾಮಣ್ಣ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕಾವ್ಯ, ಮಹಾಕಾವ್ಯಗಳಿಂದಲೂ ಸಮಾಜ, ಸಂಸ್ಕೃತಿಯ ಚಿತ್ರಣ ನೀಡಲು ಸಾಧ್ಯವಿಲ್ಲ. ಆದರೆ ಸಣ್ಣ ಕತೆಗಳಿಂದ ಸಮಾಜದ ಚಿತ್ರಣವನ್ನು ವರ್ಣಿಸಲು ಸಾಧ್ಯವಿದೆ. ಬೆಸಗರಹಳ್ಳಿ ರಾಮಣ್ಣ ಅವರು ತಮ್ಮ ವಿಶಿಷ್ಟ ಭಾಷೆಯ ಮೂಲಕ ತಾವು ಜೀವಿಸುವ ಸ್ಥಳದ ಮಹತ್ವವನ್ನು ಸಾರುವ ಕೆಲಸ ಮಾಡಿದ್ದಾರೆ, ಆ ಸಮಾಜದ ಸಂಪೂರ್ಣ ಚಿತ್ರಣವನ್ನು ನಿರೂಪಿಸಿದ್ದಾರೆ’ ಎಂದರು.

‘ಬೆಸಗರಹಳ್ಳಿ ರಾಮಣ್ಣ ವೈದ್ಯರಾಗಿ ಅದರಾಚೆಗೆ ಚಿಂತನೆ ಮಾಡಿದವರು. ಮಂಡ್ಯ ನೆಲದ ಭಾಷೆಯ ಮೂಲಕ ಇಂಡಿಯಾವನ್ನೇ ಕಟ್ಟಿಕೊಡುವ ಕೆಲಸ ಮಾಡಿದ್ದಾರೆ. ಈ ಕಾರಣಕ್ಕೆ ರಾಮಣ್ಣ ಅವರ ಕತೆಗಳು ಬಹುಕಾಲದವರೆಗೆ ಜನರ ಮನಸ್ಸಿನಲ್ಲಿ ನಿಲ್ಲುತ್ತವೆ’ ಎಂದರು.

‘ಉಪ್ಪುಚ್ಚಿ ಮುಳ್ಳು’ ಸಂಕಲನದ ಕತೆಗಾರ್ತಿ ದಯಾ ಗಂಗನಘಟ್ಟ ಪ್ರಶಸ್ತಿ ಸ್ವೀಕರಿಸಿ, ಕತೆಯಲ್ಲಿರುವ ಗ್ರಾಮ್ಯ ಭಾಷೆ ನನ್ನ ಹೆಮ್ಮೆಯಾಗಿದೆ’ ಎಂದರು. ಪ್ರಶಸ್ತಿ ವಿಜೇತ ಕೃತಿ ಕುರಿತು ಪ್ರಾಧ್ಯಾಪಕ ಡಾ.ಸುಭಾಷ್ ರಾಜಮಾನೆ ಮಾತನಾಡಿದರು.

‘ಹಿಂಗಿದ್ದ ನಮ್ಮ ರಾಮಣ್ಣ’ ಕೃತಿ ಕುರಿತು ಲೇಖಕ ಬಿ.ಚಂದ್ರೇಗೌಡ ಮಾತನಾಡಿದರು. ಸಂಶೋಧಕ ಡಾ.ಸಿ.ವೀರಣ್ಣ ಮಾತನಾಡಿದರು. ತೀರ್ಪುಗಾರರಾಗಿದ್ದ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಅನುಪಮಾ ಪ್ರಸಾದ್ ಅವರನ್ನು ಅಭಿನಂದಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್. ಸುಜಾತಾ, ಆಜೀವ ಸದಸ್ಯೆ ಡಿ.ಪಿ.ರಾಜಮ್ಮ ರಾಮಣ್ಣ, ಡಾ.ಕಮಲಾಕ್ಷ, ಡಾ.ಬಿ.ಆರ್.ರವಿಕಾಂತೇಗೌಡ ಹಾಜರಿದ್ದರು.

ಕಾಲು ಮುರಿದ ಕೃಷ್ಣಮೃಗಕ್ಕೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಆನೇಕಲ್: ಎಡಗಾಲಿಗೆ ಪೆಟ್ಟು-ಬಿದ್ದಿದ್ದ, ಬನ್ನೇರುಘಟ್ಟ ಜೈವಿಕ ಉದ್ಯಾನದ ಕೃಷ್ಣಮೃಗಕ್ಕೆ ವೈದ್ಯರ ತಂಡ ಭಾನುವಾರ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದೆ.

ಉದ್ಯಾನದ ವೈದ್ಯರಾದ ಡಾ.ಉಮಾಶಂಕರ್ ಮತ್ತು ಡಾ.ವಿಜಯ್ ತಂಡದವರು ಶಸ್ತ್ರಚಿಕಿತ್ಸೆ ನಡೆಸಿದ್ದು, ಕೃಷ್ಣಮೃಗದ ಕಾಲಿನ ಮುರಿದಿದ್ದ ಮೂಳೆಯನ್ನು ಜೋಡಿಸಿದ್ದಾರೆ.

ಜೈವಿಕ ಉದ್ಯಾನದ ಸಸ್ಯಹಾರಿ ಸಫಾರಿಯಲ್ಲಿ 80 ಕ್ಕೂ ಹೆಚ್ಚು ಕೃಷ್ಣಮೃಗಗಳಿದ್ದು ಕೆಲವೊಮ್ಮೆ ಪರಸ್ಪರ ಕಾದಾಟದಲ್ಲಿ ಗಾಯ-ಮಾಡಿಕೊಳ್ಳುವುದು ಸಾಮಾನ್ಯ ಸಂಗತಿ.

ಕೃಷ್ಣಮೃಗ ಗಾಯಗೊಂಡಿರುವುದು ಕಂಡು ಬರುತ್ತಿದ್ದಂತೆ ಉದ್ಯಾನದ ವೈದ್ಯರು ಪಶುವೈದ್ಯಕೀಯ ಆಸ್ಪತ್ರೆಗೆ ತಂದು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದ್ದಾರೆ.

1. ನಗರದ ಲಗ್ಗೆರೆ ಮೇಲ್ಸೇತುವೆ ಬಳಿ ಭಾನುವಾರ ಮಳೆಯಲ್ಲಿಯೇ ದ್ವಿಚಕ್ರ ವಾಹನ ಸವಾರರು ಸಂಚರಿಸಿದರು 2. ಎಂ.ಜಿ. ರಸ್ತೆಯಲ್ಲಿ ಮಳೆಯಲ್ಲೇ ಜನರು ಸಾಗಿದರು –ಪ್ರಜಾವಾಣಿ ಚಿತ್ರಗಳು

ಉತ್ತಮ ಮಳೆ: ಹಲವೆಡೆ ರಸ್ತೆಗಳು ಜಲಾವೃತ

ಜನರ ವಾರಾಂತ್ಯದ ಸಂಭ್ರಮಕ್ಕೆ ‘ತಣ್ಣೀರು’ • ಹಾನಿಯಾದ ಬಗ್ಗೆ ದೂರುಗಳು ಇಲ್ಲ– ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಪ್ರದೇಶಗಳಲ್ಲಿ ಭಾನುವಾರ ಮಳೆ ಸುರಿದಿದ್ದು, ಹಲವೆಡೆ ರಸ್ತೆಗಳ ಮೇಲೆಯೇ ನೀರು ಹರಿಯಿತು.

ಮಳೆಗಾಲ ಆರಂಭವಾಗಿ ಹಲವು ದಿನವಾಗಿದ್ದು, ಆಗಾಗ ಮೋಡ ಕವಿದ ವಾತಾವರಣ ಕಂಡುಬರುತ್ತಿದೆ. ಭಾನುವಾರ ಮಧ್ಯಾಹ್ನದಿಂದ ಮೋಡ ಕವಿದ ವಾತಾವರಣವಿತ್ತು. ಸಂಜೆ ವೇಳೆ, ಜಿಟಿ ಜಿಟಿ ಶುರುವಾದ ಮಳೆ ಕ್ರಮೇಣ ಜೋರಾಗಿ ಸುರಿಯಿತು. ರಾತ್ರಿಯೂ ಮಳೆಯ ಅಬ್ಬರವಿತ್ತು.

ಜಯನಗರ, ಗಿರಿನಗರ, ಹನುಮಂತನಗರ, ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಯಶವಂತಪುರ, ಮಲ್ಲೇಶ್ವರ, ಪೀಣ್ಯ, ಜಾಲಹಳ್ಳಿ, ಆರ್‌.ಟಿ.ನಗರ, ಹೆಬ್ಬಾಳ, ಶಿವಾಜಿನಗರ, ಎಂ.ಜಿ. ರಸ್ತೆ, ಆಡುಗೋಡಿ, ಕೋರಮಂಗಲ, ಹಲಸೂರು ಹಾಗೂ ಸುತ್ತಮುತ್ತ ಪ್ರದೇ-ಶಗಳಲ್ಲಿ ಜೋರು ಮಳೆ ಆಯಿತು.

ಹಲವು ಕಚೇರಿ ಹಾಗೂ ಶಾಲೆ–ಕಾಲೇಜುಗಳಿಗೆ ಭಾನುವಾರ ರಜೆ ಇದ್ದಿದ್ದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಜನರು ಮಾರುಕಟ್ಟೆಗಳಿಗೆ ಬಂದಿದ್ದರು. ಮಳೆ ಶುರುವಾಗಿದ್ದರಿಂದ, ಮಾರುಕಟ್ಟೆ ವ್ಯಾಪಾರಕ್ಕೆ ತೊಂದರೆ ಉಂಟಾಯಿತು.

ಹಲವರು ಸುರಿಯುವ ಮಳೆಯಲ್ಲೇ ಕೊಡೆಯ ರಕ್ಷಣೆ ಪಡೆದರು. ಕೆಲ ರಸ್ತೆಗಳಲ್ಲಿ ಹರಿಯುತ್ತಿದ್ದ ನೀರಿನಲ್ಲಿಯೇ ವಾಹನಗಳು ಸಂಚರಿಸಿದವು. ದ್ವಿಚಕ್ರ ವಾಹನ ಸವಾರರು, ರೇನ್‌ಕೋಟ್ ಧರಿಸಿ ಪ್ರಯಾಣಿಸಿದರು.

ಮಳೆಯಿಂದಾಗಿ ಬೀದಿಬದಿ ವ್ಯಾಪಾರಿಗಳಿಗೆ ತೊಂದರೆ ಉಂಟಾಯಿತು. ತರಕಾರಿ, ಹೂವು–ಹಣ್ಣು, ಬಟ್ಟೆ ಮಾರುತ್ತಿದ್ದ ವ್ಯಾಪಾರಿಗಳು, ಮಳೆಯಿಂದ ರಕ್ಷಣೆ ಪಡೆಯಲು ಕೊಡೆ ಮೊರೆ ಹೋಗಿದ್ದರು.

‘ನಗರದ ಬಹುತೇಕ ಕಡೆ ಭಾನುವಾರ ಉತ್ತಮ ಮಳೆಯಾಗಿದೆ. ರಸ್ತೆಯಲ್ಲಿ ನೀರು ನಿಂತಿದ್ದ ಬಗ್ಗೆ ದೂರುಗಳು ಬಂದಿದ್ದವು. ಸಿಬ್ಬಂದಿ ಸ್ಥಳಕ್ಕೆ ಹೋಗಿ ನೀರು ತೆರವು ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಉಳಿದಂತೆ ಯಾವುದೇ ಹಾನಿ ಬಗ್ಗೆ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಸಂಕ್ಷಿಪ್ತ ಸುದ್ದಿ

‘ಡೇ ಕೇರ್ ಸೆಂಟರ್‌ಗಳಿಗೆ ಅಂಕುಶ ಅಗತ್ಯ’

ಬೆಂಗಳೂರು: ‘ರಾಜ್ಯದ ಎಲ್ಲ ಡೇ ಕೇರ್ ಸೆಂಟರ್‌ಗಳಿಗೆ ಕಟ್ಟುನಿಟ್ಟಿನ ನಿಯಮ ಜಾರಿಗೆ ತರುವ ಮೂಲಕ ಅಂಕುಶ ಹಾಕಬೇಕು’ ಎಂದು ಎಎಪಿ ಆಗ್ರಹಿಸಿದೆ.

ನಗರದಲ್ಲಿ ಶುಕ್ರವಾರ ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಮೋಹನ್ ದಾಸರಿ ಮಾತನಾಡಿ, ‘ನಗರದ ಡೇ ಕೇರ್‌ವೊಂದರಲ್ಲಿ ಇಬ್ಬರು ಕಂದಮ್ಮಗಳು ಹೊಡೆದಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಡೇ ಕೇರ್ ಸೆಂಟರ್ ಮಾಲೀಕರು, ಕೇವಲ ವ್ಯಾಪಾರಿ ದೃಷ್ಟಿ ಹೊಂದಿರುವ ಕಾರಣಕ್ಕೆ ಈ ರೀತಿಯ ನೂರಾರು ಅಚಾತುರ್ಯಗಳು ನಡೆಯುತ್ತಿವೆ’ ಎಂದು ದೂರಿದರು.

ನಗರ ಉಪಾಧ್ಯಕ್ಷ ಅಶೋಕ್ ಮೃತ್ಯುಂಜಯ ಅವರು, ‘ಮಾಂಟೇಸರಿಗಳು ಯಾವುದೇ ಮಾನದಂಡ ಪಾಲಿಸದೆ ಹಣ ಮಾಡುವ ದಂಧೆಯಲ್ಲಿ ತೊಡಗಿವೆ. ಶಿಕ್ಷಣ ಸಚಿವರು ಗಮನ ಹರಿಸಬೇಕು. ಪ್ರತ್ಯೇಕ ಆಯುಕ್ತರ ನೇಮಿಸಬೇಕು’ ಎಂದು ಆಗ್ರಹಿಸಿದರು.

ಪಕ್ಷದ ಕಾರ್ಯದರ್ಶಿ ಸುಷ್ಮಾ ವೀರ್ ಮಾತನಾಡಿ, ‘ಸರ್ಕಾರ ಈ ವಿಚಾರದಲ್ಲಿ ಮಾನವೀಯತೆ ತೋರಬೇಕು. ಶಿಕ್ಷಣ ಇಲಾಖೆ ಅಧಿಕಾರಿಗಳು ದೆಹಲಿಗೆ ತೆರಳಿ ಅಲ್ಲಿ ‘ಆಪ್’ ಸರ್ಕಾರ ನಡೆಸುತ್ತಿರುವ ಸರ್ಕಾರದ ಡೇ ಕೇರ್ ಸೆಂಟರ್ ವೀಕ್ಷಿಸಬೇಕು. ಅದೇ ರೀತಿಯ ಶಾಲೆಗಳನ್ನು ರಾಜ್ಯದಲ್ಲಿಯೂ ತೆರೆಯಬೇಕು’ ಎಂದು ಒತ್ತಾಯಿಸಿದರು.

ಹರ್ಮನ್ ಗ್ಮೈನರ್ ಜನ್ಮಶತಮಾನೋತ್ಸವ

ಬೆಂಗಳೂರು: ಎಸ್‌ಒಎಸ್ ಚಿಲ್ಡ್ರನ್ಸ್ ವಿಲೇಜಸ್ ಸಂಸ್ಥಾಪಕ ಹರ್ಮನ್ ಗ್ಮೈನರ್ ಅವರ ಜನ್ಮಶತಮಾನೋ-ತ್ಸವ ಕಾರ್ಯಕ್ರಮ ಎಸ್‌ಒಎಸ್ ಚಿಲ್ಡ್ರನ್ಸ್ ವಿಲೇಜ್‌ನಲ್ಲಿ ನಡೆಯಿತು.

ಎಸ್‌ಒಎಸ್ ಚಿಲ್ಡ್ರನ್ಸ್ ವಿಲೇಜಸ್ ಅನ್ನು 75 ವರ್ಷಗಳ ಹಿಂದೆ ಆಸ್ಟ್ರಿಯಾದ ಇಮ್‌ಸ್ಟ್‌ನಲ್ಲಿ ಹರ್ಮನ್ ಗ್ಮೈನರ್ ಸ್ಥಾಪಿಸಿದ್ದರು. ಭಾರತದಲ್ಲಿ 60 ವರ್ಷಗಳ ಹಿಂದೆ ಆರಂಭಗೊಂಡಿತು. ಸದ್ಯ ದೇಶದಲ್ಲಿ 31 ಎಸ್‌ಒಎಸ್ ಚಿಲ್ಡ್ರನ್ಸ್ ವಿಲೇಜ್‌ಗಳಿದ್ದು, ಪಾಲಕರಿಲ್ಲದ 6,500ಕ್ಕೂ ಹೆಚ್ಚು ಮಕ್ಕಳು ನೆರವು ಪಡೆಯುತ್ತಿದ್ದಾರೆ. ಇಲ್ಲಿವರೆಗೆ 65,000 ಮಕ್ಕಳು ಇಲ್ಲಿ ನೆರವು ಪಡೆದಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಆನೆಕಲ್ ಶಾಸಕ ಬಿ. ಶಿವಣ್ಣ, ಮಾಜಿ ಶಾಸಕಿ ಸೌಮ್ಯಾ ರೆಡ್ಡಿ, ಎಸ್‌ಒಎಸ್ ಚಿಲ್ಡ್ರನ್ಸ್ ವಿಲೇಜ್ ಇಂಡಿಯಾದ ಸಿಇಒ ಸುಮಂತಾ ಕರ್ ಭಾಗವಹಿಸಿದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಮತ್ತು ಬಿಬಿಎಂಪಿ ಸಹಯೋಗದಲ್ಲಿ ನಡೆದ ಆರೋಗ್ಯ ತಪಾಸಣೆ ಶಿಬಿರವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವೀಕ್ಷಿಸಿದರು

ಪತ್ರಕರ್ತರಿಗೆ ಆರೋಗ್ಯ ತಪಾಸಣೆ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತರು ಸದಾ ಒತ್ತಡದಲ್ಲೇ ಕೆಲಸ ಮಾಡುತ್ತಾರೆ. ವೃತ್ತಿಯಲ್ಲಿ ಕ್ರಿಯಾಶೀಲ ಆಗಿರಬೇಕಾದರೆ ಆರೋಗ್ಯ ಕಾಪಾಡಿಕೊಳ್ಳುವುದು ಮುಖ್ಯ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಮತ್ತು ಬಿಬಿಎಂಪಿ ಸಹಯೋಗದಲ್ಲಿ ಪತ್ರಕರ್ತರಿಗೆ ಏರ್ಪಡಿಸಿದ್ದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

‘ಆರೋಗ್ಯದ ಬಗ್ಗೆ ಯಾವುದೇ ಕಾರಣಕ್ಕೆ ನಿರ್ಲಕ್ಷ್ಯ ವಹಿಸಬಾರದು. ಆಗಾಗ್ಗೆ ತಪಾಸಣೆ ಮಾಡಿಸಿಕೊಂಡು ಜಾಗ್ರತೆ ವಹಿಸಿದರೆ ಆರೋಗ್ಯ ಕಾಪಾಡಿಕೊಳ್ಳಬಹುದು’ ಎಂದರು. ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು, ಖಜಾಂಚಿ ಎಂ.ವಾಸುದೇವ ಹೊಳ್ಳ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ವಿ.ಮುನಿರಾಜು, ಬಿಬಿಎಂಪಿ ಆರೋಗ್ಯಾಧಿಕಾರಿ ಡಾ.ಶರಣಪ್ಪ ಇದ್ದರು.

‘ಲೆಟ್ಸ್ ಮೂವ್ ಬೆಂಗಳೂರು’ ಸಮಾವೇಶದಲ್ಲಿ ಭಾಗಿಯಾದವರ ಸಲಹೆ

‘ಸ್ವಂತ ವಾಹನ ಬಿಡಿ, ಸಾರ್ವಜನಿಕ ವಾಹನ ಬಳಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕರು ಸ್ವಂತ ವಾಹನಗಳ ಬದಲಾಗಿ ಸಾರ್ವಜನಿಕ ಸಾರಿಗೆ ಬಳಸಬೇಕು. ಸೈಕಲ್ ಸವಾರಿ, ನಡಿಗೆಯಂಥ ಮೋಟಾರುರಹಿತ ಸಾಧ್ಯತೆಗಳಿಗೆ ಆದ್ಯತೆ ನೀಡಬೇಕು.

–ಗ್ರೀನ್‌ಪೀಸ್ ಇಂಡಿಯಾ ಸಂಸ್ಥೆ ನಗರದ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ‘ಲೆಟ್ಸ್ ಮೂವ್ ಬೆಂಗಳೂರು’ ನಾಗರಿಕರ ಸಮಾವೇಶದಲ್ಲಿ ಕೇಳಿಬಂದ ಸಲಹೆಗಳಿವು.

ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಕಚೇರಿಗಳಲ್ಲಿ ಹೈಬ್ರಿಡ್ ಮಾದರಿಯ ಕೆಲಸದ ವ್ಯವಸ್ಥೆಯನ್ನು ಅನುಸರಿಸಬೇಕು. ಸುಲಭವಾಗಿ ಮನೆ ತಲುಪುವ ನಿಟ್ಟಿನಲ್ಲಿ ಬಸ್‌ಗಳ ಸೌಲಭ್ಯ-ಗಳನ್ನು ಕಲ್ಪಿಸುವ ವ್ಯವಸ್ಥೆಯಾಗಬೇ-ಕು. ‘ಶಕ್ತಿ’ ಯೋಜನೆ ಮಹಿಳೆಯರಿಗೆ ಉಪಯೋಗವಾಗಿದೆ. ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು. ಪ್ರತ್ಯೇಕ ಬಸ್ ಮಾರ್ಗಗಳು ಮತ್ತು ನಗರದ ಹೊರವಲಯಕ್ಕೆ ಹೆಚ್ಚಿನ ಬಸ್‌ಗಳನ್ನು ಪರಿಚಯಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಲಾಯಿತು.

ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಶನ್, ಸ್ಲಂ ನಿವಾಸಿಗಳ ಒಕ್ಕೂಟ, ಪವರ್ ದಿ ಪೆಡಲ್ ಗಾರ್ಮೆಂಟ್ ಫ್ಯಾಕ್ಟರಿ ಕಾರ್ಮಿಕರ ಸಮುದಾಯ, ಸಂಗಮ, ಕೌನ್ಸಿಲ್ ಫಾರ್ ಆಕ್ಟಿವ್ ಮೊಬಿಲಿಟಿ ಮತ್ತು ಸಿಟಿಜನ್ಸ್ ಫಾರ್ ಸ್ಯಾಂಕಿ ಸೇರಿದಂತೆ ಸಿವಿಲ್ ಸೊಸೈಟಿ ಗುಂಪುಗಳು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ‘ಗ್ರೀನ್‌ಪೀಸ್ ಇಂಡಿಯಾ’ ಜನರ ಪ್ರಣಾಳಿಕೆ ಮಾಡಿತು. ಈ ಪ್ರಣಾಳಿಕೆಯ ಸಲಹೆ ಮತ್ತು ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು ಎಂದು ಒತ್ತಾಯಿಸಲಾಯಿತು.

ಭಾರತೀಯ ವಿಜ್ಞಾನ ಸಂಸ್ಥೆಯ ‘ಸುಸ್ಥಿರ ಸಾರಿಗೆ ಪ್ರಯೋಗಾಲಯ’ದ ಪ್ರೊಫೆಸರ್ ಆಶಿಶ್ ವರ್ಮಾ, ಗ್ರೀನ್‌ಪೀಸ್ ಪ್ರಚಾರಕಿ ಅಮೃತಾ ನಾಯರ್, ಗಾರ್ಮೆಂಟ್ಸ್ ಕಾರ್ಖಾನೆಯ ಉದ್ಯೋಗಿ ಯಮುನಾ ಗಣೇಶ್, ಸ್ಲಂ ಡ್ವೆಲರ್ಸ್ ಅಸೋಸಿಯೇಶನ್‌ನ ಜಾನ್, ನಾಗರಿಕ ಹಕ್ಕುಗಳ ಹೋರಾಟಗಾರ ಶ್ರೀನಿವಾಸ ಅಲವಿಲ್ಲಿ ಮಾತನಾಡಿದರು.

ನಗರದಲ್ಲಿ ಗ್ರೀನ್‌ಪೀಸ್ ಇಂಡಿಯಾ ಆಯೋಜಿಸಿದ್ದ ‘ಲೆಟ್ಸ್ ಮೂವ್ ಬೆಂಗಳೂರು’ ಸಮಾವೇಶದಲ್ಲಿ ಭಾಗವಹಿಸಿದ್ದ ನಾಗರಿಕರು

ಬಕ್ರೀದ್: ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ವ್ಯಾಪಾರ ಜೋರು

ನಾಟಿ ಕುರಿಗಳಿಗೆ ಹೆಚ್ಚಿದ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಕ್ರೀದ್ ಹಬ್ಬ ಸಮೀಪಿಸುತ್ತಿದ್ದಂತೆಯೇ ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಟಗರು, ಕುರಿ ಹಾಗೂ ಮೇಕೆಗಳ ಮಾರಾಟ ಬಿರುಸುಗೊಂಡಿದೆ. ಈ ಬಾರಿ ನಾಟಿ ಮತ್ತು ಬಾಗಲಕೋಟೆ ಜಿಲ್ಲೆಯ ಅಮೀನಗಡ ತಳಿಯ ಕುರಿಗಳಿಗೆ ಬೇಡಿಕೆ ಹೆಚ್ಚಿದೆ.

ಹಬ್ಬಕ್ಕೆ ಇನ್ನೂ ಮೂರು ದಿನ ಬಾಕಿ ಇರುವಂತೆ ವ್ಯಾಪಾರ ಜೋರಾಗಿದೆ. ನಾನಾ ಜಿಲ್ಲೆಗಳಿಂದ ವಿವಿಧ ತಳಿಗಳ ಕುರಿ ಹಾಗೂ ಮೇಕೆಗಳ ದಂಡುಗಳೊಂದಿಗೆ ವ್ಯಾಪಾರಿಗಳು ಬೀಡುಬಿಟ್ಟಿದ್ದಾರೆ. ಜೂ. 29ಕ್ಕೆ ಹಬ್ಬವಿದ್ದು, ಗ್ರಾಹಕರು ಈಗಲೇ ಕುರಿ ಖರೀದಿಗೆ ಮುಗಿ ಬೀಳುತ್ತಿದ್ದಾರೆ.

‘ಬಂಡೂರು, ಕಿರಿಗಾವು, ಮೌಳಿ, ಶಿರೋಹಿ, ತಮಿಳುನಾಡು ಕುರಿ, ಬಾಗಲಕೋಟೆ, ಅಮೀನಗಡ, ಗೆಣಸಿ, ಶಿರಾ, ತುಮಕೂರು, ಚಿತ್ರದುರ್ಗ ಮರಿ ಸೇರಿದಂತೆ ವಿವಿಧ ತಳಿಗಳು ಇಲ್ಲಿವೆ. ಬಂಡೂರು ಕುರಿಗಳು ಕನಿಷ್ಠ ₹ 15ಸಾವಿರದಿಂದ ಗರಿಷ್ಠ ₹ 90ಸಾವಿರದವರೆಗೆ ಮಾರಾಟವಾದರೆ, ಅಮೀನಗಡ ತಳಿಯ ಟಗರಿಗೆ ಕನಿಷ್ಠ ₹ 20 ಸಾವಿರದಿಂದ ಗರಿಷ್ಠ ₹ 1.20ಲಕ್ಷದವರೆಗೂ ಬಿಕರಿಯಾ-ಗುತ್ತಿವೆ’ ಎಂದು ವ್ಯಾಪಾರಿ ಚಿಕ್ಕಣ್ಣ ತಿಳಿಸಿದರು.

‘ಬಾಗಲಕೋಟೆ ಜಿಲ್ಲೆಯ ಅಮೀನಗಡದಿಂದ 60 ಟಗರು ತಂದಿದ್ದೇನೆ. 20 ಟಗರು ಮಾರಾಟವಾಗಿವೆ. ಈ ವರ್ಷ ವ್ಯಾಪಾರ ಕುಸಿದಿದೆ. ಕುರಿ, ಟಗರಿನ ಬೆಲೆಗೆ ಹೋಲಿಸಿದರೆ ಹಸು, ಎತ್ತುಗಳ ಬೆಲೆ ಕಡಿಮೆ. ಗ್ರಾಹಕರು ಅವುಗಳ ಖರೀದಿಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಹಬ್ಬಕ್ಕೆ ಇನ್ನೂ ಮೂರು ದಿನಗಳಿವೆ. ಎಲ್ಲ ಟಗರು ಮಾರಾಟವಾಗುವ ನಿರೀಕ್ಷೆ ಇದೆ’ ಎಂದು ವ್ಯಾಪಾರಿ ಮಲೀಕ್ ವಿಶ್ವಾಸ ವ್ಯಕ್ತಪಡಿಸಿದರು.

ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಕುರಿ ಹಾಗೂ ಮೇಕೆಗಳ ದಂಡು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಮಂಗಳವಾರದವರೆಗೆ ಅವಕಾಶ ನೀಡಿ: ವ್ಯಾಪಾರಿಗಳ ಒತ್ತಾಯ

‘ಈದ್ಗಾ ಮೈದಾನದಲ್ಲಿ ಮಂಗಳವಾರ ಬೆಳಗಿನ ಜಾವದವರೆಗೆ ಕುರಿ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಬೇಕು’ ಎಂದು ವ್ಯಾಪಾರಿಗಳ ಒತ್ತಾಯಿಸಿದ್ದಾರೆ.

‘ಬಕ್ರೀದ್ ಹಬ್ಬದ ದಿನ ಸಾಮೂಹಿಕ ಪ್ರಾರ್ಥನೆಗೆ ಈದ್ಗಾ ಮೈದಾನ ಸ್ವಚ್ಛಗೊಳಿಸಲು ಭಾನುವಾರವೇ ಮೈದಾನ ಖಾಲಿ ಮಾಡಬೇಕು ಎಂದು ಹೇಳಲಾಗುತ್ತಿದೆ. ಆದರೆ, ಹಬ್ಬ ಇನ್ನೂ ಮೂರು ದಿನ ಬಾಕಿ ಇರುವಂತೆ ಖಾಲಿ ಮಾಡಿಸಿದರೆ 40–60 ಕುರಿಗಳನ್ನು ತೆಗೆದುಕೊಂಡು ಎಲ್ಲಿಗೆ ಹೋಗಬೇಕು ಎನ್ನುವುದೇ ಅರ್ಥವಾಗುತ್ತಿಲ್ಲ’ ಅವಲತ್ತು ತೋಡಿಕೊಂಡರು.

‘ರಂಜಾನ್, ಬಕ್ರೀದ್ ಸಂದರ್ಭದಲ್ಲಿ ಮಾತ್ರ ಕುರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಗಾತ್ರ, ತೂಕದ ಆಧಾರದಲ್ಲಿ ಕುರಿಗಳನ್ನು ಖರೀದಿ ನಡೆಯುತ್ತದೆ

ಮಲೀಕ್
ವ್ಯಾಪಾರಿ

‘ನಾಟಿ ಕುರಿಗೆ ಭಾರಿ ಬೇಡಿಕೆ’

‘ಅಮೀನಗಡದ ಟಗರುಗಳ ಜತೆಗೆ ನಾಟಿ ಟಗರುಗಳಿಗೆ ಭಾರಿ ಬೇಡಿಕೆ ಇದೆ. ಹೀಗಾಗಿ ಸಂತೆಯಲ್ಲಿ ಎಲ್ಲಿ ನೋಡಿದರೂ ನಾಟಿ ಟಗರು, ಕುರಿ, ಮೇಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿವೆ. ಬಂಡೂರು ಕುರಿಗಳು ಹೆಚ್ಚು ಮಾರಾ-ಟವಾಗುತ್ತಿವೆ’ ಎನ್ನುತ್ತಾರೆ ರಾಮನಗರದಿಂದ ಬಂದಿರುವ ವ್ಯಾಪಾರಿ ಸಿದ್ದು.

ಒಂದು ಲಕ್ಷಕ್ಕೆ ಮಾರಾಟವಾದ ಬೀಟಲ್ ತಳಿಯ ಮೇಕೆ

‘ಬೀಟಲ್’ ಮೇಕೆ ₹1 ಲಕ್ಷಕ್ಕೆ ಮಾರಾಟ

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: ಬಕ್ರೀದ್‌ಗೆ ಇನ್ನೂ ಮೂರು ದಿನ ಬಾಕಿ ಇರುವಂತೆಯೇ ಹಬ್ಬದ ಮಾಂಸದೂಟಕ್ಕಾಗಿ ಟಗರು, ಕುರಿ ಹಾಗೂ ಮೇಕೆಗಳ ಮಾರಾಟ ಜೋರಾಗಿ ನಡೆಯುತ್ತಿದೆ.

ಈ ಬಾರಿ ಶಿಡ್ಲಘಟ್ಟ ತಾಲ್ಲೂಕಿನ ಯಣ್ಣಂಗೂರಿನ ರೈತ ರೆಡ್ಡಪ್ಪ (ಬಂಗಾರಪ್ಪ) ಅವರ ‘ಬೀಟಲ್’ ತಳಿಯ ಮೇಕೆ ₹1.10 ಲಕ್ಷ ದಾಖಲೆಯ ದರಕ್ಕೆ ಮಾರಾಟವಾಗಿದೆ.

ದೊಡ್ಡ ದೇಹ, ಉದ್ದ ಕಿವಿ, ಸಣ್ಣ ಮುಖ ಹೊಂದಿರುವ ಮಾಂಸದ ತಳಿ ಎಂದೇ ಪರಿಗಣಿಸಲಾದ ‘ಬೀಟಲ್’ ಪಂಜಾಬ್ ಮೂಲದ ತಳಿ. ಜಮ್ನಾಪರಿ, ಮಲಬಾರಿ ಮೇಕೆ ಹೋಲುವ ಇದನ್ನು ‘ಲಾಹೋರಿ ಮೇಕೆ’ ಎಂದೂ ಕರೆಯುತ್ತಾರೆ. ಪಂಜಾಬ್, ಸಿಯಾಲ್‌ಕೋಟ್, ಗುರುದಾಸಪುರ, ಪಾಕಿಸ್ತಾನದ ರಾವಲ್ಪಿಂಡಿ, ಲಾಹೋರ್ ಮತ್ತು ಬಾಂಗ್ಲಾದೇಶದ ಕೆಲವು ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಮೇಕೆಗಳನ್ನು ಹಾಲು ಮತ್ತು ಮಾಂಸಕ್ಕಾಗಿ ಸಾಕಣೆ ಮಾಡುತ್ತಾರೆ. ಈ ಆಡುಗಳ ಚರ್ಮ ಉತ್ತಮ ಗುಣಮಟ್ಟ-ದ್ದಾಗಿದ್ದು, ಸ್ಟಾಲ್ ಫೀಡಿಂಗ್ (ಕೊಟ್ಟಿಗೆ)ಗೆ ಸಹ ಹೊಂದಿಕೊಳ್ಳುತ್ತವೆ. ಎಲ್ಲ ರೀತಿಯ ಪರಿಸರ ಮತ್ತು ಹವಾಮಾನಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತವೆ.

‘ಕಳೆದ ವರ್ಷ ಬೀಟಲ್ ತಳಿಯ ಮೇಕೆ ತಂದು ಸಾಕ ತೊಡಗಿದೆ. ವರ್ಷಕ್ಕೆ 2 ಮರಿ ಹಾಕುವ ಮೇಕೆ ಪ್ರತಿದಿನ ಸುಮಾರು ಎರಡೂವರೆಯಿಂದ ನಾಲ್ಕು ಲೀಟರ್ ಹಾಲು ಕೊಡುತ್ತದೆ. ಅವುಗಳಿಗಾಗಿ ನಮ್ಮ ತೋಟದಲ್ಲಿ ಅಗಸೆ ಸೊಪ್ಪು ಬೆಳೆಯುತ್ತೇನೆ. ಇದರ ಜೊತೆಗೆ ಆಹಾರವಾಗಿ ಬೇವು, ಜೋಳದಕಡ್ಡಿ, ಸೀಮೆಹುಲ್ಲು, ರಾಗಿಹುಲ್ಲು, ಇಂಡಿ ಮತ್ತು ಬೂಸ ಕೊಡುತ್ತೇನೆ’ ಎಂದು ಮೇಕೆಯ ಮಾಲೀಕ ರೆಡ್ಡಪ್ಪ ತಿಳಿಸಿದರು.

ಕೆಲವು ವರ್ಷಗಳಿಂದ ಬಕ್ರೀದ್ ಹಬ್ಬಕ್ಕೆಂದು ಕುರಿ ಮೇಕೆ ಖರೀದಿಗೆ ಗ್ರಾಹಕರು ಬರುತ್ತಿದ್ದಾರೆ. ಅವರಿಗೆ ತಕ್ಕಂತೆ ವಿವಿಧ ಮಾಂಸದ ತಳಿಗಳನ್ನು ಸಾಕಣೆ ಮಾಡಲಾಗುತ್ತಿದೆ

ರೆಡ್ಡಪ್ಪ, ರೈತ

11 ಪಂಚಾಯಿತಿಗೆ ಅಧ್ಯಕ್ಷ, ಉಪಾಧ್ಯಕ್ಷ ಮೀಸಲಾತಿ ಪ್ರಕಟ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕು 11 ಗ್ರಾಮ ಪಂಚಾಯಿತಿಗಳ ಎರಡನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕಟವಾಗಿದೆ.

ಹಾಲನಾಯಕನಹಳ್ಳಿ ಗ್ರಾ.ಪಂ: ಅಧ್ಯಕ್ಷ – ಸಾಮಾನ್ಯ ಮಹಿಳೆ, ಉಪಾಧ್ಯಕ್ಷ – ಪರಿಶಿಷ್ಟ ಜಾತಿ. ಕೊಡತಿ ಗ್ರಾ.ಪಂ: ಅಧ್ಯಕ್ಷ– ಪರಿಶಿಷ್ಟ ಜಾತಿ ಮಹಿಳೆ, ಉಪಾಧ್ಯಕ್ಷ – ಸಾಮಾನ್ಯ.

ಕಣ್ಣೂರು ಗ್ರಾ.ಪಂ: ಅಧ್ಯಕ್ಷ – ಸಾಮಾನ್ಯ, ಉಪಾಧ್ಯಕ್ಷ – ಪರಿಶಿಷ್ಟ ಜಾತಿ ಮಹಿಳೆ. ದೊಡ್ಡಗುಬ್ಬಿ ಗ್ರಾ.ಪಂ: ಅಧ್ಯಕ್ಷ – ಪರಿಶಿಷ್ಟ ಜಾತಿ, ಉಪಾಧ್ಯಕ್ಷ – ಸಾಮಾನ್ಯ ಮಹಿಳೆ.

ಬಿದರಹಳ್ಳಿ: ಅಧ್ಯಕ್ಷ – ಸಾಮಾನ್ಯ ಮಹಿಳೆ, ಉಪಾಧ್ಯಕ್ಷ – ಸಾಮಾನ್ಯ ಮಹಿಳೆ. ಮಂಡೂರು: ಅಧ್ಯಕ್ಷ – ಪರಿಶಿಷ್ಟ ಜಾತಿ, ಉಪಾಧ್ಯಕ್ಷ– ಸಾಮಾನ್ಯ ಮಹಿಳೆ.

ಆವಲಹಳ್ಳಿ: ಅಧ್ಯಕ್ಷ – ಸಾಮಾನ್ಯ ಮಹಿಳೆ, ಉಪಾಧ್ಯಕ್ಷ – ಪರಿಶಿಷ್ಟ ಜಾತಿ.

ದೊಡ್ಡಬನಹಳ್ಳಿ: ಅಧ್ಯಕ್ಷ – ಸಾಮಾನ್ಯ, ಉಪಾಧ್ಯಕ್ಷ– ಪರಿಶಿಷ್ಟ ಜಾತಿ ಮಹಿಳೆ.

ಶೀಗೆಹಳ್ಳಿ ಗ್ರಾ.ಪಂ: ಅಧ್ಯಕ್ಷ – ಪರಿಶಿಷ್ಟ ಜಾತಿ ಮಹಿಳೆ, ಉಪಾಧ್ಯಕ್ಷ – ಸಾಮಾನ್ಯ.

ಕನ್ನಮಂಗಲ: ಅಧ್ಯಕ್ಷ – ಸಾಮಾನ್ಯ, ಉಪಾಧ್ಯಕ್ಷ – ಪ್ರವರ್ಗ ಎ ಮಹಿಳೆ. ಕಿತ್ತಗನೂರು: ಅಧ್ಯಕ್ಷ – ಪ್ರವರ್ಗ ಎ ಮಹಿಳೆ, ಉಪಾಧ್ಯಕ್ಷ – ಸಾಮಾನ್ಯ.

ಹೊಸ ಶಾಸಕರಿಗೆ ಇಂದಿನಿಂದ ತರಬೇತಿ

ಸಿದ್ದರಾಮಯ್ಯ, ಡಿಕೆಶಿ, ಬಿಎಸ್‌ವೈ ಸಂವಾದ; ವೀರೇಂದ್ರ ಹೆಗ್ಗಡೆ, ಮಹಮ್ಮದ್ ಕುಂಞಿ ಉಪನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 16ನೇ ವಿಧಾನಸಭೆಗೆ ನೂತನವಾಗಿ ಆಯ್ಕೆಯಾಗಿರುವ ಶಾಸಕರಿಗೆ ಸಂಸದೀಯ ಕಲಾಪದ ಕುರಿತು ಅರಿವು ಮೂಡಿಸಲು ನೆಲಮಂಗಲದಲ್ಲಿರುವ 'ಕ್ಷೇಮವನ'ದಲ್ಲಿ (ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಆ್ಯಂಡ್ ಯೋಗಿಕ್ ಸೈನ್ಸಸ್) ಸೋಮವಾರದಿಂದ (ಜೂನ್ 26) ಮೂರು ದಿನ ತರಬೇತಿ ಶಿಬಿರ ನಡೆಯಲಿದೆ.

ಶಿಬಿರವನ್ನು 26ರಂದು ಬೆಳಿಗ್ಗೆ 12 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸ್ಪೀಕರ್ ಯು.ಟಿ.

'ಶಿಬಿರಕ್ಕೆ ಟೀಕೆ, ಟಿಪ್ಪಣಿ ವ್ಯಕ್ತವಾಗುತ್ತಿವೆ. ಟೀಕೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಸೌಂದರ್ಯ ಇದ್ದಂತೆ. ಟೀಕೆಗಳು ಬಂದಾಗಲೇ ನಾವು ಮತ್ತಷ್ಟು ಉತ್ತಮಗೊಳ್ಳುವುದು'

ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ಖಾದರ್ ಅಧ್ಯಕ್ಷತೆ ವಹಿಸುವರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಇಂಧನ ಸಚಿವ ಕೆ.ಜೆ.ಜಾರ್ಜ್, ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಉಪಸ್ಥಿತರಿರಲಿದ್ದಾರೆ.

ಮೂರೂ ದಿನ ಬೆಳಿಗ್ಗೆ 6ರಿಂದ 9ರವರೆಗೆ ಆರೋಗ್ಯಕ್ಕೆ ಸಂಬಂಧಿಸಿದ ಚಟುವಟಿಕೆ ನಡೆಯಲಿದೆ. 10ರಿಂದ ಸಂಜೆಯವರೆಗೆ ಹಿರಿಯ ಸದಸ್ಯರು ವಿವಿಧ ವಿಷಯಗಳ ಕುರಿತು ಮಾಹಿತಿ ನೀಡಲಿದ್ದಾರೆ. ಕಲಾಪದಲ್ಲಿ ಭಾಗವಹಿಸುವಿಕೆ, ನಿಲುವಳಿ ಸೂಚನೆ, ನಿಯಮ-69, ವಿಶ್ವಾಸ ಮತ್ತು ಅವಿಶ್ವಾಸ ನಿರ್ಣಯ ಕುರಿತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾರ್ಗದರ್ಶನ ನೀಡಲಿದ್ದಾರೆ.

ಮಾಜಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಶಾಸನ ರಚನೆ ಹಾಗೂ ಅದರಲ್ಲಿ ಸದಸ್ಯರುಗಳ ಭಾಗವಹಿಸುವಿಕೆ ಮತ್ತು ಉಭಯ ಸದನಗಳ ಸಂಬಂಧ ಕುರಿತು ಮಾತನಾಡಲಿದ್ದಾರೆ. ಟಿ.ಬಿ.ಜಯಚಂದ್ರ ಅವರು ಶಾಸಕರ ಕರ್ತವ್ಯಗಳು, ಜವಾಬ್ದಾರಿ ಮತ್ತು ಹಕ್ಕುಬಾಧ್ಯತೆಗಳ ಕುರಿತು ಮಾರ್ಗದರ್ಶನ ನೀಡಲಿದ್ದಾರೆ. ಪರಿಷತ್ ಸದಸ್ಯ ಅಡಗೂರು ಎಚ್‌. ವಿಶ್ವನಾಥ್ ಅವರು ಸದಸ್ಯರು ಅಳವಡಿಸಿಕೊಳ್ಳಬೇಕಾದ ನೀತಿ ನಿಯಮಗಳು, ಪಾಲಿಸಬೇಕಾದ ನಿಯಮಗಳು ಸಂಸದೀಯ ಭಾಷೆಯ ಬಳಕೆ ಮತ್ತು ಜನ ಮೆಚ್ಚಿದ ಶಾಸಕನಾಗುವುದು ಹೇಗೆ ಎಂದು ತಿಳಿಸಿಕೊಡಲಿದ್ದಾರೆ. ಶಾಸನ ಸಭೆಯಲ್ಲಿ ಕರ್ತವ್ಯದ ಹಾಸ್ಯ ಭರಿತ ನಿರ್ವಹಣೆ ಕುರಿತು 'ಮುಖ್ಯಮಂತ್ರಿ' ಚಂದ್ರು ತಿಳಿಸಿಕೊಡಲಿದ್ದಾರೆ. ಬಿ.ಎಸ್.ಯಡಿಯೂರಪ್ಪ, ಎಚ್‌.ಡಿ.ಕುಮಾರಸ್ವಾಮಿ ಸಂವಾದ ನಡೆಸಲಿದ್ದಾರೆ.

ಮೊದಲ ದಿನ ಸಂಜೆ ಬ್ರಹ್ಮಕುಮಾರೀಸ್ ಸಂಸ್ಥೆಯ ಬಿ.ಕೆ. ವೀಣಾ ಮತ್ತು ಬಿ.ಕೆ.ಭುವನೇಶ್ವರಿ 'ಹಿತವಚನ' ನೀಡಲಿದ್ದಾರೆ. 'ಸಾಮರಸ್ಯ ಸಮಾಜ' ವಿಷಯದ ಕುರಿತು 27ರಂದು ಸಂಜೆ ಡಿ.ವೀರೇಂದ್ರ ಹೆಗ್ಗಡೆ, ಕೊನೆಯ ದಿನ ಬೆಳಿಗ್ಗೆ 'ಜನಪ್ರತಿನಿಧಿ ಮತ್ತು ಜನರ ಮಧ್ಯೆ ಸಂಬಂಧ, ಬಾಂಧವ್ಯವನ್ನು ವೃದ್ಧಿಗೊಳಿಸುವುದು' ವಿಷಯದ ಕುರಿತು ಜಮಾತೆ ಇಸ್ಲಾಮಿ ಹಿಂದ್‌ನ ಮಹಮ್ಮದ್ ಕುಂಞಿ ಮಾತನಾಡಲಿದ್ದಾರೆ.

'ಕಾಂಗ್ರೆಸ್ ನೇತೃತ್ವದ ಸರ್ಕಾರ ಕಿತ್ತೊಗೆಯಲು ಬೀದಿಗಿಳಿಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ ಹೆಸರಿನಲ್ಲಿ ಸುಳ್ಳುಭರವಸೆ ನೀಡಿ ಜನರನ್ನು ವಂಚಿಸಿರುವ ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯಲು ಕಾರ್ಯಕರ್ತರು ಬೀದಿಗಿಳಿದು ಹೋರಾಡಬೇಕು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಕರೆ ನೀಡಿದರು.

ಯಡಿಯೂರಪ್ಪ

ಮಹಾಲಕ್ಷ್ಮಿ ಬಡಾವಣೆಯಲ್ಲಿ ಭಾನುವಾರ ನಡೆದ ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ತುರ್ತು ಪರಿಸ್ಥಿತಿಯ ಕಾಲದಲ್ಲೇ ಪಕ್ಷದ ಕಾರ್ಯಕರ್ತರು ಧೈರ್ಯಗೆಡದೆ ಹೋರಾಡಿದ್ದರು. ಈಗಿನ ಸೋಲು ಲೆಕ್ಕವೇ ಅಲ್ಲ' ಎಂದರು.

'ಬಿಜೆಪಿ ಕಾರ್ಯಕರ್ತರು ಹೆದರುವ ಅಗತ್ಯವಿಲ್ಲ. ಪಕ್ಷದ 66 ಶಾಸಕರಿದ್ದಾರೆ. ಇದು ಸಣ್ಣ ಸಂಖ್ಯೆಯಲ್ಲ. ಶಾಸಕರು ಮತ್ತು ಕಾರ್ಯಕರ್ತರು ಮನಸ್ಸು ಮಾಡಿದರೆ ವಿಧಾನಸೌಧವನ್ನೇ ನಡುಗಿಸಬಹುದು. ಅದಕ್ಕೆ ಸನ್ನದ್ಧರಾಗಿ ಕೆಲಸ ಮಾಡಿ' ಎಂದು ಯಡಿಯೂರಪ್ಪ ಹೇಳಿದರು.

'ಕಾಂಗ್ರೆಸ್ ಸರ್ಕಾರದ ಎದುರು ಹೆಚ್ಚೇನೂ ಬೇಡಿಕೆ ಇಡಬೇಕಿಲ್ಲ. ಕೊಟ್ಟ ಮಾತಿನಂತೆ ಗ್ಯಾರಂಟಿ ಈಡೇರಿಸುವಂತೆ ಪಟ್ಟು ಹಿಡಿಯಬೇಕು. ಈ ಸರ್ಕಾರ ಮಹಿಳೆಯರು, ರೈತರು ಸೇರಿದಂತೆ ಸಾಮಾನ್ಯ ಜನರನ್ನು ಅವಮಾನಿಸುತ್ತಿದೆ. ಅದರ ವಿರುದ್ಧ ಹೋರಾಡಬೇಕು' ಎಂದರು. 'ಬಿಬಿಎಂಪಿ ಚುನಾವಣೆ ಎದುರಿಸಲು ನಾವು ಸಿದ್ಧರಾಗಬೇಕು. ಪ್ರತಿಯೊಬ್ಬ ಕಾರ್ಯಕರ್ತನೂ ಯಡಿಯೂರಪ್ಪ ಆಗಿ ಕೆಲಸ ಮಾಡಬೇಕು. ಬೆಂಗಳೂರಿನಲ್ಲಿ ಅಧಿಕಾರ ಕಿತ್ತುಕೊಳ್ಳಲು ಯಾರಿಗೂ ಅವಕಾಶ ನೀಡಬಾರದು' ಎಂದರು.

ಶಾಸಕರಾದ ಎಸ್‌.ಟಿ. ಸೋಮಶೇಖರ್, ಕೆ. ಗೋಪಾಲಯ್ಯ, ಮಾಜಿ ಸಚಿವ ಗೋವಿಂದ ಕಾರಜೋಳ, ವಿಧಾನ ಪರಿಷತ್ ಸದಸ್ಯ ಎನ್‌. ರವಿಕುಮಾರ್ ಉಪಸ್ಥಿತರಿದ್ದರು.

ಗದ್ದಲದ ಗೂಡಾದ ಸಭೆ

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬರಾದ ಮುನೇಂದ್ರ ಕುಮಾರ್ ಅವರಿಗೆ ವೇದಿಕೆಯಲ್ಲಿ ಆಸನ ಕಲ್ಪಿಸಿದ್ದಕ್ಕೆ ಪರಾಜಿತ ಅಭ್ಯರ್ಥಿ ತಮ್ಮೇಶ್ ಗೌಡ ಆಕ್ಷೇಪಿಸಿದರು.

'ಮುನೇಂದ್ರ ಕುಮಾರ್ ಕಾಂಗ್ರೆಸ್ ಪರ ಕೆಲಸ ಮಾಡಿದ್ದು, ಅವರನ್ನು ವೇದಿಕೆ ಮೇಲೆ ಕೂರಿಸಲಾಗಿದೆ. ನಾನು ಸಭೆಗೆ ಬರುವುದಿಲ್ಲ' ಎಂದು ತಮ್ಮೇಶ್ ಗೌಡ ಅವರು ಯಡಿಯೂರಪ್ಪ ಕಾಲಿಗೆರಗಿ ಅಸಮಾಧಾನ ಹೊರಹಾಕಿದರು.

'ಪಕ್ಷಕ್ಕೆ ಚೂರಿ ಹಾಕುವವರನ್ನು ಹೊರ ಹಾಕಬೇಕು' ಎಂದು ದಾಸರಹಳ್ಳಿ ಶಾಸಕ ಎಸ್‌. ಮುನಿರಾಜು ಹೇಳಿದ್ದನ್ನು ಕಾರ್ಯಕರ್ತರು ತೀವ್ರವಾಗಿ ವಿರೋಧಿಸಿದರು. 'ನೀವು ಮಾಡಿದರೆ ನಡೆಯುತ್ತಾ' ಎಂದು ಕೆಲವರು ಪ್ರಶ್ನಿಸಿದರು. ಗದ್ದಲ ಜೋರಾಗುತ್ತಿದ್ದಂತೆ ಮಧ್ಯೆ ಪ್ರವೇಶಿಸಿದ ಯಡಿಯೂರಪ್ಪ ಪರಿಸ್ಥಿತಿ ನಿಯಂತ್ರಿಸಿದರು.

ಸಂಕ್ಷಿಪ್ತ ಸುದ್ದಿ

ಕಸಾಪ: ಕನ್ನಡ ಹೆಸರು, ಅಂಕಿ, ಸಹಿ ಅಭಿಯಾನ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ವತಿಯಿಂದ ಕನ್ನಡ ಹೆಸರು, ಅಂಕಿ ಮತ್ತು ಸಹಿ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ' ಎಂದು ಪರಿಷತ್ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಕನ್ನಡವನ್ನು ಎಲ್ಲಾ ಸ್ತರಗಳಲ್ಲಿಯೂ ನೆಲೆಗೊಳಿಸಲು ಈ ಅಭಿಯಾನ ಸಹಕಾರಿಯಾಗಲಿದೆ. ಹಿರಿಯರ, ಸಾಧಕರ, ಕನ್ನಡ ನಾಡಿಗೆ ಕೊಡುಗೆ ನೀಡಿದವರ ಹೆಸರುಗಳನ್ನು ರಸ್ತೆಗಳಿಗೆ, ಬಡಾವಣೆಗೆ ಇಡುವ ಪದ್ಧತಿ ಮೊದಲಿಂದಲೂ ಇದೆ. ಆದರೆ, ಕ್ರಮೇಣ ಆಂಗ್ಲ ಭಾಷೆಯಲ್ಲಿ ಹ್ರಸ್ವಗೊಳ್ಳುವ ಈ ಹೆಸರುಗಳು, ಮೂಲ ಅರ್ಥದ ಸಾಧ್ಯತೆಯಿಂದ ದೂರವಾಗುತ್ತಿರುವ ಪ್ರಸಂಗಗಳು ಹೆಚ್ಚಾಗುತ್ತಿವೆ. ಮಹಾತ್ಮಾ ಗಾಂಧಿ ರಸ್ತೆ ಈಗ ಎಂ.ಜಿ.ರಸ್ತೆಯಾಗಿದೆ. ಕೃಷ್ಣರಾಜ ಒಡೆಯರ ಹೆಸರಿನ ರಸ್ತೆ ಕೆ.ಆರ್. ರಸ್ತೆ, ನರಸಿಂಹರಾಜ ಒಡೆಯರ್ ಅವರ ಹೆಸರಿನ ಬಡಾವಣೆ ಎನ್‌.ಆರ್. ಕಾಲೊನಿಯಾಗಿ ಬಳಕೆಯಲ್ಲಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಕನ್ನಡ ಬರಹಗಾರರಲ್ಲಿ ಡಿ.ವಿ. ಗುಂಡಪ್ಪ ಅವರ ಹೆಸರನ್ನು ಡಿ.ವಿ.ಜಿ ಎಂದು ಬರೆಯುವ ಪದ್ಧತಿ ಜನಜನಿತವಾಗಿದ್ದು, ಅವರ ಮೂಲ ಹೆಸರೇ ಮರೆಯಾಗುವ ಅಪಾಯವಿದೆ. ಇದೇ ರೀತಿ ಕೆಲ ಸಾಹಿತಿಗಳ ಹೆಸರನ್ನು ಬಳಕೆ ಮಾಡಲಾಗುತ್ತಿದೆ. ಸೌತ್ ಎಂಡ್ ಸರ್ಕಲ್‌ಗೆ ತೀ.ನಂ.ಶ್ರೀ ವೃತ್ತ ಎಂದು ಬಿಬಿಎಂಪಿ ಅಧಿಕೃತವಾಗಿ ನಾಮಕರಣ ಮಾಡಿದ್ದರೂ ಅದು ಜನಜನಿತವಾಗಿಲ್ಲ. ಟ್ಯಾಂಕ್ ಬಂಡ್ ರಸ್ತೆಗೆ ಆರ್.ನಾಗೇಂದ್ರ ರಾಯರ ಹೆಸರನ್ನು ಇಟ್ಟಿದ್ದರೂ ಅದು ಬಳಕೆಗೆ ಬಂದಿಲ್ಲ. ಇಂತಹ ಹಲವು ದೋಷಗಳನ್ನು ಪಟ್ಟಿ ಮಾಡಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುವುದು' ಎಂದು ಹೇಳಿದರು.

'ಅಪಪ್ರಚಾರ ಮಾಡುವವರ ವಿರುದ್ಧ ಕ್ರಮ'

ಬೆಂಗಳೂರು: ಖಾತೆದಾರರ ಹಣ ದುರ್ಬಳಕೆ ಮಾಡಿಕೊಂಡಿರುವುದಾಗಿ ಅಪಪ್ರಚಾರ ಮಾಡಿ ಬ್ಯಾಂಕ್‌ನ ವರ್ಚಸ್ಸಿಗೆ ಕೆಲವರು ಧಕ್ಕೆ ತರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಚರಣ್ ಕೋ ಅಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿ ತಿಳಿಸಿದೆ.

'ಖಾತೆದಾರರ ಹಣ ದುರ್ಬಳಕೆಯಾಗಿದೆ ಎಂದು ಸಂಬಂಧಪಟ್ಟವರು ಕೋರ್ಟ್‌ಗೆ ಹೋಗಿದ್ದರು. ಅದರಲ್ಲಿ ಚೆಕ್‌ಬೌನ್ಸ್ ಮತ್ತು ಜಿಎಸ್‌ಟಿ ಕಡಿತದ ಬಗ್ಗೆ ಮುಚ್ಚಿಟ್ಟಿದ್ದರು. ತನಿಖೆ ನಡೆಸುವಂತೆ ನ್ಯಾಯಾಲಯ ಸೂಚಿಸಿತ್ತು. ಬಸವನಗುಡಿ ಪೊಲೀಸರು ತನಿಖೆ ಮಾಡದೇ ಎಫ್‌ಐಆರ್ ದಾಖಲಿಸಿದ್ದರು. ಇದರ ವಿರುದ್ಧ ಬೆಂಗಳೂರಿನ ಹೆಚ್ಚುವರಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ತಡೆಯಾಜ್ಞೆ ತರಲಾಗಿದ್ದು, ಯಾವುದೇ ಆದೇಶ ಹೊರಡಿಸುವ ಮುನ್ನ ಬ್ಯಾಂಕ್ ಗಮನಕ್ಕೆ ತರಬೇಕು ಎಂದು ಕೋರಲಾಗಿದೆ' ಎಂದು ತಿಳಿಸಿದೆ.

'ತಜ್ಞರ ಅಭಿಪ್ರಾಯ ಪಡೆದು ಕಾನೂನು ರೂಪಿಸಿ'

ಬೆಂಗಳೂರು: 'ವೈದ್ಯಕೀಯ ಕಾನೂನುಗಳನ್ನು ರೂಪಿಸುವಾಗ ಕ್ಷೇತ್ರದ ಪ್ರಮುಖರ ಅಭಿಪ್ರಾಯ ಪಡೆಯಬೇಕು. ಇಲ್ಲವಾದಲ್ಲಿ ಕಾನೂನುಗಳು ನಿರುಪಯುಕ್ತವಾಗುತ್ತವೆ' ಎಂದು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ. ರಮೇಶ್ ಹೇಳಿದರು.

ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು ಆಯೋಜಿಸಿದ್ದ ಅಂತರ ರಾಷ್ಟ್ರೀಯ ಶಸ್ತ್ರಚಿಕಿತ್ಸಕರ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಇತ್ತೀಚಿನ ದಿನಗಳಲ್ಲಿ ವೈದ್ಯರ ಮೇಲೆ ಹಲ್ಲೆಗಳು ಹೆಚ್ಚುತ್ತಿವೆ. ವೈದ್ಯರ ಮೇಲಿನ ಹಲ್ಲೆ ತಡೆಗೆ ಕಾನೂನು ಬಲಗೊಳಿಸಬೇಕು' ಎಂದು ಹೇಳಿದರು.

ಬೆಂಗಳೂರು ಸರ್ಜಿಕಲ್ ಸೊಸೈಟಿ ಅಧ್ಯಕ್ಷ ಡಾ.ವೆಂಕಟೇಶ್, 'ನಮ್ಮ ಸೊಸೈಟಿಯಡಿ 1,500ಕ್ಕೂ ಅಧಿಕ ಶಸ್ತ್ರಚಿಕಿತ್ಸಕರು ಹೆಸರು ನೋಂದಾಯಿಸಿಕೊಂಡಿದ್ದಾರೆ' ಎಂದು ಹೇಳಿದರು.

ಇದಕ್ಕೂ ಮೊದಲು ಶಸ್ತ್ರಚಿಕಿತ್ಸಕರಾದ ಪಿ.ಎಸ್.ಪಾರ್ಥಿಬನ್ ಹಾಗೂ ಎನ್.ನರಸಿಂಹನ್ ಅವರನ್ನು ಗೌರವಿಸಲಾಯಿತು.

ಹೈಕೋರ್ಟ್ ನ್ಯಾಯಮೂರ್ತಿ ದಿನೇಶ್ ಕುಮಾರ್ ಉಪಸ್ಥಿತರಿದ್ದರು.

ಕೋಟಿ ಸದಸ್ಯತ್ವಕ್ಕೆ ತಾಂತ್ರಿಕ ಸಮಸ್ಯೆ

ಸಮರ್ಪಕವಾಗಿ ಕಾರ್ಯನಿರ್ವಹಿಸದ ಕನ್ನಡ ಸಾಹಿತ್ಯ ಪರಿಷತ್ ಮೊಬೈಲ್ ಆ್ಯಪ್

• ವರುಣ ಹೆಗಡೆ

ಬೆಂಗಳೂರು: ಮೊಬೈಲ್ ಆ್ಯಪ್‌ನಲ್ಲಿ ತಾಂತ್ರಿಕ ತೊಂದರೆ, ಆನ್‌ಲೈನ್‌ನಲ್ಲಿ ಸದಸ್ಯತ್ವ ಶುಲ್ಕ ಪಾವತಿ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) 'ಕೋಟಿ ಸದಸ್ಯತ್ವ ಅಭಿಯಾನ'ಕ್ಕೆ ಹಿನ್ನಡೆಯಾಗಿದೆ. ಕಳೆದ ಒಂದೂವರೆ ವರ್ಷದಲ್ಲಿ ಒಂದು ಲಕ್ಷ ಸದಸ್ಯತ್ವದ ಗುರಿ ಸಾಕಾರವಾಗಿಲ್ಲ.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಐದು ವರ್ಷಗಳಲ್ಲಿ ಕೋಟಿ ಸದಸ್ಯತ್ವ ಅಭಿಯಾನ ಹಮ್ಮಿಕೊಂಡಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1915ರಲ್ಲಿ ಸ್ಥಾಪಿಸಿದ ಪರಿಷತ್ತು, 2021ರ ಅಂತ್ಯದ ವೇಳೆಗೆ 3.4 ಲಕ್ಷ ಆಜೀವ ಸದಸ್ಯರನ್ನು ಹೊಂದಿತ್ತು.

26ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮಹೇಶ ಜೋಶಿ ಅವರು ಕೋಟಿ ಸದಸ್ಯತ್ವ ಅಭಿಯಾನವನ್ನು ಹಮ್ಮಿಕೊಂಡು, ಮೊಬೈಲ್ ಆ್ಯಪ್, ಪರಿಷತ್ತಿನ ಪೋರ್ಟಲ್ ಮೂಲಕ ಸದಸ್ಯತ್ವ ಪಡೆಯುವ ವ್ಯವಸ್ಥೆ ರೂಪಿಸಿದ್ದರು. ಆದರೆ, ಈ ಆ್ಯಪ್ ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡದಿದ್ದುದರಿಂದ ಸದಸ್ಯತ್ವದ ಗುರಿ ಸವಾಲಾಗಿದೆ. ಆನ್‌ಲೈನ್ ಸದಸ್ಯತ್ವದ ಬಗ್ಗೆ ದೂರುಗಳು ಬಂದ ಕಾರಣ ಆಫ್‌ಲೈನ್‌ನಲ್ಲಿಯೂ ಸದಸ್ಯತ್ವವನ್ನು ಪುನಃ ಪ್ರಾರಂಭಿಸಲಾಗಿದೆ.

ಈ ಮೊದಲು ಪರಿಷತ್ತಿನ ಕಚೇರಿಯಲ್ಲಿ ಕೈಬರಹದ ಮೂಲಕ ಸದಸ್ಯತ್ವ ಅರ್ಜಿಗಳನ್ನು ಭರ್ತಿ ಮಾಡಿಸಲಾಗುತ್ತಿತ್ತು. ಇದರಿಂದಾಗಿ ಹೊರನಾಡು ಹಾಗೂ ಹೊರ ದೇಶದ ಕನ್ನಡಿಗರಿಗೆ ಸದಸ್ಯತ್ವ ಪಡೆಯುವುದು ಕಷ್ಟವಾಗಿತ್ತು. ಇಲ್ಲಿ ನೆಲೆಸಿರುವ ಕನ್ನಡಿಗರೂ ಕಚೇರಿಗೆ ತೆರಳಿ, ಸದಸ್ಯತ್ವ ಪಡೆಯಲು ನಿರಾಸಕ್ತಿ ತಾಳಿದ್ದರು. ಹೀಗಾಗಿ, ಮನೆಯಲ್ಲಿಯೇ ಕುಳಿತು ಸದಸ್ಯತ್ವ ಪಡೆಯಲು 'ಕಸಾಪ' ಹೆಸರಿನಲ್ಲಿ ಆ್ಯಪ್ ಅಭಿವೃದ್ಧಿಪಡಿಸಿ, 2022ರ ಆಗಸ್ಟ್ ತಿಂಗಳಲ್ಲಿ ಲೋಕಾರ್ಪಣೆ ಮಾಡಲಾಗಿತ್ತು. ಇದಕ್ಕೆ ನಿರೀಕ್ಷಿತ ಮಟ್ಟದ ಪ್ರತಿಕ್ರಿಯೆ ವ್ಯಕ್ತವಾಗದಿದ್ದರಿಂದ ಈವರೆಗೆ ಪರಿಷತ್ತಿನ ಆಜೀವ ಸದಸ್ಯತ್ವ ಪಡೆದವರ ಒಟ್ಟು ಸಂಖ್ಯೆ 5 ಲಕ್ಷವೂ ತಲುಪಿಲ್ಲ. ಕಸಾಪ ಮೂಲಗಳ ಪ್ರಕಾರ ಒಂದೂವರೆ ವರ್ಷದಲ್ಲಿ 70 ಸಾವಿರ ಮಂದಿ ಆಜೀವ ಸದಸ್ಯತ್ವ ಪಡೆದಿದ್ದು, ಒಟ್ಟು ಸದಸ್ಯರ ಸಂಖ್ಯೆ 4.10 ಲಕ್ಷ ತಲುಪಿದೆ.

ಸ್ಮಾರ್ಟ್ ಕಾರ್ಡ್ ವಿತರಣೆ

2022ರ ಜುಲೈ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬೈ-ಲಾ ತಿದ್ದುಪಡಿಗೆ ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯಿಂದ ಅನುಮೋದನೆ ದೊರೆತಿತ್ತು. ಇದರಿಂದಾಗಿ ಸದಸ್ಯತ್ವ ಶುಲ್ಕ ಇಳಿಕೆ, ಸ್ಮಾರ್ಟ್ ಕಾರ್ಡ್ ವಿತರಣೆ ಸೇರಿದಂತೆ 18 ಅಂಶಗಳನ್ನು ಹೊಸದಾಗಿ ಜಾರಿಗೊಳಿಸಲಾಗಿತ್ತು. ₹500 ಸದಸ್ಯತ್ವ ಶುಲ್ಕವನ್ನು ₹250ಕ್ಕೆ ಇಳಿಕೆ ಮಾಡಿ, ಗುರುತಿನ ಚೀಟಿಯನ್ನು ಸ್ಮಾರ್ಟ್‌ಕಾರ್ಡ್ ರೂಪದಲ್ಲಿ ವಿತರಿಸಲಾಗುತ್ತಿದೆ. ಇದಕ್ಕಾಗಿ ಸ್ಮಾರ್ಟ್‌ಕಾರ್ಡ್ ವೆಚ್ಚ ಮತ್ತು ಸ್ಪೀಡ್ ಪೋಸ್ಟ್ ಅಂಚೆ ವೆಚ್ಚ ₹150 ಪಾವತಿಸಬೇಕಾಗುತ್ತದೆ.

'ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಇರುವ ಕಡೆ ಈ ಮೊದಲಿಂತೆ ಅರ್ಜಿ ಭರ್ತಿ ಮಾಡಿಸಿಕೊಳ್ಳಲಾಗುತ್ತಿದೆ. ಆ್ಯಪ್‌ನ ಸಾಮರ್ಥ್ಯವನ್ನು ಹೆಚ್ಚಳ ಮಾಡಲಾಗುತ್ತಿದೆ. ಕೆಲವರಿಗೆ ಸದಸ್ಯತ್ವ ಶುಲ್ಕವನ್ನು ಯಾವ ರೀತಿ ಪಾವತಿಸಬೇಕು ಎಂಬುದು ತಿಳಿಯುತ್ತಿಲ್ಲ. ಶೇ 5ರಷ್ಟು ಮಂದಿಗೆ ಮಾತ್ರ ಸಮಸ್ಯೆಯಾಗುತ್ತಿದೆ. ಎಲ್ಲ ಸಮಸ್ಯೆಯನ್ನೂ ನಿವಾರಿಸಲಾಗುತ್ತದೆ. 5 ವರ್ಷಗಳಲ್ಲಿ ಒಂದು ಕೋಟಿ ಸದಸ್ಯತ್ವ ಮಾಡಿಸಲಾಗುವುದು' ಎಂದು ಮಹೇಶ ಜೋಶಿ ಹೇಳಿದರು.

ಮೊಬೈಲ್ ನೆಟ್‌ವರ್ಕ್ ಸಮಸ್ಯೆಯಿಂದ ಆ್ಯಪ್‌ನಲ್ಲಿ ಸದಸ್ಯತ್ವ ಪಡೆಯುವುದು ಕೆಲವರಿಗೆ ಸಾಧ್ಯವಾಗುತ್ತಿಲ್ಲ. ಆ್ಯಪ್ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ

ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಕಾರ್ಯನಿರ್ವಹಣೆ ಬಗ್ಗೆ ದೂರು: 10 ಸಾವಿರಕ್ಕೂ ಅಧಿಕ ಮಂದಿ ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಈ ಆ್ಯಪ್ ಕಾರ್ಯನಿರ್ವಹಣೆ ಬಗ್ಗೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಒಟಿಪಿ ಬರದಿರುವುದು, ವಿವರ ನವೀಕರಣ ಸಮಸ್ಯೆ, ಹಣ ಕಡಿತವಾದರೂ ಪಾವತಿಯಾಗದಿರುವುದು, ಮೊಬೈಲ್ ಸಂಖ್ಯೆ ಅಪ್‌ಡೇಟ್ ಆಗದಿರುವುದು ಸೇರಿ ಹಲವು ಸಮಸ್ಯೆಗಳ ಬಗ್ಗೆ ಬಳಕೆದಾರರು ದೂರಿದ್ದಾರೆ.

'ಆ್ಯಪ್‌ನಲ್ಲಿ ತಾಂತ್ರಿಕ ಸಮಸ್ಯೆಗಳಿದ್ದು, ಯುಪಿಐ ಮೂಲಕ ಹಣ ಪಾವತಿಸಿದಾಗ ಬ್ಯಾಂಕ್ ಖಾತೆಯಿಂದ ಹಣ ಕಡಿತವಾದರೂ ಆ್ಯಪ್‌ನಲ್ಲಿ ಪಾವತಿಯಾಗಿರುವ ಬಗ್ಗೆ ದೃಢೀಕರಿಸುವುದಿಲ್ಲ. ಒಟಿಪಿ ಕೂಡ ನಮೂದಿತ ಮೊಬೈಲ್ ಸಂಖ್ಯೆಗೆ ಬರುವುದು ವಿಳಂಬವಾಗುತ್ತಿದೆ' ಎಂದು ಸದಸ್ಯತ್ವ ಪಡೆದ ನಾಗರಾಜ್ ತಿಳಿಸಿದರು.

'ಸಾರಿಗೆಗೆ 'ಶಕ್ತಿ' ತುಂಬಿದ ಯೋಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಕ್ತಿ' ಯೋಜನೆ ಜಾರಿಯಾದ ಮೇಲೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗಿದೆ. ಸಾರ್ವಜನಿಕ ಸಾರಿಗೆಗೆ ಬಲ ಬಂದಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಶನಿವಾರ ಅಧಿಕಾರಿಗಳ ಸಭೆಯಲ್ಲಿ ಸಾರಿಗೆ ಬಗ್ಗೆ ಮಾಹಿತಿ ಪಡೆದು ಅವರು ಮಾತನಾಡಿದರು.

ಬೆಂಗಳೂರು ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಾರಿಗೆ ಅಧಿಕಾರಿಗಳ ಜೊತೆ ಸಭೆ ನಡೆಸಿದರು.

ಹೊಸ ಬಸ್‌ಗಳ ಸೇರ್ಪಡೆ, ಪುನಶ್ಚೇತನ ಕಾರ್ಯ, ಪರಿಣಾಮಕಾರಿ ಮಾಹಿತಿ ತಂತ್ರಜ್ಞಾನ ಬಳಕೆ, ಕಾರ್ಮಿಕ ಸ್ನೇಹಿ ಉಪಕ್ರಮಗಳು, ಸಿಬ್ಬಂದಿ ನೇಮಕಗಳನ್ನು ಆದ್ಯತೆಯ ಮೇರೆಗೆ ಅನುಷ್ಠಾನಕ್ಕೆ ತರಬೇಕು ಎಂದು ಸೂಚನೆ ನೀಡಿದರು.

ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಕ್ರಿಯಾ ಯೋಜನೆ ತಯಾರಿಸಬೇಕು. ನಾಲ್ಕು ಸಂಸ್ಥೆಗಳ ಅಡಿಯಲ್ಲಿರುವ ಖಾಲಿ ಜಾಗಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಿಕೊಂಡು ಆದಾಯ ಹೆಚ್ಚಿಸಲು ಯೋಜನೆ ತಯಾರಿಸಬೇಕು ಎಂದರು.

'ಬಸ್ ನಿಲ್ದಾಣಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಆಸನಗಳ ವ್ಯವಸ್ಥೆ, ಶೌಚಾಲಯ, ಕುಡಿಯುವ ನೀರಿನ ಬಗ್ಗೆ ಗಮನಹರಿಸಬೇಕು. ಅಧಿಕಾರಿಗಳು ಆಗಾಗ ಭೇಟಿ ನೀಡಿ ಪರಿಶೀಲಿಸಬೇಕು. ಅನಿರೀಕ್ಷಿತ ಭೇಟಿ ನೀಡಿ ಬಸ್‌ನಿಲ್ದಾಣಗಳು ಹೇಗಿವೆ ಎಂದು ನೋಡುತ್ತೇನೆ' ಎಂದರು.

ಏಕ ಸದಸ್ಯ ಸಮಿತಿ ಅಧ್ಯಕ್ಷ ಎಂ.ಆರ್ ಶ್ರೀನಿವಾಸಮೂರ್ತಿ ಮಾತನಾಡಿ, 'ಶಕ್ತಿ ಯೋಜನೆ ಜಾರಿಯಾಗುವುದಕ್ಕಿಂತ ಮೊದಲು ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಪ್ರತಿದಿನ ಸರಾಸರಿ 84.15 ಲಕ್ಷ ಜನರು ಪ್ರಯಾಣಿಸುತ್ತಿದ್ದರು. ಈಗ ಸರಾಸರಿ 1.05 ಕೋಟಿ ಜನ ಪ್ರಯಾಣಿಸುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ, ಎನ್‌ಡಬ್ಲ್ಯುಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್., ವಿಜಿಲೆನ್ಸ್ ನಿರ್ದೇಶಕ ಪ್ರಶಾಂತ್ ಕುಮಾರ್ ಇದ್ದರು.

ವೈ20 ಸಮಾಲೋಚನೆ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಮ್ಮಿಕೊಂಡಿದ್ದ ಎರಡು ದಿನಗಳ 'ವೈ20' ಸಮಾಲೋಚನೆ ಸಮಾರಂಭದಲ್ಲಿ ಯುವಜನರ ಆರೋಗ್ಯ ಹಾಗೂ ಯೋಗಕ್ಷೇಮದ ಬಗ್ಗೆ ವಿಷಯ ತಜ್ಞರು ಚರ್ಚಿಸಿದರು.

ಬ್ರೆಜಿಲ್, ರಷ್ಯಾ ಸೇರಿ ವಿವಿಧ ದೇಶಗಳ 300ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಿ, 'ಯುವಜನರ ನಡವಳಿಕೆ ಹಾಗೂ ಮಾನಸಿಕ ಆರೋಗ್ಯ', 'ರಸ್ತೆ ಸುರಕ್ಷತೆ ಮತ್ತು ಯುವಜನರು' ಸೇರಿ ವಿವಿಧ ವಿಷಯಗಳ ಮೇಲೆ ಸಮಾಲೋಚನೆ ನಡೆಸಿದರು. ಈ ಸಮಾರಂಭ ಶನಿವಾರ ಸಂಪನ್ನವಾಯಿತು.

ಕೇಂದ್ರ ಸಚಿವ ಅಶ್ವಿನಿ ಕುಮಾರ್ ಚೌಬೆ, 'ಇತ್ತೀಚೆಗೆ ಯುವಜನರು ವಿವಿಧ ವ್ಯಸನಗಳಿಗೆ ಒಳಗಾಗಿ, ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಅಲ್ಪಾವಧಿಯಲ್ಲಿ ಯಶಸ್ಸು ಸಾಧಿಸಬೇಕೆಂಬ ಹಂಬಲದಿಂದ ಅಡ್ಡ ದಾರಿ ಹಿಡಿಯುತ್ತಿದ್ದಾರೆ. ಆದ್ದರಿಂದ ಯುವಜನರಿಗೆ ಸೂಕ್ತ ಮಾರ್ಗದರ್ಶನ ಒದಗಿಸಿ, ವ್ಯಸನ ಮುಕ್ತ ಜೀವನಕ್ಕೆ ಅನುವು ಮಾಡಿಕೊಡಬೇಕು. ಶಿಕ್ಷಣ ಹಾಗೂ ವೃತ್ತಿಯಲ್ಲಿ ಏಕಾಗ್ರತೆ ಸಾಧಿಸುವಂತಾಗಬೇಕು. ದೇಶದ ಭವಿಷ್ಯ ಯುವಜನರ ಕೈಯಲ್ಲಿ ಇದೆ' ಎಂದು ಹೇಳಿದರು.

ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಕಾರ್ಯದರ್ಶಿ ಮೀತಾ ರಾಜೀವ್‌ಲೋಚನ್, 'ಸಮೀಕ್ಷೆಯೊಂದರ ಪ್ರಕಾರ ಶೇ 17 ಯುವಕರು ಆತಂಕ ಹಾಗೂ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಶೇ 13ರಷ್ಟು ಜನರು ದುಃಖದ ಜೀವನ ನಡೆಸುತ್ತಿದ್ದಾರೆ. ಯುವಜನರು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಇಂತಹ ಸಮಾಲೋಚನೆ ಕಾರ್ಯಕ್ರಮಗಳು ಸಹಕಾರಿ' ಎಂದರು.

ಜಾತಿಗಣತಿ ವರದಿ ಮಂಡಿಸದಿರಲು ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಎಂಬ ಜಾತಿಗಣತಿ ವರದಿ ಅವೈಜ್ಞಾನಿಕ. ಮಂಡನೆಯಾಗುವ ಮೊದಲೇ ಸೋರಿಕೆಯೂ ಆಗಿದೆ. ಈ ವರದಿಯನ್ನು ಯಾವುದೇ ಕಾರಣಕ್ಕೆ ಮಂಡಿಸಬಾರದು ಎಂದು ಒಕ್ಕಲಿಗ ಮುಖಂಡರ ಸಮಾಲೋಚನಾ ಸಭೆಯಲ್ಲಿ ಆಗ್ರಹಿಸಲಾಗಿದೆ.

'ಜಾತಿಗಣತಿ ರಾಜಕೀಯ; ಒಕ್ಕಲಿಗರಿಗೆ ಅನ್ಯಾಯ' ಎಂಬ ಘೋಷವಾಕ್ಯ ಇಟ್ಟುಕೊಂಡು ಒಕ್ಕಲಿಗ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ. ಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಆಗ್ರಹ ಮಾಡಲಾಗಿದೆ.

ಕೆ.ಜಿ. ಕುಮಾರ್

ಈ ವರದಿಯನ್ನು ಮಂಡಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ದಲಿತ ಮತ್ತು ಹಿಂದುಳಿದ ವರ್ಗಗಳ ಸ್ವಾಮೀಜಿಗಳ ಜೊತೆಗೆ ಇತ್ತೀಚೆಗೆ ನಡೆದ ಸಭೆಯಲ್ಲಿ ಹೇಳಿದ್ದರು. ಹೊಸದಾಗಿ ಗಣತಿ ನಡೆಸಿದರೆ ಅಭ್ಯಂತರವಿಲ್ಲ. ಈ ವರದಿ ಮಂಡಿಸಬಾರದು ಎಂದು ಸಭೆಯಲ್ಲಿ ಭಾಗವಹಿಸಿದವರು ಒತ್ತಾಯಿಸಿದರು.

'ಈ ಸಮೀಕ್ಷೆಯಲ್ಲಿ ವೀರಶೈವ ಲಿಂಗಾಯಿತರ ಮತ್ತು ಒಕ್ಕಲಿಗರ ಸಂಖ್ಯೆ ಕಡಿಮೆ ತೋರಿಸಲಾಗಿದೆ. ವರದಿ ಸೋರಿಕೆ ಮಾಹಿತಿ ಪ್ರಕಾರ ರಾಜ್ಯದಲ್ಲಿ ವೀರಶೈವ ಲಿಂಗಾಯಿತರ ಸಂಖ್ಯೆ 59 ಲಕ್ಷ, ಒಕ್ಕಲಿಗರ ಸಂಖ್ಯೆ 49 ಲಕ್ಷ ಎಂದು ತೋರಿಸಲಾಗಿದೆ. ಅಹಿಂದ ವರ್ಗಕ್ಕೆ ಅನುಕೂಲ ಮಾಡಿಕೊಡುವುದಕ್ಕೆ ನಮ್ಮ ವಿರೋಧವಿಲ್ಲ. ಆ ಉದ್ದೇಶದಿಂದ ಇತರ ಸಮುದಾಯಗಳಿಗೆ ಅನ್ಯಾಯ ಮಾಡಬಾರದು' ಎಂದು ತಿಳಿಸಿದರು.

ಒಕ್ಕಲಿಗರ ಕ್ರಿಯಾ ಸಮಿತಿಯ ಪದಾಧಿಕಾರಿಗಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು. ಮುಂದೆ ಬೃಹತ್ ಸಭೆ ನಡೆಸಲು ತೀರ್ಮಾನಿಸಲಾಯಿತು.

ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ನೆರವಾಗಲು ಪಿ.ಜಿ.ಆರ್. ಸಿಂಧ್ಯಾ ಮನವಿ

ವೃತ್ತಿಪರ ಕೋರ್ಸ್: 300 ಸೀಟ್‌ಗಳಿಗೆ ಹೆಚ್ಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸ್‌ಗಳ ಪ್ರವೇಶಕ್ಕೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿದ್ಯಾರ್ಥಿಗಳಿಗೆ ಹೆಚ್ಚಿನ ಮೀಸಲಾತಿ ಕಲ್ಪಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ' ಎಂದು ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಹೇಳಿದರು.

ನಗರದಲ್ಲಿ ಶನಿವಾರ 'ವಾರ್ಷಿಕ ಕಾರ್ಯಕ್ರಮಗಳ ಯೋಜನೆ' ಪುಸ್ತಕ ಬಿಡುಗಡೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಗ ಕೇವಲ 15 ವಿದ್ಯಾರ್ಥಿಗಳಿಗೆ ಮಾತ್ರವೇ ಅವಕಾಶವಿದೆ. ಅದನ್ನು 300ಕ್ಕೆ ಹೆಚ್ಚಿಸುವಂತೆ ಮನವಿ ಸಲ್ಲಿಸಲಾಗಿದೆ' ಎಂದರು.

'ಕೇಂದ್ರ ಪುರಸ್ಕಾರ ಸ್ಥಗಿತಗೊಳಿಸಲಾಗಿದೆ. ಆದ್ದರಿಂದ, ರಾಜ್ಯ ಪುರಸ್ಕಾರ ಪಡೆದ ವಿದ್ಯಾರ್ಥಿಗಳನ್ನೇ ಪರಿಗಣಿಸುವಂತೆ ಆ ನಿಯಮಕ್ಕೆ ತಿದ್ದುಪಡಿ ತರಬೇಕು' ಎಂದು ಕೋರಿದರು.

ಬೆಂಗಳೂರಿನಲ್ಲಿ ಶನಿವಾರ ಸ್ಕೌಟ್ಸ್ ಮತ್ತು ಗೈಡ್ಸ್‌ನ 'ವಾರ್ಷಿಕ ಕಾರ್ಯಕ್ರಮಗಳ ಯೋಜನೆ'ಯ ಪುಸ್ತಕವನ್ನು ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ (ಮಧ್ಯದಲ್ಲಿ ಇರುವವರು) ಬಿಡುಗಡೆ ಮಾಡಿದರು. ಕೆ.ಗಂಗಪ್ಪಗೌಡ, ಎಸ್‌.ಜಿ. ರವೀಂದ್ರ ಇದ್ದರು.

'ಅರಣ್ಯ ಇಲಾಖೆ ಸಹಾಯದಿಂದ ಪ್ರತಿವರ್ಷ ಚಿಣ್ಣರ ದರ್ಶನ ಯೋಜನೆ ಅಡಿ 'ಕಾಡಿನ ದರ್ಶನ' ಮಾಡಿಸಲಾಗುತ್ತಿದೆ. ಅರಣ್ಯ ಇಲಾಖೆಯು ಬಿತ್ತನೆಬೀಜ, ಮಣ್ಣು ಹಾಗೂ ಗೊಬ್ಬರ ಪೂರೈಸುತ್ತಿದೆ. ಈ ವರ್ಷವೂ ಬೀಜದುಂಡೆ ವಿತರಣೆಗೆ ನೆರವು ನೀಡಬೇಕು' ಎಂದರು.

'ಬನ್ನೀಸ್, ಕಬ್ಸ್– ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್–ರೇಂಜರ್ಸ್ ಎಂಬ ನಾಲ್ಕು ಹಂತಗಳಿವೆ. ಕಳೆದ ವರ್ಷ 4.50 ಲಕ್ಷ ಸದಸ್ಯರಾಗಿದ್ದರು. ಈ ವರ್ಷ 8 ಲಕ್ಷ ಸದಸ್ಯರನ್ನು ಸೇರ್ಪಡೆ ಮಾಡುವ ಗುರಿ ಹೊಂದಲಾಗಿದೆ' ಎಂದು ಹೇಳಿದರು.

'ವಾರ್ಷಿಕ ಕಾರ್ಯಕ್ರಮಗಳ ಯೋಜನೆಯ 25 ಸಾವಿರ ಕೃತಿ ಮುದ್ರಿಸಲಾಗಿದೆ. ಈ ಪುಸ್ತಕಗಳನ್ನು ಶಿಕ್ಷಕರಿಗೆ ಕಳುಹಿಸಲಾಗಿದೆ. ಎರಡು ಅಥವಾ ನಾಲ್ಕು ವರ್ಷಕ್ಕೊಮ್ಮೆ ಅಂತರರಾಷ್ಟ್ರೀಯ ಮಟ್ಟದ ಮೇಳ ನಡೆಯುತ್ತಿದೆ. ಅದಕ್ಕೆ ಸರ್ಕಾರವು ₹ 15 ಕೋಟಿ ಅನುದಾನ ನೀಡುತ್ತದೆ. ವಾರ್ಷಿಕವಾಗಿ ₹ 4 ಕೋಟಿ ಲಭಿಸುತ್ತದೆ. ಅನುದಾನಕ್ಕಿಂತ ಪ್ರಮುಖವಾಗಿ ಸರ್ಕಾರದಿಂದ ಬೇರೆ ಬೇರೆ ವಿಚಾರಗಳಲ್ಲಿ ಪ್ರೋತ್ಸಾಹ ಸಿಗಬೇಕು' ಎಂದರು.

ರಾಜ್ಯ ಕಾರ್ಯದರ್ಶಿ ಕೆ.ಗಂಗಪ್ಪಗೌಡ, ಪಿಐಬಿಯ ಎಡಿಜಿ (ಪ್ರಾದೇಶಿಕ) ಎಸ್.ಜಿ.ರವೀಂದ್ರ ಇದ್ದರು.

ವಿದ್ಯೇಶ ನಾದೋತ್ಸವ ಸಂಭ್ರಮ ಇಂದು

ಮೈಸೂರು: ನಗರದ ಚಾಮರಾಜ ಜೋಡಿ ರಸ್ತೆಯಲ್ಲಿರುವ ವೆಂಕಟಾಚಲ ಧಾಮದ ಭಂಡಾರಕೇರಿ ವಿದ್ಯೇಶತೀರ್ಥ ಸ್ವಾಮೀಜಿ 70ನೇ ವರ್ಧಂತಿ ಮಹೋತ್ಸವದ ಪ್ರಯುಕ್ತ ಜೂನ್ 26ರಂದು 'ವಿದ್ಯೇಶ ನಾದೋತ್ಸವ' ವಿಶೇಷ ಕಾಯಕ್ರಮವನ್ನು ಬೆಂಗಳೂರಿನ ಗಿರಿನಗರದ 2ನೇ ಹಂತದಲ್ಲಿರುವ ಭಾಗವತ ಕೀರ್ತಿಧಾಮದಲ್ಲಿ ಆಯೋಜಿಸಲಾಗಿದೆ.

ಸೋಸಲೆ ವ್ಯಾಸರಾಜರ ಮಠದ ವಿದ್ಯಾಶ್ರೀಶ ತೀರ್ಥ, ಮಂತ್ರಾಲಯದ ಸುಬುಧೇಂದ್ರ ತೀರ್ಥ, ಮಾಧವತೀರ್ಥ ಮಠದ ವಿದ್ಯಾಸಾಗರ ತೀರ್ಥ, ಕಿರಿಯ ಶ್ರೀ ವಿದ್ಯಾವಲ್ಲಭ ತೀರ್ಥರು, ಪಾದರಾಜರ ಮಠದ ಸುಜಯನಿಧಿ ತೀರ್ಥ ಭಾಗವಹಿಸಲಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

ಕಿರುತೆರೆ ಕಲಾವಿದೆ ರೂಪಾಲಿ ಗಂಗೂಲಿ ಕಳವಳ

'ಮುಟ್ಟಿನ ಅರಿವಿನ ಕೊರತೆ ಶಿಕ್ಷಣಕ್ಕೆ ಅಡ್ಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಟ್ಟಿನ ಶಿಕ್ಷಣದ ಕೊರತೆಯಿಂದ ಸರಾಸರಿ ಐವರು ಹೆಣ್ಣು ಮಕ್ಕಳಲ್ಲಿ ಒಬ್ಬರು ಶಾಲೆ ತೊರೆಯುತ್ತಿದ್ದಾರೆ. ಶೇ 70ರಷ್ಟು ಹುಡುಗಿಯರಿಗೆ ಮೊದಲ ಬಾರಿ ಋತುಚಕ್ರವಾದಾಗ ಅದರ ಅರಿವೇ ಇರುವುದಿಲ್ಲ' ಎಂದು ನಟಿ ರೂಪಾಲಿ ಗಂಗೂಲಿ ಕಳವಳ ವ್ಯಕ್ತಪಡಿಸಿದರು.

ಅಮೃತ ವಿಶ್ವ ವಿದ್ಯಾಪೀಠ ಹಾಗೂ ಜೆಂಡರ್ ಇಕ್ವಾಲಿಟಿ ವರ್ಕಿಂಗ್ ಗ್ರೂಪ್ ಆಫ್ ಸಿ 20 ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಮುಟ್ಟಿನ ಆರೋಗ್ಯ ಮತ್ತು ನೈರ್ಮಲ್ಯ ನಿರ್ವಹಣೆ'ಯ ಸಮೀಕ್ಷಾ ವರದಿ ಬಿಡುಗಡೆ ಮಾಡಿ, ಮಾತನಾಡಿದರು.

ಸಮೀಕ್ಷಾ ವರದಿಯನ್ನು ರೂಪಾಲಿ ಗಂಗೂಲಿ (ಎಡದಿಂದ ಎರಡನೆಯವರು) ಬಿಡುಗಡೆ ಮಾಡಿದರು. ವಿಸ್ಪರ್ ಕಂಪನಿಯ ಸಂವಹನ ಮುಖ್ಯಸ್ಥೆ ಕೃತಿ ದೇಸಾಯಿ, ಬಿ.ಬಿ. ಕಾವೇರಿ, ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಹಾಗೂ ಹುಮಾ ಮಸೂದ್ ಇದ್ದಾರೆ

'ಹಲವರು ಮುಟ್ಟಿನ ವಿಷಯದಲ್ಲಿ ಭಯ ಪಡುತ್ತಾರೆ. ಹೆಣ್ಣು ಮಕ್ಕಳ ತಾಯಂದಿರಿಗೂ ಅರಿವಿನ ಕೊರತೆಯಿದೆ. ಇದರಿಂದಾಗಿ ಸೂಕ್ತ ಮಾರ್ಗದರ್ಶನ ಅವರಿಗೆ ಸಿಗುತ್ತಿಲ್ಲ. ಹಲವರು ಮುಟ್ಟಿನ ತೊಂದರೆಗಳನ್ನು ಹೇಳಿಕೊಳ್ಳದೆ ಮುಚ್ಚಿಡುತ್ತಾರೆ. ಇದು ದೈಹಿಕ ಹಾಗೂ ಮಾನಸಿಕ ಕಾಯಿಲೆಗೆ ಒಳಗಾಗುವಂತೆ ಮಾಡುತ್ತದೆ. ಆದ್ದರಿಂದ ಮುಟ್ಟಿನ ನೈರ್ಮಲ್ಯ ಹಾಗೂ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದು ಹೇಳಿದರು.

ಸಮಗ್ರ ಶಿಕ್ಷಣ ಕರ್ನಾಟಕದ ಯೋಜನಾ ನಿರ್ದೇಶಕಿ ಬಿ.ಬಿ. ಕಾವೇರಿ, 'ಮುಟ್ಟಿನ ಆರೋಗ್ಯ ಹಾಗೂ ನೈರ್ಮಲ್ಯದ ಬಗ್ಗೆ ಜಾಗೃತಿ ಅತ್ಯಗತ್ಯ. ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಅಗತ್ಯವಿರುವ ಸೌಲಭ್ಯ ಕಲ್ಪಿಸಬೇಕು. ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್‌ಗಳು ಸುಲಭವಾಗಿ ದೊರೆಯುವಂತಾಗಬೇಕು. ಮುಟ್ಟು ಹೆಣ್ಣಿನ ದೇಹದಲ್ಲಿ ನಡೆಯುವ ಸಹಜ ಪ್ರಕ್ರಿಯೆ. ಇದು ಅವರ ಶೈಕ್ಷಣಿಕ ಕಲಿಕೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಋತುಚಕ್ರದ ಸುತ್ತಲೂ ಇರುವ ನಿರ್ಬಂಧ ನಿವಾರಿಸಬೇಕು. ಎಲ್ಲರೂ ಈ ಪ್ರಕ್ರಿಯೆಯನ್ನು ಒಪ್ಪಿಕೊಳ್ಳುವ ಮತ್ತು ಸಮಾನವಾಗಿ ಕಾಣುವ ಪರಿಸರ ನಿರ್ಮಾಣವಾಗಬೇಕು' ಎಂದು ತಿಳಿಸಿದರು.

ಯುನೆಸ್ಕೊ ಪ್ರತಿನಿಧಿ ಹುಮಾ ಮಸೂದ್, 'ಋತುಚಕ್ರದಲ್ಲಿ ನೈರ್ಮಲ್ಯತೆಯ ಬಗ್ಗೆ ಸೂಕ್ತ ಅರಿವು, ಜಾಗೃತಿ ಹಾಗೂ ಎಚ್ಚರಿಕೆ ಇರಬೇಕು. ಇದರ ಬಗ್ಗೆ ಧನಾತ್ಮಕ ಭಾವನೆಗಳು ಮೂಡುವಂತೆ ಮಾಡಬೇಕು' ಎಂದು ಹೇಳಿದರು.

'ಕಲಿತ ವಿದ್ಯೆ ಜೀವನದಲ್ಲಿ ಅಳವಡಿಸಿಕೊಳ್ಳಿ'

ಬೆಂಗಳೂರು: 'ವೇಗದ ಯುಗದಲ್ಲಿ ಎಲ್ಲರೂ ಓಡುತ್ತಿದ್ದಾರೆ. ಆದರೆ, ಎಲ್ಲಿಗೆ ಹೋಗುತ್ತಿದ್ದೇವೆ ಎಂಬ ಸ್ಪಷ್ಟತೆ ಇಲ್ಲ. ಇದರಿಂದ ಭೌತಿಕ ಸುಖ ದೊರೆತರೂ ಆಂತರಿಕ ಮೌಲ್ಯ ಕುಸಿಯುತ್ತಿದೆ. ಕಲಿತ ವಿದ್ಯೆಯನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನೈತಿಕ ಮೌಲ್ಯ ಉಳಿಯಲು ಸಾಧ್ಯ' ಎಂದು ನಿವೃತ್ತ ಡಿಜಿಪಿ ಕೆ. ಶ್ರೀನಿವಾಸನ್ ತಿಳಿಸಿದರು.

ಭಾರತೀಯ ವಿದ್ಯಾ ಭವನದ ಅಂಗ ಸಂಸ್ಥೆಯಾದ ಎಂ.ಪಿ. ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ 2023ನೇ ಸಾಲಿನ ಘಟಿಕೋತ್ಸವದಲ್ಲಿ ಮಾತನಾಡಿದರು.

ಎಂ.ಪಿ.ಬಿರ್ಲಾ ಸಂಸ್ಥೆಯ ನಿರ್ದೇಶಕ ಗೌತಮ್ ಗಾನ್ ಮಾತನಾಡಿ, 'ಇವತ್ತು ಮ್ಯಾನೇಜ್‌ಮೆಂಟ್ ವಿಷಯದ ಕಲಿಕೆಯ ಸ್ವರೂಪ ಬದಲಾಗಿದೆ. ಸವಾಲುಗಳೂ ಹೆಚ್ಚಾಗಿವೆ. ಕಲಿತಿದ್ದನ್ನು ವೃತ್ತಿಯಲ್ಲಿ ಅಳವಡಿಸಿಕೊಳ್ಳುವ ಕೌಶಲದ ಬಗ್ಗೆ ಗಮನ ನೀಡಬೇಕು' ಎಂದರು.

ಎಂ.ಪಿ.ಬಿರ್ಲಾ ಸಂಸ್ಥೆಯ ನಿರ್ದೇಶಕ ಎನ್.ರಾಮಾನುಜನ್ ಅಧ್ಯಕ್ಷತೆ ವಹಿಸಿದ್ದರು. ಎಂ.ಪಿ.ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಪ್ರಾಂಶುಪಾಲ ಎಸ್. ಸತ್ಯನಾರಾಯಣ, ಉಪಾಧ್ಯಕ್ಷ ಮುರುಳೀಧರ್, ಧನುಷ್ ಇದ್ದರು.

ಚಿತ್ರಾವಳಿ

ಕರುನಾಡ ತಿಲಕ ಡಾ. ವಿಷ್ಣು ಅಭಿಮಾನಿ ಸಂಘವು ಭಾನುವಾರ ಗಿರಿನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ವಿಷ್ಣುವರ್ಧನ್ ಅವರ ಪುತ್ಥಳಿಯನ್ನು ಅನಾವರಣಗೊಳಿಸಲಾಯಿತು. ವಿಷ್ಣು ಸೇನಾ ಸಮಿತಿಯ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ, ಕರುನಾಡ ತಿಲಕ ಸಂಘದ ಅಧ್ಯಕ್ಷ ಪನೀತ್ ಇದ್ದರು.

ಹುಬ್ಬಳ್ಳಿಯ ಕಿಮ್ಸ್‌ನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಅಕ್ಷರ ಸಾಹಿತ್ಯ ವೇದಿಕೆ ಹಾಗೂ ಕಿಮ್ಸ್ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ವಿನಯ ಗುಂಟೆ ಅವರಿಗೆ 'ಡಾ. ಪ್ರಹ್ಲಾದ ಅಗಸನಕಟ್ಟೆ ಕಥಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವಿರೂಪಾಕ್ಷ ಕಟ್ಟಿಮನಿ, ಸಿದ್ದೇಶ್ವರ ಕಟಕೊಳ, ಸಿ.ಎಂ. ಮುನಿಸ್ವಾಮಿ, ಎಂ.ಬಿ. ಅಡ್ನೂರ್, ಕಿಮ್ಸ್ ನಿರ್ದೇಶಕ ರಾಮಲಿಂಗಪ್ಪ ಅಂಟರತಾನಿ, ಸಾಹಿತಿ ಮಾಲತಿ ಪಟ್ಟಣಶೆಟ್ಟಿ, ಸುನಂದಾ ಕಡಮೆ, ವಿಜಯಾ ಅಗನಸಕಟ್ಟೆ, ಪ್ರಕಾಶ ಕಡಮೆ, ಕುಮಾರ ಬೇಂದ್ರೆ ಇದ್ದಾರೆ —ಪ್ರಜಾವಾಣಿ ಚಿತ್ರ

ಶಿಕ್ಷಣ

ಜೀವಿಗಳ ನಿರ್ದೇಶಕ ಡಿಎನ್‌ಎ



ಡಾ. ಎಸ್. ಶಿಶುಪಾಲ

ಮಗು ಹುಟ್ಟಿದೊಡನೆ ಮನೆಯ ಹಿರಿಯರು ಮಗು ಗಂಡೇ? ಹೆಣ್ಣೇ? ಬಣ್ಣ ಯಾವುದು? ಕೂದಲು ಹೇಗಿದೆ? ಮೂಗು, ಕಿವಿ ಮುಂತಾದವುಗಳ ಆಕಾರ ಯಾರ ರೀತಿ ಇದೆ? ಎಂದು ಹೋಲಿಕೆ ಪ್ರಾರಂಭಿಸುತ್ತಾರೆ. ಅಜ್ಜಿ-ಅಜ್ಜನಂತೆ, ಅಮ್ಮ-ಅಪ್ಪನಂತೇ ಎಂಬ ಚರ್ಚೆ ಸಾಮಾನ್ಯ. ಈ ರೀತಿಯ ಹೋಲಿಕೆ ಎಲ್ಲಾ ಜೀವಿಗಳಲ್ಲೂ ಕಾಣಬಹುದು. ಇವು ತಂದೆ-ತಾಯಿ ಗಳಿಂದ ಪಡೆದ ಗುಣಗಳು. ಬಾಹ್ಯ ಗುಣಲಕ್ಷಣಗಳನ್ನು ಪ್ರಕಟಲಕ್ಷಣ (Phenotype) ಎನ್ನುವರು. ಇವುಗಳನ್ನು ನಿರ್ಧರಿಸುವುದು ಗುಣಾಣು ಮಾದರಿ (Genotype). ಈ ರೀತಿ ತಂದೆ-ತಾಯಿಯರಿಂದ ಪಡೆಯುವ ಗುಣಗಳನ್ನು ಅಧ್ಯಯನ ಮಾಡುವುದೇ ಅನುವಂಶೀಯ ಶಾಸ್ತ್ರ. ಜೀವಿಗಳಲ್ಲಿರುವ ಗುಣಲಕ್ಷಣಗಳು ವಂಶಪಾರಂಪರ್ಯವಾಗಿ ಬರುವ ಅಂಶಗಳು.

ಅನುವಂಶೀಯತೆ ಅಗತ್ಯವಾದ ವಸ್ತು ಜೀವಿಯ ಎಲ್ಲಾ ಲಕ್ಷಣಗಳು. ಅಂದರೆ ಆಕಾರ, ಗಾತ್ರ, ಬಣ್ಣ, ಚಯಾಪಚಯ ಕ್ರಿಯೆ ಮುಂತಾದವುಗಳನ್ನು ನಿಯಂತ್ರಿಸುವಂತಿರಬೇಕು. ಹಾಗೆಯೇ ಈ ರಾಸಾಯನಿಕದಲ್ಲಿ ಅಡಗಿರುವ ಸಂಕೇತವನ್ನು ಕಾರ್ಯ ರೂಪಕ್ಕೆ ತರಲು ಅವಶ್ಯವಿರುವ ವ್ಯವಸ್ಥೆ ಜೀವಕೋಶಗಳಲ್ಲಿರಬೇಕು. ಈ ಗುಣಗಳನ್ನು ಹೊಂದಿರುವ ರಾಸಾಯನಿಕ ಅಣುವೆಂದರೆ 'ಡಿಎನ್‌ಎ' (ಡಿಆಕ್ಸಿರೈಬೊ ನ್ಯೂಕ್ಲಿಯಿಕ್ ಆಮ್ಲ, Deoxyribo Nucleic Acid, DNA). ಇದೊಂದು ಸಂಕೀರ್ಣ ಅನುವಂಶೀಯ ವಸ್ತುವಾಗಿದ್ದು ಜೀವಿಗಳ ವರ್ಣತಂತು (Chromosome)ಗಳಲ್ಲಿ ಹುದುಗಿರುತ್ತದೆ.

ಡಿಎನ್‌ಎ ರಚನೆ: ಜೀವಿಗಳಲ್ಲಿ ಡಿಎನ್‌ಎ ನಿರ್ದಿಷ್ಟ ಗಾತ್ರದಲ್ಲಿದ್ದು ಸುರಳಿ ಸುತ್ತಿ ಇಟ್ಟ ಹಗ್ಗದಂತೆ ಜೀವಕೋಶದ ಕೋಶಕೇಂದ್ರದಲ್ಲಿರುತ್ತದೆ (ಚಿತ್ರ ಗಮನಿಸಿ). ಪ್ರತಿ ಜೀವಿಯ ಡಿಎನ್‌ಎಯು ನ್ಯೂಕ್ಲಿಯೊಟೈಡ್‌ಗಳೆಂಬ ರಾಸಾಯನಿಕ ಗುಂಪುಗಳ ಜೋಡಣೆಯಿಂದ ಆಗಿರುತ್ತದೆ. ಪ್ರತಿ



ನ್ಯೂಕ್ಲಿಯೊಟೈಡ್‌ನಲ್ಲಿ ಐದು ಇಂಗಾಲದ ಪರಮಾಣುಗಳಿರುವ ಸಕ್ಕರೆ (Pentose sugar), ಸಾರಜನಕಯುಕ್ತ ರಾಸಾಯನಿಕಗಳಾದ ಪ್ಯೂರಿನ್ (Purine) ಅಥವ ಪಿರಿಮಿಡಿನ್ (Pyrimidine) ಮತ್ತು ಫಾಸ್ಪೇಟ್ ಗುಂಪುಗಳಿರುತ್ತವೆ. ಇಂತಹ ನ್ಯೂಕ್ಲಿಯೊಟೈಡ್‌ನ ನಾಲ್ಕು ವಿಧಗಳೆಂದರೆ ಪ್ಯೂರಿನ್‌ಗಳಾದ ಅಡಿನೈನ್ (Adenine) ಮತ್ತು ಗ್ವಾನೈನ್ (Guanine), ಪಿರಿಮಿಡಿನ್‌ಗಳಾದ ಥೈಮಿನ್ (Thymine) ಮತ್ತು ಸೈಟೊಸಿನ್ (Cytosine). ಎಲ್ಲಾ ಜೀವಿಯಲ್ಲಿರುವ ಡಿಎನ್‌ಎ ಗಳಲ್ಲಿ ಇದೇ ನಾಲ್ಕು ನ್ಯೂಕ್ಲಿಯೊಟೈಡ್‌ಗಳಿರುತ್ತವೆ. ಆದರೆ ಅವುಗಳ ಸಂಖ್ಯೆ ಮತ್ತು ಸರಣಿ ಜೋಡಣೆ ಪ್ರತಿ ಜೀವಿಯಲ್ಲಿ ವ್ಯತ್ಯಾಸವಾಗುತ್ತದೆ. ಎಲ್ಲಾ ಜೀವಿಗಳಲ್ಲಿ ಡಿಎನ್‌ಎ ಎರಡು ಎಳೆಗಳಿಂದಾಗಿದ್ದು ಒಂದಕ್ಕೊಂದು ಹೆಣೆದುಕೊಂಡಿರುತ್ತವೆ. ಪ್ರತಿಯೊಂದು ಎಳೆಯಲ್ಲಿಯೂ ಹಲವಾರು ನ್ಯೂಕ್ಲಿಯೊಟೈಡ್‌ಗಳ ಸರಣಿಯಿರುತ್ತದೆ. ಎರಡು ಎಳೆಗಳಲ್ಲಿರುವ ನ್ಯೂಕ್ಲಿಯೊಟೈಡ್‌ಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಅಂದರೆ ಒಂದು ಎಳೆಯ ಅಡಿನೈನ್ ನ್ಯೂಕ್ಲಿಯೊಟೈಡ್ ಮತ್ತೊಂದು ಎಳೆಯ ಥೈಮಿನ್‌ನೊಂದಿಗೆ ಹಾಗೆಯೇ ಒಂದು ಎಳೆಯ ಗ್ವಾನಿನ್ ಮತ್ತೊಂದು ಎಳೆಯ ಸೈಟೊಸಿನ್‌ನೊಂದಿಗೆ ಪೂರಕ ಅನುಬಂಧ ಹೊಂದಿರುತ್ತದೆ. ಇದನ್ನು ಪೂರಕ ಜೊತೆ (Complementary base-pairing) ಎನ್ನುತ್ತೇವೆ. ಕೋಶವಿಭಜನೆಯ ಸಮಯದಲ್ಲಿ ಪ್ರತಿ ಡಿಎನ್‌ಎ ಅಣುವು ತನ್ನದೇ ಪ್ರತಿರೂಪವನ್ನು ಸೃಷ್ಟಿ ಮಾಡುತ್ತಿದ್ದು ಸಂತತಿಯಿಂದ ಸಂತತಿಗೆ ರವಾನೆಯಾಗುತ್ತದೆ. ಇದರಲ್ಲಿ ಸ್ವಲ್ಪವೇ ಏರುಪೇರಾದರೂ ಆ ಪ್ರಭೇದದ ಸಂತತಿಯಲ್ಲಿ ಗಮನಾರ್ಹ ಬದಲಾವಣೆಗಳಾಗಬಹುದು.

ಡಿಎನ್‌ಎ ಪಾತ್ರ: ಜೀವಿಗಳಲ್ಲಿ ನಡೆಯುವ ಜೀವರಾಸಾಯನಿಕ ಕ್ರಿಯೆಗಳಿಗೆ ಹಲವಾರು ಪ್ರೊಟಿನ್ ಕಿಣ್ವಗಳ ಮತ್ತು ರಸದೂತಗಳ (Hormone) ಅಗತ್ಯವಿರುತ್ತದೆ. ಡಿಎನ್‌ಎ ನಲ್ಲಿರುವ ನ್ಯೂಕ್ಲಿಯೊಟೈಡ್‌ಗಳ ಸರಣಿ ಅನುಸಾರ ಆರ್‌ಎನ್‌ಎ (ರೈಬೊ ನ್ಯೂಕ್ಲಿಯಿಕ್ ಆಮ್ಲ, Ribonucleic Acid, RNA) ತಯಾರಾಗುತ್ತದೆ. ಈ ಕ್ರಿಯೆಯನ್ನು ಪ್ರತಿಲೇಖನ (Transcription) ಎನ್ನುವರು. ಆನಂತರ ಆರ್‌ಎನ್‌ಎ ಯಲ್ಲಿರುವ ನ್ಯೂಕ್ಲಿಯೊಟೈಡ್ ಸರಣಿ ಜೋಡಣೆಯ ಸಂಕೇತವನ್ನು ಅನುಸರಿಸಿ ಅಮೈನೊ ಆಮ್ಲಗಳ ಸರಣಿ ಜೋಡಣೆಯಾಗಿ ಪ್ರೊಟಿನ್‌ಗಳ ಉತ್ಪಾದನೆಯಾಗುತ್ತದೆ. ಇದನ್ನು ಭಾಷಾಂತರ (Translation) ಎನ್ನುವರು.

ಅಂದರೆ ಪ್ರತಿಯೊಂದು ಜೀವಿಯ ಜೈವಿಕ ಕ್ರಿಯೆಗಳಿಗೆ ಅವಶ್ಯವಾದ ಪ್ರೊಟಿನ್ ಉತ್ಪಾದನೆಗೆ ಬೇಕಾದ ನಿರ್ದೇಶನ ಡಿಎನ್‌ಎ ಯದ್ದು. ಜೈವಿಕ ಕ್ರಿಯೆಯೆಂಬ ನಾಟಕದಲ್ಲಿ ಭಾಗವಹಿಸುವ ಪ್ರೊಟಿನ್‌ಗಳದ್ದು ನಟರ ಪಾತ್ರ. ಯಾವ ಪ್ರೊಟಿನ್ ಯಾವಾಗ ಮತ್ತು ಎಷ್ಟು ತಯಾರಾಗಬೇಕು ಅಲ್ಲದೆ ಹಾಗೆ ತಯಾರಾದ ಪ್ರೊಟಿನ್ ಎಷ್ಟು ಕಾಲದವರಗೆ ಸಕ್ರಿಯವಾಗಿರಬೇಕು ಎನ್ನುವುದನ್ನು ಸಹ ಡಿಎನ್‌ಎ ನಿರ್ಧರಿಸುತ್ತದೆ.

ಡಿಎನ್‌ಎ ದಲ್ಲಿರುವ ಒಂದು ನಿರ್ದಿಷ್ಟ ನ್ಯೂಕ್ಲಿಯೊಟೈಡ್‌ಗಳ ಸರಣಿಯನ್ನು ಗುಣಾಣು (Gene) ಎಂದು ಕರೆಯುತ್ತಾರೆ. ಇಂತಹ ಗುಣಾಣುಗಳು ಅಭಿವ್ಯಕ್ತಿಗೊಂಡಾಗ (Gene Expression) ಡಿಎನ್‌ಎ ಯಲ್ಲಿರುವ ನ್ಯೂಕ್ಲಿಯೊಟೈಡ್ ಸರಣಿಯ ಸಂಕೇತವನ್ನುಸರಿಸಿ ಆರ್‌ಎನ್‌ಎ ಯ ನ್ಯೂಕ್ಲಿಯೊಟೈಡ್ ಸರಣಿ ತಯಾರಾಗಿ ಅದು ಪ್ರೊಟಿನ್‌ನಲ್ಲಿರುವ ಅಮೈನೊ ಆಮ್ಲಗಳ ಸರಣಿಯನ್ನು ನಿರ್ಧರಿಸುತ್ತದೆ. ಹಾಗಾಗಿ ಯಾವುದೇ ಪ್ರಭೇದದ ರಹಸ್ಯ ಆ ಜೀವಿಯಲ್ಲಿರುವ ಡಿಎನ್‌ಎ ನಲ್ಲಿ ಅಡಗಿರುತ್ತದೆ.

ವಿವಿಧ ಜೀವಿಗಳಲ್ಲಿರುವ ಡಿಎನ್‌ಎ ಗಾತ್ರ ಮತ್ತು ನ್ಯೂಕ್ಲಿಯೊಟೈಡ್‌ಗಳ ಸರಣಿಯಲ್ಲಿನ ವ್ಯತ್ಯಾಸಗಳು ಜೀವವೈವಿಧ್ಯಕ್ಕೆ ಕಾರಣವಾಗಿದೆ. ಸಹಸ್ರಾರು ವರ್ಷಗಳ ಜೀವ ವಿಕಾಸದಲ್ಲಿ ಪ್ರತಿ ಜೀವಿಯಲ್ಲಿಯೂ ಡಿಎನ್‌ಎ ಅನುವಂಶಿಕ ವಸ್ತುವಾಗಿ ರೂಪುಗೊಂಡಿರುವುದು ಸೋಜಿಗದ ವಿಷಯ. ಅಂದರೆ ಪ್ರಕೃತಿಯ ಮೂಸೆಯಲ್ಲಿ ವಿಕಾಸ ಹೊಂದಿದ ಜೈವಿಕ ರಾಸಾಯನಿಕಗಳಲ್ಲಿ ಡಿಎನ್‌ಎ ಅಗ್ರಸ್ಥಾನದಲ್ಲಿದೆ. ಪ್ರಕೃತಿಯೇ ಎಲ್ಲಾ ಜೀವಿಗಳಲ್ಲಿ ಡಿಎನ್‌ಎ ಯೆಂಬ ಭಾಷೆಯನ್ನು ತಯಾರಿಸಿದೆ. ನಿಸರ್ಗದ ಭಾಷೆ ಅರಿತರೆ ಜಾತಿ-ಮತ-ಪಂಥಗಳ ವ್ಯತ್ಯಾಸ ಕಾಣಿಸದು.

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)

ಇಲ್ಲಿ ಲೆಕ್ಕ ಗೊತ್ತಿದ್ದವರೇ ನಂಬರ್ ಒನ್

ಅಸಂಖ್ಯ ಉದ್ಯೋಗಗಳ ಸಂಖ್ಯಾಶಾಸ್ತ್ರ ಕ್ಷೇತ್ರ

ಗುರುರಾಜ್ ಎಸ್. ದಾವಣಗೆರೆ

ಅಭಿವೃದ್ಧಿಗಾಗಿ ದಾಪುಗಾಲಿಡುತ್ತಿರುವ ಇಂದಿನ ಯುಗಮಾನವನ್ನು 'ಯೋಜನಾ ಯುಗ' ಎನ್ನುತ್ತೇವೆ. ಪ್ರಸ್ತುತ ಏರುತ್ತಿರುವ ಜನಸಂಖ್ಯೆಯ ಆರೋಗ್ಯ, ಶಿಕ್ಷಣ, ಜೀವನ ಮಟ್ಟ, ಆದಾಯ ಅಗತ್ಯಗಳನ್ನರಿತು ಕೆಲಸ ಮಾಡಬೇಕಾದ ಅನಿವಾರ್ಯತೆ ಹೊಂದಿರುವ ಸರ್ಕಾರಗಳು ಏನನ್ನಾದರೂ ಹಮ್ಮಿಕೊಳ್ಳುವುದಕ್ಕೂ ಮುಂಚೆ ವಸ್ತುಸ್ಥಿತಿಯ ಕುರಿತು ಮಾಹಿತಿ ಬಯಸುತ್ತವೆ.

ಯಾವುದೇ ಮಾಹಿತಿ ಅಂಕಿ-ಅಂಶಗಳಿಂದ ಕೂಡಿರುತ್ತದೆ. ಆ ಮಾಹಿತಿ ನಿಖರವೂ, ಸತ್ಯವೂ ಆಗಿರಬೇಕಾಗುತ್ತದೆ. ಕ್ರೀಡೆ, ವ್ಯಾಪಾರ, ಉದ್ಯಮ, ಉದ್ಯೋಗ, ಶಿಕ್ಷಣ, ಸಾಕ್ಷರತೆ, ಅಭಿವೃದ್ಧಿ, ಬೇಡಿಕೆ, ಪೂರೈಕೆ, ಅರಣ್ಯ, ಆರೋಗ್ಯ ಕ್ಷೇತ್ರ ಇತ್ಯಾದಿಗಳಿಗೆ ಸಂಬಂಧಿಸಿದ ಯೋಜನೆ ರೂಪಿಸಲು ಆಯಾ ಕ್ಷೇತ್ರಗಳ ಆಗು ಹೋಗುಗಳ ಕುರಿತ ಅಧಿಕೃತ ಮಾಹಿತಿ ಬೇಕಾಗುತ್ತದೆ. ಇದನ್ನು ಒದಗಿಸುವವರು ನುರಿತ ಸಂಖ್ಯಾಶಾಸ್ತ್ರಜ್ಞರು ಅಥವಾ ಅಂಕಿ-ಅಂಶ ತಜ್ಞರು (Statistical experts).

ಪ್ರಸ್ತುತ ಸಂಖ್ಯಾಶಾಸ್ತ್ರಜ್ಞರಿಗೆ(ಸಂಖ್ಯಾವಿಜ್ಞಾನ ತಜ್ಞರಿಗೆ) ಎಲ್ಲಿಲ್ಲದ ಬೇಡಿಕೆ ಶುರುವಾಗಿದೆ. ಈ ತಜ್ಞರೆಲ್ಲ ಪ್ರತಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳ ಯೋಜನೆಗಳಿಗೆ ಅಗತ್ಯವಾದ ಮಾಹಿತಿ ಒದಗಿಸುತ್ತಾರೆ. ಸ್ಥಳೀಯ ಮತ್ತು ವಿದೇಶಗಳಲ್ಲೂ ಅಪಾರ ಬೇಡಿಕೆ ಹೊಂದಿರುವ ಇವರು, ಗಣಿತ ಮತ್ತು ಸಂಖ್ಯಾಶಾಸ್ತ್ರವನ್ನು ಆಳವಾಗಿ ತಿಳಿದುಕೊಂಡಿರಬೇಕಾಗುತ್ತದೆ.

ಸಂಖ್ಯಾಶಾಸ್ತ್ರದಲ್ಲಿ ಪರಿಣತರಾದವರಿಗೆ ಹಣಕಾಸು, ಜಾಹೀರಾತು, ಸಂಶೋಧನೆ ಮತ್ತು ಅಭಿವೃದ್ಧಿ, ವಿವಿಧ ಗಣತಿ, ಬ್ಯಾಂಕಿಂಗ್, ಎಕಾಲಜಿ ಸೇವೆ, ಮಾರ್ಕೆಟಿಂಗ್, ಆರೋಗ್ಯ, ಚುನಾವಣೆ, ಮನರಂಜನೆ, ಕ್ರೀಡೆ, ಶಿಕ್ಷಣ, ಪ್ರವಾಸೋದ್ಯಮ, ಗುಣಮಟ್ಟ ನಿರ್ಣಯ, ಯೋಜನೆ ಕ್ಷೇತ್ರಗಳಲ್ಲಿ ವಿಪುಲ ಉದ್ಯೋಗದ ಅವಕಾಶಗಳಿವೆ.

ಕೋರ್ಸ್‌ಗಳು ಯಾವುವು?

ಗಣಿತ ಅಥವಾ ಸಂಖ್ಯಾಶಾಸ್ತ್ರ ವಿಷಯಗಳಲ್ಲಿ ಪದವಿ ಪೂರ್ವ ಶಿಕ್ಷಣ ಮುಗಿಸಿರುವ ವಿದ್ಯಾರ್ಥಿಗಳು ಮುಂದೆ, ಇದೇ ವಿಷಯದಲ್ಲಿ ಪದವಿ, ಸ್ನಾತಕೋತ್ತರ ಪದವಿ ಓದಬಹುದು. ನಂತರ ಅದೇ ವಿಷಯದಲ್ಲಿ ಪಿಎಚ್.ಡಿ ಮಾಡಬಹುದು.

ಸಾಮಾನ್ಯವಾಗಿ ವಾಣಿಜ್ಯ ಹಾಗೂ ವಿಜ್ಞಾನ ಓದಿದವರು ಈ ಕೋರ್ಸ್‌ಗಳಿಗೆ ಅರ್ಹರಾಗಿರುತ್ತಾರೆ. ಮೂರು ವರ್ಷದ ಪದವಿ, ಎರಡು ವರ್ಷಗಳ ಸ್ನಾತಕೋತ್ತರ ಪದವಿ, ಆರು ತಿಂಗಳಿನಿಂದ ಒಂದು ವರ್ಷದವರೆಗಿನ ಸರ್ಟಿಫಿಕೇಟ್ ಕೋರ್ಸ್‌ಗಳಿವೆ. ರಾಜ್ಯದ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಮೂರು ವರ್ಷದ ಡಿಪ್ಲೊಮಾ ಕೋರ್ಸ್‌ಗಳೂ ಲಭ್ಯವಿವೆ. ಅರ್ಹ ವಿದ್ಯಾರ್ಥಿಗಳು ಬಿ.ಎ ಮತ್ತು ಎಂ.ಎ ನಲ್ಲಿ ಸ್ಟಾಟಿಸ್ಟಿಕ್ಸ್, ಬಿ.ಎಸ್ಸಿ ಮತ್ತು ಎಂ.ಎಸ್ಸಿಯಲ್ಲಿಸ್ಟಾಟಿಸ್ಟಿಕ್ಸ್‌ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದು. ಹಾಗೆಯೇ ಡಿಪ್ಲೊಮಾದಲ್ಲೂ ಸ್ಟಾಟಿಸ್ಟಿಕ್ಸ್ ವಿಷಯವನ್ನು ಅಧ್ಯಯನ ಮಾಡಲು ಅವಕಾಶವಿದೆ.

ಈ ಎಲ್ಲ ಕೋರ್ಸ್‌ಗಳಲ್ಲಿ ದತ್ತಾಂಶ ಸಂಗ್ರಹಣೆ, ತರ್ಕಬದ್ಧ ವಿಶ್ಲೇಷಣೆ, ಸಂಖ್ಯಾಶಾಸ್ತ್ರೀಯ ಜಿಜ್ಞಾಸೆ, ದತ್ತಾಂಶದ ಮೌಲ್ಯ ನಿರ್ಣಯ, ಅಂಕೆ-ಸಂಖ್ಯೆ ಗಣಿತದ ಮೂಲಭೂತ ಸಿದ್ಧಾಂತಗಳನ್ನು ವ್ಯವಸ್ಥಿತವಾಗಿ ಕಲಿಸಿಕೊಡುತ್ತವೆ.

ಸಮಸ್ಯೆ ಬಿಡಿಸುವುದು, ಬದಲಾಗುತ್ತಿರುವ ಅಂಕಿ-ಅಂಶಗಳ ತ್ವರಿತ ತಿಳುವಳಿಕೆ, ಸಂಖ್ಯಾಶಾಸ್ತ್ರದ ವಿಸ್ತೃತ ಮತ್ತು ಖಚಿತ ಜ್ಞಾನ ಹೊಂದುವ ವಿದ್ಯಾರ್ಥಿಗಳು ಉದ್ಯಮ, ಸರ್ಕಾರ, ಸಂಸ್ಥೆಗಳು ಬಯಸುವ ಕೌಶಲವನ್ನು ಹೊಂದಿರುತ್ತಾರೆ.

ಎಲ್ಲೆಲ್ಲಿ ವಿದ್ಯಾಭ್ಯಾಸ?

ಭಾರತೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆಯಲ್ಲಿ(ISI) ಪದವಿ ಪಡೆಯುವುದು ಬಹುತೇಕ ವಿದ್ಯಾರ್ಥಿಗಳ ಕನಸಾಗಿರುತ್ತದೆ. ಅಲ್ಲಿ ಓದಿದರೆ ಉನ್ನತ ಹುದ್ದೆಯ ಜೊತೆಗೆ, ಕೈತುಂಬಾ ವೇತನ ಸಿಗುತ್ತದೆ. ಈ ಸಂಸ್ಥೆಯಲ್ಲಿ ಪ್ರವೇಶ ಪಡೆಯಲು ಪ್ರವೇಶ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಹಾಗೆಯೇ ಪುಣೆ ವಿಶ್ವವಿದ್ಯಾಲಯ, ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯ, ದೆಹಲಿ ವಿವಿ, ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿಗಳು ಪ್ರವೇಶ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತವೆ. ಇವುಗಳಲ್ಲದೇ ಭಾರತದ ಬಹುತೇಕ ವಿವಿಗಳ ಅಧೀನದ ಕಾಲೇಜುಗಳಲ್ಲಿ ಅಧ್ಯಯನಕ್ಕೆ ಅವಕಾಶವಿದೆ. ದೆಹಲಿ, ಬೆಂಗಳೂರು, ಚೆನ್ನೈ, ಕೋಲ್ಕತ್ತಾದ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್, ಐಐಟಿ ಕಾನ್ಪುರ್, ಚೆನ್ನೈನ ಲೊಯೋಲ ಕಾಲೇಜು, ಅಹಮದಾಬಾದ್‌ನ ಕ್ಸೇವಿರ್ಸ್, ಇಂದೋರ್‌ನ ದೇವಿ ಅಹಲ್ಯ ವಿವಿ, ದೆಹಲಿಯ ಸೇಂಟ್ ಸ್ಟೀಫನ್ಸ್, ಹಿಂದೂ ಕಾಲೇಜುಗಳಲ್ಲೂ ಅಧ್ಯಯನಕ್ಕೆ ಅವಕಾಶಗಳಿವೆ. ಅಮೆರಿಕದ ಎಂಐಟಿ, ಹಾರ್ವರ್ಡ್, ಸ್ಟಾನ್‌ಫೊರ್ಡ್, ಜಾರ್ಜಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಿಚಿಗನ್ ವಿವಿ, ಕಾರ್ನೆಲ್ ವಿವಿ, ವಾಷಿಂಗ್ಟನ್ ವಿವಿ, ಯುರೋಪಿನ ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಇಂಪೀರಿಯಲ್ ಕಾಲೇಜು, ಸಿಂಗಪುರದ ನ್ಯಾಷನಲ್ ವಿವಿ, ಕ್ಯಾಲಿಫೋರ್ನಿಯ ವಿವಿ, ಆಸ್ಟ್ರೇಲಿಯಾದ ಮೆಲ್ಬರ್ನ್ ವಿವಿ, ಜಪಾನ್‌ನ ಟೋಕಿಯೊ ವಿವಿಗಳಲ್ಲೂ ಸಹ ಉನ್ನತ ವಿದ್ಯಾಭ್ಯಾಸದ ಅವಕಾಶಗಳಿವೆ.

ಇವುಗಳಲ್ಲದೇ ಆನ್‌ಲೈನ್ ಮಾದರಿಯಲ್ಲೂ ಸಂಖ್ಯಾಶಾಸ್ತ್ರ ಕಲಿಸುವ ಅನೇಕ ವಿವಿಗಳು ವಿದೇಶದಲ್ಲಿವೆ. ಪದವಿ ಶಿಕ್ಷಣದ ನಂತರ ಬಯೋ ಇನ್‌ಫಾರ್ಮ್ಯಾಟಿಕ್ಸ್, ಬಯೋಸ್ಟಾಟಿಸ್ಟಿಕ್ಸ್, ಪಬ್ಲಿಕ್ ಹೆಲ್ತ್, ಆಸ್ಟ್ರೋನಮಿ, ಆಸ್ಟ್ರೊಫಿಸಿಕ್ಸ್, ಡಿಜಿಟಲ್ ಮಾರ್ಕೆಟಿಂಗ್, ಅರ್ಥಶಾಸ್ತ್ರ, ಆಕ್ಚುಏರಿಯಲ್ ಸೈನ್ಸ್ ವಿಷಯಗಳಲ್ಲಿ ಉನ್ನತ ಅಧ್ಯಯನ ಕೈಗೊಳ್ಳಬಹುದು.

ಯಾವ ಕ್ಷೇತ್ರದಲ್ಲಿ ಉದ್ಯೋಗ ?

ಹಣಕಾಸು, ಜಾಹೀರಾತು, ಸಂಶೋಧನೆ ಮತ್ತು ಅಭಿವೃದ್ಧಿ, ವಿವಿಧ ಗಣತಿ, ಬ್ಯಾಂಕಿಂಗ್, ಎಕಾಲಜಿ ಸೇವೆ, ಮಾರ್ಕೆಟಿಂಗ್, ಆರೋಗ್ಯ, ಚುನಾವಣೆ, ಮನರಂಜನೆ, ಕ್ರೀಡೆ, ಶಿಕ್ಷಣ, ಪ್ರವಾಸೋದ್ಯಮ, ಗುಣಮಟ್ಟ ನಿರ್ಣಯ, ಯೋಜನೆ ಮತ್ತು ಅನುಷ್ಠಾನಗಳಿಗೆ ಸಂಬಂಧಿಸಿದ ರಂಗಗಳಲ್ಲಿ ಸಂಖ್ಯಾಶಾಸ್ತ್ರ ಓದಿದವರಿಗೆ ವಿಪುಲ ಉದ್ಯೋಗದ ಅವಕಾಶಗಳಿವೆ. ಅಮೆರಿಕವೊಂದರಲ್ಲೆ ಮುಂದಿನ ಐದು ವರ್ಷಗಳಲ್ಲಿ ಸಂಖ್ಯಾಶಾಸ್ತ್ರ ವಿಷಯ ತಜ್ಞರ ಬೇಡಿಕೆ ಶೇ 34 ರಷ್ಟು ಹೆಚ್ಚಲಿದೆ ಎಂಬ ಅಂದಾಜಿದೆ.

ಕೆಲಸ ನೀಡುವ ಸಂಸ್ಥೆಗಳು: ಪದವಿ ಮತ್ತು ಉನ್ನತ ಪದವಿ ಪಡೆದವರನ್ನು ಈ ಕೆಳಕಂಡ ಉದ್ಯಮಗಳು ಕೆಲಸಕ್ಕಾಗಿ ಕೈಬೀಸಿ ಕರೆಯುತ್ತವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಎಚ್.ಡಿ.ಎಫ್.ಸಿ, ಜಿ.ಇ. ಕ್ಯಾಪಿಟಲ್, ಕಾಗ್ನಿಜಂಟ್, ಅಮೆರಿಕನ್ ಎಕ್ಸ್‌ಪ್ರೆಸ್, ಟಿಎನ್‌ಎಸ್ ಇನ್ನೊವೇಶನ್ ಲ್ಯಾಬ್ಸ್, ಬ್ಲ್ಯೂ ಓಶನ್ ಮಾರ್ಕೆಟಿಂಗ್, ಬಿ.ಎನ್.ಪಿ. ಪರಿಬಾಸ್ ಇಂಡಿಯಾ, ಅಕ್ಸೆಂಚರ್, ನೀಲ್ಸನ್ ಕಂಪನಿ, ಹೆವ್‌ಲೆಟ್ ಪಕಾರ್ಡ್, ಎಚ್.ಎಸ್.ಬಿ.ಸಿ, ಇಂಡಿಯನ್ ಮಾರ್ಕೆಟ್ ರಿಸರ್ಚ್ ಬ್ಯೂರೊ, ಜೆನ್‌ಪ್ಯಾಕ್ಟ್, ಡೆಲಾಯಿಟ್ ಕನ್ಸಲ್ಟಿಂಗ್.

ಎಂಥ ಉದ್ಯೋಗ ?

ಸ್ಟಾಟಿಸ್ಟಿಕ್ಸ್ ವಿಷಯದಲ್ಲಿ ಅಧ್ಯಯನ ಮಾಡಿರುವವರು ಈ ಕೆಳಗಿನ ಹುದ್ದೆಗಳನ್ನು ನಿರ್ವಹಿಸಲು ಅರ್ಹತೆ ಪಡೆಯುತ್ತಾರೆ. ಹಾಗೆಯೇ, ವಾರ್ಷಿಕ ಕನಿಷ್ಠ ₹4 ಲಕ್ಷದಿಂದ ₹10 ಲಕ್ಷದವರೆಗೂ ವೇತನ ಪಡೆಯುತ್ತಾರೆ. ಅಮೆರಿಕದಲ್ಲಿ ವಾರ್ಷಿಕ ಸಂಬಳ 70,000 ಡಾಲರ್‌ನಷ್ಟಿದೆ.

ಸ್ಟಾಟಿಸ್ಟೀಶಿಯನ್, ಡೇಟಾ ಸೈಂಟಿಸ್ಟ್, ಎಸ್‌ಎಎಸ್ ಡೆವೆಲಪರ್, ಬ್ಯುಸಿನೆಸ್ ಅನಾಲಿಸ್ಟ್, ಮ್ಯಾಥಮ್ಯಾಟೀಶಿಯನ್, ರಿಸ್ಕ್ ಅನಾಲಿಸ್ಟ್, ಡೇಟಾ ಅನಾಲಿಸ್ಟ್, ಕಂಟೆಂಟ್ ಅನಾಲಿಸ್ಟ್, ಸ್ಟಾಟಿಸ್ಟಿಕ್ಸ್ ಟ್ರೇನರ್, ಡೇಟಾ ಅನಾಲಿಸ್ಟ್, ಬಯೋ ಸ್ಟಾಟ್‌ಟೀಸಿಯನ್,ಎಕನಾಮೆಟ್ರೀಶಿಯನ್ ಮತ್ತು ಕನ್ಸಲ್ಟೆಂಟ್ ಆಗಿ ಕೆಲಸ ಮಾಡಬಹುದು.

(ಲೇಖಕರು: ಪ್ರಾಚಾರ್ಯರು, ವಿದಿಯ ಪೂರ್ಣಪ್ರಜ್ಞ ಕಾಲೇಜು, ಬೆಂಗಳೂರು)

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ಫಾರ್ಮಸಿ: ಉದ್ಯೋಗ ಬೇಡಿಕೆ ಹೇಗಿದೆ?

1. ನಾನು ಬಿ.ಫಾರ್ಮಾ ಮುಗಿಸಿ ಎಂ.ಫಾರ್ಮಾ ಮಾಡಬೇಕೆಂದಿದ್ದೇನೆ. ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಯಾವ ವಿಷಯಕ್ಕೆ ಹೆಚ್ಚಿನ ಬೇಡಿಕೆಯಿದೆ? ಹಾಗೂ, ಸೌದಿ ಅರೇಬಿಯ ದೇಶದಲ್ಲಿ ಯಾವ ವಿಷಯಕ್ಕೆ ಬೇಡಿಕೆಯಿದೆ?

ಹೆಸರು, ಊರು ತಿಳಿಸಿಲ್ಲ.

ಎಂ.ಫಾರ್ಮಾ ಕೋರ್ಸ್ ಅನ್ನು ಬಯೋಟೆಕ್ನಾಲಜಿ, ಫಾರ್ಮಾಸ್ಯೂಟಿಕಲ್ ಕೆಮಿಸ್ಟ್ರಿ, ಫಾರ್ಮಾಸ್ಯೂಟಿಕ್ಸ್, ಫಾರ್ಮಾಕಾಲಜಿ, ಫಾರ್ಮಾಸ್ಯೂಟಿಕಲ್ ಪ್ರಾಕ್ಟೀಸ್, ಫಾರ್ಮಾಸ್ಯೂಟಿಕಲ್ ಕ್ವಾಲಿಟಿ ಅಶ್ಯೂರೆನ್ಸ್, ರೆಗ್ಯುಲೇಟರಿ ಅಫೇರ್ಸ್ ಮುಂತಾದ ವಿಷಯಗಳಲ್ಲಿ ಮಾಡಬಹುದು. ಈ ಎಲ್ಲಾ ಕ್ಷೇತ್ರಗಳಿಗೂ ಬೇಡಿಕೆಯಿದೆ; ಹಾಗಾಗಿ, ಎಂ.ಫಾರ್ಮಾ ಕೋರ್ಸ್ ನಂತರದ ನಿಮ್ಮ ವೃತ್ತಿಯೋಜನೆಯಂತೆ ನಿರ್ಧರಿಸಿ.

ನಮಗಿರುವ ಮಾಹಿತಿಯಂತೆ, ಸೌದಿ ಅರೇಬಿಯ ಸೇರಿದಂತೆ ಅನೇಕ ಮಧ್ಯಪ್ರಾಚ್ಯ ದೇಶಗಳಲ್ಲಿ ವೃತ್ತಿಯನ್ನು ಅರಸಲು ಪ್ರಾಯೋಗಿಕ ಅನುಭವದ ಜೊತೆಗೆ ಸ್ಥಳೀಯ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ವೃತ್ತಿಯೋಜನೆ ಕುರಿತ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

2. ನನ್ನ ಮಗ ಎಂ.ಎಸ್ಸಿ (ಗಣಿತ) ಓದುತ್ತಿದ್ದಾನೆ. ಇದಾದ ನಂತರ ಎಂಬಿಎ ಅಥವಾ ಡೇಟಾ ಅನಾಲಿಸಿಸ್ ಕಲಿಯಬೇಕೆಂದಿದ್ದಾನೆ. ಡೇಟಾ ಅನಾಲಿಸಿಸ್ ಕೋರ್ಸ್ ಬಗ್ಗೆ ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

ಸಂಸ್ಥೆಗಳ ಕಾರ್ಯಾಚರಣೆ, ಹಣಕಾಸು ಮಾರುಕಟ್ಟೆ, ಸರ್ಕಾರಿ ಇಲಾಖೆಗಳ ವ್ಯವಹಾರಗಳು, ಗ್ರಾಹಕರ ಆದ್ಯತೆಗಳು ಮತ್ತು ನಡವಳಿಕೆಗಳು, ಉದ್ಯೋಗಿಗಳ ಕಾರ್ಯಕ್ಷಮತೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸಂಗ್ರಹವಾಗುವ ದತ್ತಾಂಶವನ್ನು, ಒಂದು ಚೌಕಟ್ಟಿನಲ್ಲಿ ಅರ್ಥೈಸಲು, ದತ್ತಾಂಶದ ವಿಶ್ಲೇಷಣೆ (ಡೇಟಾ ಅನಾಲಿಸಿಸ್) ಅತ್ಯವಶ್ಯಕವಾಗಿದೆ. ಹಾಗಾಗಿ, ದತ್ತಾಂಶ ವಿಶ್ಲೇಷಣೆ ಉದ್ಯೋಗ ಮಾರುಕಟ್ಟೆಯ ಮುಂಚೂಣಿಯಲ್ಲಿರುವ ಕ್ಷೇತ್ರ. ಎಂ.ಎಸ್ಸಿ ನಂತರ ಪೂರ್ಣಾವಧಿ/ಅಲ್ಪಾವಧಿ ದತ್ತಾಂಶ ಸಂಗ್ರಹಣೆ, ವಿಶ್ಲೇಷಣೆ ಮತ್ತು ನಿರ್ವಹಣೆ ಕುರಿತಾದ ಕೋರ್ಸ್ಗಳನ್ನು ಕ್ಯಾಂಪಸ್ ನೇರ ನೇಮಕಾತಿಯಿರುವ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಂದ ಮಾಡಬಹುದು. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ದತ್ತಾಂಶ ದೃಶ್ಯೀಕರಣ, ವಿಶ್ಲೇಷಣಾ ಕೌಶಲ, ವಿವರಗಳಿಗೆ ಗಮನ, ಸಂಖ್ಯಾಶಾಸ್ತ್ರದ ತಜ್ಞತೆ, ಕ್ರಮಾವಳಿ, ಯೋಜನೆಯ ನಿರ್ವಹಣೆ ಮುಂತಾದ ವೃತ್ತಿಪರ ಕೌಶಲಗಳನ್ನು ಮೈಗೂಡಿಸಿಕೊಳ್ಳಬೇಕು.

3. ಪಿಯುಸಿ ನಂತರದ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

ಪಿಯುಸಿ ನಂತರ, ನಿಮ್ಮ ವಿಭಾಗದ ಪ್ರಕಾರ (ವಿಜ್ಞಾನ, ವಾಣಿಜ್ಯ, ಕಲಾ ವಿಭಾಗ) ವೈವಿಧ್ಯಮಯ ಕೋರ್ಸ್ ಆಯ್ಕೆಗಳಿವೆ. ಮೊದಲು, ನಿಮ್ಮ ಸಾಮರ್ಥ್ಯ, ಸ್ವಾಭಾವಿಕ ಪ್ರತಿಭೆ, ಆಸಕ್ತಿ ಮತ್ತು ಕೌಶಲಗಳನ್ನು ವಿಶ್ಲೇಷಿಸಿ, ವೃತ್ತಿಯ ಆಯ್ಕೆಯನ್ನು ಮಾಡಿ, ಅದರಂತೆ ಕೋರ್ಸ್ ಆಯ್ಕೆಯಿರಲಿ. ಪಿಯುಸಿ ನಂತರದ ಕೋರ್ಸ್ ಆಯ್ಕೆಗಳಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=ChvTG9rg33A

4. ನನಗೆ ಎಂಬಿಬಿಎಸ್ ಮಾಡುವ ಆಸೆ ಇದೆ. ಆದರೆ, ಅಷ್ಟೊಂದು ಹಣ ಕೊಟ್ಟು ಓದುವ ಶಕ್ತಿಯಿಲ್ಲ. ನಾನು ಏನು ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ಎಂಬಿಬಿಎಸ್ ಪ್ರವೇಶಕ್ಕೆ ಆಯೋಜಿಸುವ ನೀಟ್ ಅತ್ಯಂತ ಸ್ಪರ್ಧಾತ್ಮಕ ಪರೀಕ್ಷೆ. ಆದ್ದರಿಂದ, ನೀಟ್ ಪರೀಕ್ಷೆಯ ಮೂಲಕ ಸರ್ಕಾರಿ ಕೋಟಾದಲ್ಲಿ ಸೀಟ್ ಪಡೆಯುವುದೇ ಮೊದಲ ಗುರಿಯಾಗಿರಲಿ. ಕಳೆದ ವರ್ಷಗಳ ಕಟ್ ಆಫ್ ಮಾಹಿತಿ ಅಂತರ್ಜಾಲದಲ್ಲಿ ಸುಲಭವಾಗಿ ಲಭ್ಯವಿದೆ. ಈ ಮಾಹಿತಿಯನ್ನು ಆಧರಿಸಿ, ಸೂಕ್ತವಾದ ಕಾರ್ಯತಂತ್ರವನ್ನು ರಚಿಸಿ, ಏಕಾಗ್ರತೆ ಮತ್ತು ಪರಿಶ್ರಮದಿಂದ ಅನುಷ್ಠಾನಗೊಳಿಸಿ.

ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ವಿದ್ಯಾರ್ಥಿ ವೇತನಗಳು ಮತ್ತು ಸ್ಕಾಲರ್‌ಶಿಪ್ ಸೌಲಭ್ಯಗಳಿವೆ. ಹೆಚ್ಚಿನ ವಿವರಗಳಿಗಾಗಿ ಈ ಜಾಲತಾಣವನ್ನು ಗಮನಿಸಿ: https://scholarships.gov.in/

ಇದಲ್ಲದೆ, ಶೈಕ್ಷಣಿಕ ಸಾಲವನ್ನು ಆಕರ್ಷಕ ಬಡ್ಡಿದರ ಮತ್ತು ವಿದ್ಯಾರ್ಥಿಸ್ನೇಹಿ ನಿಯಮಗಳೊಂದಿಗೆ ದೇಶದಲ್ಲಿರುವ ಎಲ್ಲಾ ಬ್ಯಾಂಕ್‌ಗಳು ನೀಡುತ್ತವೆ. ಕೇಂದ್ರ ಹಣಕಾಸು ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ ಮತ್ತು ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ ಮಾರ್ಗದರ್ಶನದಲ್ಲಿ ಈ ಸಾಲ ಪಡೆಯಲು ವಿದ್ಯಾಲಕ್ಷ್ಮಿ ಜಾಲತಾಣ ಅಭಿವೃದ್ಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://www.vidyalakshmi.co.in/Students/

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ನ್ಯಾಷನಲ್ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಅಥಾರಿಟಿ ಸ್ಕೀಮ್ 2023

- **ವಿವರ:** ವಿಪತ್ತು ನಿರ್ವಹಣೆ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಕೇಂದ್ರ ಸರ್ಕಾರದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ರೂಪಿಸಿರುವ ಯೋಜನೆ ನ್ಯಾಷನಲ್ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಅಥಾರಿಟಿ ಸ್ಕೀಮ್ 2023.
- **ಅರ್ಹತೆ:** ವಿಪತ್ತು ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ ಅಥವಾ ಡೆವಲಪ್ಮೆಂಟ್ ಸ್ಟಡೀಸ್/ ಎಕನಾಮಿಕ್ಸ್/ ಹ್ಯುಮಾನಿಟೀಸ್/ ಸೈನ್ಸಸ್/ ಮ್ಯಾನೇಜ್ಮೆಂಟ್/ ಎಂಜಿನಿಯರಿಂಗ್/ ಹೆಲ್ತ್ ಸ್ಟಡೀಸ್ ಮುಂತಾದ ತತ್ಸಮಾನ ಸ್ನಾತಕೋತ್ತರ ಪದವಿಗೆ ದಾಖಲಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಸಂಬಂಧಪಟ್ಟ ವಿಷಯದಲ್ಲಿ ಇತ್ತೀಚೆಗೆ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದಿರಬೇಕು. (ಗಮನಿಸಿ: ವಿದ್ಯಾರ್ಥಿಯು ವಿಭಿನ್ನ ಶೈಕ್ಷಣಿಕ ವಿಷಯ ಆಯ್ಕೆ ಮಾಡಿಕೊಂಡಿದ್ದರೂ, ಆ ನಿರ್ದಿಷ್ಟ ಪದವಿ ವಿಪತ್ತು ನಿರ್ವಹಣೆಯೊಂದಿಗೆ ಸ್ಪಷ್ಟವಾದ ಸಂಪರ್ಕ ಹೊಂದಿರಬೇಕು).
- **ಆರ್ಥಿಕ ಸಹಾಯ:** ₹ 12 ಸಾವಿರ (ಮಾಸಿಕ)
- **ಅರ್ಜಿ ಸಲ್ಲಿಸಲು ಕೊನೆಯ ದಿನ:** ವರ್ಷಪೂರ್ತಿ
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/NDMS3

ಕೀಪ್ ಇಂಡಿಯಾ ಸ್ಮೈಲಿಂಗ್ ಸ್ಕಾಲರ್‌ಶಿಪ್

- **ವಿವರ:** ಆರ್ಥಿಕ ಸಂಕಷ್ಟದಲ್ಲಿರುವ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು ಕೋಲ್ಗೇಟ್-ಪಾಮೊಲಿವ್ (ಇಂಡಿಯಾ) ಲಿಮಿಟೆಡ್ ರೂಪಿಸಿರುವ ಕಾರ್ಯಕ್ರಮ 'ಕೀಪ್ ಇಂಡಿಯಾ ಸ್ಮೈಲಿಂಗ್ ಸ್ಕಾಲರ್‌ಶಿಪ್ ಪ್ರೋಗ್ರಾಂ'.
- **ಅರ್ಹತೆ:** ಅರ್ಜಿದಾರರು ಪದವೀಧರರಾಗಿರಬೇಕು ಮತ್ತು ಹಿಂದುಳಿದ ವರ್ಗಗಳ ಮಕ್ಕಳ ಗುಂಪಿಗೆ ಕ್ರೀಡಾ ತರಬೇತಿ ನೀಡುವಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು. ಕ್ರೀಡಾಪಟುಗಳಾಗಿದ್ದರೆ, ಅರ್ಜಿದಾರರು ಕಳೆದ 2/3 ವರ್ಷಗಳಲ್ಲಿ ರಾಜ್ಯ/ ರಾಷ್ಟ್ರೀಯ/ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ/ ದೇಶವನ್ನು ಪ್ರತಿನಿಧಿಸಿರಬೇಕು. ರಾಷ್ಟ್ರೀಯ ಶ್ರೇಯಾಂಕದಲ್ಲಿ 500 ರೊಳಗೆ / ರಾಜ್ಯ ಶ್ರೇಯಾಂಕದಲ್ಲಿ 100 ರೊಳಗೆ ಸ್ಥಾನ ಪಡೆದಿರಬೇಕು. 9 ರಿಂದ 20 ವರ್ಷ ವಯಸ್ಸಿನವರಾಗಿರಬೇಕು. ಎಲ್ಲಾ ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷಗಳಿಗಿಂತ ಕಡಿಮೆಯಿರಬೇಕು
- **ಆರ್ಥಿಕ ಸಹಾಯ:** ಮೂರು ವರ್ಷಗಳವರೆಗೆ ₹ 75 ಸಾವಿರ ಜತೆಗೆ ವಿದ್ಯಾರ್ಥಿ ವೇತನ ಪ್ರಶಸ್ತಿ ಪತ್ರ
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-06-2023

ಅರ್ಜಿ ಸಲ್ಲಿಸುವ ವಿಧಾನ : ಆನ್‌ಲೈನ್

Short Url: www.b4s.in/praja/KSSI2

ಐಎಸ್ಇಸಿ ಜನಸಂಖ್ಯಾ ಸಂಶೋಧನಾ ಕೇಂದ್ರದಿಂದ ಸಮೀಕ್ಷಾ ವರದಿ ಸಿದ್ಧ

ಆಯುಷ್ಮಾನ್: ಸವಾಲಾದ ತುರ್ತು ಸೇವೆ

• ವರುಣ ಹೆಗಡೆ



ಬೆಂಗಳೂರು: 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ತುರ್ತು ವೈದ್ಯಕೀಯ ಸೇವೆ ಹಾಗೂ ಖಾಸಗಿ ವ್ಯವಸ್ಥೆಯಡಿ ಚಿಕಿತ್ಸೆ ಪಡೆಯುವುದು ಸವಾಲಾಗಿದೆ ಎನ್ನುವುದು ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯಿಂದ ದೃಢಪಟ್ಟಿದೆ.

ಯೋಜನೆಯ ಬಗ್ಗೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯ (ಐಎಸ್ಇಸಿ) ಜನಸಂಖ್ಯಾ ಸಂಶೋಧನಾ ಕೇಂದ್ರ ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಿದೆ.

ಪ್ರಜಾವಾಣಿ ವಿಶೇಷ

ಈ ಸಮೀಕ್ಷೆಗೆ ಕೇಂದ್ರವು ಬೆಂಗಳೂರು, ತುಮಕೂರು ಹಾಗೂ ಯಾದಗಿರಿಯನ್ನು ಆಯ್ಕೆ ಮಾಡಿಕೊಂಡಿತ್ತು. ಕೇಂದ್ರದ ಪ್ರಾಧ್ಯಾಪಕ ಡಾ.ಸಿ.ಎಂ. ಲಕ್ಷ್ಮಣ ಅವರ ನೇತೃತ್ವದ ತಂಡ ಸಮೀಕ್ಷೆ ನಡೆಸಿದ್ದು, ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಈ ವರದಿ ಸಲ್ಲಿಕೆ ಆಗಲಿದೆ.

ಯೋಜನೆಯ ಫಲಾನುಭವಿಗಳಲ್ಲಿ ಶೇ 71.33ರಷ್ಟು ಮಂದಿ ಸರ್ಕಾರಿ ವ್ಯವಸ್ಥೆಯಡಿ ಚಿಕಿತ್ಸೆ ಪಡೆದರೆ, ಶೇ 28.66ರಷ್ಟು ಮಂದಿಗೆ ಮಾತ್ರ ಖಾಸಗಿ ವ್ಯವಸ್ಥೆಯಡಿ ವೈದ್ಯಕೀಯ ಸೇವೆ ದೊರೆತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮೊದಲ ಹಂತದಲ್ಲಿ ಮೂರು ಜಿಲ್ಲೆಗಳಿಂದ 400 ಮನೆಗಳಿಗೆ ಭೇಟಿ ನೀಡಿ, ಯೋಜನೆಯ ಬಗ್ಗೆ ವಿಚಾರಿಸಲಾಗಿತ್ತು. ಎರಡನೇ ಹಂತದಲ್ಲಿ ಯೋಜನೆಯಡಿ ಚಿಕಿತ್ಸೆ ಪಡೆದವರ 150 ಜನರ ಮಾಹಿತಿಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಪಡೆದು, ಸಂದರ್ಶಿಸಲಾಗಿದೆ. ಇದರಲ್ಲಿ ಪ್ರತಿ ಜಿಲ್ಲೆಯಿಂದ ತಲಾ 50 ಮಂದಿಯನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. 2023ರ ಜನವರಿಯಲ್ಲಿ ಈ ಸಮೀಕ್ಷೆ ನಡೆದಿದೆ.

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ 2018ರಲ್ಲಿ ಆರಂಭವಾಗಿದ್ದು, ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು 'ಆಯುಷ್ಮಾನ್ ಭಾರತ್' ಯೋಜನೆ ಅಡಿ ಬರಲಿವೆ. ಉಳಿದ ಕುಟುಂಬಗಳನ್ನು 'ಆರೋಗ್ಯ ಕರ್ನಾಟಕ' ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹ 1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ.

ಸಿಗದ ಸೇವೆ: 'ನಗದುರಹಿತ ಚಿಕಿತ್ಸೆಯಾಗಿರುವುದರಿಂದ ಖಾಸಗಿ ಆಸ್ಪತ್ರೆಗಳು ಯೋಜನೆಯಡಿ ದಾಖಲಿಸಿಕೊಳ್ಳಲು ಹಿಂದೇಟು ಹಾಕುತ್ತಿವೆ. ಹೀಗಾಗಿ, ಖಾಸಗಿ ವ್ಯವಸ್ಥೆಯಡಿ ಚಿಕಿತ್ಸೆ ಸಮಸ್ಯೆಯಾಗಿದೆ. ಸಮೀಕ್ಷೆ ಒಳಪಟ್ಟವರಲ್ಲಿ ಹೆಚ್ಚಿನವರು ಹೃದಯ ಸಂಬಂಧಿ ಸಮಸ್ಯೆಗಳಿಗೆ (ಶೇ 24) ಚಿಕಿತ್ಸೆ ಪಡೆದವರಾಗಿದ್ದಾರೆ. ಶೇ 19.33 ರಷ್ಟು ಮಂದಿ ಕ್ಯಾನ್ಸರ್, ಶೇ 15.33 ರಷ್ಟು ಮಂದಿ ಮೂತ್ರಪಿಂಡ ಸಮಸ್ಯೆ, ಶೇ 12.66 ರಷ್ಟು ಮಂದಿ ಅಪಘಾತ ಹಾಗೂ ಶೇ 6 ರಷ್ಟು ಮಂದಿ ಹೆರಿಗೆ ಮತ್ತು ಮಕ್ಕಳ ಆರೋಗ್ಯಕ್ಕೆ ಚಿಕಿತ್ಸೆ ಪಡೆದಿದ್ದಾರೆ' ಎಂದು ವರದಿಯಲ್ಲಿ ಹೇಳಲಾಗಿದೆ.

'ಯೋಜನೆಯಡಿ ಸೇವೆ ಪಡೆದವರಲ್ಲಿ ನಾಲ್ಕನೇ ಒಂದರಷ್ಟು ಮಂದಿಗೆ ಮಾತ್ರ ತುರ್ತು ಸೇವೆ ದೊರೆತಿದೆ. ಅಪಘಾತ, ಉಸಿರಾಟ ಸಂಬಂಧಿ ಸಮಸ್ಯೆಗಳು, ಹೆರಿಗೆ ಸೇವೆ ವಿವಿಧ ತುರ್ತು ಸೇವೆಗಳ ಸಂದರ್ಭದಲ್ಲಿ ವೈದ್ಯಕೀಯ ಸೇವೆ ತೃಪ್ತಿದಾಯಕವಾಗಿಲ್ಲ. 10 ಹಾಗೂ ಅದಕ್ಕಿಂತ ಹೆಚ್ಚಿನ ಅವಧಿ ಯೋಜನೆಯಡಿ ಚಿಕಿತ್ಸೆ ಪಡೆದವರ ಪ್ರಮಾಣ ಶೇ 14.66 ರಷ್ಟು ಮಾತ್ರ. ಶೇ 42.66 ರಷ್ಟು ಮಂದಿ ಒಂದರಿಂದ ಐದು ದಿನಗಳು ಚಿಕಿತ್ಸೆ ಪಡೆದಿದ್ದಾರೆ' ಎಂದು ತಿಳಿಸಲಾಗಿದೆ.

> ಯೋಜನೆ ಎಷ್ಟರ ಮಟ್ಟಿಗೆ ತಲುಪಿದೆ ಎನ್ನುವುದನ್ನು ತಿಳಿಯಲು ಈ ಅಧ್ಯಯನ ಸಹಕಾರಿ. ಸಮೀಕ್ಷೆಗೆ ಒಳಪಟ್ಟವರಲ್ಲಿ ಶೇ 60ರಷ್ಟು ಮಂದಿಗೆ ಯೋಜನೆ ಬಗ್ಗೆ ತಿಳಿದಿತ್ತು.
>
> **ಡಾ.ಸಿ.ಎಂ. ಲಕ್ಷ್ಮಣ**
> ಐಎಸ್ಇಸಿ ಜನಸಂಖ್ಯಾ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ

ಅಂಕಿ–ಅಂಶಗಳು

₹1,650 ಯೋಜನೆ ಅಡಿ ಬರುವ ಚಿಕಿತ್ಸಾ ವಿಧಾನಗಳು

₹3,482 ಯೋಜನೆಯಡಿ ಸೇವೆ ನೀಡುವ ಆಸ್ಪತ್ರೆಗಳು

'ಒಂದು ಗಂಟೆಯೊಳಗೆ ಚಿಕಿತ್ಸೆ'

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ ಬಗ್ಗೆ ಶೇ 98ರಷ್ಟು ಮಂದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆದರೆ, ಇದರ ಅನುಷ್ಠಾನದ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ. ಯೋಜನೆಯ ಫಲಾನುಭವಿಗಳಲ್ಲಿ ಶೇ 85.5ರಷ್ಟು ಮಂದಿಗೆ ಆಸ್ಪತ್ರೆಗೆ ತೆರಳಿದ ಒಂದು ಗಂಟೆಯೊಳಗೆ ಚಿಕಿತ್ಸೆ ಆರಂಭಿಸಲಾಗಿದೆ. ಶೇ 12.66ರಷ್ಟು ಮಂದಿಗೆ ಎರಡರಿಂದ ಮೂರು ಗಂಟೆಯ ಅವಧಿಯಲ್ಲಿ ಚಿಕಿತ್ಸೆ ದೊರೆತರೆ, ಶೇ 1.33ರಷ್ಟು ಮಂದಿಗೆ ಮರುದಿನ ಬರಲು ಸೂಚಿಸಲಾಗಿದೆ. ಯೋಜನೆಯಡಿ ಚಿಕಿತ್ಸೆ ಪಡೆದವರಲ್ಲಿ ಶೇ 62.66ರಷ್ಟು ಮಂದಿ ಪೂರ್ಣ ಪ್ರಮಾಣದಲ್ಲಿ ಗುಣಮುಖರಾದರೆ, ಶೇ 36.66ರಷ್ಟು ಮಂದಿ ಭಾಗಶಃ ಚೇತರಿಸಿಕೊಂಡಿದ್ದಾರೆ.

'ಪ್ರತಿ ವರ್ಷ ಸರ್ಕಾರಿ ಯೋಜನೆಯ ಬಗ್ಗೆ ಅಧ್ಯಯನ ನಡೆಸುತ್ತೇವೆ. ಸಮೀಕ್ಷೆಗೆ ಆಯ್ದುಕೊಂಡ ಮೂರು ಜಿಲ್ಲೆಗಳಲ್ಲಿ ಹಿಂದುಳಿದ, ಮುಂದುವರಿದ ಹಾಗೂ ಕೊಳೆಗೇರಿ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಕೆಲವೊಂದು ಸಮಸ್ಯೆಗಳನ್ನು ಹೊರತುಪಡಿಸಿದರೆ ಜನರಿಗೆ ಯೋಜನೆ ಬಗ್ಗೆ ಉತ್ತಮ ಅಭಿಪ್ರಾಯವಿದೆ' ಎಂದು ಡಾ.ಸಿ.ಎಂ. ಲಕ್ಷ್ಮಣ ತಿಳಿಸಿದರು.

ಜೀವಕ್ಕೆ ಮಲಿನ 'ಜಲ' ಕಂಟಕ

ಒಂದನೇ ಪುಟದಿಂದ...

ಸಾವು ನೋವು ಸಂಭವಿಸಿದ ಬಳಿಕ ಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತ ವಾಂತಿ ಭೇದಿ ಪ್ರಕರಣ ಕಂಡುಬಂದ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರು ಪೂರೈಸುತ್ತಿದೆ. ಹಲವು ವರ್ಷಗಳಿಂದ ಸ್ವಚ್ಛಗೊಳ್ಳದ, ಬಣ್ಣವೂ ಕಾಣದ ನೀರು ಸಂಗ್ರಹ ತೊಟ್ಟಿಗಳು ಹಾಗೂ ಟ್ಯಾಂಕ್‌ಗಳು ಈಗ ಕಾಯಕಲ್ಪಕ್ಕೆ ಒಳಗಾಗಿವೆ. ಈ ಎಲ್ಲಾ ಕೆಲಸವನ್ನು ಮೊದಲೇ ಮಾಡಿದ್ದರೆ ಸಾವು ನೋವುಗಳನ್ನು ತಡೆಯಬಹುದಿತ್ತು ಎಂದು ಬಿಜಕಲ್ ಗ್ರಾಮದ ಮನೋಹರ ಹೇಳುತ್ತಾರೆ.

ಗಡಿಭಾಗದಲ್ಲಿ ಸಮಸ್ಯೆ: ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಗಡಿಭಾಗದ ಘಾಮಾ ತಾಂಡಾ, ಬಾರ್ಡರ್ ತಾಂಡಾ, ವಡಗಾಂವ್, ಸಂತಪುರದಲ್ಲಿ ಕುಡಿಯುವ ನೀರಿಗೆ ತತ್ವಾರ ಇದೆ. ಈ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದ್ದು, ಅದು ಸಾಲುತ್ತಿಲ್ಲ. ಕರಕ್ಯಾಳ ಗ್ರಾಮದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗಿ, ಕಲುಷಿತ ನೀರು ಪೂರೈಕೆಯಾಗಿ 20 ಜನ ಅಸ್ವಸ್ಥರಾಗಿದ್ದಾರೆ. ಹುಮನಾಬಾದ್ ಹೊರವಲಯದ ಕೈಗಾರಿಕಾ ಪ್ರದೇಶದ ವಿಷಪೂರಿತ ತ್ಯಾಜ್ಯದಿಂದ ಮಾಣಿಕ್ ನಗರ, ಗಡವಂತಿಯಲ್ಲಿ ನೀರು ಕುಡಿಯಲು ಯೋಗ್ಯವಾಗಿಲ್ಲ.

ನೀರಿನ ಕೊರತೆ: ಮಳೆಯ ಕೊರತೆಯಿಂದಾಗಿ ರಾಯಚೂರಿನ ರಾಂಪುರ ಕೆರೆಯಲ್ಲಿನ ನೀರು ತಳಮಟ್ಟಕ್ಕೆ ಹೋಗಿದೆ. ನೀರಿನಲ್ಲಿ ಹೂಳು ತುಂಬಿಕೊಂಡಿರುವ ಕಾರಣ ತಿಳಿನೀರು ಪೂರೈಕೆಯಾಗುತ್ತಿಲ್ಲ. ಹೀಗಾಗಿ ಜನ ಕುಡಿಯುವ ಶುದ್ಧ ನೀರಿನ ಘಟಕಗಳ ಮೊರೆ ಹೋಗಿದ್ದಾರೆ. ಮೇನಲ್ಲಿ ದೇವದುರ್ಗ ತಾಲ್ಲೂಕಿನ ರೇಖಲಮರಡಿಯಲ್ಲಿ ಒಬ್ಬ ಬಾಲಕ ಸಾವನ್ನಪ್ಪಿದ್ದ ಹಾಗೂ ಅನೇಕರು ಅಸ್ವಸ್ಥರಾಗಿದ್ದರು. ಲಿಂಗಸೂಗೂರು ಗೋರೆಬಾಳ, ಯರಗಟ್ಟಿಯಲ್ಲಿಯೂ ಜನರಲ್ಲಿ ಅನಾರೋಗ್ಯ ಕಾಡಿತ್ತು.

ಲಿಂಗಸುಗೂರು ತಾಲ್ಲೂಕಿನ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಸಿಗುವ ನೀರಿನಲ್ಲಿ ಆರ್ಸೆನಿಕ್ ಸೇರಿದಂತೆ ಇತರೆ ವಿಷಯುಕ್ತ ಅಂಶಗಳು ಪತ್ತೆಯಾಗಿವೆ. ಎರಡು ದಶಕಗಳ ಹಿಂದೆ ಕುಡಿಯುವ ನೀರು ಪೂರೈಕೆ ಮೂಲಗಳ ನೀರು ಪರೀಕ್ಷೆಗೆ ಒಳಪಡಿಸಿದಾಗ ಬಹುತೇಕ ಕಡೆಗಳಲ್ಲಿ ವಿಷಯುಕ್ತ ರಾಸಾಯನಿಕ ಅಂಶ ಇರುವುದನ್ನು ಜಿಲ್ಲಾಡಳಿತ ದೃಢಪಡಿಸಿತ್ತು. ನಾಲ್ಕು ತಿಂಗಳ ಹಿಂದೆ ಯಾದಗಿರಿಯಲ್ಲಿ ಕಲುಷಿತ ನೀರು ಕುಡಿದು ಮೂರು ಜನ ಮೃತಪಟ್ಟು 90ಕ್ಕೂ ಹೆಚ್ಚು ಜನ ಅಸ್ವಸ್ಥರಾಗಿದ್ದರು.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಬಿಜಕಲ್ ಗ್ರಾಮದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ –ಪ್ರಜಾವಾಣಿ ಚಿತ್ರ

ಚಿಕ್ಕಮಗಳೂರು ನಗರಕ್ಕೆ ನೀರು ಪೂರೈಸುವ ಯಗಚಿ ಜಲಾಶಯದ ಕಾಲುವೆ ಪಕ್ಕದಲ್ಲೇ ಪೈಪ್‌ಲೈನ್ ಇರುವುದರಿಂದ ಕೊಳಚೆ ನೀರು ಮಿಶ್ರಣವಾಗುತ್ತಿದೆ ಎಂಬ ಅನುಮಾನ ಇದೆ. ಚಿಕ್ಕಬಳ್ಳಾಪುರ ನಗರಕ್ಕೆ ನೀರು ಪೂರೈಸುವ ಜಕ್ಕಲಮಡಗು ಜಲಾಶಯದ ನೀರಿನ ಬಣ್ಣದಲ್ಲಿ ವ್ಯತ್ಯಾಸವಾಗಿದ್ದು, ಕೆಲ ದಿನಗಳಿಂದ ಜಕ್ಕಲಮಡಗು ನೀರನ್ನು ನಗರಕ್ಕೆ ಪೂರೈಸುತ್ತಿಲ್ಲ.

ಕೋಲಾರ ನಗರದಲ್ಲಿ 35 ಶುದ್ಧ ನೀರಿನ ಘಟಕಗಳು (ಆರ್‌ಒ) ಅಳವಡಿಸಿ 4 ವರ್ಷಗಳಾಗಿದ್ದು, ನಿರ್ವಹಣೆ ಕೊರತೆಯಿಂದ 23 ಘಟಕಗಳು ಕೆಟ್ಟು ಹೋಗಿವೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ಪಟ್ಟಣಕ್ಕೆ ಸಮೀಪದ ರಂಗಯ್ಯನದುರ್ಗ ಜಲಾಶಯದಿಂದ ನೀರು ಶುದ್ಧೀಕರಣಕ್ಕೆ ಅಳವಡಿಸಿದ ಫಿಲ್ಟರ್ ಹೌಸ್ ಕಾರ್ಯಕ್ಷಮತೆಯ ಬಗ್ಗೆ ಜನರಿಗೆ ಅನುಮಾನಗಳಿವೆ.

ದೇವರ ಮೊರೆ ಹೋದ ಬಿಜಕಲ್ ಗ್ರಾಮಸ್ಥರು

ಬಿಜಕಲ್ ಗ್ರಾಮದಲ್ಲಿ ವಾಂತಿ ಭೇದಿ ಸಮಸ್ಯೆಯಿಂದ ಮುಕ್ತರಾಗಲು ಗ್ರಾಮಸ್ಥರು ದೇವರ ಮೊರೆ ಹೋಗಿದ್ದಾರೆ.

'ಕುಷ್ಟಗಿ ಸಮೀಪದ ಗೋತಗಿ ಗ್ರಾಮದಲ್ಲಿರುವ ದುರ್ಗಾದೇವಿಯ ತವರುಮನೆ ಬಿಜಕಲ್ ಗ್ರಾಮವಾಗಿದ್ದು, 20 ವರ್ಷಗಳಿಂದ ಆ ದೇವಿಯನ್ನು ಗ್ರಾಮಕ್ಕೆ ಕರೆಯಿಸಿಲ್ಲ. ಹೀಗಾಗಿ ದೇವಿ ಮುನಿಸಿಕೊಂಡಿದ್ದಾಳೆ. ಎರಡು ದಶಕಗಳ ಹಿಂದೆ ಗ್ರಾಮದಲ್ಲಿ ವಾಂತಿ ಭೇದಿ ಕಾಡಿದಾಗ ದೇವಿಯನ್ನು ಕರೆಯಿಸಿ ಪೂಜೆ ಸಲ್ಲಿಸಿದ್ದೆವು. ಆಗಿನಿಂದ ಊರಿನ ಜನರಿಗೆ ಈಗಿನಷ್ಟು ಸಮಸ್ಯೆ ಕಾಡಿರಲಿಲ್ಲ. ಇದೇ ಕಾರಣಕ್ಕೆ ಈಗ ದುರ್ಗಾದೇವಿಯನ್ನು ಆಕೆಯ ತವರಿಗೆ ಕರೆಯಿಸಿ ಊರಿನ ಜನರೆಲ್ಲ ಸೇರಿ ಐದು ಮಂಗಳವಾರ ಹಾಗೂ ಶುಕ್ರವಾರ ಪೂಜೆ ಮಾಡುತ್ತಿದ್ದೇವೆ. ಈಗ ಎರಡು ವಾರಗಳು ಪೂರ್ಣಗೊಂಡಿವೆ. ವಾಂತಿ ಭೇದಿ ನಿಯಂತ್ರಣಕ್ಕೆ ಬಂದಿದೆ' ಎನ್ನುತ್ತಾರೆ ಬಿಜಕಲ್ ಗ್ರಾಮಸ್ಥ ಗುರಪ್ಪ ವಂಕಲಕುಂಟಿ.

ಕಲಬುರಗಿಯಲ್ಲಿ ನೀರಿನ ಮಾಫಿಯಾ?

ಕಲಬುರಗಿ: ಏಳು ಲಕ್ಷ ಜನಸಂಖ್ಯೆ ಹೊಂದಿರುವ ಕಲಬುರಗಿ ಮಹಾನಗರದ ಬಹುತೇಕ ಬಡಾವಣೆಗಳಿಗೆ ಇಂದಿಗೂ ಶುದ್ಧ ಕುಡಿಯುವ ನೀರು ಮರೀಚಿಕೆಯಾಗಿದೆ.

ಶುದ್ಧ ಕುಡಿಯುವ ನೀರಿನ ಘಟಕಗಳು ಎಲ್ಲೆಂದರಲ್ಲಿ ತಲೆ ಎತ್ತಿದ್ದು, ಕುಡಿಯುವ ನೀರನ್ನು ಶುದ್ಧೀಕರಿಸಲು ಬೇಕಾದ ಮಾನದಂಡಗಳನ್ನು ಇವು ಪೂರೈಸುತ್ತಿಲ್ಲ. ಕೆಲ ರಾಜಕಾರಣಿಗಳು ದಂಧೆಕೋರರ ಬೆನ್ನಿಗೆ ಇರುವುದರಿಂದ ದಾಳಿಯೂ ನಡೆಯುತ್ತಿಲ್ಲ. ಅಲ್ಲದೇ, ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳು ಕಾಲ ಕಾಲಕ್ಕೆ ತಪಾಸಣೆಯನ್ನೂ ಕೈಗೊಳ್ಳುವುದಿಲ್ಲ ಎಂಬ ಆರೋಪಗಳಿವೆ.

ಸರ್ಕಾರದ ಮಾನದಂಡಗಳನ್ನು ಅನುಸರಿಸಿ ಒಂದು ಶುದ್ಧ ನೀರಿನ ಘಟಕ ಅಳವಡಿಸಲು ₹40 ಲಕ್ಷ ವೆಚ್ಚವಾಗುತ್ತದೆ. ಆದರೆ, ಕೇವಲ ₹ 2 ಲಕ್ಷ ಬಂಡವಾಳ ಹೂಡಿ ಕಳಪೆ ಘಟಕ ಅಳವಡಿಸಿ ದಂಧೆ ಶುರು ಮಾಡುತ್ತಿದ್ದಾರೆ. ನಗರದಲ್ಲಿ ಬಾಟಲಿ ನೀರಿನ ದಂಧೆ ದಿನೇ ದಿನೇ ಹೆಚ್ಚುತ್ತಿದೆ.

ರಾಜ್ಯದ ವಿವಿಧೆಡೆ ಬಿರುಸಿನ ಮಳೆ

ಕೆಲವೆಡೆ ಕುಸಿದ ಮನೆ ಗೋಡೆ; ಅಂಜನಾದ್ರಿ, ಹುಲಿಗಿಯಲ್ಲಿ ಭಕ್ತರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ದಕ್ಷಿಣ ಕನ್ನಡ, ಬೆಂಗಳೂರು ನಗರದಲ್ಲಿ ಭಾನುವಾರ ಬಿರುಸಿನ ಮಳೆ ಸುರಿಯಿತು.

ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಸೀತಾಳಗೇರಾ ಗ್ರಾಮದಲ್ಲಿ ಗಣಪತಿ ಮಹೇಂದ್ರ ಎಂಬುವರ ಮನೆಯ ಗೋಡೆ ಕುಸಿದು ಬಿದ್ದಿದೆ.

ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಕೊಪ್ಪಳದಲ್ಲಿ ಮಧ್ಯಾಹ್ನ 2ಕ್ಕೆ ಶುರುವಾದ ಮಳೆ ಸಂಜೆ ಆರು ಗಂಟೆ ತನಕ ಮುಂದುವರೆಯಿತು. ರಜೆಯ ದಿನ ಹಾಗೂ ಅಷಾಢ ಮಾಸವಾಗಿದ್ದರಿಂದ ಹುಲಿಗಿ ಮತ್ತು ಅಂಜನಾದ್ರಿಗೆ ಬಂದಿದ್ದ ಸಾವಿರಾರು ಜನ ಮಳೆಯಿಂದ ಪರದಾಡುವಂತಾಯಿತು.

ಹುಬ್ಬಳ್ಳಿ–ಧಾರವಾಡ, ಉತ್ತರ ಕನ್ನಡ, ವಿಜಯನಗರ, ಗದಗ, ಬಳ್ಳಾರಿ, ಬಾಗಲಕೋಟೆ, ಬೆಳಗಾವಿ ಸೇರಿದಂತೆ ಹಲವೆಡೆ ರಭಸದ ಮಳೆ ಸುರಿಯಿತು. ಬಳ್ಳಾರಿ ಜಿಲ್ಲೆಯ ಸಂಡೂರು, ಕಂಪ್ಲಿ, ತೆಕ್ಕಲಕೋಟೆ, ಸಿರುಗುಪ್ಪ ಮತ್ತು ಕುರುಗೋಡಿನಲ್ಲಿ ಜಿಟಿಜಿಟಿ ಮಳೆ ಸುರಿಯಿತು.

ಧಾರವಾಡ ನಗರ ಹಾಗೂ ಸುತ್ತಲಿನ ಗ್ರಾಮೀಣ ಪ್ರದೇಶ, ಬೆಳಗಾವಿ, ಹಾವೇರಿ, ಗದಗ, ಬಾಗಲಕೋಟೆ, ಹುನಗುಂದ ಸೇರಿದಂತೆ ವಿವಿಧೆಡೆ ಸಾಧಾರಣ ಮಳೆಯಾಗಿದೆ. ಸವದತ್ತಿಯ ಯಲ್ಲಮ್ಮನ ಗುಡ್ಡದ ಸುತ್ತ ಒಂದು ತಾಸಿಗೂ ಹೆಚ್ಚು ಹೊತ್ತು ಧಾರಾಕಾರ ಮಳೆ ಸುರಿಯಿತು. ವಿಜಯಪುರ, ತಾಳಿಕೋಟೆ, ನೆರೆಯ ಸೊಲ್ಲಾಪುರ ಜಿಲ್ಲೆಯಲ್ಲಿ ಜೋರು ಮಳೆಯಾಗಿದೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಬಿಟ್ಟುಬಿಟ್ಟು ಮಳೆಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಸರಾಸರಿ 5.98 ಸೆಂ.ಮೀ. ಮಳೆ ಬಿದ್ದಿದೆ. ಕುಂದಾಪುರದಲ್ಲಿ 9.87 ಸೆಂ.ಮೀ ಮಳೆಯಾಗಿದೆ. ಗಾಳಿ ಮಳೆಗೆ ಮಣಿಪಾಲ ಸಮೀಪದ ಅಲೆವೂರಿನಲ್ಲಿ ಮನೆಯೊಂದರ ಗೋಡೆ ಕುಸಿದಿದೆ. ಜುಲೈ 30ರವರೆಗೆ ಜಿಲ್ಲೆಯಲ್ಲಿ 11.5 ಸೆಂ.ಮೀವರೆಗೂ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಳೆಗೆ ಕಡಲು ಪ್ರಕ್ಷುಬ್ಧಗೊಂಡಿದ್ದು ಮೀನುಗಾರರು ಸಮುದ್ರಕ್ಕಿಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಸಾಮೂಹಿಕ ಪ್ರಾರ್ಥನೆ: ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಬೈತುರ ಮಾಮೂರ ಈದ್ಗಾದಲ್ಲಿ ಜಮಿಯತ್ ಉಲಮಾ ಇ- ಹಿಂದ್ ನೇತೃತ್ವದಲ್ಲಿ ಮಳೆಗಾಗಿ ಸಾಮೂಹಿಕ ಪ್ರಾರ್ಥನೆ ಮಾಡಿದರು. ಮಹಾಲಿಂಗಪುರ ಸಮೀಪದ ಚಿಮ್ಮಡ ಗ್ರಾಮದ ಈದ್ಗಾ ಮೈದಾನದಲ್ಲಿಯೂ ಮುಸ್ಲಿಮರು ಅಂಜುಮನ್ ಸಂಸ್ಥೆಯ ನೇತೃತ್ವದಲ್ಲಿ ಮಳೆಗಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಸೀತಾಳಗೇರಾ ಗ್ರಾಮದಲ್ಲಿ ಶನಿವಾರ ರಾತ್ರಿ ಸುರಿದ ಮಳೆಗೆ ಮನೆ ಗೋಡೆ ಕುಸಿದು ಬಿದ್ದಿದೆ

77 ಅಡಿಗಿಳಿದ ಕೆಆರ್‌ಎಸ್ ನೀರು

ಮಂಡ್ಯ: ಕಾವೇರಿ ಜಲಾನಯದ ಪ್ರದೇಶದಲ್ಲಿ ಮಳೆ ಕೊರತೆಯಿಂದಾಗಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಭಾನುವಾರ 77.68 ಅಡಿಗೆ ಕುಸಿದಿದೆ, ಕಳೆದ ವರ್ಷ ಇದೇ ದಿನ ನೀರಿನ ಮಟ್ಟ 106.60 ಅಡಿ ಇತ್ತು.

ಜಲಾಶಯಕ್ಕೆ 552 ಕ್ಯುಸೆಕ್ ನೀರು ಹರಿದು ಬರುತ್ತಿದೆ. ನಾಲೆಗಳಿಗೆ ಹರಿಯುತ್ತಿದ್ದ ನೀರು ಸ್ಥಗಿತಗೊಳಿಸಲಾಗಿದ್ದು, 571 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

'ಜಲಾಶಯದ ನೀರಿನ ಮಟ್ಟ 74 ಅಡಿಗಿಂತಲೂ ಕುಸಿದರೆ ನೀರನ್ನು ಕುಡಿಯುವುದಕ್ಕೆ ಮಾತ್ರ ಮೀಸಲಿಡಲಾಗುವುದು' ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಮಾಹಿತಿ ನೀಡಿದರು.

ಅಪಘಾತ: ಬಲಗಾಲು ಕಳೆದುಕೊಂಡ ನಟ ಸೂರಜ್

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ/ ಮೈಸೂರು: ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಚಿಕ್ಕುಂಡಿ ಬಳಿ ಶನಿವಾರ ಸಂಜೆ ಬೈಕ್‌ಗೆ ಟಿಪ್ಪರ್ ಡಿಕ್ಕಿಯಾದ ಪರಿಣಾಮ, ಚಲನಚಿತ್ರ ನಿರ್ಮಾಪಕಿ ದಿವಂಗತ ಪಾರ್ವತಮ್ಮ ರಾಜ್‌ಕುಮಾರ್ ಅವರ ಕಿರಿಯ ಸಹೋದರ ಎಸ್.ಎ. ಶ್ರೀನಿವಾಸ್ ಅವರ ಪುತ್ರ, ಉದಯೋನ್ಮುಖ ನಟ ಸೂರಜ್ ಅವರ ಬಲಗಾಲಿಗೆ ತೀವ್ರ ಗಾಯವಾಗಿದೆ.

ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಮೈಸೂರಿನ ಸರಸ್ವತಿಪುರಂ ನಿವಾಸಿ 24 ವರ್ಷದ ಸೂರಜ್, ಒಬ್ಬರೇ ಬುಲೆಟ್‌ನಲ್ಲಿ ತಮಿಳುನಾಡುವ ಪ್ರವಾಸ ಮುಗಿಸಿ ಮೈಸೂರಿಗೆ ಹಿಂತಿರುಗುವಾಗ ಅಪಘಾತ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಸೂರಜ್

ಡಿಕ್ಕಿಯ ರಭಸಕ್ಕೆ ಬಲಗಾಲಿನ ಮೊಣಕಾಲು ಹಾಗೂ ತೊಡೆಯ ಭಾಗದಲ್ಲಿ ತೀವ್ರ ಜಜ್ಜಿದಂತಾಗಿದೆ. ಹೀಗಾಗಿ, ವೈದ್ಯರ ಸಲಹೆಯಂತೆ ಕಾಲನ್ನು ತೊಡೆವರೆಗೆ ಶಸ್ತ್ರಚಿಕಿತ್ಸೆ ಮೂಲಕ ಕತ್ತರಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಟ ಶಿವರಾಜ್ ಕುಮಾರ್, ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್, ನಿರ್ಮಾಪಕ ಚಿನ್ನೇಗೌಡ, ಸಂಬಂಧಿ ಗೋವಿಂದರಾಜು, ಆಸ್ಪತ್ರೆಗೆ ಭೇಟಿ ನೀಡಿ ಸೂರಜ್ ಆರೋಗ್ಯ ವಿಚಾರಿಸಿದರು.

ಮದ್ಯದ ಭದ್ರತಾ ಚೀಟಿ ವೆಚ್ಚ: ಆದೇಶ ಹಿಂಪಡೆದ ಅಬಕಾರಿ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಬಾಟಲಿಗಳ ಮುಚ್ಚಳದ ಮೇಲೆ ಅಂಟಿಸುವ ಅಬಕಾರಿ ಭದ್ರತಾ ಚೀಟಿ (ಇಎಎಲ್) ವೆಚ್ಚವನ್ನು ಮದ್ಯ ತಯಾರಕರ ಬದಲಿಗೆ ಗ್ರಾಹಕರಿಗೆ ವರ್ಗಾಯಿಸುವ ಆದೇಶವನ್ನು ಅಬಕಾರಿ ಇಲಾಖೆ ಶನಿವಾರ ಹಿಂಪಡೆದಿದೆ.

ವರದಿ ಪರಿಣಾಮ

ಈ ಹಿಂದೆ ಇಎಎಲ್ ವೆಚ್ಚವೂ ಸೇರಿ ಮದ್ಯದ ಬಾಟಲಿಯ ಗರಿಷ್ಠ ಮಾರಾಟ ದರ ನಿಗದಿಯಾಗುತ್ತಿತ್ತು. ಮದ್ಯ ತಯಾರಕರೇ ಇಎಎಲ್ ವೆಚ್ಚ ಭರಿಸಬೇಕಿತ್ತು. ಆದರೆ, ಇಎಎಲ್ ವೆಚ್ಚವನ್ನು ಮದ್ಯದ ಬಾಟಲಿಯ ಗರಿಷ್ಠ ಮಾರಾಟ ದರದಿಂದ ಹೊರತುಪಡಿಸಿ ಮೇ 22ರಂದು ಆದೇಶ ಹೊರಡಿಸಲಾಗಿತ್ತು. ಯಾವುದೇ ಅಳತೆಯ ಪರಿಣಾಮವಾಗಿ ಪ್ರತಿ ಮದ್ಯದ ಬಾಟಲಿ ಮೇಲೆ 31.74 ಪೈಸೆಯನ್ನು ಗ್ರಾಹಕರು ಹೆಚ್ಚುವರಿಯಾಗಿ ಪಾವತಿಸಬೇಕಿತ್ತು.

ಇಎಎಲ್ ವೆಚ್ಚವನ್ನು ಮದ್ಯ ತಯಾರಕರಿಂದ ಗ್ರಾಹಕರಿಗೆ ವರ್ಗಾಯಿಸಿರುವುದರ ಹಿಂದೆ ಅವ್ಯವಹಾರ ನಡೆದಿದೆ ಎಂದು ಸಾಮಾಜಿಕ ಹೋರಾಟಗಾರ ದಿನೇಶ್ ಕಲ್ಲಹಳ್ಳಿ ಮತ್ತು ಚಾಮರಾಜಪೇಟೆಯ ವಕೀಲ ಗಿರೀಶ್ ಆರೋಪಿಸಿದ್ದರು. ಈ ಕುರಿತು 'ಪ್ರಜಾವಾಣಿ'ಯ ಶನಿವಾರದ ಸಂಚಿಕೆಯಲ್ಲಿ 'ಮದ್ಯದ ಭದ್ರತಾ ಚೀಟಿಯ ವೆಚ್ಚವೂ ಗ್ರಾಹಕರಿಗೆ!' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಅದೇ ದಿನ ಆದೇಶವೊಂದನ್ನು ಹೊರಡಿಸಿರುವ ಅಬಕಾರಿ ಇಲಾಖೆ ಆಯುಕ್ತ ಡಾ.ಜೆ. ರವಿಶಂಕರ್, ಇಎಎಲ್ ವೆಚ್ಚಕ್ಕೆ ಸಂಬಂಧಿಸಿದಂತೆ ಮೇ 22ರಂದು ನೀಡಿದ್ದ ಎಲ್ಲ ಸೂಚನೆಗಳನ್ನು ಹಿಂಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, 'ಇಎಎಲ್ ವೆಚ್ಚಕ್ಕೆ ಸಂಬಂಧಿಸಿದ ಆದೇಶದಲ್ಲಿ ಯಾವುದೇ ದುರುದ್ದೇಶ ಇರಲಿಲ್ಲ. ಆದರೂ, ಅವ್ಯವಹಾರ ನಡೆದಿದೆ ಎಂದು ಕೆಲವರು ಆರೋಪಿಸಿದ್ದರು. ಈ ವಿಚಾರದಲ್ಲಿ ಸಂಶಯಕ್ಕೆ ಅವಕಾಶ ನೀಡಬಾರದು ಎಂಬ ಕಾರಣಕ್ಕೆ ಆದೇಶವನ್ನು ಹಿಂಪಡೆದಿದ್ದೇವೆ' ಎಂದರು.

'ವಿಪಕ್ಷಗಳ ಒಗ್ಗಟ್ಟಿಗೆ ಕುಂದಿಲ್ಲ'

ಪಟ್ನಾ (ಪಿಟಿಐ): ಬಿಹಾರದ ಪಟ್ನಾದಲ್ಲಿ ಶುಕ್ರವಾರ ನಡೆದ ವಿರೋಧ ಪಕ್ಷಗಳ ಸಭೆ ಬಳಿಕ ಕಾಂಗ್ರೆಸ್ ಧೋರಣೆ ವಿರುದ್ಧ ಎಎಪಿ ಅಸಮಾಧಾನ ವ್ಯಕ್ತಪಡಿಸಿರುವುದರಿಂದ ವಿಪಕ್ಷಗಳ ಒಗ್ಗಟ್ಟಿಗೆ ಯಾವ ರೀತಿಯ ಹಿನ್ನಡೆ ಕೂಡಾ ಆಗುವುದಿಲ್ಲ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಅವರು ಭಾನುವಾರ ಅಭಿಪ್ರಾಯ ಪಟ್ಟಿದ್ದಾರೆ.

ಫಾರಂ–ಎ
ಸಾರ್ವಜನಿಕ ಪ್ರಕಟಣೆ
[ಭಾರತೀಯ ಪಾಪರಿಕೆ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]

ರಿಲಯಬಲ್ ಕ್ಯಾಶ್ಯು ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಎಲ್ಲ ಕ್ರೆಡಿಟರುಗಳ (ಸಾಲ ನೀಡಿದವರ) ಗಮನಕ್ಕೆ

ಸಂಬಂಧಪಟ್ಟ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು	ರಿಲಯಬಲ್ ಕ್ಯಾಶ್ಯು ಕಂಪನಿ ಪ್ರೈವೇಟ್ ಲಿಮಿಟೆಡ್
2.	ಸಾಲಗಾರ ಸಂಸ್ಥೆ ರಚನೆಯಾದ ದಿನಾಂಕ	21ನೇ ನವಂಬರ್ 2005
3.	ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಯ ರಚನೆಯಾಗಿದೆ/ನೋಂದಾವಣಿಯಾಗಿದೆ	ROC- ಚೆನ್ನೈ (ಕಂಪನಿ ಖಾಯ್ದೆ 1956ರ ಅಡಿಯಲ್ಲಿ)
4.	ಕಾರ್ಪೊರೇಟ್ ಗುರುತಿನ ಸಂಖ್ಯೆ	U51229TN2005PTC058063
5.	ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ	**ನೋಂದಾಯಿತ ಕಛೇರಿ:** ನಂ.44, ಸಿ ಪಿ ರಾಮಸಾಮಿ ರಸ್ತೆ, ಅಳ್ವಾರ್‌ಪೇಟ್, ಚೆನ್ನೈ, ತಮಿಳುನಾಡು– 600018 **ಕಾರ್ಪೊರೇಟ್ ಕಛೇರಿ:** ಪ್ಲಾಟ್ ಸಂಖ್ಯೆ 429, ರಸ್ತೆ ಸಂಖ್ಯೆ 10, ಬೈಕಂಪಾಡಿ ಕೈಗಾರಿಕಾ ಪ್ರದೇಶ, ಹೊಸ ಮಂಗಳೂರು – 575 011
6.	ಸಾಲಗಾರ ಸಂಸ್ಥೆಯ ದಿವಾಳಿತನ ಪ್ರಕ್ರಿಯೆ ಆರಂಭವಾದ ದಿನಾಂಕ	22ನೇ ಜೂನ್ 2023
7.	ದಿವಾಳಿತನ ನಿರ್ಣಯ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ	19ನೇ ಡಿಸೆಂಬರ್ 2023
8.	ಮಧ್ಯಂತರ ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋಂದಣಿ ಸಂಖ್ಯೆ	ಶ್ರೀ ರವೀಂದ್ರ ಬೆಳೆಯೂರ್ ಐಬಿಬಿಐ/ಐಪಿಎ–001/ಐಪಿ–ಪಿ00189/2017–18/10368
9.	ಮಂಡಳಿಯಲ್ಲಿ ನೋಂದಣಿಯಾದಂತೆ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್.	ಶ್ರೀ ರವೀಂದ್ರ ಬೆಳೆಯೂರ್ 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560 011. ದೂರವಾಣಿ: +91 80 2654 0193 ಇಮೇಲ್: ravi@beleyur.com
10.	ಮಧ್ಯಂತರ ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್	ಶ್ರೀ ರವೀಂದ್ರ ಬೆಳೆಯೂರ್ ಮಧ್ಯಂತರ ಪರಿಹಾರ ವೃತ್ತಿಪರರು, ಸಿಐಆರ್‌ಪಿಅಡಿಯಲ್ಲಿ ರಿಲಯಬಲ್ ಕ್ಯಾಶ್ಯು ಕಂಪನಿ ಪ್ರೈವೇಟ್ ಲಿಮಿಟೆಡ್, 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011, ದೂರವಾಣಿ: +91 80 2654 0193 ಇಮೇಲ್: reliable_cashew_CIRP@beleyur.com
11.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	**10ನೇ ಜುಲೈ 2023**
12.	ಮಧ್ಯಂತರ ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21ರ ಸಬ್–ಸೆಕ್ಷನ್ (6ಎ)ಯ ಕ್ಲಾಸ್ (ಬಿ) ಅಡಿ ಏನಾದರೂ ಇದ್ದಲ್ಲಿ ಸಾಲನೀಡಿದವರ ವರ್ಗಗಳು	ಅನ್ವಯವಾಗುವುದಿಲ್ಲ
13.	ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ವೃತ್ತಿಪರರೆಂದು ಗುರುತಿಸಲಾದ ಹೆಸರುಗಳು	ಅನ್ವಯವಾಗುವುದಿಲ್ಲ
14.	(ಎ) ಸಂಬಂಧಪಟ್ಟ ಫಾರಂಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ:	(ಎ) ವೆಬ್ ಲಿಂಕ್: https://www.ibbi.gov.in/home/downloads (ಬಿ) ಅನ್ವಯವಾಗುವುದಿಲ್ಲ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣವು 22ನೇ ಜೂನ್ 2023 ದಿನಾಂಕದ ತನ್ನ ಆದೇಶದ ಮೂಲಕ ರಿಲಯಬಲ್ ಕ್ಯಾಶ್ಯು ಕಂಪನಿ ಪ್ರೈವೇಟ್ ಲಿಮಿಟೆಡ್ ವಿರುದ್ಧ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಆರಂಭಿಸಲು ಆದೇಶಿಸಿದೆ ಮತ್ತು ಈ ಕೆಳಗೆ ಸಹಿ ಮಾಡಿರುವವರನ್ನು ಮಧ್ಯಂತರ ಪರಿಹಾರ ವೃತ್ತಿಪರರನ್ನಾಗಿ ನೇಮಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ.

ರಿಲಯಬಲ್ ಕ್ಯಾಶ್ಯು ಕಂಪನಿ ಪ್ರೈವೇಟ್ ಲಿಮಿಟೆಡ್ಗೆ ಸಾಲನೀಡಿದವರು **10ನೇ ಜುಲೈ 2023ರಂದು** ಅಥವಾ ಮುಂಚಿತವಾಗಿ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಸಹಿ/–
ರವೀಂದ್ರ ಬೆಳೆಯೂರ್
ಮಧ್ಯಂತರ ಪರಿಹಾರ ವೃತ್ತಿಪರರು
(Interim Resolution Professional)
ಸಿಐಆರ್‌ಪಿ ಅಡಿಯಲ್ಲಿ
ರಿಲಯಬಲ್ ಕ್ಯಾಶ್ಯು ಕಂಪನಿ ಪ್ರೈವೇಟ್ ಲಿಮಿಟೆಡ್

ದಿನಾಂಕ: 26ನೇ ಜೂನ್ 2023
ಸ್ಥಳ: ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಶಿಕ್ಷಣ, ಸ್ವಾಭಿಮಾನ ಹಾಗೂ ತರ್ಕಬದ್ಧ ಗುಣಗಳು ಮಾತ್ರ ತಳಸಮುದಾಯದವರನ್ನು ಮೇಲೆತ್ತಬಲ್ಲವು.

-ಪೆರಿಯಾರ್

ಮಾನವ ಹಕ್ಕು ಉಲ್ಲಂಘನೆ ನಿರಾಕರಣೆಯಿಂದ ಪರಿಹಾರ ಸಾಧ್ಯವೇ?

ಪ್ರಧಾನಿ ನರೇಂದ್ರ ಮೋದಿ ಅವರ ಅಮೆರಿಕ ಭೇಟಿಯು ಭಾರಿ ಯಶಸ್ಸು ಪಡೆದಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿರುವುದರಲ್ಲಿ ತಪ್ಪಿಲ್ಲ. ಆದರೆ, ಈ ಭೇಟಿಯಲ್ಲಿ ಹಲವು ದುರ್ಬಲ ಅಂಶಗಳೂ ಇದ್ದವು. ಶ್ವೇತ ಭವನದಲ್ಲಿ ನಡೆದ ಮಾಧ್ಯಮಗೋಷ್ಠಿ ಅವುಗಳಲ್ಲಿ ಒಂದು. ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ಮೋದಿ ಅವರು ವರದಿಗಾರರು ಕೇಳಿದ ಎರಡು ಪ್ರಶ್ನೆಗಳಿಗೆ ಉತ್ತರ ನೀಡಿದರು. ಭಾರತದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ, ಅಲ್ಪಸಂಖ್ಯಾತರನ್ನು ಗುರಿ ಮಾಡಲಾಗುತ್ತಿದೆ ಹಾಗೂ ತಾರತಮ್ಯದಿಂದ ನೋಡಲಾಗುತ್ತಿದೆ ಎಂಬ ಆರೋಪವನ್ನು ಅಮೆರಿಕ ಕಡೆಗಣಿಸಿದೆಯೇ ಎಂಬ ಪ್ರಶ್ನೆಯನ್ನು ಬೈಡನ್ ಅವರಿಗೆ ಕೇಳಲಾಯಿತು. ಇದೇ ಪ್ರಶ್ನೆಗೆ ಪ್ರತಿಕ್ರಿಯೆ ನೀಡುವಂತೆ ಮೋದಿ ಅವರನ್ನೂ ಕೇಳಲಾಯಿತು. ಅಲ್ಪಸಂಖ್ಯಾತರ ಹಕ್ಕುಗಳ ಮತ್ತು ವಾಕ್ ಸ್ವಾತಂತ್ರ್ಯವನ್ನು ರಕ್ಷಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದು ಮೋದಿ ಅವರಿಗೆ ಕೇಳಲಾದ ಮತ್ತೊಂದು ಪ್ರಶ್ನೆಯಾಗಿತ್ತು. ಎರಡೂ ದೇಶಗಳು ಪ್ರಜಾಪ್ರಭುತ್ವವನ್ನು ಹೊಂದಿವೆ ಮತ್ತು ಡಿಎನ್‌ಎಯಲ್ಲಿಯೇ ಪ್ರಜಾತಂತ್ರವು ಸೇರಿಹೋಗಿದೆ ಎಂದು ಬೈಡನ್ ಹೇಳಿದರು. ಮುಕ್ತತೆ ಮತ್ತು ಸಹಿಷ್ಣುತೆ, ಸಂವಾದಕ್ಕೆ ವಿಫುಲ ಅವಕಾಶ ಹಾಗೂ ವೈವಿಧ್ಯಕ್ಕೆ ಗೌರವ ನೀಡುವ ಪ್ರಜಾಪ್ರಭುತ್ವದ ಲಕ್ಷಣಗಳನ್ನು ಎರಡೂ ದೇಶಗಳು ಹೊಂದಿವೆ ಎಂದು ಬೈಡನ್ ಹೇಳಿದರು.

ಎರಡೂ ದೇಶಗಳ ಡಿಎನ್‌ಎಯಲ್ಲಿಯೇ ಪ್ರಜಾಪ್ರಭುತ್ವ ಸೇರಿಕೊಂಡಿದೆ ಎಂಬ ಬೈಡನ್ ಅವರ ಹೇಳಿಕೆಯನ್ನೇ ಉಲ್ಲೇಖಿಸುವ ಮೂಲಕ ಪ್ರಧಾನಿ ಮೋದಿ ಅವರು ಆರೋಪಗಳನ್ನು ಅಲ್ಲಗಳೆದರು. ಪ್ರಜಾಪ್ರಭುತ್ವದ ಎಲ್ಲ ಮೂಲ ತತ್ವಗಳನ್ನು ಭಾರತದ ಸಂವಿಧಾನವು ಅಳವಡಿಸಿಕೊಂಡಿದೆ ಎಂದರು. ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇರುವುದರಿಂದ ಮಾನವ ಹಕ್ಕುಗಳು ಇವೆ. ಜಾತಿ, ಧರ್ಮ, ಜನಾಂಗ, ಲಿಂಗದ ಆಧಾರದಲ್ಲಿ ತಾರತಮ್ಯ ಇಲ್ಲವೇ ಇಲ್ಲ ಎಂದರು. ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಇರುವ ವ್ಯಾಖ್ಯೆಗಳು ಹಾಗೂ ಸಾಮಾನ್ಯ ತತ್ವಗಳನ್ನು ಮುಂದಿರಿಸಿಕೊಂಡು ಮೋದಿ ಅವರು ಈ ಸಮರ್ಥನೆ ಮಾಡಿಕೊಂಡಿದ್ದಾರೆ. ಆದರೆ, ವಾಸ್ತವದಲ್ಲಿ ಇರುವ ಪ್ರಶ್ನೆ ಏನು ಎಂದರೆ, ಮೋದಿ ನೇತೃತ್ವದ ಸರ್ಕಾರವು ಸಂವಿಧಾನ ಮತ್ತು ಅದರ ಮೂಲ ತತ್ವಗಳನ್ನು ಎಷ್ಟು ಪಾಲಿಸಿದ್ದಲ್ಲಿ ಎಂಬುದಾಗಿದೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ಎಂಬ ಪ್ರಶ್ನೆಗೆ ಮೋದಿ ಅವರು ಉತ್ತರ ನೀಡಲಿಲ್ಲ. ಏಕೆಂದರೆ, ಹಕ್ಕುಗಳ ಉಲ್ಲಂಘನೆ ಮತ್ತು ತಾರತಮ್ಯ ಆಗುತ್ತಿದೆ ಎಂಬುದನ್ನೇ ಅವರು ನಿರಾಕರಿಸಿದ್ದಾರೆ. ಅಲ್ಪಸಂಖ್ಯಾತರನ್ನು ತಾರತಮ್ಯದಿಂದ ನೋಡಲಾಗುತ್ತಿದೆ ಮತ್ತು ಭಿನ್ನಮತವನ್ನು ದಮನ ಮಾಡಲಾಗುತ್ತಿದೆ ಎಂಬುದನ್ನು ಮೋದಿ ಮತ್ತು ಅವರ ನೇತೃತ್ವದ ಸರ್ಕಾರವು ನಿರಂತರವಾಗಿ ಅಲ್ಲಗಳೆಯುತ್ತಲೇ ಬಂದಿದೆ. ತಪ್ಪು ನೀತಿಗಳು ಮತ್ತು ಪದ್ಧತಿಗಳಿಂದಾಗಿ ಲೋಪಗಳು ಆಗಿವೆ ಮತ್ತು ಅವುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳುವ ನಾಯಕ ಅತ್ಯಂತ ವಿರಳ. ಅಂತರರಾಷ್ಟ್ರೀಯ ವೇದಿಕೆಯೊಂದರಲ್ಲಿ ಇಂತಹ ಪ್ರಶ್ನೆಗಳನ್ನು ತಮಗೆ ಕೇಳಿದ್ದರ ಹಿಂದಿನ ಕಾರಣಗಳೇನು ಎಂಬುದರ ಬಗ್ಗೆ ಮೋದಿ ಅವರು ಚಿಂತನೆ ನಡೆಸಬೇಕು. ಆ ದೇಶದ ಹಲವು ವರ್ಗಗಳು- ಮಾಧ್ಯಮ ಅಷ್ಟೇ ಅಲ್ಲ ಸಂಸತ್ತಿನ ಕೆಲವು ಸದಸ್ಯರು ಕೂಡ ಇದೇ ಪ್ರಶ್ನೆಯನ್ನು ಕೇಳಿದ್ದಾರೆ ಮತ್ತು ಬೈಡನ್ ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದಾರೆ ಎಂಬುದನ್ನು ಕೂಡ ನೋಡಬೇಕು. ಭಾರತದ ಅಲ್ಪಸಂಖ್ಯಾತರನ್ನು ಸಂರಕ್ಷಿಸದಿದ್ದರೆ ದೇಶ ಮುನ್ನಡೆಯಲು ಸಾಧ್ಯವಿಲ್ಲ ಮತ್ತು ಈ ವಿಚಾರವನ್ನು ಬೈಡನ್ ಅವರು ಮೋದಿ ಜೊತೆಗೆ ಪ್ರಾಮಾಣಿಕವಾಗಿ ಮಾತನಾಡಬೇಕು ಎಂದು ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರೂ ಸಂದರ್ಶನವೊಂದರಲ್ಲಿ ಹೇಳಿದ್ದರು. ವರದಿಗಾರರು ಈ ಪ್ರಶ್ನೆ ಕೇಳಿದ್ದು ತಮಗೆ ಅಚ್ಚರಿಯಾಯಿತು ಎಂದು ಮೋದಿ ಅವರು ಹೇಳಿದ್ದಾರೆ. ತಮಗೆ ಪ್ರಶ್ನೆ ಕೇಳಲು ಯಾರೊಬ್ಬರಿಗೂ ಈವರೆಗೆ ಅವಕಾಶವನ್ನೇ ನೀಡದಿದ್ದುದು ಮೋದಿ ಅವರಿಗೆ ಅಚ್ಚರಿ ಆಗಲು ಕಾರಣ.

ಮನವೊಲಿಕೆಯ ಬಳಿಕವೇ ಮೋದಿ ಅವರು ಮಾಧ್ಯಮವನ್ನು ಎದುರಿಸಲು ಒಪ್ಪಿದ್ದರು ಎಂಬ ವರದಿಗಳಿವೆ. ಭಾರತದಲ್ಲಿಯೂ ಮಾಧ್ಯಮದ ಪ್ರಶ್ನೆಯನ್ನು ಎದುರಿಸಲು ಮೋದಿ ಅವರು ಒಪ್ಪಿದರೆ ಮುಂದೆ ಅವರಿಗೆ ಪ್ರಶ್ನೆಗಳು ಎದುರಾದಾಗ ಇಷ್ಟೊಂದು ಆಶ್ಚರ್ಯ ಆಗುವುದಿಲ್ಲ. ಅಧಿಕಾರ ಸ್ಥಾನದಲ್ಲಿ ಇರುವವರು ಪ್ರಶ್ನೆಗಳಿಗೆ ಉತ್ತರಿಸಬೇಕಾದುದು ಪ್ರಜಾಪ್ರಭುತ್ವದಲ್ಲಿ ಅನಿವಾರ್ಯ.

> ಅಂತರರಾಷ್ಟ್ರೀಯ ವೇದಿಕೆಯೊಂದರಲ್ಲಿ ತಮಗೆ ಕೇಳಿದ ಪ್ರಶ್ನೆಗಳಿಗೆ ಕಾರಣಗಳೇನು ಎಂಬುದರ ಬಗ್ಗೆ ಮೋದಿ ಅವರು ಚಿಂತನೆ ನಡೆಸಬೇಕು

ದಿನದ ಟ್ವೀಟ್

ದೌರ್ಬಲ್ಯದ ಸಂಕೇತ

ಮಣಿಪುರ ಸಮಾಜದಲ್ಲಿ ಶಸ್ತ್ರಾಸ್ತ್ರಗಳ ಬಳಕೆ ಹೊಸದಲ್ಲ. ಆದರೆ ಸಮುದಾಯಗಳು ಪಟ್ಟಣಗಳಲ್ಲಿನ ರ್‍ಯಾಲಿಗಳಲ್ಲಿ ಶಕ್ತಿಸೂಚಕವಾಗಿ ಅವುಗಳನ್ನು ಪ್ರದರ್ಶಿಸಲು ಮುಂದಾಗಿರುವುದು, ಬಯಸುತ್ತಿರುವುದು ಪ್ರಭುತ್ವ ಎಷ್ಟು ದುರ್ಬಲಗೊಂಡಿದೆ ಎಂಬುದರ ಸಂಕೇತವಾಗಿದೆ.

ನಿತಿನ್ ಸೇಥಿ, ಪತ್ರಕರ್ತ

ಕಿಡಿನುಡಿ

ಯಾರೊಬ್ಬರ ಮೇಲೂ ಹಲ್ಲೆ ಮಾಡುವ ಅಧಿಕಾರ ಯಾರಿಗೂ ಇಲ್ಲ. ಆದರೆ ಸಚಿವರೊಬ್ಬರು (ಪ್ರಿಯಾಂಕ್ ಖರ್ಗೆ) ಗೋ ರಕ್ಷಕರನ್ನು ಒದ್ದು ಒಳಗೆ ಹಾಕಿ ಎಂದು ಹೇಳಿಕೆ ನೀಡಿ ತಮ್ಮ ನಾಲಿಗೆಯನ್ನು ಹರಿಯಬಿಟ್ಟಿದ್ದಾರೆ. ಈ ಮೂಲಕ ಸರ್ಕಾರದ ದಮನ ನೀತಿಯು ರಾಜ್ಯದ ಜನತೆಗೆ ಸ್ಪಷ್ಟವಾಗಿದೆ.

ಪಿ.ರಾಜೀವ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 26-6-1998

- **ಶಿಕಾರಿ ಪಾಳ್ಯದಲ್ಲಿ ಕಳ್ಳಬಟ್ಟಿ ಸೇವಿಸಿ 7 ಸಾವು: 10 ಮಂದಿ ಅಸ್ವಸ್ಥ**

ಬೆಂಗಳೂರು, ಜೂನ್ 25– ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಶಿಕಾರಿ ಪಾಳ್ಯದಲ್ಲಿ ಕಳೆದ ರಾತ್ರಿ ಕಲಬೆರಕೆ ಕಳ್ಳಬಟ್ಟಿ ಸಾರಾಯಿ ಸೇವನೆ ಮಾಡಿ ಏಳು ಮಂದಿ ಮೃತಪಟ್ಟು ಸುಮಾರು 10 ಮಂದಿ ಅಸ್ವಸ್ಥರಾಗಿದ್ದಾರೆ.

ನಗರ ಹೊರವಲಯದ ‘ಎಲೆಕ್ಟ್ರಾನಿಕ್ಸ್ ಸಿಟಿ’ಗೆ ಎರಡು ಕಿ.ಮೀ. ದೂರದ ಶಿಕಾರಿ ಪಾಳ್ಯದಲ್ಲಿ ವಾಸವಾಗಿರುವ ಸುಮಾರು 15–20 ಮಂದಿ ಕೂಲಿ ಕೆಲಸಗಾರರು ಕಳೆದ ರಾತ್ರಿ ಕಳ್ಳಬಟ್ಟಿ ಸಾರಾಯಿ ಕುಡಿದು ತೀವ್ರ ಅಸ್ವಸ್ಥರಾದರು. ಘಟನೆಯ ಸ್ಥಳದಲ್ಲಿಯೇ ಐದು ಮಂದಿ ಮೃತಪಟ್ಟಿದ್ದರೆ ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ಇಬ್ಬರು ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

- **ಪಟೇಲ್ ಸಭೆಯಲ್ಲಿ ಹರಿಹಾಯ್ದ ಸಚಿವ, ಕಿಡಿಕಾರಿದ ಶಾಸಕ**

ಬೆಂಗಳೂರು, ಜೂನ್ 25– ಜನತಾದಳದ ನಾಯಕರು ಪಕ್ಷದ ಜಿಲ್ಲಾ ಮುಖಂಡರೊಡನೆ ನಡೆಸುತ್ತಿರುವ ಸಮಾಲೋಚನೆ ಕಸರತ್ತು ಮುಂದುವರಿದಂತೆ ಪಕ್ಷದೊಳಗೆ ಹೊಗೆಯಾಡುತ್ತಿದ್ದ ಅಸಮಾಧಾನ– ಆಕ್ರೋಶ ಈಗ ಬಯಲಿಗೆ ಬಂದಿದೆ.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ನಿನ್ನೆಯಿಂದ ನಡೆಯುತ್ತಿರುವ ಪಕ್ಷದ ಸಂಘಟನೆ ಹಾಗೂ ಸಂಪುಟ ಪುನರ್ರಚನೆ ಸಂಬಂಧ ಜಿಲ್ಲಾವಾರು ಸಮಾಲೋಚನಾ ಸಭೆಯಲ್ಲಿ ಜವಳಿ ಸಚಿವ ಎಂ.ಎಸ್. ಪಾಟೀಲ್ ಅವರು ಪಕ್ಷದ ಹಿರಿಯ ನಾಯಕರ ‘ಕಾರ್ಯವೈಖರಿ’ಯ ಬಗ್ಗೆ ಕಿಡಿ ಕಾರಿದರು. ಮುಳಬಾಗಿಲು ಕ್ಷೇತ್ರದ ಶಾಸಕ ಆರ್. ಶ್ರೀನಿವಾಸ್ ಅವರು ಕೋಲಾರ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ ಕೃಷಿ ಸಚಿವ ಸಿ. ಬೈರೇಗೌಡ ಅವರ ‘ಸರ್ವಾಧಿಕಾರಿ’ ಧೋರಣೆ ವಿರುದ್ಧ ಹರಿಹಾಯ್ದರು ಎನ್ನಲಾಗಿದೆ.

ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯ ಜನತಾದಳದ ಅಧ್ಯಕ್ಷ ಬಿ.ಎಲ್. ಶಂಕರ್ ಜಿಲ್ಲಾ ಮುಖಂಡರೊಂದಿಗೆ ಸಮಾಲೋಚನೆ ನಡೆಸುತ್ತಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 26-6-1973

- **ಬಾಂಗ್ಲಾ ಬೆಳವಣಿಗೆ: ಭಾರತಕ್ಕೆ ಪತ್ರ ಬರೆದ ಪಾಕಿಸ್ತಾನ**

ನವದೆಹಲಿ, ಜೂನ್ 25– ಯುದ್ಧ ಕೈದಿಗಳು ಹಾಗೂ ಪಾಕಿಸ್ತಾನದಲ್ಲಿ ನಿರ್ಬಂಧಕ್ಕೆ ಸಿಕ್ಕಿಬಿದ್ದಿರುವ ಬಂಗಾಳಿಗಳು ಮತ್ತು ಬಾಂಗ್ಲಾ ದೇಶದಲ್ಲಿ ಉಳಿದುಹೋಗಿರುವ ಪಾಕಿಸ್ತಾನೀಯರ ಸ್ವದೇಶ ರವಾನೆ ಕುರಿತು ಏಪ್ರಿಲ್ 17ರಂದು ಭಾರತ– ಬಾಂಗ್ಲಾದೇಶ ಸಂಯುಕ್ತ ಹೇಳಿಕೆಯಲ್ಲಿ ಸೂಚಿಸಿರುವ ಸಲಹೆಗಳ ಬಗೆಗೆ ಪಾಕಿಸ್ತಾನ ಸರ್ಕಾರ ಭಾರತಕ್ಕೆ ಬರೆದಿರುವ ಈಚಿನ ಪತ್ರದಲ್ಲಿ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ಧೋರಣೆ ತಳೆದಿದೆಯೆಂದು ಗೊತ್ತಾಗಿದೆ.

ಪಾಕಿಸ್ತಾನದ ವಿದೇಶಾಂಗ ಸಚಿವ ಅಜೀಜ್ ಅಹಮದ್ ಅವರು ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರಿಗೆ ಬರೆದಿರುವ ಪತ್ರ ಶನಿವಾರ ತಲುಪಿದೆ.

- **ರಾಜಕೀಯ ಉದ್ದೇಶದ ಬಂದ್‌ನಲ್ಲಿ ಭಾಗವಹಿಸದಿರಲು ಕಾರ್ಮಿಕರಿಗೆ ಮನವಿ**

ಬೆಂಗಳೂರು, ಜೂನ್ 25– ‘ರಾಜಕೀಯ ಉದ್ದೇಶದಿಂದ’ ಜೂನ್ 30ರಂದು ನಗರದಲ್ಲಿ ಕೆಲ ಕಾರ್ಮಿಕ ವರ್ಗ ಆಚರಿಸಬೇಕೆಂದಿರುವ ‘ಬಂದ್’ನಲ್ಲಿ ಭಾಗವಹಿಸಬಾರದೆಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ನಗರದ ಜನರನ್ನು ಪ್ರಾರ್ಥಿಸಿದರು.

ಬೆಲೆ ಏರಿಕೆ ಕಾರಣ, ಅದರ ವಾಸ್ತವಿಕ ಪರಿಸ್ಥಿತಿ, ಜನರು ಕೈಗೊಳ್ಳಬೇಕಾದ ಕ್ರಮ ಮುಂತಾದವುಗಳ ಬಗ್ಗೆ ಕಮ್ಯುನಿಸ್ಟರು ಜನರನ್ನು ‘ತಪ್ಪುದಾರಿಗೆ’ ಎಳೆಯುತ್ತಿದ್ದಾರೆಂದೂ ಆಪಾದಿಸಿದರು.

ವ್ಯಸನ ಬಿಡಿಸುವಲ್ಲಿ ಚಿಕಿತ್ಸೆಯ ಜತೆಗೆ ಸಮಾಜದ ಸ್ಪಂದನವೂ ಬಹುಮುಖ್ಯ ಪಾತ್ರ ವಹಿಸುತ್ತದೆ

ಮಾದಕದ್ರವ್ಯ ನಿಗ್ರಹದ ಸವಾಲು

ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ಜಗತ್ತಿನಲ್ಲಿ ಮಾದಕದ್ರವ್ಯಕ್ಕೆ ಸಂಬಂಧಿಸಿದ ಸಮಸ್ಯೆ ಬಹು ಸಂಕೀರ್ಣವಾದುದು. ಮಾದಕದ್ರವ್ಯಗಳನ್ನು ಉಪಯೋಗಿಸುವವರು ಮಾತ್ರವಲ್ಲದೆ ಅವರ ಸುತ್ತಮುತ್ತ ಇರುವವರ ಮೇಲೂ ಈ ಸಮಸ್ಯೆಯು ಗಂಭೀರವಾದ ಪರಿಣಾಮವನ್ನು ಬೀರುತ್ತದೆ ಎಂಬುದು ಕಹಿಸತ್ಯ.

ಮಾದಕದ್ರವ್ಯ ವ್ಯಸನದಿಂದ ನರಳುವ ವ್ಯಕ್ತಿಗಳು ಮುಕ್ತಿವ್ಯಸನ ಕೇಂದ್ರಗಳಿಗೆ ಅಥವಾ ಮನೋವೈದ್ಯಕೀಯ ಚಿಕಿತ್ಸೆಗೆ ಸಾಮಾನ್ಯವಾಗಿ ಅಂಜುತ್ತಲೇ ಬರುತ್ತಾರೆ ಅಥವಾ ಮನೆಯವರು ಬಲವಂತವಾಗಿ ಅವರನ್ನು ಕರೆತರುತ್ತಾರೆ. ಹೀಗೆ ಬರುವವರಿಗೆ ವ್ಯಸನದಿಂದ ಮುಕ್ತರಾಗಲು ಇಷ್ಟವಿರುವುದಿಲ್ಲ, ಅದಕ್ಕೇ ಅವರಿಗೆ ಇಂತಹ ಸ್ಥಳಗಳಿಗೆ ಬರಲು ಅಂಜಿಕೆ ಎಂದು ನೀವೇನಾದರೂ ಭಾವಿಸಿದರೆ ಅದು ತಪ್ಪಾಗುತ್ತದೆ. ಇದರ ಹಿಂದೆ ಇರಬಹುದಾದ ಇತರ ಕಾರಣಗಳನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ. ಬೇರೆ ಕಾಯಿಲೆಗೆ ಚಿಕಿತ್ಸೆ ಪಡೆಯುವಾಗ ರೋಗಿಗೆ ಸಿಗಬಹುದಾದ ಬಂಧುಬಾಂಧವರ ಅಥವಾ ಸಮಾಜದ ಸಹಾನುಭೂತಿಯು ಮಾದಕದ್ರವ್ಯ ವ್ಯಸನದಿಂದ ನರಳುವ ವ್ಯಕ್ತಿಗೆ ಸಿಗುವ ಸಾಧ್ಯತೆ ಕಡಿಮೆ.

ವೈದ್ಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಆ ವ್ಯಕ್ತಿಯ ಕುಟುಂಬದವರು ಎಲ್ಲರೂ ‘ಇದು ಉದ್ದೇಶಪೂರ್ವಕವಾಗಿ ಆ ವ್ಯಕ್ತಿಯೇ ತಂದುಕೊಂಡಿರುವ ಸ್ವಯಂಕೃತ ಅಪರಾಧದ ಫಲ, ಅದಕ್ಕೆ ನಾವೇನು ತಾನೇ ಮಾಡಲು ಸಾಧ್ಯ’ ಎಂದೇ ಭಾವಿಸುತ್ತಾರೆ. ಏಕಪಕ್ಷೀಯವಾದ ಈ ಬಗೆಯ ನಿರ್ಣಯ ಮತ್ತು ನಿರ್ದಯವಾದ ಧೋರಣೆಯನ್ನು ಕಂಡು, ವ್ಯಸನಪೀಡಿತನಾದ ವ್ಯಕ್ತಿಯು ಹೆದರುತ್ತಾನೆ. ತಾನು ಮತ್ತೆ ಮತ್ತೆ ಪಡೆಯಬೇಕಾದ ಆಪ್ತ ಸಲಹೆಯ ಬೆಂಬಲ ಹಾಗೂ ವ್ಯಸನವನ್ನು ಬಿಡಲು ಅಗತ್ಯವಾದ ಔಷಧೀಯ ಚಿಕಿತ್ಸೆಯನ್ನು ಪಡೆಯಲು ಆತ ಮುಂದಾಗುವುದಿಲ್ಲ. ಒಂದುವೇಳೆ ಮುಂದಾದರೂ ಅನೇಕ ಸಂದರ್ಭಗಳಲ್ಲಿ ಚಿಕಿತ್ಸೆಯನ್ನು ಅರ್ಧಕ್ಕೇ ನಿಲ್ಲಿಸುವ ಸಾಧ್ಯತೆಯೇ ಹೆಚ್ಚು. ನಮ್ಮ ವೈದ್ಯಕೀಯ ವ್ಯವಸ್ಥೆ ಹಾಗೂ ಸಮಾಜದ ಧೋರಣೆ ಇದಕ್ಕೆ ಮುಖ್ಯ ಕಾರಣ. ಹೀಗಾದಾಗ ಆತ ವ್ಯಸನಕ್ಕೆ ಅಂಟಿಕೊಳ್ಳುವ ಅಪಾಯ ಹೆಚ್ಚು ಎಂಬುದು ಜಗತ್ತಿನಾದ್ಯಂತ ನಡೆದಿರುವ ಹಲವು ಅಧ್ಯಯನಗಳಿಂದ ತಿಳಿದುಬಂದಿದೆ.

ಅಧ್ಯಯನಗಳು ಕಂಡುಕೊಂಡಿರುವ ಈ ಅಂಶವನ್ನೇ ಮುಂದೆ ಇಟ್ಟುಕೊಂಡು ವಿಶ್ವಸಂಸ್ಥೆ ಈ ಬಾರಿಯ ‘ಅಂತರರಾಷ್ಟ್ರೀಯ ಮಾದಕವಸ್ತು ಬಳಕೆ ಮತ್ತು ಸಾಗಣೆ ವಿರೋಧಿ ದಿನ’ದ (ಜೂನ್ 26) ಧ್ಯೇಯ ವಾಕ್ಯವನ್ನು ನಮ್ಮ ಮುಂದಿಟ್ಟಿದೆ. ‘ಪೀಪಲ್ ಫಸ್ಟ್, ಸ್ಟಾಪ್ ಸ್ಟಿಗ್ಮ ಆ್ಯಂಡ್ ಡಿಸ್‌ಕ್ರಿಮಿನೇಷನ್, ಸ್ಟ್ರೆಂತನ್ ಪ್ರಿವೆನ್ಷನ್’ (ಜನರತ್ತ ಮೊದಲು ಗಮನಹರಿಸಿ, ಕಳಂಕ ಹೊರಿಸುವುದನ್ನು ಮತ್ತು ತಾರತಮ್ಯ ಎಸಗುವುದನ್ನು ಕೊನೆಗೊಳಿಸಿ, ಮಾದಕವಸ್ತು ಬಳಕೆ ತಡೆಗಟ್ಟುವಿಕೆಗೆ ಆದ್ಯತೆ ನೀಡಿ) ಎನ್ನುತ್ತಾ ವಿವಿಧ ಆಯಾಮಗಳನ್ನು ನಮ್ಮೆದುರು ತೆರೆದಿಟ್ಟಿದೆ.

ಪ್ರಸ್ತುತ ಈ ಧ್ಯೇಯವಾಕ್ಯವು ಮಾದಕದ್ರವ್ಯ ವ್ಯಸನ ಒಂದು ಜೈವಿಕವಾದ, ಇತರ ಆರೋಗ್ಯ ಸಮಸ್ಯೆಗಳಂತೆಯೇ ವಾತಾವರಣ ಹಾಗೂ ಸಾಮಾಜಿಕ ಅಂಶಗಳೊಂದಿಗೆ ನಂಟು ಹೊಂದಿರುವ ಒಂದು ಆರೋಗ್ಯ ಸಮಸ್ಯೆ ಎಂಬುದನ್ನು ನಮಗೆ ಸ್ಪಷ್ಟಪಡಿಸುತ್ತದೆ. ರಕ್ತದೊತ್ತಡ ಅಥವಾ ಮಧುಮೇಹದಿಂದ ಬಳಲುವ ವ್ಯಕ್ತಿಗಳಿಗೆ ಹೇಗೆ ಅವು ಬರುವ ಮುನ್ನವೇ ತಡೆಗಟ್ಟುವಿಕೆಯ ಪಾಠ ಮಾಡಬೇಕಾದುದು ಅಪೇಕ್ಷಣೀಯವೋ, ಇಂತಹವರಿಗೆ ಹೇಗೆ ನಾವು ಕಾಯಿಲೆಯ ಹಣೆಪಟ್ಟಿ ಹಚ್ಚಿ, ಅವರ ಬಗ್ಗೆ ಭೇದಭಾವವನ್ನು ತೋರಲಾರೆವೋ ಅದೇ ರೀತಿ ಮಾದಕದ್ರವ್ಯ ವ್ಯಸನಿಗಳೊಡನೆಯೂ ನಡೆದುಕೊಳ್ಳಬೇಕು ಎಂಬುದು ವಿಶ್ವಸಂಸ್ಥೆಯ ಅಭಿಮತ.

ಮಾದಕದ್ರವ್ಯ ವ್ಯಸನಕ್ಕೆ ಒಳಗಾದ ವ್ಯಕ್ತಿಗಳ ಚಿಕಿತ್ಸೆ ಹಾಗೂ ಆರೈಕೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಈ ಘೋಷವಾಕ್ಯದಲ್ಲಿ ಇನ್ನೆರಡು ಕುತೂಹಲಕಾರಿ ಅಂಶಗಳನ್ನು ನಾವು ಗಮನಿಸಲೇಬೇಕು. ಅವುಗಳಲ್ಲಿ ಮೊದಲನೆಯದು, ‘ಶಿಕ್ಷೆಗೆ ಪರ್ಯಾಯವಾದ ದಾರಿಗಳು’- ಅಂದರೆ ಸಾಮಾನ್ಯವಾಗಿ ಅಪರಾಧಗಳಿಗೆ ಇರುವ ಮಾದಕದ್ರವ್ಯ ಬಳಕೆಯ ನಂಟು, ಮಾದಕ ದ್ರವ್ಯಗಳ ಸಾಗಣೆ ಹಾಗೂ ಅವುಗಳನ್ನು ವಶಪಡಿಸಿಕೊಳ್ಳುವುದು ಕಾನೂನು ಜಾರಿ ಸಂಸ್ಥೆಗಳಿಗೆ ಮಾತ್ರ ಸಂಬಂಧಿಸಿದ್ದು ಮತ್ತು ಆ ಸಂಸ್ಥೆಗಳಷ್ಟೇ ಈ ಬಗ್ಗೆ ನಿಗಾ ವಹಿಸಬೇಕು ಹಾಗೂ ಕ್ರಮ ಜರುಗಿಸಬೇಕು ಎಂದು ಭಾವಿಸಲಾಗುತ್ತದೆ. ಮಾದಕದ್ರವ್ಯ ನಂಟಿಗೆ ಸಂಬಂಧಿಸಿದ ಸಂಕೀರ್ಣ ಸಾಮಾಜಿಕ ಅಂಶಗಳನ್ನು ನಾವು ವಿವರವಾಗಿ ಗಮನಿಸುವುದಿಲ್ಲ. ಒಂದೊಮ್ಮೆ ಗಮನಿಸಿದ್ದೇ ಆದರೆ, ಅಪರಾಧ ಹಾಗೂ ಮಾದಕದ್ರವ್ಯ ಬಳಕೆ ನಿಗ್ರಹದ ವ್ಯಾಪ್ತಿಗೆ ಕಾನೂನು ಜಾರಿ ಸಂಸ್ಥೆಗಳ ಜೊತೆಗೆ ಆರೋಗ್ಯ ವ್ಯವಸ್ಥೆಯನ್ನೂ ತರುವುದು ಸೂಕ್ತ ಎಂಬುದು ನಮ್ಮ ಅರಿವಿಗೆ ಬರುತ್ತದೆ.

ಅಪರಾಧಕ್ಕೆ ಕಾನೂನು ರೀತ್ಯ ಶಿಕ್ಷೆಯಾಗಲೇಬೇಕು. ಆದರೆ ಅದರೊಂದಿಗೆ ಸೆರೆಮನೆಗಳು ಪರಿವರ್ತನೆಯ ಹಾಗೂ ಆರೋಗ್ಯದ ಹಾದಿಯ ಕೇಂದ್ರಗಳಾಗಲು ಆರೋಗ್ಯ ವ್ಯವಸ್ಥೆಯು ನಮ್ಮ ಕಾರಾಗೃಹಗಳಲ್ಲಿ ಇನ್ನಷ್ಟು ಸಕ್ರಿಯ ಆಗಬೇಕಾಗುತ್ತದೆ. ಸುಧಾರಣೆಯತ್ತ ಚಿಂತನೆ ನಡೆಸಬೇಕಾಗುತ್ತದೆ.

ವಿಶ್ವಸಂಸ್ಥೆ ವಿವರಿಸಿರುವ ಮತ್ತೊಂದು ಅಂಶ ಇನ್ನೂ ಕುತೂಹಲಕಾರಿಯಾದದ್ದು. ಜೊತೆಗೆ, ನಾವು ಸಾಮಾನ್ಯವಾಗಿ ಲಕ್ಷ್ಯ ನೀಡದಿರುವಂಥದ್ದು. ಅದೆಂದರೆ, ಮಾದಕದ್ರವ್ಯ ವ್ಯಸನದ ವಿಷಯದಲ್ಲಿ ಸಮಾಜ ಬಳಸುವ ‘ಭಾಷೆ’ ಹಾಗೂ ಆ ಭಾಷೆಯ ಬಳಕೆಯು ಕ್ರಮೇಣ ರೂಪಿಸುವ ಜನರ ಧೋರಣೆಗಳು. ಮಾದಕದ್ರವ್ಯಗಳ ಸೇವನೆಯನ್ನು ಸರಳೀಕರಿಸಿ ‘ಸಂತಸ’, ‘ಸಖತ್ ಮಜಾ’ದ ಭಾವನೆಯನ್ನೂ, ಒಂದು ರೀತಿಯ ರೋಚಕತೆಯನ್ನೂ ಮೂಡಿಸುವ ಕೆಲವು ಸಿನಿಮಾ ದೃಶ್ಯಗಳು, ಹಾಡುಗಳು ನಮಗೆ ಅರಿವಿಲ್ಲದಂತೆ ಮಾದಕದ್ರವ್ಯ ಸೇವನೆಯನ್ನು ಪ್ರಚೋದಿಸಬಲ್ಲವು. ಹಾಗಾಗಿ, ಇಂತಹ ಸಂದರ್ಭಗಳಲ್ಲಿ ಭಾಷೆಯನ್ನು ಬಳಸುವಾಗ ಬಹು ಎಚ್ಚರದಿಂದ ಇರಬೇಕಾಗುತ್ತದೆ. ಈ ಕುರಿತು ತಿಳಿವಳಿಕೆ ಮೂಡಿಸಬೇಕಾದ ಅಗತ್ಯವೂ ಇದೆ.

ಪ್ರತಿವರ್ಷದಂತೆ ವಿಶ್ವಸಂಸ್ಥೆ ಈ ಸಂದರ್ಭದಲ್ಲಿ ‘ಜಾಗತಿಕ ಮಾದಕದ್ರವ್ಯ ವರದಿ’ಯನ್ನು ಬಿಡುಗಡೆ ಮಾಡಿದೆ. ಅದನ್ನು ಮುಕ್ತವಾಗಿ ಎಲ್ಲರ ಗಮನಕ್ಕೆ ತರುವ ಸಲುವಾಗಿ ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ. ಐದು ಅಧ್ಯಾಯಗಳನ್ನು ಒಳಗೊಂಡ ಈ ವರದಿಯಲ್ಲಿ, ಮಾದಕದ್ರವ್ಯ ಸೇವನೆ ತಡೆಗಟ್ಟುವಿಕೆಗೆ ಸಂಬಂಧಿಸಿದ ಮುಂದಿನ ಯೋಜನೆಗಳು, ಜಾಗತಿಕವಾಗಿ ಮಾದಕ ದ್ರವ್ಯಗಳಿಗೆ ಇರುವ ಬೇಡಿಕೆ, ಪೂರೈಕೆಯ ಅಂಕಿಅಂಶಗಳು, ಗಾಂಜಾ, ಕೊಕೇನ್, ಆ್ಯಂಫಿಟಮೀನ್ ಮತ್ತು ಇತರ ಹೊಸ ಮಾದಕದ್ರವ್ಯಗಳ ಮಾರುಕಟ್ಟೆ ಟ್ರೆಂಡ್‌ಗಳು, ಮಾದಕದ್ರವ್ಯಗಳು ಪರಿಸರದ ಮೇಲೆ ಬೀರುವ ಪರಿಣಾಮ ಕುರಿತ ವಿವರಗಳು ದಾಖಲಾಗಿವೆ. ಬೆಚ್ಚಿಬೀಳಿಸುವ ಅಂಕಿ ಅಂಶಗಳು ಮಾದಕದ್ರವ್ಯ ವ್ಯಸನದ ವಿರಾಟ್ ಸ್ವರೂಪವನ್ನೂ ಅದು ಪಡೆಯುತ್ತಿರುವ ಹೊಸ ಹೊಸ ರೂಪಾಂತರಗಳನ್ನೂ ಎತ್ತಿ ತೋರಿಸಿವೆ.

ಮಾದಕದ್ರವ್ಯ ವ್ಯಸನಕ್ಕೆ ಒಳಗಾಗಿರುವ, ಒಳಗಾಗುವ ಸಂಭವ ಇರುವ ಯುವಜನರಿಗೆ ‘ವ್ಯಸನಿಗಳು’ ಎಂದು ಹಣೆಪಟ್ಟಿ ಅಂಟಿಸಿ, ಅವರು ನಿರುಪಯುಕ್ತರು, ಕೆಲಸಕ್ಕೆ ಬಾರದವರು ಎಂದು ದೂರ ಮಾಡುವ, ಹಾಳಾಗಿ ಹೋಗಲಿ ಎಂದು ಸುಮ್ಮನಾಗುವ ಪ್ರವೃತ್ತಿ ಸರಿಯಲ್ಲ. ಅದರ ಬದಲು, ಮಾನವೀಯತೆಯ ಬಗೆಗಿನ ಕರ್ತವ್ಯವನ್ನು ನೆನಪಿಸಿಕೊಂಡು ಇಡೀ ಸಮಾಜ ಈ ದಿಸೆಯಲ್ಲಿ ಕಾರ್ಯತತ್ಪರ ಆಗಬೇಕಿದೆ. ಅವರನ್ನು ವ್ಯಸನಮುಕ್ತರನ್ನಾಗಿಸಲು ಸರ್ಕಾರದ ಜೊತೆಗೆ ಸಂಘ ಸಂಸ್ಥೆಗಳು, ಬಂಧುಬಾಂಧವರು ಸಹ ಕೈಜೋಡಿಸಬೇಕಿದೆ. ಮಾದಕದ್ರವ್ಯ ವ್ಯಸನದ ವಿರುದ್ಧ ಹೋರಾಡಲು ಮಾನವೀಯತೆ ಎಂಬ ಮಂತ್ರವನ್ನು ಪ್ರಯೋಗಿಸಲೇಬೇಕಾಗಿದೆ.

ಲೇಖಕಿ: ಮನೋವೈದ್ಯೆ

ಚುರುಮುರಿ

ವಾಸ್ತು ದೋಷ

• ಸುಮಂಗಲಾ

‘ಆವಾಗ ಗ್ಯಾರಂಟಿ ಘೋಷಣೆ ಮಾಡೂ ಮುಂದ ತೆಲಿವಳಗ ಮಿದುಳು ಇರಲಿಲ್ಲೇನ್ ಅಂತ ನಮ್ ಶೋಭಕ್ಕ ಭಲೋತ್ನಾಗೆ ಕೈಪಕ್ಷದವ್ರಿಗೆ ಮಾತಿನ ಛಾಟಿ ಬೀಸ್ಯಾಳ ನೋಡು’ ಎಂದು ಬೆಕ್ಕಣ್ಣ ನನ್ನ ಮುಖಕ್ಕೆ ಪೇಪರು ಹಿಡಿಯಿತು.

‘ಆವಾಗ ಎಲ್ಲರ ಖಾತೆಗೆ ಹದಿನೈದು ಲಕ್ಷ ಹಾಕುವುದಾಗಿ ಘೋಷಣೆ ಮಾಡೋವಾಗ ತೆಲಿವಳಗ ಮಿದುಳು ಇರಲಿಲ್ಲೇನ್ ಅಂತ ಡಿಕೆಶಣ್ಣನೂ ಶೋಭಕ್ಕಂಗೆ ಕೇಳ್ಯಾರೆ. ಒಟ್ಟು ಇವರ ಮಾತು ನಂಬೋವ್ರಿಗೆ ಮಿದುಳು ಇಲ್ಲ’.

ನನ್ನ ಮಾತೇ ಕೇಳದಂತೆ ಬೆಕ್ಕಣ್ಣ ಮುಂದಿನ ಸುದ್ದಿಗೆ ಹಾರಿತು.

‘ಇದು ಬರೇ ಕೈಪಕ್ಷದ ಸರ್ಕಾರ ಅಂದುಕೋಬ್ಯಾಡ. ನಮ್ ಅಶೋಕಣ್ಣ ಇದು ಸಮ್ಮಿಶ್ರ ಸರ್ಕಾರ ಅಂದಾನ’.

‘ಒಂದೇ ಪಕ್ಷದವರಿದ್ರೂ ಭಿನ್ನಾಭಿಪ್ರಾಯ ಗಳಿರ್ತಾವಲ್ಲ... ಹಿಂಗಾಗಿ ಸಮ್ ಮಿಶ್ರ’.

‘ಲೋಕಸಭೆ ಚುನಾವಣೆ ಆಗತಿದ್ದಂತೆ ಇದು ಉರುಳಿ ಬೀಳ್ತದ ಅಂದಾನವ. ಬಹುಶಃ ಕಮಲಕ್ಕನ ಮನಿ ಪುರೋಹಿತರು ಮುಹೂರ್ತ ಗೊತ್ತುಮಾಡ್ಯಾರೆ ಅಂತ ಕಾಣ್ತದ’ ಎಂದಿತು.

‘ಯಾವ ಮುಹೂರ್ತ ಕಣಲೇ? ನೋಡಾ, ಸಿದ್ದು ಅಂಕಲ್‌ಗೆ ಮುಹೂರ್ತ, ವಾಸ್ತುಗೀಸ್ತು ಅಂತೆಲ್ಲ ಮೂಢನಂಬಿಕೆ ಇಲ್ಲ. ವಾಸ್ತು ಸರಿಇಲ್ಲ ಅಂತ ಐದು ವರ್ಷದಿಂದ ಬಂದ್ ಮಾಡಿದ್ದ ವಿಧಾನಸೌಧದ ದಕ್ಷಿಣದ ಬಾಗಿಲನ್ನು ತೆಗೆಸಿ, ಅದೇ ಬಾಗಿಲಿಂದ ಪ್ರವೇಶ ಮಾಡಿ, ಅನ್ನಭಾಗ್ಯದ ಸಭೆ ಮಾಡ್ಯಾರೆ’ ಎಂದೆ.

‘ಮೊದಲೇ ಅನ್ನಭಾಗ್ಯಕ್ಕೆ ಹತ್ತಾರು ಕಂಟಕ ಆದಾವು, ಹಂತಾದ್ರಾಗೆ ದಕ್ಷಿಣದ ಬಾಗಿಲಿಂದ ಪ್ರವೇಶ ಮಾಡಿ ಸಭೆ ಮಾಡಿದ್ರ ಕಂಟಕ ಇನ್ನಷ್ಟು ಹೆಚ್ಚತಾವು. ವಾಸ್ತು ಭಲೋ ಇದ್ದ ದಿಕ್ಕಿಗೆ ನಿಂತು ಗ್ಯಾರಂಟಿ ಘೋಷಣೆ ಮಾಡಬೇಕಿತ್ತು’ ಬೆಕ್ಕಣ್ಣ ವಾದಿಸಿತು.

‘ಶತ್ರುವಿನ ಶತ್ರು ಮಿತ್ರ ಅಂತಾರಲ್ಲ, ಹಂಗೆ ಕಮಲಕ್ಕನ ಮನಿಯವ್ರಿಗೆ ವಾಸ್ತು ದೋಷವಿದ್ದಿದ್ದು ಕೈಪಕ್ಷದವ್ರಿಗೆ ಒಳ್ಳೆ ವಾಸ್ತು ಆಗತೈತಿ’.

‘ವಿಧಾನಸೌಧದ ಬಾಗಿಲುಗಳ ವಾಸ್ತು ಯಾರಿಗೆ ಆಗಿಬರುತ್ತೋ ಇಲ್ಲೋ ಗೊತ್ತಿಲ್ಲ, ಆದರೆ ಶ್ರೀಸಾಮಾನ್ಯರಿಗೆ ಮಾತ್ರ ಎಲ್ಲ ವಾಸ್ತುಗಳೂ ಸೇರಿ ದೊಡ್ಡ ಪೆಂಗನಾಮವೇ ಸರಿ’ ಕೊನೆಗೊಮ್ಮೆ ಬೆಕ್ಕಣ್ಣ ಜಾಣತನದ ಮಾತಾಡಿತು!

ಸಂಗತ

ಅಂಕ ಗಳಿಕೆಗೆ ಅನೈತಿಕ ಮಾದರಿ

ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ಶೈಕ್ಷಣಿಕ ವಲಯ ಆತುಕೊಂಡಿರುವ ಅನೈತಿಕ ಮಾದರಿಗಳನ್ನು ಅವಲೋಕಿಸುವ ಅಗತ್ಯವಿದೆ

• ಎಚ್.ಕೆ.ಶರತ್

ಪದವಿಯ ಮೊದಲ ವರ್ಷದ ಒಬ್ಬ ವಿದ್ಯಾರ್ಥಿನಿಯ ತಂದೆ ಅಧ್ಯಾಪಕರೊಬ್ಬರ ಕೊಠಡಿಗೆ ಬಂದು, ‘ಆಂತರಿಕ ಪರೀಕ್ಷೆಯಲ್ಲಿ ಮಗಳಿಗೆ ಏಕೆ ಅಗತ್ಯ ಇರುವಷ್ಟು ಅಂಕಗಳನ್ನು ನೀಡಿಲ್ಲ’ ಎಂದು ಪ್ರಶ್ನಿಸತೊಡಗಿದರು. ಪದವಿ ವಿದ್ಯಾರ್ಥಿಗಳು ಯಾವುದೇ ವಿಷಯದ ಅಂತಿಮ ಪರೀಕ್ಷೆ ಬರೆಯಲು ಅರ್ಹರಾಗಬೇಕಿದ್ದರೆ ಆಂತರಿಕ ಪರೀಕ್ಷೆಯಲ್ಲಿ ನಿಗದಿತ ಅಂಕ ಗಳಿಸಬೇಕಿರುವುದು ಕಡ್ಡಾಯ. ಈ ವಿದ್ಯಾರ್ಥಿನಿ ಆಂತರಿಕ ಪರೀಕ್ಷೆಯಲ್ಲಿ ಗಳಿಸಿದ್ದ ಅಂಕಗಳು ತೀರಾ ಕಡಿಮೆ ಇದ್ದುದರಿಂದ ಆಕೆ ಅಂತಿಮ ಪರೀಕ್ಷೆ ಎದುರಿಸಲು ಅರ್ಹಳಾಗಿರಲಿಲ್ಲ. ಈ ವಿಷಯವನ್ನು ಅಧ್ಯಾಪಕರು ವಿದ್ಯಾರ್ಥಿನಿಗೆ ಖಚಿತಪಡಿಸಿದ ನಂತರ, ಆಕೆ ತನ್ನ ಮನೆಯವರಿಗೆ ವಿಚಾರ ತಿಳಿಸಿದ್ದಳು.

ಮಗಳಿಗೆ ಏಕೆ ಅಗತ್ಯವಿರುವಷ್ಟು ಅಂಕ ಗಳಿಸಲು ಸಾಧ್ಯವಾಗಿಲ್ಲ ಎಂಬುದನ್ನು ತಿಳಿದುಕೊಳ್ಳುವ ಕಾಳಜಿಯಿಂದ ವಿದ್ಯಾರ್ಥಿನಿಯ ತಂದೆ ತಮ್ಮ ಭೇಟಿಗೆ ಬಂದಿರಬಹುದು ಎಂದು ಭಾವಿಸಿದ ಅಧ್ಯಾಪಕರು, ಆಂತರಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತೋರಿಸಿ, ವಿದ್ಯಾರ್ಥಿನಿ ಮಾಡಿದ್ದ ತಪ್ಪುಗಳನ್ನು ವಿವರಿಸತೊಡಗಿದರು.

‘ನನಗೆ ಇದೆಲ್ಲ ಅರ್ಥ ಆಗಲ್ಲ. ಮಗಳು ಅಂತಿಮ ಪರೀಕ್ಷೆ ಬರೆಯಲು ಎಷ್ಟು ಬೇಕೋ ಅಷ್ಟು ಮಾರ್ಕ್ಸ್ ಕೊಟ್ಟುಬಿಡಿ ಸಾಕು’ ಅಂದರು ವಿದ್ಯಾರ್ಥಿನಿಯ ತಂದೆ.

‘ನಿಮ್ಮ ಮಗಳಿಗೆ ತರಗತಿಯಲ್ಲಿ ಮಾಡುವ ಪಾಠ ಅರ್ಥವಾಗದಿದ್ದರೆ ನನ್ನನ್ನು ಬಂದು ಕೇಳಬಹುದಿತ್ತು. ಮೊದಲ ಆಂತರಿಕ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಾಗಲೇ, ಅರ್ಥವಾಗದಿದ್ದಲ್ಲಿ ಬಂದು ಮತ್ತೊಮ್ಮೆ ಹೇಳಿಸಿಕೋ ಎಂದು ತಿಳಿಸಿದ್ದೆ. ಆದರೆ ಅವಳು ಅರ್ಥವಾಗದ್ದನ್ನು ಹೇಳಿಸಿಕೊಂಡು ಕಲಿಯುವ ಆಸಕ್ತಿಯನ್ನು ಒಮ್ಮೆಯೂ ತೋರಲಿಲ್ಲ. ಇದುವರೆಗೂ ಒಂದೇ ಒಂದು ಪ್ರಶ್ನೆಗೂ ಪೂರ್ಣ ಸರಿ ಉತ್ತರ ಬರೆದಿಲ್ಲ. ಹೀಗಿರುವಾಗ ಅಂಕಗಳನ್ನು ನೀಡುವುದಾದರೂ ಹೇಗೆ’ ಎಂದು ಅಧ್ಯಾಪಕರು ಕೇಳಿದರು.

‘ನಿಮ್ಮ ಸ್ಟೂಡೆಂಟ್‌ನ ನೀವೇ ಫೇಲ್ ಮಾಡೋದು ಸರೀನಾ’ ಎಂಬ ಪ್ರಶ್ನೆ ಅಧ್ಯಾಪಕರೆಡೆಗೆ ತೂರಿ ಬಂತು. ‘ನಾನು ಬೋಧಿಸುವ ವಿಷಯದಲ್ಲಿ ಯಾವುದೇ ವಿದ್ಯಾರ್ಥಿ ಫೇಲಾದರೂ ನನಗೆ ಬೇಸರವಾಗುತ್ತದೆ. ಅವರಿಗೆ ಅರ್ಥವಾಗುವ ಹಾಗೆ ಹೇಳಿಕೊಡಲು ನನ್ನಿಂದ ಏಕೆ ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆಯೂ ಕಾಡುವುದು. ನಾನು ಬೇಕು ಅಂತ ಫೇಲ್ ಮಾಡಿಲ್ಲ. ನಿಮ್ಮ ಮಗಳು ಸರಿಯಾದ ಉತ್ತರಗಳನ್ನು ಬರೆಯದಿರುವ ಕಾರಣಕ್ಕೆ ಫೇಲ್ ಆಗಿದ್ದಾಳೆ. ಅವಳು ಬರೆದಿರುವ ಉತ್ತರಗಳನ್ನು ಇದೇ ವಿಷಯ ಬೋಧಿಸುವ ಬೇರೆ ಪ್ರಾಧ್ಯಾಪಕರಿಗೂ ಒಮ್ಮೆ ತೋರಿಸಿ. ಅವರೇನಾದರೂ ಉತ್ತರಗಳು ಸರಿ ಇವೆ ಎಂದರೆ, ಆನಂತರ ನನ್ನ ಕಡೆಯಿಂದಲೇ ತಪ್ಪಾಗಿದೆ ಎಂಬುದನ್ನು ಒಪ್ಪಿಕೊಳ್ಳುವೆ’ ಎಂದು ಹೇಳುವ ಮೂಲಕ ತಮ್ಮ ನಿಲುವಿಗೆ ಅಧ್ಯಾಪಕರು ಅಂಟಿಕೊಂಡರು.

‘ನೀವು ಮನುಷ್ಯರಾ? ನಿಮಗೆ ಮಾನವೀಯತೆ ಅನ್ನೋದೆ ಇಲ್ವಾ? ನಿಮಗಿಂತ ವಯಸ್ಸಿನಲ್ಲಿ ಹಿರಿಯರಾದವರು ಒಂದು ಸಣ್ಣ ಸಹಾಯ ಮಾಡುವಂತೆ ಇಷ್ಟೆಲ್ಲ ಬೇಡಿಕೊಂಡರೂ ನಿಮ್ದೇ ಸರಿ ಅಂತ ವಾದಿಸ್ತಾ ಇದ್ದೀರಲ್ಲ, ನಿಮ್ಗೆ ಹೇಗೆ ಬುದ್ಧಿ ಕಲಿಸ್ಬೇಕು ಅಂತ ನನಗೆ ಗೊತ್ತು. ನಿಮ್ಮನ್ನ ಮಾತ್ರ ಮರೆಯಲ್ಲ’ ಅಂತ ವಿದ್ಯಾರ್ಥಿನಿಯ ತಂದೆ ಸಿಟ್ಟು ಹಾಗೂ ಅಸಮಾಧಾನ ಹೊರಹಾಕಿದರು.

‘ಉತ್ತರ ಪತ್ರಿಕೆಯಲ್ಲಿ ಬರೆದಿರುವ ಉತ್ತರಗಳಿಗೆ ಅಂಕ ನೀಡಬಹುದೇ ವಿನಾ ನೀವು ಮಾಡುವ ಮನವಿಗೆ ಅಂಕ ನೀಡಲು ಅವಕಾಶವಿಲ್ಲ’ ಎನ್ನುವ ಮೂಲಕ ಅಧ್ಯಾಪಕರು ಮಾತುಕತೆಗೆ ತೆರೆ ಎಳೆದರು.

ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಅಳೆಯಲು ನಾವು ಅಳವಡಿಸಿಕೊಂಡಿರುವ ಪರೀಕ್ಷಾ ವಿಧಾನ ಸೂಕ್ತವೋ ಅಲ್ಲವೋ ಎನ್ನುವುದು ಚರ್ಚಾಸ್ಪದ. ಆದರೆ, ಫಲಿತಾಂಶ ಸುಧಾರಣೆಗಾಗಿ ಶೈಕ್ಷಣಿಕ ವಲಯ ಆತುಕೊಂಡಿರುವ ಅನೈತಿಕ ಮಾದರಿಗಳನ್ನು ಅವಲೋಕಿಸುವ ಅಗತ್ಯವಿದೆ.

ಕೇಂದ್ರೀಕೃತ ಪರೀಕ್ಷಾ ವ್ಯವಸ್ಥೆಯ ಮೂಲಕ ನಡೆಯುವ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ಪರೀಕ್ಷೆಗಳಲ್ಲಿ ತಮ್ಮ ಶಾಲೆ, ಕಾಲೇಜಿಗೆ ಉತ್ತಮ ಫಲಿತಾಂಶ ದೊರೆಯಲಿ ಎನ್ನುವ ಕಾರಣಕ್ಕೆ ಆಂತರಿಕ ಪರೀಕ್ಷಾ ಅಂಕಗಳನ್ನು ತೀರಾ ಧಾರಾಳವಾಗಿ ನೀಡುವುದು, ಪರೀಕ್ಷೆಯಲ್ಲಿ ನಕಲು ಮಾಡಲು ಅವಕಾಶ ಕಲ್ಪಿಸುವಂತಹ ನಾನಾ ಕಸರತ್ತುಗಳಿಗೆ ಶಿಕ್ಷಕರು ಕೈ ಹಾಕುವುದು ಗುಟ್ಟಿನ ವಿಚಾರವೇನಲ್ಲ.

ಕಲಿಸುವ ಗುರುವಿನ ಸ್ಥಾನದಲ್ಲಿ ಇದ್ದುಕೊಂಡು ಹೀಗೆಲ್ಲ ಮಾಡಬಾರದು ಎನ್ನುವ ನಿಲುವಿಗೆ ಜೋತುಬಿದ್ದವರು, ವಿದ್ಯಾರ್ಥಿಗಳಿಗೆ ಒಳ್ಳೆಯದು ಮಾಡಬೇಕೆನ್ನುವ ಕಾಳಜಿ ಇಲ್ಲದವರೆಂದೋ ಮಾನವೀಯತೆ ಇಲ್ಲದ ದುಷ್ಟರೆಂದೋ ದೂಷಣೆಗೆ ಒಳಗಾಗಲು ಸಿದ್ಧರಿರಬೇಕು.

ಫಲಿತಾಂಶ ಹೆಚ್ಚಿಸುವ ಕಡೆಗೆ ತೋರುವಷ್ಟೇ ಕಾಳಜಿಯನ್ನು ಗುರಿ ಸಾಧನೆಗಾಗಿ ಅಡ್ಡದಾರಿ ಹಿಡಿಯುವ ಪರಿಪಾಟಕ್ಕೆ ತಡೆಯೊಡ್ಡಲೂ ತೋರಬೇಕಲ್ಲವೇ? ಮೌಲ್ಯಮಾಪನ ಮಾಡಿದವರು ಕಡಿಮೆ ಅಂಕ ನೀಡಿರುವ ನಿದರ್ಶನಗಳು ಮಾಧ್ಯಮಗಳಲ್ಲಿ ಸುದ್ದಿಯಾದಂತೆ, ಹೆಚ್ಚು ಅಂಕ ನೀಡಿರುವ ಪ್ರಕರಣಗಳು ಸುದ್ದಿ ಆಗುವುದಿಲ್ಲ, ಅಷ್ಟಾಗಿ ಚರ್ಚೆಗೂ ಒಳಪಡುವುದಿಲ್ಲ. ಮೌಲ್ಯಮಾಪನ ವ್ಯವಸ್ಥೆಯಲ್ಲಿ ಯಾವುದೇ ಉತ್ತರಕ್ಕೆ ನೀಡಬೇಕಿರುವ ಅಂಕಗಳಿಗಿಂತ ಕಡಿಮೆ ಅಂಕಗಳನ್ನು ನೀಡಿದ್ದರೆ ಅದನ್ನು ಪತ್ತೆ ಹಚ್ಚಿ ಸರಿಪಡಿಸಲು ಇರುವಷ್ಟು ಅವಕಾಶ, ಹೆಚ್ಚು ಅಂಕ ನೀಡಿದ್ದರೆ ಅದನ್ನು ಸರಿಪಡಿಸುವ ದಿಸೆಯಲ್ಲಿ ಇಲ್ಲ.

‘ನನಗೆ ಹೆಚ್ಚು ಅಂಕ ಬಂದಿದೆ. ನ್ಯಾಯಯುತವಾಗಿ ಬರಬೇಕಿರುವಷ್ಟು ಅಂಕಗಳನ್ನು ಮಾತ್ರ ನೀಡಿ’ ಎಂದು ಕೋರುವ ವಿದ್ಯಾರ್ಥಿಗಳು ನಮ್ಮಲ್ಲಿ ಕಾಣಸಿಗುವುದು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ.

ವಾಚಕರ ವಾಣಿ

ದಶಪಥ ಹೆದ್ದಾರಿ: ಅಪಘಾತಕ್ಕೆ ರಹದಾರಿ

ಕೆಲವು ತಿಂಗಳ ಹಿಂದಷ್ಟೇ ಭಾರಿ ನಿರೀಕ್ಷೆಯೊಂದಿಗೆ ಸಾರ್ವಜನಿಕ ಸಂಚಾರಕ್ಕೆ ತೆರವಾದ ಬೆಂಗಳೂರು- ಮೈಸೂರು ದಶಪಥ ಹೆದ್ದಾರಿಯಲ್ಲಿ ಬಹುತೇಕ ಪ್ರತಿದಿನವೂ ಅಪಘಾತಗಳು ಸಂಭವಿಸುತ್ತಿವೆ. ಈ ಅಪಘಾತಗಳಿಂದ ಅನೇಕರು ಪ್ರಾಣ ಕಳೆದುಕೊಂಡಿದ್ದಾರೆ. ಹೆಚ್ಚಿನ ಅಪಘಾತಗಳು ಚನ್ನಪಟ್ಟಣ- ರಾಮನಗರದ ನಡುವಿನ ಬೈಪಾಸ್ ರಸ್ತೆಯಲ್ಲಿ ಸಂಭವಿಸುತ್ತಿವೆ. ಇದಕ್ಕೆ ಮುಖ್ಯ ಕಾರಣಗಳೆಂದರೆ, ವೇಗದ ಮಿತಿಯ ಫಲಕಗಳನ್ನು ಅಳವಡಿಸದೇ ಇರುವುದು, ರಸ್ತೆಬದಿಯಲ್ಲಿ ಸೂಚನಾ ಫಲಕಗಳು ಇಲ್ಲದೇ ಇರುವುದು, ಒಂದು ವೇಳೆ ಅಪಘಾತವಾಗಿ ಬದುಕುಳಿಯುವ ಸಾಧ್ಯತೆ ಇದ್ದರೂ ರಸ್ತೆಯಲ್ಲಿ ಎಲ್ಲೂ ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆ ಇಲ್ಲದೇ ಇರುವುದು, ವಾಹನ ಚಾಲಕರು ಆಗಿಂದಾಗ್ಗೆ ಟ್ರ್ಯಾಕ್ ಬದಲಿಸುವುದು...

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅಪಘಾತಗಳನ್ನು ತಡೆಗಟ್ಟಲು ಸೂಕ್ತ ಮಾರ್ಗೋಪಾಯಗಳನ್ನು ಶೋಧಿಸಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ಪ್ರತ್ಯೇಕ ಪರೀಕ್ಷಾ ಶುಲ್ಕದ ಹೊರೆಯೇಕೆ?

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಾಲ್ಕು ಇಲಾಖೆಗಳಿಗೆ ಸೇರಿದ 650 ಹುದ್ದೆಗಳಿಗೆ ಬಹಳ ದಿನಗಳ ನಂತರ ಅಧಿಸೂಚನೆ ಹೊರಡಿಸಿರುವುದು ಉದ್ಯೋಗ ಆಕಾಂಕ್ಷಿಗಳಲ್ಲಿ ಹರ್ಷ ಮೂಡಿಸಿದೆ. ಆದರೆ ಅದರೊಟ್ಟಿಗೆ ಬೇಸರವನ್ನೂ ಉಂಟುಮಾಡಿದೆ. ಕಾರಣ, ಪ್ರತಿಯೊಂದು ಇಲಾಖೆಯ ಪ್ರತಿಯೊಂದು ಹುದ್ದೆಗೂ ಪ್ರತ್ಯೇಕವಾಗಿ ಏಳುನೂರಾ ಐವತ್ತರಿಂದ ಸಾವಿರದವರೆಗೆ ಶುಲ್ಕ ನಿಗದಿಪಡಿಸಿರುವುದು. ಇದು ಬಡ ಉದ್ಯೋಗಾಕಾಂಕ್ಷಿಗಳಿಗೆ ತುಂಬಾ ಹೊರೆಯಾಗಿದೆ. ಒಂದು ಇಲಾಖೆಯ ಎಲ್ಲಾ ಹುದ್ದೆಗಳಿಗೆ ಹೀಗೆ ಪ್ರತ್ಯೇಕವಾಗಿ ಶುಲ್ಕ ವಿಧಿಸುವ ಪರಿಪಾಟವನ್ನು ಬಿಡಬೇಕು. ಎಲ್ಲ ಹುದ್ದೆಗಳಿಗೂ ಒಂದೇ ಶುಲ್ಕ ಅನ್ವಯವಾಗುವಂತಿರಲಿ. ಈ ಮೂಲಕ ಬಡ ಉದ್ಯೋಗಾಕಾಂಕ್ಷಿಗಳು ಅರ್ಹರಾದ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಕೂಲ ಮಾಡಿಕೊಡಬೇಕು.

ಬಸವರಾಜ ಚಂದಪ್ಪ ಕರೇಕಲ್, ಮಾವಿನ ಇಟಗಿ, ಕುಷ್ಟಗಿ

ದೇವಾಲಯ ಪ್ರವೇಶ: ಚಿಂತನೆ ನಡೆಯಲಿ

ದಲಿತರಿಗೆ ದೇವಾಲಯಗಳಿಗೆ ಮುಕ್ತ ಪ್ರವೇಶ ನೀಡುವಂತೆ ಕೋಲಾರ ಜಿಲ್ಲೆಯಲ್ಲಿ ಅಭಿಯಾನ ಪ್ರಾರಂಭಿಸಿರುವುದು ಶ್ಲಾಘನೀಯ. ಆದರೆ ಡಾ. ಬಿ.ಆರ್.ಅಂಬೇಡ್ಕರ್ ಅವರು ನಾಸಿಕ್‌ನಲ್ಲಿ ನಡೆಸಿದ ‘ಕಾಳಾರಾಮ ದೇವಾಲಯ ಪ್ರವೇಶ’ ಹೋರಾಟದ ತಾತ್ವಿಕತೆಯನ್ನು ಗಮನಿಸಬೇಕು. ಅವರು ಹಾಗೆ ಮಾಡಿದ್ದು, ಇನ್ನುಮುಂದೆ ದಲಿತರೆಲ್ಲರೂ ದೇವಾಲಯಕ್ಕೆ ಹೋಗಿ ಅಜ್ಞಾನದ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಲಿ ಎಂದಲ್ಲ. ಬದಲಿಗೆ, ಮಾನವರೆಲ್ಲರೂ ಸಮಾನರು ಹಾಗೂ ಈ ಕಟ್ಟುಪಾಡುಗಳೆಲ್ಲವನ್ನೂ ಮೀರದ ವಿನಾ ಸಮಸಮಾಜದ ಪರಿಕಲ್ಪನೆ ಅಪೂರ್ಣ ಎಂಬ ಆಶಯ ಅದರ ಹಿಂದೆ ಇತ್ತು. ‘ದೇವಾಲಯಗಳ ಮುಂದೆ ಸಾಲುಗಟ್ಟಿ ನಿಲ್ಲುವ ಬದಲು ಗ್ರಂಥಾಲಯಗಳ ಮುಂದೆ ಸಾಲುಗಟ್ಟಿ ನಿಂತ ದಿನ ಭಾರತವು ವಿಶ್ವಕ್ಕೆ ಮಾದರಿಯಾಗುತ್ತದೆ’ ಎಂಬ ಅಂಬೇಡ್ಕರ್ ಅವರ ಮಾತು ಅವಶ್ಯವಾಗಿ ಉಲ್ಲೇಖಾರ್ಹ. ಹಾಗಾಗಿ ತಳಸಮುದಾಯಗಳು ಶಿಕ್ಷಣದ ಮೂಲಕ ಶಕ್ತಿ ಪಡೆಯುವ ಕಡೆ ಗಮನಹರಿಸಬೇಕು.

ಡಾ. ಅಭಿಲಾಷ ಎಚ್.ಕೆ., ಮಂಡ್ಯ

ಎಕ್ಸ್‌ಪ್ರೆಸ್ ರೈಲು: ಬದಲಾಗಲಿ ವೇಳಾಪಟ್ಟಿ

‘ವಂದೇ ಭಾರತ್’ ಎಕ್ಸ್‌ಪ್ರೆಸ್ ರೈಲು ಬೆಂಗಳೂರು- ಧಾರವಾಡ ಮಧ್ಯೆ ಆರಂಭವಾಗುತ್ತಿರುವುದು ಸಂತಸದ ವಿಚಾರ. ಆದರೆ ಈ ರೈಲು ಬೆಳಿಗ್ಗೆ ಧಾರವಾಡವನ್ನು ಹಾಗೂ ಮಧ್ಯಾಹ್ನ ಬೆಂಗಳೂರನ್ನು ಬಿಡುವಂತೆ ಆಗಬೇಕು. ಧಾರವಾಡ ಸೇರಿದಂತೆ ಉತ್ತರ ಕರ್ನಾಟಕದ ಹೆಚ್ಚು ಜನರು ಬೆಂಗಳೂರಿಗೆ ಕಾರ್ಯನಿಮಿತ್ತ ಹೋಗಬೇಕಾಗುತ್ತದೆಯೇ ವಿನಾ ಬೆಂಗಳೂರು ಜನರಿಗೆ ಕಚೇರಿ ಕಾರ್ಯಗಳಿಗೆ ಉತ್ತರ ಕರ್ನಾಟಕಕ್ಕೆ ಬರುವ ಅವಶ್ಯಕತೆ ವ್ಯಾಪಕ ಪ್ರಮಾಣದಲ್ಲಿ ಇರುವುದಿಲ್ಲ. ಬೆಂಗಳೂರಿನಲ್ಲಿ ದೂರದ ಬಡಾವಣೆಗಳಿಂದ ಬೆಳಿಗ್ಗೆ 5 ಗಂಟೆ ಹೊತ್ತಿಗೆ ರೈಲು ನಿಲ್ದಾಣ ತಲುಪುವುದು ಕಷ್ಟಕರವಾದ ಕೆಲಸ. ಈ ಕಾರಣಗಳಿಂದ ವಂದೇ ಭಾರತ್ ರೈಲಿನ ನಿಯೋಜಿತ ವೇಳಾಪಟ್ಟಿಯಲ್ಲಿನ ಸಮಯ ಅದಲು ಬದಲಾಗಲಿ.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ಮಾದಕವಸ್ತು: ವಿದ್ಯಾರ್ಥಿಗಳ ಬಳಕೆ ಕಳವಳಕಾರಿ

ಶಿವಮೊಗ್ಗದಲ್ಲಿ ಗಾಂಜಾ ಬೆಳೆದು ಮಾರಾಟ ಹಾಗೂ ಸೇವನೆ ಮಾಡುತ್ತಿದ್ದ ಐವರು ವೈದ್ಯಕೀಯ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿರುವ ಸುದ್ದಿ (ಪ್ರ.ವಾ., ಜೂನ್ 25) ಓದಿ ದಿಗ್ಭ್ರಾಂತನಾದೆ. ಒಂದು ಉತ್ತಮ ಸಮಾಜ ಸೇವೆಯಲ್ಲಿ ತೊಡಗಿ ಪ್ರಜ್ಞಾವಂತ ನಾಗರಿಕರಾಗಿ ಸ್ವಸ್ಥ ಸಮಾಜವನ್ನು ನಿರ್ಮಿಸಬೇಕಾದ ವೈದ್ಯಕೀಯ ವಿದ್ಯಾರ್ಥಿಗಳು ಮಾದಕವಸ್ತು ಜಾಲದಲ್ಲಿ ಸಿಲುಕಿರುವುದು ತುಂಬಾ ಕಳವಳಕಾರಿ. ಇಂತಹ ಪ್ರಕರಣಗಳು ಆಗಾಗ ಮರುಕಳಿಸುತ್ತಿವೆ. ಅಪರಾಧಿಗಳ ವಿರುದ್ಧ ಕಠಿಣ ಕಾಯ್ದೆ ಅಡಿ ಪ್ರಕರಣ ದಾಖಲಿಸಿ ಶಿಕ್ಷೆ ನೀಡಬೇಕು. ಆಗಮಾತ್ರ ಮಾದಕವಸ್ತು ಬಳಕೆ ನಿಯಂತ್ರಣಕ್ಕೆ ಬರುತ್ತದೆ.

ಡಾ. ದೌಲಸಾಬ ಮುದ್ದಾಪೂರ, ಮಸ್ಕಿ

ಮಹಿಳೆಯರಿಗೆ ಉಚಿತ ಮದ್ಯ: ಆಘಾತಕಾರಿ ನಡೆ

ತಾವು ಆಯೋಜಿಸುವ ಪಾರ್ಟಿಗಳಲ್ಲಿ ಮಹಿಳೆಯರಿಗೆ ಉಚಿತ ಮದ್ಯ ಪೂರೈಸಲು ಬೆಂಗಳೂರಿನ ಕೆಲವು ಪಬ್‌ಗಳು ಮುಂದಾಗಿರುವ ಸುದ್ದಿ (ಪ್ರ.ವಾ., ಜೂನ್ 24) ಓದಿ ಗಾಬರಿಯಾಯಿತು. ಈ ಉಚಿತ ಅವಕಾಶದ ಮೂಲಕ ಮಹಿಳೆಯರಿಗೆ ಕುಡಿತದ ಬಗ್ಗೆ ಕುತೂಹಲ, ಆಸೆ ಉಂಟುಮಾಡಿ ನಂತರ ಅವರನ್ನು ವ್ಯಸನಿಗಳನ್ನಾಗಿಸುವ ಹುನ್ನಾರ ಇದರ ಹಿಂದೆ ಅಡಗಿದಂತಿದೆ. ಸಮಾಜ ವಿದ್ರೋಹಿ ಕೃತ್ಯಗಳ ಕುರಿತಾಗಿ ಹೆಣ್ಣುಮಕ್ಕಳ ಪೋಷಕರು ಆತಂಕದಲ್ಲಿ ಇರುವಾಗಲೇ ಪಬ್ ಪಾರ್ಟಿಗಳಲ್ಲಿ ಮಹಿಳೆಯರಿಗೆ ಉಚಿತ ಮದ್ಯ ಎಂದು ಹೇಳುವ ಈ ಮಾಲೀಕರ ನಡೆ ಅವರನ್ನು ಮತ್ತಷ್ಟು ಚಿಂತೆಗೆ ಈಡುಮಾಡಿದರೆ ಆಶ್ಚರ್ಯವಿಲ್ಲ.

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉಚಿತ ಟಿಕೆಟ್ ಸ್ತ್ರೀಗೆ ಶಕ್ತಿ

ರಾಜ್ಯ ಸರ್ಕಾರವು 'ಶಕ್ತಿ' ಯೋಜನೆಯನ್ನು ಅನುಷ್ಠಾನಕ್ಕೆ ತಂದ ಬಳಿಕ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಮಹಿಳೆಯರನ್ನು ಅಪಹಾಸ್ಯಕ್ಕೆ ಗುರಿ ಮಾಡುವ ವರದಿಗಳು, ಮೀಮ್ಸ್‌ಗಳು ದೊಡ್ಡಸಂಖ್ಯೆಯಲ್ಲಿ ಹರಿದಾಡುತ್ತಿವೆ. ಮಾಧ್ಯಮಗಳು ಇಂಥ ಸುದ್ದಿಗಳಿಗೆ ನೀಡುವ ತಲೆಬರಹ, ಸುದ್ದಿಯ ಆಶಯ ಎಲ್ಲವೂ ಮಹಿಳೆಯರನ್ನು ಅಪಹ್ಯಾಸ ಮಾಡುವಂತಿವೆ ಎನ್ನುವ ಬಗ್ಗೆ ಚರ್ಚೆ ನಡೆದಿದೆ

● ಸುಕೃತ ಎಸ್.

'ಬಡವರಿಗೆ ಊಟ ಕೊಡುತ್ತಾರೆ, ಬಡವರ ಬಸ್ ಚಾರ್ಜ್ ಕಮ್ಮಿ ಮಾಡಿದರು, ಕೂಲಿನಾಲಿ ಮಾಡುವ ಹೆಣ್ಣುಮಕ್ಕಳಿಗೆ ನಾಲ್ಕು ಕಾಸು ಕೊಡುತ್ತಾರೆ ಎಂದರೆ ಏನ್ ಸರ್ ಇಷ್ಟು ಬೊಬ್ಬೆ ಹೊಡೀತಾರೆ, ಅವಮಾನ ಮಾಡ್ತಾರೆ. ಬಸ್ ಚಾರ್ಜ್‌ದು ಕಾಸು ಉಳಿದರೆ ನಾವು ಏನು ಮಾಡ್ತೀವಿ ಸರ್? ಸಾಯಂಕಾಲ ಹೋಗುವಾಗ ಸೊಪ್ಪೋ, ಬೇಳೆಯೋ, ಅಡುಗೆ ಎಣ್ಣೆನೋ ತಕೊಂಡು ಹೋಗ್ತೀವಿ. ನಾವೇನಾದ್ರು ಬಾರ್‌ಗೆ ಹೋಗಿ ಸಾರಾಯಿ ಕುಡೀತೀವಾ? ನಾವು ಹಣೆಯಲ್ಲಿ ಇಟ್ಟುಕೊಳ್ಳೊ ಬೊಟ್ಟಿಂದ ನಮ್ಮ ಅಮ್ಮನೊ, ಅಜ್ಜಿನೊ ಹಾಕೊ ಕಡ್ಡಿಪುಡಿ-ವರೆಗೂ ನಾವು ಕೊಡುವ ತೆರಿಗೆ ಹಣವನ್ನೇ ಅಲ್ಲವೇ ನಮಗೆ ಕೊಡ್ತಿರೋದು. ದೊಡ್ಡ ದೊಡ್ಡ ಶ್ರೀಮಂತರು ಭಾರತ ಬಿಟ್ಟು ಹೋದಾಗ ಯಾಕೆ ಯಾರು ಹೀಗೆ ಮಾತಾಡ್ಲಿಲ್ಲ?'

ರಾಜ್ಯ ಸರ್ಕಾರದ ಶಕ್ತಿ ಯೋಜನೆ ಬಗ್ಗೆ ಸುದ್ದಿವಾಹಿನಿಯ ಪ್ರತಿನಿಧಿಯೊಬ್ಬರು ಕೇಳಿದ ಪ್ರಶ್ನೆಗೆ ಕೋಲಾರದ ಮಹಿಳೆಯೊಬ್ಬರು ಪ್ರತಿಕ್ರಿಯೆ ನೀಡಿದ ಬಗೆ ಇದು.

ಸಾಂಸ್ಕೃತಿಕ ಕಾರಣಗಳಿಂದ ಹಾಗೂ ಪುರುಷ ಪ್ರಧಾನ ಮನಃಸ್ಥಿತಿಯ ಕಾರಣಕ್ಕೆ ಮಹಿಳೆಯು ಮನೆಯೊಳಗೆ ಬಂದಿಯಾಗಿದ್ದಾಳೆ. ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣ ದರ ಕಡಿತ ಅಥವಾ ಉಚಿತ ಮಾಡುವುದರಿಂದ ಆಕೆ ಸ್ವತಂತ್ರಗಳಾಗುತ್ತಾಳೆ. ಪ್ರಯಾಣ ದರದಲ್ಲಿನ ರಿಯಾಯಿತಿಯು ಆಕೆ ಸಮಾಜದೊಂದಿಗೆ ಹೆಚ್ಚು ಹೆಚ್ಚು ಬೆರೆಯುವಂತೆ ಮಾಡುತ್ತದೆ. ಒಂದೊಮ್ಮೆ, ಆಕೆಗೆ ಹಾಗೆ ಸುಮ್ಮನೆ ಎಲ್ಲಾದರೂ ದೂರದ ಪ್ರಯಾಣ ಮಾಡಬೇಕು ಅನ್ನಿಸಿ ಆಕೆ ಹಾಗೆ ಪ್ರಯಾಣ ಬೆಳೆಸುವುದು ಕೂಡ ಆಕೆಗೆ ಧೈರ್ಯ ತಂದುಕೊಡಬಲ್ಲದು ಎನ್ನುತ್ತದೆ ವಿಶ್ವ ಬ್ಯಾಂಕ್‌ನ ಸಂಶೋಧನಾ ವರದಿ.

ಒಂದು ಸಾಮಾನ್ಯ ಬಡ ಕುಟುಂಬದಲ್ಲಿ ದುಡಿಯುವ ಪುರುಷರಿಗೆ ಹೆಚ್ಚು ಆದ್ಯತೆ ನೀಡಲಾಗುತ್ತದೆ. ಆತನ ಖರ್ಚು ವೆಚ್ಚ, ಓಡಾಟಕ್ಕೆ ಹಣ ಇಟ್ಟು, ಉಳಿದಿದ್ದು ಮನೆಗೆ ದೊರಕುತ್ತದೆ. ಉಳಿಯುವ ಸಣ್ಣ ಹಣದಲ್ಲಿ ಹೆಂಡತಿ, ಮಕ್ಕಳು ವೃದ್ಧರು ಎಲ್ಲಿಗೆ ಓಡಾಡಲು ಸಾಧ್ಯವಿದೆ? ಆದ್ದರಿಂದ ಮಹಿಳೆ ಮನೆ ಬಂದಿಯೇ ಆಗಿದ್ದಾಳೆ ಎಂದು ವರದಿಯಲ್ಲಿ ಹೇಳಲಾಗಿದೆ.

ದುಡಿಮೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಏರಿಕೆ

ದೇಶದ ಬೇರೆಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹೋಲಿಸಿದರೆ, ದುಡಿಮೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣವು ದೆಹಲಿಯಲ್ಲೇ ಕಡಿಮೆ. 2018–19ನೇ ಸಾಲಿನಲ್ಲಿ ದೆಹಲಿಯಲ್ಲಿನ 15ರಿಂದ 49 ವರ್ಷ ವಯಸ್ಸಿನ ಮಹಿಳೆಯರಲ್ಲಿ ದುಡಿಮೆಯಲ್ಲಿ ಭಾಗಿಯಾ-ಗುತ್ತಿದ್ದವರ ಪ್ರಮಾಣ ಶೇ 11ರಷ್ಟು ಮಾತ್ರ. ದೆಹಲಿಯಂತಹ ಮಹಾನಗರದಲ್ಲಿ ಕೆಲಸಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣ ಮಾಡುವುದು ದುಬಾರಿ. ಪ್ರಯಾಣದ ವೆಚ್ಚವನ್ನು ಭರಿಸುವುದು ಕಷ್ಟವಾಗುತ್ತದೆ ಎಂಬ ಕಾರಣಕ್ಕೇ ದೆಹಲಿಯ ಕಾರ್ಮಿಕ ವರ್ಗದ ಮಹಿಳೆಯರು ಕೆಲಸವನ್ನೇ ತ್ಯಜಿಸಿದ್ದಾರೆ ಎಂದು ಹಲವು ಅಧ್ಯಯನ ವರದಿಗಳು ವಿಶ್ಲೇಷಿಸಿವೆ.

ದೆಹಲಿಯಲ್ಲಿ 'ಪಿಂಕ್ ಸ್ಲಿಪ್' ಯೋಜನೆಯು ಜಾರಿಗೆ ಬಂದ ನಂತರ ದುಡಿಮೆಯಲ್ಲಿ ಮಹಿಳೆಯ ಭಾಗವಹಿಸುವಿಕೆ ಏರಿಕೆಯಾಗಿದೆ. 2018–19ರಲ್ಲಿ ಶೇ 11ರಷ್ಟು ಮಹಿಳೆಯರಷ್ಟೇ ದುಡಿಮೆಯಲ್ಲಿ ಭಾಗವಹಿಸುತ್ತಿದ್ದರು, 2019–20ರಲ್ಲಿ ಈ ಪ್ರಮಾಣ ಶೇ 14.5ಕ್ಕೆ ಏರಿಕೆಯಾಗಿದೆ. ಉಚಿತ ಬಸ್ ಪ್ರಯಾಣದ ಸವಲತ್ತಿನ ಕಾರಣದಿಂದಲೇ ಮಹಿಳೆಯರು ದುಡಿಮೆಯಲ್ಲಿ ಭಾಗಿಯಾಗುತ್ತಿದ್ದಾರೆ ಎಂದು ಕ್ಲೀನ್‌ಫ್ಯುಯೆಲ್ಸ್‌ನ 'ಪಿಂಕ್ ಸ್ಲಿಪ್ ಸ್ಕೀಂ: ಎ ಕೇಸ್ ಸ್ಟಡಿ' ವರದಿಯಲ್ಲಿ ವಿಶ್ಲೇಷಿಸಲಾಗಿದೆ.

11% — 2018–19ರಲ್ಲಿ ದುಡಿಮೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ

14.5% — 2019–20ರಲ್ಲಿ ದುಡಿಮೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ

ಮಹಿಳೆಯರಿಗೆ ಉಚಿತ ಟಿಕೆಟ್ ನೀಡುವ ವಿಷಯಕ್ಕೆ ಬರುವುದಾದರೆ, ದೇಶದಲ್ಲಿ ಈ ಮೊದಲೇ ದೆಹಲಿ, ತಮಿಳುನಾಡು ಹಾಗೂ ಪಂಜಾಬ್‌ನಲ್ಲಿ ಇಂತಹ ಯೋಜನೆ ಜಾರಿಯಲ್ಲಿದೆ. ಈ ಎಲ್ಲ ಕಡೆಗಳಲ್ಲೂ ಸಕಾರಾತ್ಮಕ ಬೆಳವಣಿಗೆಯೇ ಆಗಿದೆ. ಈ ಬಗ್ಗೆ ಭಾರತದಲ್ಲಿಯೇ ಹಲವು ಅಧ್ಯಯನಗಳು ನಡೆದಿವೆ.

ಬಸ್ ಪ್ರಯಾಣ ಉಚಿತ ಇರುವ ಕಾರಣಕ್ಕೆ ಹೆಚ್ಚು ಹೆಚ್ಚು ಮಹಿಳೆಯರು ಬಸ್‌ನಲ್ಲಿ ಪ್ರಯಾಣ ಮಾಡುತ್ತಾರೆ. ಬಸ್ ಸಂಚಾರದ ಅಧಿಕ ದಟ್ಟಣೆ ಇರುವಾಗಲೂ, ಸಂಜೆ ಅಥವಾ ರಾತ್ರಿ ವೇಳೆಯಲ್ಲಿಯೂ ಮಹಿಳೆಯರು ಬಸ್‌ನಲ್ಲಿ ಪ್ರಯಾಣ ಮಾಡುತ್ತಾರೆ. ಇದರಿಂದ ಸಾರ್ವಜನಿಕ ಸ್ಥಳಗಳಲ್ಲಿ, ಬಸ್‌ಗಳಲ್ಲಿ ಮಹಿಳೆಯರು ಸುರಕ್ಷಿತವಾಗಿರುತ್ತಾರೆ ಎನ್ನುವ ಅಂಶವನ್ನು ಪ್ರಮುಖವಾಗಿ ಈ ಅಧ್ಯಯನ ವರದಿಗಳಲ್ಲಿ ಹೇಳಲಾಗಿದೆ.

ದೇಶದಲ್ಲಿ ಸದ್ಯ 100 ಮಹಿಳೆಯರಲ್ಲಿ 24 ಮಂದಿ ಮಾತ್ರ ದುಡಿಮೆಯಲ್ಲಿ ಭಾಗಿಯಾಗುತ್ತಿದ್ದಾರೆ. ದೂರದ ಊರುಗಳಿಗೆ ಹೆಣ್ಣು ಮಕ್ಕಳನ್ನು ಓದಲು ಕಳುಹಿಸಬೇಕು ಮತ್ತು ಬಸ್‌ನ ಖರ್ಚು ಹೆಚ್ಚು ಎನ್ನುವ ಕಾರಣಕ್ಕೆ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ದೆಹಲಿ, ತಮಿಳುನಾಡಿನಲ್ಲಿ ದುಡಿಯುವ ಮಹಿಳೆಯ ಸಂಖ್ಯೆ ಏರಿಕೆಯಾಗಿದೆ. ಹೆಣ್ಣುಮಕ್ಕಳು ಸಾಕ್ಷರತೆ ಕೂಡ ಏರಿಕೆಯಾಗಿದೆ.

ಈ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಉಚಿತ ಟಿಕೆಟ್ ಯೋಜನೆಯನ್ನು ವಿದ್ಯಾಭ್ಯಾಸಕ್ಕೆ ಮತ್ತು ಮಹಿಳೆಯರು ಉದ್ಯೋಗಕ್ಕೆ ಹೋಗುವುದಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ಸಮೀಕ್ಷೆಗಳಿಂದ ತಿಳಿದುಬಂದಿದೆ.

ಜಗತ್ತಿನ ಪ್ರತಿಷ್ಠಿತ ಹಲವು ವಿಶ್ವವಿದ್ಯಾಲಯಗಳು, ವಿಶ್ವ ಬ್ಯಾಂಕ್ ಸೇರಿದಂತೆ ಹಲವಾರು ಸಂಸ್ಥೆಗಳು 'ಸಾರ್ವಜನಿಕ ಸಾರಿಗೆ ಮತ್ತು ಬಡತನ' ಎನ್ನುವ ವಿಷಯದ ಕುರಿತು ಹಲವು ಸಂಶೋಧನೆ, ಪ್ರಬಂಧ ಲೇಖನಗಳನ್ನು ಪ್ರಕಟಿಸಿವೆ. ಸಾರ್ವಜನಿಕ ಸಾರಿಗೆಯ ಲಭ್ಯತೆ ಮತ್ತು ಅವುಗಳ ಕಡಿಮೆ ಪ್ರಯಾಣ ದರಗಳು ಹೇಗೆ ದೇಶಗಳ ಆರ್ಥಿಕತೆಗೆ ವೇಗ ನೀಡುತ್ತವೆ ಎನ್ನುವ ಕುರಿತು ಹಲವು ಆಯಾಮಗಳಲ್ಲಿ ಚರ್ಚೆ ನಡೆಸಿವೆ. ಜೊತೆಗೆ, ಇಂಥ ಕ್ರಮಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಬಲ್ಲವು ಎಂದು ವಿಶ್ವ ಬ್ಯಾಂಕ್ ತನ್ನ ಸಂಶೋಧನಾ ವರದಿಯೊಂದರಲ್ಲಿ ಹೇಳಿದೆ.

ಹೊಸ ಆಲೋಚನೆಯೇನಲ್ಲ

ಉಚಿತ ಟಿಕೆಟ್ ಎನ್ನುವ ಪರಿಕಲ್ಪನೆಯು ಈ ಜಗತ್ತಿಗೆ ಹೊಸ ವಿಷಯವೇನಲ್ಲ. ಜಗತ್ತಿನ ನೂರಾರು ನಗರಗಳಲ್ಲಿ, ಹಲವು ದೇಶಗಳಲ್ಲಿ ಉಚಿತ ಟಿಕೆಟ್ ಯೋಜನೆಯು ಜಾರಿಯಲ್ಲಿದೆ. ಇಲ್ಲೆಲ್ಲಾ ದೇಶದ ಎಲ್ಲ ನಾಗರಿಕರಿಗೂ ಪ್ರಯಾಣವನ್ನು ಉಚಿತ ಮಾಡಲಾಗಿದೆ. 1960ರಲ್ಲಿಯೇ ನ್ಯೂಯಾರ್ಕ್‌ನಲ್ಲಿ ಉಚಿತ ಟಿಕೆಟ್ ನೀಡುವ ಕುರಿತು ಚರ್ಚೆ ಆರಂಭವಾಗಿತ್ತು. ಆದರೆ, ಬೇರೆ ಬೇರೆ ಕಾರಣಗಳಿಗೆ ಇದರ ಅನುಷ್ಠಾನ ಆಗ ಸಾಧ್ಯವಾಲಿಲ್ಲ.

ಸಾರ್ವಜನಿಕ ಸಾರಿಗೆಯಲ್ಲಿ ಉಚಿತ ಪ್ರಯಾಣ ನೀಡಲು ಎರಡು ಮುಖ್ಯ ಕಾರಣಗಳಿವೆ. ಒಂದು ವಾಯುಮಾಲಿನ್ಯ ತಡೆಗಟ್ಟುವುದು. ಮತ್ತೊಂದು ಬಡತನ ನಿರ್ಮೂಲನೆ; ಆ ಮೂಲಕ ಆರ್ಥಿಕ ಅಭಿವೃದ್ಧಿ. ಇಂಥ ಹಲವು ಯೋಜನೆಗಳಿಗೆ ನೇರ ಮತ್ತು ಪರೋಕ್ಷ ಪರಿಣಾಮಗಳಿರುತ್ತವೆ.

ದಕ್ಷಿಣ ಏಷ್ಯಾ ದೇಶಗಳು, ಆಫ್ರಿಕಾ ಸೇರಿದಂತೆ ಹಲವು ದೇಶಗಳಲ್ಲಿ ಬಡ ಕುಟುಂಬವೊಂದು ತನ್ನ ತಿಂಗಳಿನ ಆದಾಯದಲ್ಲಿ ಶೇ 10ರಿಂದ 20ರಷ್ಟು ಹಣವನ್ನು ಸಾರಿಗೆಗಾಗಿಯೇ ಮೀಸಲಿಡುತ್ತದೆ ಎಂದು ವಿಶ್ವ ಬ್ಯಾಂಕ್ ತನ್ನ ಸಂಶೋಧನಾ ವರದಿಯೊಂದರಲ್ಲಿ ಹೇಳಿದೆ. ಬಡತನದ ಕಾರಣಕ್ಕಾಗಿ ಬಸ್ ಪ್ರಯಾಣ ವೆಚ್ಚ ಭರಿಸಲಾಗದೇ ಇಂಥ ಕುಟುಂಬಗಳಿಗೆ ಉತ್ತಮ ಶಿಕ್ಷಣ, ಉತ್ತಮ ಆರೋಗ್ಯ, ಉದ್ಯೋಗ ಲಭ್ಯತೆಯು ಮರೀಚಿಕೆಯಾಗಿದೆ. ಆದರೆ, ಉತ್ತಮ ಸಾರ್ವಜನಿಕ ಸಾರಿಗೆ ಲಭ್ಯತೆ ಮತ್ತು ಕಡಿಮೆ ದರದಲ್ಲಿ ಸಿಗುವ ಪ್ರಯಾಣದಿಂದ ಶಿಕ್ಷಣ, ಆರೋಗ್ಯದಂಥ ಹಕ್ಕಗಳು ಬಡವರಿಗೆ ದೊರಕುವಂತಾಗುತ್ತದೆ ಎನ್ನುತ್ತದೆ ವಿಶ್ವ ಬ್ಯಾಂಕ್. ಶಾಲೆಯೊಂದು ಮನೆಯಿಂದ ದೂರ ಇದೆ ಎನ್ನವ ಕಾರಣಕ್ಕೆ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ. ಇಂಥ ಹಲವು ಘಟನೆಗಳು ರಾಜ್ಯದಲ್ಲೂ ವರದಿಯಾಗಿವೆ.

ಸಾರ್ವಜನಿಕ ಸಾರಿಗೆಗಳಲ್ಲಿ ಪ್ರಯಾಣ ದರವು ಕೈಗೆಟುಕದ ಕಾರಣಕ್ಕಾಗಿ ಬಡವರು ಬಹುತೇಕ ನಡೆದುಕೊಂಡೇ, ಇಲ್ಲವೇ ಸೈಕಲ್‌ಗಳಲ್ಲಿ ಓಡಾಡುತ್ತಾರೆ. ಹೀಗೆ ಕಿ.ಮೀ ಗಟ್ಟಲೆ ದೂರದ ಉದ್ಯೋಗ ಸ್ಥಳಗಳಿಗೆ ನಡೆದುಕೊಂಡೇ ಹೋಗುವುದು ಅವರ ಉತ್ಪಾದಕತೆಯನ್ನು ಕುಗ್ಗಿಸುತ್ತದೆ.

ಸಾರ್ವಜನಿಕ ಸಾರಿಗೆಯನ್ನು ಉಚಿತ ಮಾಡಿದರೆ, ಬಡ ಕುಟುಂಬವೊಂದು ಉಳಿಸುವ ಹಣ ಎಷ್ಟು, ಆ ಹಣವನ್ನು ಅವರು ಹೇಗೆ ಬಳಸುತ್ತಾರೆ, ಪದೇ ಪದೇ ಪ್ರಯಾಣ ಮಾಡುತ್ತಾರಾ, ಎಲ್ಲಿಗೆ ಪ್ರಯಾಣ ಮಾಡುತ್ತಾರೆ ಎಂಬಂಥ ಹಲವು ಪರೋಕ್ಷ ಪರಿಣಾಮಗಳ ಬಗ್ಗೆ ವಿಶ್ವ ಬ್ಯಾಂಕ್‌ನ ಸಂಶೋಧನಾ ವರದಿಗಳಲ್ಲಿ ಚರ್ಚೆ ಮಾಡಲಾಗಿದೆ.

ಐಟಿ ಸೆಲ್‌ಗಳು ಮತ್ತು ಪುರುಷರ ಅಭದ್ರತೆ

ಉಚಿತ ಪ್ರಯಾಣದ ಯೋಜನೆಯ ಫಲಾನುಭವಿ ಯಾದ ಮಹಿಳೆಯರನ್ನು ಅಪಹಾಸ್ಯ ಮಾಡುತ್ತಾರೆ ಎಂಬ ಆರೋಪದ ಬಗ್ಗೆ ಕವಯತ್ರಿ ಪ್ರತಿಭಾ ನಂದಕುಮಾರ್ ಅವರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ

ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣವನ್ನು ಸರ್ಕಾರ ಘೋಷಿಸಿರುವ ಬೆನ್ನಲ್ಲೇ ಆಕೆಯನ್ನು ಅಸಹ್ಯಕರವಾಗಿ ಚಿತ್ರಿಸುವ, ಅಶ್ಲೀಲವಾಗಿ ಟೀಕಿಸುವ ಕೆಲಸ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಇಂಥ ಆಲೋಚನೆಗಳು ಹುಟ್ಟಿರುವುದು ಪುರುಷ ಪ್ರಧಾನ ಮನಃಸ್ಥಿತಿಯ ಕಾರಣಕ್ಕಾಗಿ ಅಲ್ಲ. ಇಂಥ ಸಂಕಥನಗಳು ನಡೆಯುತ್ತಿರುವುದು ರಾಜಕೀಯದ ಕಾರಣಕ್ಕಾಗಿ. ಪಕ್ಷವೊಂದರ ಐಟಿ ಸೆಲ್‌ಗಳು ಓವರ್ ಟೈಮ್ ಕೆಲಸ ಮಾಡುತ್ತಿರುವುದಕ್ಕೇ ಇಂಥ ಸಂಕಥನಗಳು ಹುಟ್ಟಿಕೊಂಡಿವೆ. ಇವರು ಮೀಮ್ಸ್‌ಗಳನ್ನು ತಯಾರು ಮಾಡುತ್ತಿದ್ದಾರೆ. ಇವರಿಗೆ ಹತ್ತಿರ ಇರುವ ಮಾಧ್ಯಮಗಳು ಇಂಥದನ್ನು ಸುದ್ದಿ ಮಾಡುತ್ತಿದ್ದಾವೆ ಅಷ್ಟೆ.

ಮಹಿಳೆಯರ ಬಗೆಗಿನ ಇಂಥ ಆಲೋಚನೆಗಳು ಕಳೆದ 10 ವರ್ಷಗಳಲ್ಲಿ ಹುಟ್ಟಿಕೊಂಡಂಥವು. ಶೈಕ್ಷಣಿಕವಾಗಿ, ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳೆ ಮುನ್ನಡೆದಿದ್ದಾಳೆ ಎಂದಾದರೆ, ಅದರಲ್ಲಿ ಸುಮಾರು 50 ವರ್ಷಗಳ ಪ್ರಯತ್ನವಿದೆ. ಆದರೆ, ಕಳೆದ 10 ವರ್ಷಗಳಲ್ಲಿ ಮಹಿಳೆಯರನ್ನು ಸುಮಾರು ಒಂದು ಸಾವಿರ ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ನಡೆಯುತ್ತಿದೆ.

ಮಹಿಳೆಯರಿಗಾಗಿಯೇ ಈ ಹಿಂದೆಯೂ ಅನೇಕ ಯೋಜನೆಗಳನ್ನು ತರಲಾಗಿದೆ. ಆಗ ಆ ಬಗ್ಗೆ ಯಾರೂ ತಕರಾರು ಎತ್ತುತ್ತಿರಲಿಲ್ಲ; ಅಪಹಾಸ್ಯ ಮಾಡುತ್ತಿರಲಿಲ್ಲ. ಆದರೆ, ಕೇಂದ್ರ ಸರ್ಕಾರದ 'ಸಾಂಸ್ಕೃತಿಕ' ರಾಜಕಾರಣದ ಕಾರಣಕ್ಕಾಗಿ ಸಾಮಾನ್ಯರಿಗೆ ಮಹಿಳಾ ಸ್ವಾತಂತ್ರ್ಯ, ಸಮಾನತೆಯ ವಿಷಯಗಳನ್ನು ಹೇಗೆ ಗ್ರಹಿಸಬೇಕು ಎನ್ನುವ ಕುರಿತು ಗೊಂದಲ ಸೃಷ್ಟಿಯಾಗಿದೆ.

ಇತ್ತೀಚೆಗೆ ಒಬ್ಬ ಯುವಕ ಶಕ್ತಿ ಯೋಜನೆಯ ಬಗ್ಗೆ ವಾಹಿನಿಯೊಂದಕ್ಕೆ ನೀಡಿದ ಹೇಳಿಕೆ ಹೀಗಿದೆ: 'ಮಹಿಳೆಯರು ಬಸ್‌ನಲ್ಲಿ ಉಚಿತ ಪ್ರಯಾಣ ಮಾಡಿದರೆ, ಮನೆಯಲ್ಲಿ ಅಡುಗೆ ಮಾಡುವವರು ಯಾರು?' ಎಂಬುದು ಆತನ ಆತಂಕ. ಎಲ್ಲಿ ತನ್ನ ಆರಾಮಿಗೆ ಧಕ್ಕೆ ಬರುತ್ತದೆಯೊ ಎನ್ನುವ ಅಭದ್ರತೆ ಈಗೀಗೆ ಬಂದದ್ದು. ದೆಹಲಿ, ತಮಿಳುನಾಡು, ಪಂಜಾಬ್‌ನಲ್ಲಿ ಈಗಾಗಲೇ ಇಂತಹ ಯೋಜನೆ ಜಾರಿಯಲ್ಲಿದೆ. ಆಗೆಲ್ಲಾ ಸೃಷ್ಟಿಯಾಗದ ಇಂಥ ಮೀಮ್ಸ್‌ಗಳು ಈಗ ಯಾಕೆ ಸೃಷ್ಟಿಯಾದವು. ಇದು ರಾಜಕೀಯ ಪ್ರೇರಿತವಲ್ಲದೆ ಮತ್ತೇನು?

ಈಗ ನೋಡಿ, ಮೊದಲು ಮಾದೇಶ್ವರ ಬೆಟ್ಟಕ್ಕೆ ಹೋಗೋಕೆ ಮಹಿಳೆಯರು ವರ್ಷವಿಡೀ ದುಡಿದು ಹಣ ಕೂಡಿಡುತ್ತಿದ್ದರು. ಕುಟುಂಬದ ವಾರ್ಷಿಕ ಪ್ರವಾಸ ಎಂಬಂತೆ ಮಾದೇಶ್ವರ ಬೆಟ್ಟಕ್ಕೆ ಹೋಗಿಬರುತ್ತಿದ್ದರು. ಅವರಿಗೆ ಈಗ ಉಚಿತ ಪ್ರಯಾಣ ಸಿಕ್ಕಿದೆ, ಅವರು ಹೋಗಿ ಬಂದರು ಅಷ್ಟೆ. ತೀರ್ಥಕ್ಷೇತ್ರಗಳಿಗೆ ಹೋಗುವ ಮಹಿಳೆಯ ಬಗ್ಗೆ ಇಷ್ಟೊಂದು ಅಪಹಾಸ್ಯವೇಕೆ?

ಕೊನೇ ಮಾತು, ಬಿಜೆಪಿ ಅವರು ದುರ್ಗಾ ಸೇನೆ ಎಂದು ಮಾಡಿಕೊಂಡಿದ್ದಾರೆ. ಕುತೂಹಲವಾಗಿ, ಈ ಸೇನೆ ಏನು ಮಾಡುತ್ತದೆ ಎಂದು ವಿಚಾರಿಸಿದೆ. ಲಲಿತಾ ಸಹಸ್ರನಾಮ, ಸೌಂದರ್ಯ ಲಹರಿ ಓದೋದು ಈ ಸೇನೆಯ ಮುಖ್ಯ ಕೆಲಸ. ಈ ಹೆಣ್ಣುಮಕ್ಕಳಿಗೆ ಪಕ್ಷದವರು ತಿಂಗಳಿಗೆ ಒಮ್ಮೆ ಅಥವಾ ತಿಂಗಳಿಗೆ ಎರಡು ಬಾರಿ ಉಚಿತ ಬಸ್ ನೀಡಿ, ಮಂತ್ರಾಲಯ, ಕುಕ್ಕೆ ಸುಬ್ರಮಣ್ಯ ಮತ್ತು ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗುತ್ತಾರೆ. ಚುನಾವಣೆ ಸಂದರ್ಭದಲ್ಲೂ ಈ ರೀತಿ ಮಾಡಲಾಗಿದೆ. ಹೀಗಿರುವಾಗ ಸರ್ಕಾರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡಿದರೆ ಯಾಕೆ ಇವರು ಹೀಗಳೆಯುತ್ತಾರೆ ಎಂದು ತಿಳಿಯುತ್ತಿಲ್ಲ.

ಆಧಾರ: ವಿಶ್ವ ಬ್ಯಾಂಕ್‌ನ ಸಂಶೋಧನಾ ವರದಿ 'ಬಡತನ ಮತ್ತು ಸಾರಿಗೆ', ಕ್ಲೀನ್‌ಫ್ಯುಯೆಲ್ಸ್‌ನ 'ಪಿಂಕ್ ಸ್ಲಿಪ್ ಸ್ಕೀಂ: ಎ ಕೇಸ್ ಸ್ಟಡಿ', ಕೇಂದ್ರ ಕಾರ್ಮಿಕ ಸಚಿವಾಲಯದ ಲೇಬರ್ ವರ್ಕ್‌ಫೋರ್ಸ್ ಪಾರ್ಟಿಸಿಪೇಷನ್ ಸರ್ವೇ ವರದಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಅಮೆರಿಕದ 'ದಿ ನ್ಯೂಯಾರ್ಕ್ ಟೈಮ್ಸ್' ಪ್ರತಿಕೆಯು 'ಭೂಮಿಯಲ್ಲಿರುವ ಕೊನೆಯ, ಉತ್ತಮ ಆಶಾಕಿರಣ' ಎಂಬ ತಲೆಬರಹದೊಂದಿಗೆ ಮುಖಪುಟದಲ್ಲಿ ಬರಹ ಪ್ರಕಟ ಮಾಡಿದೆ' ಎಂಬ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪತ್ರಿಕೆಯ ತುಣುಕಿನ ಚಿತ್ರವು ವಾಟ್ಸ್‌ಆ್ಯಪ್ ಹಾಗೂ ಫೇಸ್‌ಬುಕ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಹಂಚಿಕೆಯಾಗಿದೆ. ಇದೇ ಪತ್ರಿಕೆಯ ತುಣುಕು 2021ರ ಸೆಪ್ಟೆಂಬರ್‌ನಲ್ಲಿಯೂ ಹರಿದಾಡಿತ್ತು. ಆಗ ಪ್ರಧಾನಿ ಮೋದಿ ಅವರು ಮೂರು ದಿನಗಳ ಅಮೆರಿಕ ಪ್ರವಾಸ ಕೈಗೊಂಡಿದ್ದರು. 2023ರ ಜೂನ್‌ನಲ್ಲಿ ಮೋದಿ ಅವರು ಮತ್ತೊಮ್ಮೆ ಅಮೆರಿಕ ಪ್ರವಾಸ ಕೈಗೊಂಡಿದ್ದರು. ಇದೇ ಸಂದರ್ಭದಲ್ಲಿ ಮತ್ತೊಮ್ಮೆ ಇದೇ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಆದರೆ, ಇದು ಸುಳ್ಳು ಸುದ್ದಿ.

'ಇದೊಂದು ತಿರುಚಲಾದ ಮುಖಪುಟವಾಗಿದೆ. ಇಂಥ ಯಾವುದೇ ವರದಿಯನ್ನು ನಾವು ಪ್ರಕಟಿಸಿಲ್ಲ' ಎಂದು ಖುದ್ದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ 2021ರಲ್ಲಿಯೇ ಸ್ಪಷ್ಟನೆ ನೀಡಿತ್ತು. ಈ ಪತ್ರಿಕೆಯ ತುಣುಕಿನಲ್ಲಿ ಬಳಸಲಾಗಿರುವ ಪ್ರಧಾನಿ ಮೋದಿ ಅವರ ಚಿತ್ರವನ್ನು 2021ರ ಮಾರ್ಚ್ 12ರಂದು ತೆಗೆಯಲಾಗಿದೆ. ದಂಡಿ ಯಾತ್ರೆಗೆ 90 ವರ್ಷ ಸಂದ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ಸಬರಮತಿ ಆಶ್ರಮಕ್ಕೆ ತೆರಳಿದ್ದರು. ಆಗ ಅವರು ಆಶ್ರಮದ ಸಂದರ್ಶಕರ ಪುಸ್ತಕದಲ್ಲಿ ತಮ್ಮ ಅಭಿಪ್ರಾಯ ಬರೆದಿದ್ದರು. ಈ ವೇಳೆ ಈ ಚಿತ್ರವನ್ನು ಸೆರೆಹಿಡಿಯಲಾಗಿತ್ತು. ಈ ಚಿತ್ರವನ್ನು ಈಗ ಸುಳ್ಳು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಲ್ಪವಾದ ಮೃತ್ಯು

ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು |
ಕತ್ತಲೆಯ ಮೊಡಕು ಮೂಲೆಗಳ ಸೇರದಿರು ||
ಭಾಸ್ಕರನನುಗ್ರಹವೆ ನೂತ್ನಜೀವನಸತ್ತ್ವಂ |
ಮೃತ್ಯು ನಿನಗಲ್ಪತೆಯೊ – ಮಂಕುತಿಮ್ಮ || **913** ||

ಪದ-ಅರ್ಥ: ಭಾಸ್ಕರನನುಗ್ರಹವೆ = ಭಾಸ್ಕರನ + ಅನುಗ್ರಹವೆ, ನೂತ್ನಜೀವನಸತ್ತ್ವಂ = ನೂತ್ನ(ನೂತನ) + ಜೀವನ ಸತ್ವ,
ನಿನಗಲ್ಪತೆಯೊ = ನಿನಗೆ + ಅಲ್ಪತೆಯೊ.

ವಾಚ್ಯಾರ್ಥ: ವಿಸ್ತಾರದಿಂದ, ವೈಶಾಲ್ಯದಿಂದ ಬಾಳು. ಅಜ್ಞಾನದ ಕತ್ತಲೆಯ ಮೂಲೆಗಳನ್ನು ಸೇರಬೇಡ. ಸೂರ್ಯನ ಬೆಳಕಿನ ಅನುಗ್ರಹವೇ ಹೊಸ ಜೀವನದ ಸತ್ವ. ಹಾಗೆ ಆದಾಗ ಸಾವು ಎನ್ನುವುದು ತೀರ ಗೌಣವಾದ ವಿಷಯ.

ವಿವರಣೆ: ವಿಸ್ತಾರ ಎಂಬ ಪದವೇ ಅದ್ಭುತವಾದದ್ದು ಅದಕ್ಕೆ ಅರ್ಥ, ಹಿರಿದಾದದ್ದು, ವ್ಯಾಪಕವಾದದ್ದು ಎಂದಿದೆ. ವಿಸ್ತಾರ ಎನ್ನುವುದು ಭಗವಂತನ ಒಂದು ಹೆಸರೂ ಹೌದು. ವಿಷ್ಣು ಸಹಸ್ರನಾಮದಲ್ಲಿ "ಶ್ರೀ ವಿಸ್ತಾರಾಯ ನಮ:" ಎಂದಿದೆ. ಸಮಸ್ತ ಲೋಕಗಳು ಭಗವಂತನಲ್ಲಿ ವಿಸ್ತಾರವನ್ನು ಮತ್ತು ಅಭಿವೃದ್ಧಿಯನ್ನು ಹೊಂದುತ್ತವೆ. ಪ್ರಳಯಕಾಲದಲ್ಲಿ ಸ್ಥೂಲವಾದ ಈ ಪ್ರಪಂಚ ಕೇವಲ ಸೂಕ್ಷ್ಮರೂಪದಲ್ಲಿ ಉಳಿಯುತ್ತದೆ. ಮತ್ತೆ ಸೃಷ್ಟಿಕಾಲದಲ್ಲಿ ಭಗವಂತ ಅದನ್ನು ವಿಸ್ತಾರಗೊಳಿಸಿ ಸ್ಥೂಲ ಪ್ರಪಂಚವನ್ನು ನಿರ್ಮಾಣ ಮಾಡುತ್ತಾನೆ. ಅದಕ್ಕೇ ಅವನಿಗೆ ವಿಸ್ತಾರ ಎಂಬ ಹೆಸರು. ಸಾಮಾನ್ಯರ ಬದುಕು ವಿಸ್ತಾರವಾಗುವುದು ಹೇಗೆ? ಅದು ಎತ್ತರಕ್ಕೇರಬೇಕು. ಬೆಟ್ಟದ ಮೇಲೆ ಏರಿದಂತೆಲ್ಲ ದೃಷ್ಟಿ ವಿಸ್ತಾರವಾಗುತ್ತದೆ. ಬದುಕು ನಿಂತ ನೀರಾಗದೆ ಪ್ರತಿಕ್ಷಣವೂ ಎತ್ತರಕ್ಕೇರಬೇಕು. ಯಾವ ಕ್ಷೇತ್ರದಲ್ಲೇ ಆಗಲಿ ಸಾಧನೆ ವ್ಯಕ್ತಿಯನ್ನು ಎತ್ತರಕ್ಕೇರಿಸುತ್ತದೆ. ಎತ್ತರಕ್ಕೆ ಹೋದಷ್ಟೂ ದೃಷ್ಟಿ, ಮನಸ್ಸು ವಿಶಾಲವಾಗುತ್ತವೆ. ಸಂಕುಚಿತ ಭಾವನೆಗಳೆಲ್ಲ ಕರಗಿ ಮನಸ್ಸು ಶುದ್ಧವಾಗುತ್ತವೆ. ಕಗ್ಗದ ಆಶಯ ಇದು. ನಮ್ಮ ಬದುಕು ವಿಸ್ತಾರವಾಗಬೇಕು. ಅದರಿಂದ ದೃಷ್ಟಿಯಲ್ಲಿ ವೈಶಾಲ್ಯತೆ ಬರಬೇಕು. ಹಾಗಾಗಬೇಕಾದರೆ ನಾವು ಕತ್ತಲೆಯ, ಅಜ್ಞಾನದ ಮೂಲೆಗಳನ್ನು ಸೇರಿ ಕುಳಿತುಕೊಳ್ಳಬಾರದು. ಸದಾಕಾಲ ಬೆಳಕಿನ, ಸೂರ್ಯನ ಅನುಗ್ರಹಕ್ಕೆ ಪ್ರಾರ್ಥಿಸಬೇಕು. ಈಶಾವಾಸ್ಯದ ಹದಿನೈದನೇ ಮಂತ್ರ ಹೇಳುತ್ತದೆ.

"ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ | ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟವೇ ||", "ಸತ್ಯದ ಸ್ವರೂಪವು ಚಿನ್ನದಂತಹ ಆವರಣದಿಂದ ಮುಚ್ಚಲ್ಪಟ್ಟಿದೆ, ಪೂಷನ್ ಸೂರ್ಯನೇ ! ನನಗಾಗಿ, ಸತ್ಯಧರ್ಮದ ದರ್ಶನಕ್ಕಾಗಿ ಆ ಆವರಣವನ್ನು ತೆಗೆ". ಸೂರ್ಯನ ಅನುಗ್ರಹವಾದರೆ ವ್ಯಕ್ತಿಗೆ ಸತ್ಯಧರ್ಮದ ದರ್ಶನವಾಗುತ್ತದೆ. ಹಾಗೆ ಆದಾಗ ದೇಹದ ಮೇಲಿನ, ಸಂಸಾರದಲ್ಲಿಯ ಮೋಹ ಕರಗಿ ಹೋಗುತ್ತದೆ. ಆಗ ದೊರಕುವುದೇ ಸದಾ ನೂತನವಾದ ಜೀವೋತ್ಕರ್ಷದ ಸತ್ವ. ಆ ಸದಾ ಮಂಗಲಕರವಾದ, ಅನಂತವಾದ ಶಾಂತಿಯನ್ನು ಕೊಡುವ ಸತ್ವದ ಎದುರಿನಲ್ಲಿ ಮೃತ್ಯುವಿನ ಭಯವೇ ಇರದು. ಯಾಕೆಂದರೆ ಆ ಸತ್ವಕ್ಕೆ ಮರಣವೆಂಬುದೇ ಇಲ್ಲ ಎಂಬ ಸಂಪೂರ್ಣ ತಿಳಿವಳಿಕೆ ಬಂದಾಗ ದೇಹದ ಅಳಿವು ದೊಡ್ಡದೆನ್ನಿಸದೆ, ಹಳೆ ಬಟ್ಟೆಯನ್ನು ತ್ಯಜಿಸಿದಂಥ ಸಾಮಾನ್ಯ ಕ್ರಿಯೆಯಾಗಿಬಿಡುತ್ತದೆ. ಅದನ್ನೇ ಕಗ್ಗ, "ಮೃತ್ಯು ನಿನಗಲ್ಪತೆಯೊ" ಎನ್ನುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಸೋಮವಾರ ಜೂನ್ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ಅಷ್ಟಮಿ ಗಂ. 26-05, ನಕ್ಷತ್ರ: ಉತ್ತರಫಲ್ಗುನಿ ಗಂ. 12-44 ಯೋಗ: ವ್ಯತೀಪಾತ ಗಂ. 06-06
ಕರಣ: ವಿಷ್ಟಿ ಗಂ. 13-20, ಮಿಥುನ ಮಾಸದ 10 ನೇ ದಿನ,
ಮಳೆನಕ್ಷತ್ರ: ಆರ್ದ್ರಾ 2. ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-10 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 07 ಜುಲ್‌ಹಿಜಾ, ದಿನ ಭವಿಷ್ಯ : ಖರ್ಚಿ ಪೂಜಾ (ತ್ರಿಪುರಾ)
ಅದೃಷ್ಟ ಸಂಖ್ಯೆ : 2, 7

ಮೇಷ: ಜೀವನದಲ್ಲಿ ನಾಲ್ಕಾರು ದೋಣಿಯ ಪ್ರಯಾಣ ಬೇಡವೆನಿಸಲಿದೆ. ತರಕಾರಿ ಅಥವಾ ಹಣ್ಣುಗಳ ಬೆಳೆಗಾರರಿಗೆ ಲಾಭಾಂಶ ಹೆಚ್ಚಲಿದೆ. ಮೀನುಗಾರರು ಅಥವಾ ಸಮುದ್ರ ಪ್ರಯಾಣ ಮಾಡುವವರು ಜಾಗ್ರತರಾಗಿರಿ.

ವೃಷಭ: ಅಂದುಕೊಂಡಿದ್ದ ಕೆಲಸಗಳನ್ನು ಈ ದಿನ ಮಾಡಿ ಮುಗಿಸುವಿರಿ. ಆಭರಣಗಳ ಖರೀದಿ ನಡೆಸುವುದರಿಂದ ಸಂತೋಷವಾಗುವುದು.. ಪರಿಶ್ರಮದಿಂದ ಫಲ ಸಿಗಲಿಲ್ಲವೆಂದು ಬೇಸರಪಟ್ಟುಕೊಳ್ಳುವ ಅಗತ್ಯವಿಲ್ಲ.

ಮಿಥುನ: ಧ್ಯೇಯವನ್ನು ತಲುಪುವ ಹಾದಿಯಲ್ಲಿ ನಿಮ್ಮ ಬಾಲ್ಯ ಸ್ನೇಹಿತರ ಸಹಾಯ ಸಹಕಾರ ಈ ದಿನ ದೊರೆಯಲಿದೆ. ವ್ಯವಹಾರದ ಮೂಲ ವಿಚಾರವನ್ನು ಉತ್ತರಾಧಿಕಾರಿಗಳಿಗೆ ತಿಳಿಸುವ ಮನಸ್ಸಾಗಲಿದೆ.

ಕರ್ಕಾಟಕ: ಅನಿವಾರ್ಯವಾಗಿ ಇತರರ ಸಹಾಯವನ್ನು ಅಪೇಕ್ಷಿಸುವಂತಹ ಜನರಿಗೆ ಸಹಾಯ ಮಾಡುವುದರಿಂದ ಪುಣ್ಯ ಸಂಪಾದಿಸಬಹುದು. ಔದ್ಯೋಗಿಕ ವಿದ್ಯಾರ್ಥಿಗಳು ಶ್ರಮದಿಂದ ಅಂಕ ಗಳಿಸುವಲ್ಲಿ ಯಶಸ್ವಿಯಾಗುವಿರಿ.

ಸಿಂಹ: ಈ ದಿನದ ನಿರಾಸೆಯ ಜೀವನ ಶೈಲಿ ಹಂತ ಹಂತವಾಗಿ ಮುಕ್ತಾಯವಾಗುವುದು. ನೀವು ಕ್ರಮಿಸಿ ಬಂದ ದಾರಿಯನ್ನು ಅವಲೋಕಿಸಿದಲ್ಲಿ ತಲುಪುಬೇಕೆಂದಿರುವ ಗುರಿ ದೂರವಿಲ್ಲವೆಂಬ ವಿಚಾರದಿಂದ ಉತ್ಸಾಹ ಹೊಂದುವಿರಿ.

ಕನ್ಯಾ: ವಾಹನ ಮಾರಾಟಗಾರರಿಗೆ ಹಾಗೂ ರಿಪೇರಿ ಮಾಡುವವರಿಗೆ ಬಿಡುವಿಲ್ಲದ ಕಾರ್ಯ. ಉದಾಸೀನತೆಯಿಂದ ಸರ್ವತೋಮುಖ ಅಭಿವೃದ್ಧಿ ಕುಂಠಿತವಾಗುವುದು. ಆರೋಗ್ಯದ ವಿಚಾರದಲ್ಲಿ ಅಸಡ್ಡೆ ತೋರದಿರಿ.

ತುಲಾ: ಎಲ್ಲಾ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ, ಇನ್ನಷ್ಟು ಮನೋಬಲ ಹೆಚ್ಚಿಸಿಕೊಳ್ಳಿರಿ. ರಾಜಕಾರಣಿಗಳು ಹೆಚ್ಚಿನ ಸಮಯವನ್ನು ಸಾಮಾಜಿಕ ಹಿತಾಸಕ್ತಿಗಾಗಿ ಕಳೆಯಬೇಕಾಗುವುದು.

ವೃಶ್ಚಿಕ: ಆಫೀಸಿನಲ್ಲಿ ವಿನಯದಿಂದ ವರ್ತಿಸಿ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ ಹಾಗೆಯೇ ಮನೆಯವರ ಮಾತುಗಳಿಗೆ ಸಮಾಧಾನದಿಂದ ಉತ್ತರಿಸಿ. ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮ.

ಧನು: ಕೋರ್ಟು-ಕಚೇರಿ ಕಾರ್ಯಭಾಗದಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವಲ್ಲಿ ತೊಡಕು ಇರಲಿದೆ. ಸಮಯಕ್ಕೆ ಸರಿಯಾಗಿ ಪೌಷ್ಟಿಕವಾದ ಆಹಾರ ಸೇವಿಸುವ ಅಭ್ಯಾಸ ಮಾಡುವುದರಿಂದ ಆರೋಗ್ಯ ಅಭಿವೃದ್ಧಿಯಾಗುವುದು.

ಮಕರ: ವಿದ್ಯಾರ್ಥಿಗಳು ಹೆಚ್ಚಿನ ಯಶಸ್ಸಿಗಾಗಿ ಅದರಲ್ಲೂ ವಿಶೇಷವಾಗಿ ವಿಜ್ಞಾನ ವಿಷಯದಲ್ಲಿ ಪರಿಶ್ರಮ ಪಡಬೇಕಾಗುತ್ತದೆ. ಇಷ್ಟ ಪ್ರಾಪ್ತಿಗಾಗಿ ಕಾರ್ಯವನ್ನು ಸಾಧಿಸಿದ ಸಂತೋಷ ಇರುವುದು.

ಕುಂಭ: ಬೇರೆಯಾರಿಗೂ ನಿಮ್ಮ ಯೋಜನೆಯ ಸುಳಿವು ಸಿಗದಂತೆ ಗೌಪ್ಯತೆ ಕಾಪಾಡಿ. ರಫ್ತು ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುವಿರಿ. ಅನಿರೀಕ್ಷಿತವಾಗಿ ಹಳೆಯ ಗೆಳೆಯರ ಭೇಟಿ ಇರಬಹುದು.

ಮೀನ: ಶುಭಕಾರ್ಯಗಳಲ್ಲಿನ ಎಲ್ಲರ ಸಂಭ್ರಮದ ಓಡಾಟವು ಹಿರಿಯರ ಮನಸ್ಸಿಗೆ ನೆಮ್ಮದಿ ತರುತ್ತದೆ. ಕೆಲಸದ ಒತ್ತಡದಿಂದ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಶುಭ ಸುದ್ದಿ ಕೇಳಿ ಸಂತೋಷವಾಗುವುದು.

ಪದಬಂಧ 5361

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದಾರಿ ತೋರುವವನು ಇಲ್ಲಿದ್ದಾನೆ (5)
4.ಆಯುಧಗಳಿಂದ ಸಜ್ಜುಗೊಂಡದ್ದು (3)
5.ಮಾತು ಕೇಳುತ್ತಿರುವ ಸೋದರ ಮಾವ (3)
6.ಗರ ಬಡಿದವನಂತೆ ಕಾಣುತ್ತಿರುವವ ಅನಾಗರಿಕ! (3)
8.ಗಟ್ಟಿಯಾಗಿ ಸುರಕ್ಷಿತವಾದದ್ದು (2)
9.ತಿಮಿರದಲ್ಲೇ ಎಲ್ಲೆಯನ್ನು ಹುಡುಕಿ! (2)
11.ಪಾಕದ ನಂತರ ಕುಡಿದಿರುವ ಷರಬತ್ತು (3)
14.ಕಬ್ಬಿಣದ ಕೆಲಸಗಾರನಿವನು (3)
15.ಸಿಂಧೂ ದೇಶದ ಜನರು ಬಳಸುವ ಉಪ್ಪು (3)
16.ವ್ಯಾಯಾಮ ಶಾಲೆಯಿದು (5)

ಮೇಲಿಂದ ಕೆಳಕ್ಕೆ
1.ತಿಂಗಳಿಗೊಮ್ಮೆ ಕೊಡುವ ವೇತನ (4)
2.ಈತ ಕಡುಬಡವ (5)
3.ಅರ್ಧ ಚಂದ್ರಾಕೃತಿಯ ರಚನೆಯಿದು (3)
4.ಆನೆಗಳ ಗುಂಪಿನ ನಾಯಕ (3)
7.ಕನ್ನಡಿಗ ನೀಡಿದ ಇನ್ಫರ್ಮೇಶನ್! (3)
8.ವನದಲ್ಲಿ ನಿರ್ಮಿಸಿದ ಮನೆ (3)
9.ಮಿಡಿಯಲ್ಲಿ ಕಾಣಿಸಿದ ಒಯ್ಯಾರಿ! (5)
10.ನೆರೆಮನೆ ಹತ್ತಿರವಿರುವ ಬಂದೀಖಾನೆ (4)
12.ಪೆದ್ದನನ್ನು ಹೀಗೆನ್ನಿ (3)
13.ಊರ ಹತ್ತಿರ ಕಾಣಿಸಿದ ಹಾವು (3)



5360ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿಯಾಮಕ
3.ಮದನಿಕೆ 5.ನವೀನ
6.ತರಕಲು 8.ವಿಷಯ
10.ಮಿಥುನ 12.ಸಮರಸ
15.ಸುಸ್ವರ 16.ತಪರಾಕು
17.ದಿಗಂಬರ

ಮೇಲಿಂದ ಕೆಳಕ್ಕೆ
1.ನಿಶ್ಚಿತ 2.ಕನಲು
3.ಮನವಿ 4.ಕೆರ
7.ರಥಸಪ್ತಮಿ 9.ಯಮಕಿಂಕರ
11.ನಸುಕು 12.ಸರದಿ
13.ಸಮರ 14.ಪ್ಲುತ

ಸುಡೊಕು 5747

	8			5		9		
1			6		4			3
6	5			7			2	4
5		8	9					
	1					7	5	2
4		7					8	
2		5		9			3	
	6		3		5	2		7
3	7	9		6			4	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5746 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಸಿರಿಯಾ: ವೈಮಾನಿಕ ದಾಳಿ- 9 ಮಂದಿ ಸಾವು

ಜಿಸ್ರ್ ಅಲ್-ಶುಘುರ್ (ಸಿರಿಯಾ) (ಎಪಿ): 'ಭಾನುವಾರ ಬೆಳಗ್ಗೆ ವಾಯವ್ಯ ಸಿರಿಯಾದ ತರಕಾರಿ ಮಾರುಕಟ್ಟೆಯ ಮೇಲೆ ವೈಮಾನಿಕ ದಾಳಿ ನಡೆದಿದ್ದು, ಕನಿಷ್ಠ 9 ಮಂದಿ ಸಾವಿಗೀಡಾಗಿದ್ದಾರೆ' ಎಂದು ಸಾಮಾಜಿಕ ಕಾರ್ಯಕರ್ತರು ಹಾಗೂ ಸ್ಥಳೀಯ ಪ್ರಥಮ ಸ್ಪಂದಕರು ತಿಳಿಸಿದ್ದಾರೆ.

'ಸಿರಿಯಾ ಅಧ್ಯಕ್ಷ ಬಶಾರ್ ಅಸಾದ್ ಅವರ ಮಿತ್ರರಾಷ್ಟ್ರವಾದ ರಷ್ಯಾವು ಟರ್ಕಿ ಗಡಿ ಬಳಿಯ ಪ್ರತಿಪಕ್ಷದ ಹಿಡಿತದಲ್ಲಿರುವ ಜಿಸ್ರ್ ಅಲ್- ಶುಘುರ್ ನಗರದ ಮೇಲೆ ವೈಮಾನಿ ದಾಳಿ ನಡೆಸಿದೆ' ಎಂದು ಸಾಮಾಜಿಕ ಕಾರ್ಯಕರ್ತರು ಮತ್ತು ಬ್ರಿಟನ್ ಮೂಲದ ಮಾನವ ಹಕ್ಕುಗಳ ಸಿರಿಯನ್ ವೀಕ್ಷಣಾಲಯ ಮೇಲ್ವಿಚಾರಣೆ ಸಂಸ್ಥೆ ತಿಳಿಸಿದೆ.

ರಷ್ಯಾದ ಖಾಸಗಿ ಪಡೆಯೊಂದು ಅಲ್ಲಿನ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ವಿರುದ್ಧ ದಂಗೆಯೆದ್ದ ಒಂದು ದಿನದ ಬಳಿಕ ಈ ದಾಳಿ ನಡೆದಿದೆ.

ವೈಮಾನಿಕ ದಾಳಿ ನಡೆದ ಬಳಿಕದ ದೃಶ್ಯ —ಎಎಫ್‌ಪಿ ಚಿತ್ರ

'ದಾಳಿಯಲ್ಲಿ ಸುಮಾರು 30 ಮಂದಿ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆಯಲ್ಲಿ ಏರಿಕೆ ಆಗುವ ನಿರೀಕ್ಷೆ ಇದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ವೇಳೆ ಗಂಭೀರವಾಗಿ ಗಾಯಗೊಂಡವರು ಸಾವಿಗೀಡಾಗುತ್ತಿದ್ದಾರೆ ಎಂದು ನಮಗೆ ಮಾಹಿತಿ ಬಂದಿದೆ' ಎಂದು ಪ್ರತಿಪಕ್ಷದ ಹಿಡಿತದಲ್ಲಿರುವ ಸಿರಿಯಾದ ನಾಗರಿಕ ರಕ್ಷಣಾ ಸಂಸ್ಥೆಯ (ವೈಟ್ ಹೆಲ್ಮೆಟ್ಸ್) ಅಹ್ಮದ್ ಯಾಜಿಜಿ ಅವರು ಹೇಳಿದ್ದಾರೆ.

ಈಜಿಪ್ಟ್‌ನ ಕೈರೊ: 11ನೇ ಶತಮಾನದ ಅಲ್–ಹಕೀಮ್ ಮಸೀದಿಗೂ ಪ್ರಧಾನಿ ಮೋದಿ ಭೇಟಿ

ಭಾರತೀಯ ಯೋಧರ ಬಲಿದಾನ ಸ್ಮರಣೆ

ಕೈರೊ (ಈಜಿಪ್ಟ್)(ಪಿಟಿಐ): ಈಜಿಪ್ಟ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಕೈರೊದಲ್ಲಿರುವ 'ಹೀಲಿಯೊಪೊಲಿಸ್ ಕಾಮನ್‌ವೆಲ್ತ್ ಯುದ್ಧ ಸ್ಮಾರಕ' ಹಾಗೂ ನವೀಕರಣಗೊಳಿಸಲಾಗಿರುವ 11ನೇ ಶತಮಾನದ ಅಲ್–ಹಕೀಮ್ ಮಸೀದಿಗೆ ಭಾನುವಾರ ಭೇಟಿ ನೀಡಿದರು.

ಈ ಮಸೀದಿಯನ್ನು ಭಾರತದ ದಾವೂದಿ ಬೋಹ್ರಾ ಮುಸ್ಲಿಮರ ನೆರವಿನಿಂದ ನವೀಕರಿಸಲಾಗಿದೆ.

'ಹೀಲಿಯೊಪೊಲಿಸ್ ಕಾಮನ್‌ವೆಲ್ತ್ ಯುದ್ಧ ಸ್ಮಾರಕ'ದಲ್ಲಿ ಮೊದಲನೇ ವಿಶ್ವಮಹಾಯುದ್ಧದಲ್ಲಿ ಹುತಾತ್ಮರಾದ ಭಾರತೀಯ ಯೋಧರ ಸಮಾಧಿಗಳಿವೆ. ಈ ಸಮಾಧಿಗಳಿಗೆ ಪುಷ್ಪಗುಚ್ಛ ಅರ್ಪಿಸಿ, ಗೌರವ ಸಲ್ಲಿಸಿದ ಮೋದಿ ಯೋಧರ ಶೌರ್ಯ, ಬಲಿದಾನ ಸ್ಮರಿಸಿದರು. ನಂತರ ಸಂದರ್ಶಕರ ಪುಸ್ತಕದಲ್ಲಿ ಷರಾ ಬರೆದು, ಸಹಿ ಹಾಕಿದರು.

ಅಲ್–ಹಕೀಮ್ ಮಸೀದಿಗೆ ಭಾನುವಾರ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಬೋಹ್ರಾ ಮುಸ್ಲಿಮರೊಂದಿಗೆ ಮಾತನಾಡಿದರು – ಪಿಟಿಐ ಚಿತ್ರ

ಈಜಿಪ್ಟ್, ಪ್ಯಾಲೆಸ್ಟೀನ್‌ನಲ್ಲಿ ನಡೆದ ಯುದ್ಧದಲ್ಲಿ ಪಾಲ್ಗೊಂಡಿದ್ದ 4 ಸಾವಿರದಷ್ಟು ಭಾರತೀಯ ಯೋಧರು ವೀರಮರಣವನ್ನಪ್ಪಿದ್ದರು. ಕಾಮನ್‌ವೆಲ್ತ್ ಯುದ್ಧ ಸಮಾಧಿಗಳ ಆಯೋಗ ಈ ಸ್ಮಾರಕವನ್ನು ನಿರ್ವಹಿಸುತ್ತದೆ.

ಮೆಚ್ಚುಗೆ: 1012ರಲ್ಲಿ ನಿರ್ಮಿಸಲಾದ ಅಲ್–ಹಕೀಮ್ ಮಸೀದಿಯ ಗೋಡೆಗಳು ಹಾಗೂ ದ್ವಾರಗಳಲ್ಲಿನ ಸೂಕ್ಷ್ಮಕೆತ್ತನೆಗಳ ಬಗ್ಗೆ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

13,560 ಚದರ ಮೀಟರ್ ಪ್ರದೇಶದಲ್ಲಿ ನಿರ್ಮಿಸಿರುವ ಈ ಬೃಹತ್ ಮಸೀದಿ ಕೇಂದ್ರ ಸಭಾಂಗಣದ ವಿಸ್ತೀರ್ಣ 5 ಸಾವಿರ ಚದರ ಮೀ. ಇದೆ. ಇದು ಕೈರೊದಲ್ಲಿರುವ ನಾಲ್ಕನೇ ಅತ್ಯಂತ ಹಳೆಯ ಮಸೀದಿಯೂ ಆಗಿದೆ. 16ನೇ ಶತಮಾನದ ಫಾತಿಮಿದ್ ಖಲೀಫರಾದ ಅಲ್ ಹಕೀಮ್ ಬಿ–ಅಮ್ರ್ ಅಲ್ಲಾಹ ಅವರ ಹೆಸರನ್ನೇ ಈ ಮಸೀದಿಗೆ ಇಡಲಾಗಿದೆ.

'ಭಾರತದಲ್ಲಿ ನೆಲೆ ನಿಂತಿರುವ ಬೋಹ್ರಾ ಮುಸ್ಲಿಮರು 1970ರ ನಂತರ ಈ ಮಸೀದಿಯನ್ನು ನವೀಕರಿಸಿದ್ದಾರೆ. ಅಂದಿನಿಂದಲೂ ಅವರೇ ಇದರ ನಿರ್ವಹಣೆ ಮಾಡುತ್ತಿದ್ದಾರೆ' ಎಂದು ಮಸೀದಿ ಆಡಳಿತ ಮಂಡಳಿ ಮೋದಿ ಅವರಿಗೆ ವಿವರಿಸಿತು.

ದಾವೂದಿ ಬೋಹ್ರಾ ಮುಸ್ಲಿಮರು ಮೂಲತಃ ಈಜಿಪ್ಟ್‌ನವರು. ನಂತರ ಯೆಮೆನ್‌ಗೆ ಸ್ಥಳಾಂತರಗೊಂಡ ಅವರು 11ನೇ ಶತಮಾನದಲ್ಲಿ ಭಾರತಕ್ಕೆ ಬಂದು ಗುಜರಾತ್‌ನಲ್ಲಿ ನೆಲೆ ನಿಂತರು.

ಮೋದಿಗೆ 'ಆರ್ಡರ್ ಆಫ್ ದಿ ನೈಲ್' ಪ್ರಶಸ್ತಿ ಪ್ರದಾನ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್ ಸಿಸಿ ಅವರು ಈಜಿಪ್ಟ್‌ನ ಅತ್ಯುನ್ನತ ಗೌರವ 'ಆರ್ಡರ್ ಆಫ್ ದಿ ನೈಲ್' ಅನ್ನು ಭಾನುವಾರ ಪ್ರದಾನ ಮಾಡಿದರು.

ಇದು ಮೋದಿ ಅವರಿಗೆ ಪ್ರದಾನ ಮಾಡಲಾಗಿರುವ 13ನೇ ಅತ್ಯುನ್ನತ ಗೌರವ ಪುರಸ್ಕಾರವಾಗಿದೆ. ಈ ಗೌರವ ಪುರಸ್ಕಾರವನ್ನು 1925ರಲ್ಲಿ ಸ್ಥಾಪಿಸಲಾಗಿದೆ. ಈಜಿಪ್ಟ್ ಅಥವಾ ಮಾನವ ಕಲ್ಯಾಣಕ್ಕಾಗಿ ಅಮೂಲ್ಯ ಸೇವೆ ಸಲ್ಲಿಸಿದ ದೇಶಗಳ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಪ್ರಧಾನಿ ಇಲ್ಲವೇ ರಾಜರಿಗೆ ಈ ಪುರಸ್ಕಾರವನ್ನು ಪ್ರದಾನ ಮಾಡಲಾಗುತ್ತದೆ.

> **ಪ್ರಧಾನಿ ಮೋದಿ ಅವರೊಂದಿಗೆ ಬೋಹ್ರಾ ಸಮುದಾಯ ಉತ್ತಮ ಬಾಂಧವ್ಯ ಹೊಂದಿದ್ದು, ಅವರಿಗೆ ಮಹತ್ವವಾಗಿರುವ ಧಾರ್ಮಿಕ ಸ್ಥಳಕ್ಕೆ ಮೋದಿ ಭೇಟಿ ನೀಡುತ್ತಿರುವುದು ವಿಶೇಷ**
>
> **ಅಜಿತ್ ಗುಪ್ತೆ,** ಈಜಿಪ್ಟ್‌ನಲ್ಲಿ ಭಾರತದ ರಾಯಭಾರಿ

ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಚರ್ಚೆ

ಕೈರೊ (ಈಜಿಪ್ಟ್) (ಪಿಟಿಐ): ಈಜಿಪ್ಟ್‌ಗೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ವ್ಯಾಪಾರ, ಹೂಡಿಕೆ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರೊಂದಿಗೆ ಭಾನುವಾರ ಮಾತುಕತೆ ನಡೆಸಿದರು.

ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ ವೃದ್ಧಿ, ಇಂಧನ ಭದ್ರತೆ, ಮೂಲಭೂತವಾದ ಸೇರಿದಂತೆ ಮಹತ್ವದ ವಿಷಯಗಳ ಕುರಿತು ಈಜಿಪ್ಟ್‌ನ ಮುಖಂಡರೊಂದಿಗೆ ಮೋದಿ ಚರ್ಚಿಸಿದರು.

'ಈಜಿಪ್ಟ್‌ನ ಖ್ಯಾತ ಚಿಂತಕ ತರೆಕ್ ಹೆಗ್ಗಿ ಅವರೊಂದಿಗಿನ ಸಂವಾದ ಅದ್ಭುತವಾಗಿತ್ತು. ಜಾಗತಿಕ ವಿದ್ಯಮಾನಗಳ ಕುರಿತ ತಮ್ಮ ಒಳನೋಟಗಳನ್ನು ಹಂಚಿಕೊಂಡರು. ವಿಶ್ವದ ಭಿನ್ನ ಸಂಸ್ಕೃತಿಗಳ ಕುರಿತು ಅವರು ಆಳ ಜ್ಞಾನ ಹೊಂದಿದ್ದಾರೆ' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

'ಈಜಿಪ್ಟ್‌ನ ಪ್ರಸಿದ್ಧ ಹಸನ್ ಅಲ್ಲಮ್ ಹೋಲ್ಡಿಂಗ್ ಕಂಪನಿಯ ಸಿಇಒ ಹಸನ್ ಅಲ್ಲಮ್ ಅವರನ್ನು ಮೋದಿ ಭೇಟಿ ಮಾಡಿದರು. ಮಧ್ಯಪ್ರಾಚ್ಯ ಹಾಗೂ ಆಫ್ರಿಕಾದಲ್ಲಿ ಕಾರ್ಯನಿರ್ವಹಿಸುತ್ತಿರುವ ದೊಡ್ಡ ಕಂಪನಿಗಳಲ್ಲೊಂದು' ಎಂದು ವಿದೇಶಾಂಗ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

> **ಪ್ರಧಾನಿ ಮೋದಿ ಅದ್ಭುತ ವ್ಯಕ್ತಿ. ದೂರದೃಷ್ಟಿವುಳ್ಳ ಬುದ್ಧಿವಂತ, ನಮ್ರತೆ ಇರುವ ವ್ಯಕ್ತಿ. ಅವರೊಂದಿಗಿನ ಭೇಟಿ ಪ್ರೇರಣಾದಾಯಕವಾಗಿತ್ತು**
>
> **ಹಸನ್ ಅಲ್ಲಮ್,** ಹಸನ್ ಅಲ್ಲಮ್ ಹೋಲ್ಡಿಂಗ್ ಕಂಪನಿ ಸಿಇಒ

'ಹಸನ್ ಅಲ್ಲಮ್ ಅವರೊಂದಿಗಿನ ಭೇಟಿ ಫಲಪ್ರದವಾಗಿತ್ತು. ಆರ್ಥಿಕತೆ ಮತ್ತು ಹೂಡಿಕೆ ಬಗ್ಗೆ ವಿಸ್ತೃತ ಚರ್ಚೆ ನಡೆಸಿದೆವು. ಈಜಿಪ್ಟ್‌ನ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಕುರಿತು ಅವರಲ್ಲಿರುವ ತವಕ ನನಗೆ ಖುಷಿ ತಂದಿತು ಎಂದು ಮೋದಿ ಹೇಳಿದರು' ಎಂದೂ ಪ್ರಕಟಣೆ ತಿಳಿಸಿದೆ.

ಮೋದಿ ಅವರನ್ನು ಭೇಟಿ ಮಾಡಿದ ನಂತರ ಮಾತನಾಡಿದ ಹಸನ್ ಅಲ್ಲಮ್, 'ಇಂಡಿಯಾದ ಖಾಸಗಿ ವಲಯದಿಂದ ನಾವು ಕಲಿಯಬೇಕಾದದ್ದು ಸಾಕಷ್ಟಿದೆ. ಮೂಲಸೌಕರ್ಯ, ಎಂಜಿನಿಯರಿಂಗ್ ಸೇರಿದಂತೆ ಭಾರತದ ಖಾಸಗಿ ಕ್ಷೇತ್ರವು ಮೋದಿ ಅವರ ನಾಯಕತ್ವದಲ್ಲಿ ಅಗಾಧ ಪ್ರಗತಿ ಸಾಧಿಸಿದೆ' ಎಂದು ಶ್ಲಾಘಿಸಿದ್ದಾರೆ.

ಯೋಗ ಶಿಕ್ಷಕಿಯರ ಜೊತೆ ಮಾತುಕತೆ: ಈಜಿಪ್ಟ್‌ನಲ್ಲಿ ಯೋಗ ತರಬೇತಿ ನೀಡುತ್ತಿರುವ ರೀಮಾ ಜಬಕ್ ಮತ್ತು ನದಾ ಅದೆಲ್ ಅವರೊಂದಿಗೆ ಪ್ರಧಾನಿ ಮೋದಿ ಮಾತುಕತೆ ನಡೆಸಿದರು.

'ಯೋಗ ಕಲಿಸುವಲ್ಲಿ ಈ ಇಬ್ಬರು ತರಬೇತುದಾರರ ಬದ್ಧತೆಯನ್ನು ಮೋದಿ ಶ್ಲಾಘಿಸಿದರು. ಭಾರತಕ್ಕೆ ಭೇಟಿ ನೀಡುವಂತೆ ಇಬ್ಬರಿಗೂ ಆಹ್ವಾನ ನೀಡಿದರು' ಎಂದು ಸಚಿವಾಲಯ ತಿಳಿಸಿದೆ.

ಭೇಟಿ: ಇದಕ್ಕೂ ಮುನ್ನ ಪ್ರಧಾನಿ ಮೋದಿ ಅವರಿಗೆ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್–ಸಿಸಿ ತಮ್ಮ ಸ್ವಾಗತ ಕೋರಿದರು.

ಅಧ್ಯಕ್ಷರ ಅರಮನೆಯಲ್ಲಿ ಮಾತುಕತೆ ನಡೆಸಿದ ಉಭಯ ನಾಯಕರು, ಎರಡೂ ದೇಶಗಳ ನಡುವಿನ ಸಂಪರ್ಕ ಸುಧಾರಿಸುವ ಕುರಿತು ಚರ್ಚಿಸಿದರು.

ಮಹಿಳೆಯರ ಜೀವನ ಸುಧಾರಣೆಗೆ ಕ್ರಮ: ತಾಲಿಬಾನ್

ಇಸ್ಲಾಮಾಬಾದ್ (ಎಪಿ): ಅಫ್ಗಾನಿಸ್ತಾನದಲ್ಲಿ ಮಹಿಳೆಯರ ಜೀವನ ಸುಧಾರಣೆಗೆ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ ಎಂದು ತಾಲಿಬಾನ್ ಪರಮೋಚ್ಚ ನಾಯಕ ಹಿಬತುಲ್ಲಾ ಅಖುಂದ್‌ಝುದಾ ಭಾನುವಾರ ಸಂದೇಶ ಬಿಡುಗಡೆ ಮಾಡಿದ್ದಾರೆ.

ಒತ್ತಾಯದ ವಿವಾಹ ಸೇರಿದಂತೆ ಸಾಂಪ್ರದಾಯಿಕ ಕಟ್ಟಲೆಗಳಿಂದ ಮಹಿಳೆಯರ ರಕ್ಷಣೆಗೆ ಹಲವು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿ ದ್ದಾರೆ.

ಮಹಿಳೆಯರು ಧರಿಸುವ ಹಿಜಾಬ್ ಕುರಿತಂತೆ ಈ ಹಿಂದಿನ 20 ವರ್ಷಗಳ ತಾಲಿಬಾನ್ ಆಡಳಿತದಲ್ಲಿ ಇದ್ದ ಆಚರಣೆಗಳು ಶೀಘ್ರವೇ ಕೊನೆಗೊಳ್ಳಲಿವೆ ಎಂದೂ ತಿಳಿಸಿದ್ದಾರೆ.

ಅಫ್ಗನ್‌ನಲ್ಲಿ ಮಹಿಳೆಯರ ಸಾರ್ವಜನಿಕ ಜೀವನ, ಉದ್ಯೋಗ ಮತ್ತು ಶಿಕ್ಷಣಕ್ಕೆ ಹಲವು ನಿರ್ಬಂಧಗಳನ್ನು ಹೇರಲಾಗಿದೆ.

ದಕ್ಷಿಣ ಕಂದಹಾರ್ ಪ್ರಾಂತ್ಯದಲ್ಲಿ ನೆಲೆಸಿರುವ ಅಖುಂದ್‌ಝುದಾ ವಿರಳವಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಾರೆ. ಇವರ ಸುತ್ತಲೂ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಪ್ರವೇಶಕ್ಕೆ ವಿರೋಧ ವ್ಯಕ್ತಪಡಿಸುವ ವಿದ್ವಾಂಸರು ಸುತ್ತುವರಿದಿರುತ್ತಾರೆ.

ಬೀಜಿಂಗ್‌ಗೆ ರಷ್ಯಾದ ರಾಜತಾಂತ್ರಿಕರು

ತೈಪೆ (ತೈವಾನ್) (ಎಪಿ): ರಷ್ಯಾದಲ್ಲಿ ಬಂಡಾಯ ಶಮನಗೊಂಡ ನಂತರ ಅಲ್ಲಿನ ರಾಜತಾಂತ್ರಿಕರು ಚೀನಾ ಸರ್ಕಾರದ ಜೊತೆ ಮಾತುಕತೆ ನಡೆಸಲು ಭಾನುವಾರ ಬೀಜಿಂಗ್‌ಗೆ ಭೇಟಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಷ್ಯಾದ ಉಪ ವಿದೇಶಾಂಗ ಸಚಿವ ಎಂಡ್ರೈ ರುಡೆಂಕೊ ಅವರು ಚೀನಾದ ವಿದೇಶಾಂಗ ಸಚಿವ ಕಿನ್ ಗಾಂಗ್ ಅವರನ್ನು ಭೇಟಿಯಾಗಿ ಅಂತರರಾಷ್ಟ್ರೀಯ ಮತ್ತು ಪ್ರಾದೇಶಿಕ ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದೂ ತಿಳಿಸಿವೆ.

ಪಾಕ್: ನವಾಜ್ ಷರೀಫ್ ಖುಲಾಸೆ

ಲಾಹೋರ್ (ಪಿಟಿಐ): ಮೂವತ್ತೇಳು ವರ್ಷಗಳ ಹಿಂದಿನ ಲಂಚ ಪ್ರಕರಣದ ಆರೋಪದಿಂದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರನ್ನು ಪಾಕಿಸ್ತಾನದ ಭ್ರಷ್ಟಾಚಾರ ತಡೆ ನ್ಯಾಯಾಲಯವು ಶನಿವಾರ ಖುಲಾಸೆಗೊಳಿಸಿದೆ.

ನವಾಜ್ ಷರೀಫ್ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ಅಪಾರ ಬೆಲೆಬಾಳುವ 6.75 ಎಕರೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಾಧ್ಯಮವೊಂದರ ಮಾಲೀಕರಿಗೆ ಪರಭಾರೆ ಮಾಡಿದ್ದ ಆರೋಪ ಎದುರಿಸುತ್ತಿದ್ದರು.

ಇದರಿಂದ ಸರ್ಕಾರಿ ಖಜಾನೆಗೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ ಎಂದು ರಾಷ್ಟ್ರೀಯ ಭ್ರಷ್ಟಾಚಾರ ತಡೆ ಬ್ಯೂರೊ ಆರೋಪಿಸಿತ್ತು. ಭೂಮಿ ಪರಭಾರೆಗೆ ಲಂಚ ಪಡೆಯಲಾಗಿದೆ ಎಂದು ಮಾಧ್ಯಮವೊಂದು ವರದಿ ಪ್ರಕಟಿಸಿತ್ತು.

ಭ್ರಷ್ಟಾಚಾರ ಎಸಗಿದ ರಾಜಕಾರಣಿಗಳನ್ನು ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧಿಸುವ ಬಗ್ಗೆ ಪಾಕ್ ಸರ್ಕಾರವು ಇತ್ತೀಚೆಗೆ ಕಾನೂನಿಗೆ ತಿದ್ದುಪಡಿ ತಂದಿದೆ.

ಕಳವು: ಪಶುಪತಿ ದೇವಾಲಯ ಬಂದ್

ಕಠ್ಮಂಡು (ಪಿಟಿಐ): ನೇಪಾಳದ ಪಶುಪತಿನಾಥ ದೇವಾಲಯದಲ್ಲಿ ಶಿವಲಿಂಗದ ಮೇಲಿನ 100 ಕೆ.ಜಿ. ತೂಕದ ಚಿನ್ನದ ಆಭರಣದಲ್ಲಿ 10 ಕೆ.ಜಿ. ಚಿನ್ನ ನಾಪತ್ತೆಯಾಗಿದೆ ಎಂಬ ಬಗ್ಗೆ ತನಿಖೆ ಮಾಡುವ ಸಲುವಾಗಿ ದೇವಾಲಯವನ್ನು ಭಾನುವಾರ ಬಂದ್ ಮಾಡಲಾಗಿದೆ.

ನೇಪಾಳದ ಭ್ರಷ್ಟಾಚಾರ ವಿರೋಧಿ ಸಂಸ್ಥೆಯು ದೇವಾಲಯವನ್ನು ತನಿಖೆಗಾಗಿ ವಶಕ್ಕೆ ಪಡೆದಿದೆ.

ದೇವರ ಚಿನ್ನದ ಆಭರಣವು ಕಾಣೆಯಾದ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆದ ಬಳಿಕ ನೇಪಾಳ ಸರ್ಕಾರವು ಈ ಕುರಿತು ತನಿಖೆಗೆ ನಿರ್ದೇಶನ ನೀಡಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.12,000 - 17,000. 8951315839, 9880120052

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Wanted

ಎಂಎನ್ಸಿ &ಇತರೆ ಕಂಪನಿಗಳಿಗೆ ಡಿಪ್ಲೊಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪನಿಗಳಿಗೆ ಯುಕೆ ಯುಎಸ್ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

ಕ್ಲಾಸಿಫೈಡ್ಸ್

ADMISSION CORNER

VIVEKANANDA COLLEGE OF PHARMACY
AN INSTITUTE OF JANATHA EDUCATION SOCIETY®
Affiliated to Rajiv Gandhi University of Health Sciences & Approved by PCI, New Delhi
ESTD.: 1983

D.Pharm | B.Pharm
CET B060
M.Pharm - Pharmaceutics - Pharmaceutical Chemistry

Institute of Technology
CSE | ISE | E&C | AI&ML
Civil| Mechanical
CET E087
COMEDK E149

College of Law
5 Year - BA LL.B
5 Year - B.Com LL.B
3 Year - LL.B

2023-24 Admissions Open

Degree College
B.A - H | E | P
B.Sc - P | C | M | Comp. | Ele.
B.Com | B.Com - Data Analytics
NAAC A

95139 53489
95139 53482

Institute of Management
BCA | BBA
MBA | M.Com
PGCET B-323

Degree College for Women
BBA | B.Com | BA | BA - Journalism

Admission Center | Dr.Rajkumar Road, Next to Orion Mall, Rajajinagar II Stage, Bengaluru-560055

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ ರೈಲು/ AC ಬಸ್ 11.07.2023 19.07.2023 ಅಮರನಾಥ್ ವೈಷ್ಣೋದೇವಿ ಕಾಶ್ಮೀರ,ಗುಲ್ಮಾರ್ಗ್. 23.08.2023 ಕಾಶಿ,ಅಲಹಾಬಾದ್,ಬುದ್ಧಗಯಾ. 20.09.2023 ಚಾರ್‌ಧಾಮ್ ಸಮೇತ ಪ್ರವಾಸ. 23.09.2023 25.09.2023 35/17 ದಿನಗಳ ದೆಹಲಿ,ಜೈಪುರ್ ಹರಿದ್ವಾರ್ ನೇಪಾಳ,ಗಯಾ ಪೂರಿಜಗನ್ನಾಥ್ ಕೋಲ್ಕತಾ ಚಾರ್‌ಧಾಮ್ ಅಮೃತ್‌ಸರ್ ಇತ್ಯಾದಿ. 29.09.2023 ಸೋಮನಾಥ್ ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ. 23.09.2023 ನೇಪಾಳ,ಪೋಕ್ರ ಮುಕ್ತಿನಾಥ,ಲುಂಬಿನಿ. ಸಂಪರ್ಕಿಸಿ. ಏಷ್ಯನ್ ಟ್ರಾವೆಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 9035711991 7204173686 8317446683

ಸ್ವಯಂಭೂ ಅಮರನಾಥ ಕಾಶ್ಮೀರ್,ಗುಲ್‌ಮಾರ್ಗ್ ಜಮ್ಮು ವೈಷ್ಣೋದೇವಿ 12.06.2023 ರಿಂದ 7/9 ದಿನಗಳು. ದೆಹಲಿ ಯುಮುನೋತ್ರಿ,ಗಂಗೋತ್ರಿ ಕೇದಾರನಾಥ್,ಬದರಿನಾಥ್ ಹರಿದ್ವಾರ್ 21.08.2023 ರಿಂದ 14 ದಿನಗಳು. ನೇಪಾಳ ಮುಕ್ತಿನಾಥ್,ಜನಕಪುರ ಬೈದ್ಯನಾಥ್‌ಧಾಮ ಅಯೋಧ್ಯ 01.10.2023 ರಿಂದ 11 ದಿನಗಳು. ಲಕ್ಸುರಿ ವೋಲ್ವೋ ಬಸ್ಸಿನಲ್ಲಿ ಹೈದ್ರಾಬಾದ್,ಭದ್ರಾಚಲಂ ವಿಶಾಖಪಟ್ಟಣ ಬುರ್ರಾಕೇವ್ಸ್ ವಾಸವಿಪೆನುಗೊಂಡ ವಿಜಯವಾಡ 05.08.2023 ರಿಂದ 11 ದಿನಗಳು. ಸಂಪರ್ಕಿಸಿ 26508925 9980993631 ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು.18

6.7.2023ರಿಂದ 10ದಿನಗಳು. ವೈಷ್ಣವಿದೇವಿ, ಕುಲುಮನಾಲಿ, ದೆಹಲಿ, ಶಿಮ್ಲಾ, ಅಮೃತಸರ, ವಾಘಾ ಬಾರ್ಡರ್17.7.2023ರಿಂದ 12ದಿನಗಳು. ಚಾರದಾಮ ಪ್ರವಾಸ ಕೇದಾರನಾಥ, ಗಂಗೋತ್ರಿ, ಬದರಿನಾಥ, ಯಮನೋತ್ರಿ, ದೆಹಲಿ23.7.2023ರಿಂದ 7ದಿನಗಳು. ಭದ್ರಾಚಲಂ, ಹೈದ್ರಾಬಾದ್, ಶ್ರೀಶೈಲ, ವಿಜಯವಾಡ, ಯಾದಗಿರಿಗುಡ್ಡ, ಸುರೇಂದ್ರಪುರಿ, ಅಮರಾವತಿ ಶ್ರೀ ಗುರುರಾಜ ಟ್ರಾವೆಲ್ಸ್, ಕೋಲಾರ- 9900124333, 9611082432, 8123099913

05/07/2023ರಿಂದ 12ದಿನಗಳ ವಿಮಾನ ಮತ್ತು AC ಬಸ್ಸಿನಲ್ಲಿ ಅಮರನಾಥ್,ಕಾಶ್ಮೀರ, ದಾಲ್ ಲೇಖ್,ವೈಷ್ಣೋದೇವಿ ಇತ್ಯಾದಿ ಹಾಗೂ 8/13/16 ದಿನಗಳ ಚಾರುಧಾಮ್, ಮುಕ್ತಿನಾಥ್,ಕಾಶಿ,ಪೋಕ್ರಾ, ಜನಕಪುರಿ ಯಾತ್ರೆಗಳಿಗೆ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್. ಆರ್.ವಿ.ರಸ್ತೆ: 8105657052/ 9480182865

30.6.2023 7ದಿನಗಳು ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನಗಳ ಚಾರ್ ಧಾಮ್ ಯಾತ್ರೆ. ಅಕ್ಟೋಬರ್ ಕಾಶಿ. ನವೆಂಬರ್ ಗುಜರಾತ್. 9448792891.

★13.07.2023 8/13ದಿನ★ ದೆಹಲಿ,ಆಗ್ರಾ,ಪ್ರಯಾಗ, ಗಯ,ಕಾಶಿ ಪ್ರವಾಸ., 15.08.2023 10ದಿನ ಗುಜರಾತ್,ಉಜ್ಜಯಿನಿ, ಓಂಕಾರೇಶ್ವರ.31.08.2023 16ದಿನ 95ದಿವ್ಯದೇಶ ಪ್ರವಾಸ, 29.07.2023 ತಮಿಳುನಾಡು 12ದಿನ 36ಸುಬ್ರಹ್ಮಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

Pilgrimage Tours

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್ 20/07 ಕಾಶಿ,ಅಯೋಧ್ಯ. 10/08 ನೇಪಾಳ ಮುಕ್ತಿನಾಥ, ಪಶುಪತಿನಾಥ 1/09 ಚಾರ್ಧಾಮ್, ಕೇದಾರನಾಥ, ಬದ್ರಿನಾಥ್ 9591017782, 9964527782

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

ಭವಿಷ್ಯ

Astrology

'ವಶೀಕರಣ ಮಾಂತ್ರಿಕರು' ಪ್ರೇಮವಿಚಾರ, ಮದುವೆ, ಸಾಲಬಾಧೆ, ವ್ಯಾಪಾರ, ಮನೆಯಲ್ಲಿನ ಅಶಾಂತಿ, ಅನಾರೋಗ್ಯ, ಮಾನಸಿಕ ತೊಂದರೆಗಳಿಗೆ ದೈವಿಕ ಪೂಜಾ ಶಕ್ತಿಯಿಂದ ಫೋನಿನ ಮೂಲಕ ಪರಿಹಾರ.9964108888 (ವೀಡಿಯೋ ಕಾಲ್ ಗೆ ಲಭ್ಯವಿರುತ್ತಾರೆ).

ಕೇರಳ ಮಂತ್ರವಾದಿ ಶ್ರೀನಿವಾಸ್ ಎಂ. ಮುಗ್ಗೋಳ್, ತೀರ್ಥಹಳ್ಳಿ. 9632545506, 7892446291 ನಿಮ್ಮೆಲ್ಲಾ ಕಠಿಣ ಗುಪ್ತ ಸಮಸ್ಯೆಗೆ ಪರಿಹಾರ ಮಾಡುತ್ತಾರೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
conditions apply*
@ 803/-* Per Sqcm Single Column
@ 825/-* Per Sqcm Multi Column
For More Details Contact:
9731810277 | 9901641752
9845114560 | 9886213331
080- 45557163 | 45557164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀಮತಿ. ಪಿಳ್ಳಮ್ಮನವರು ಶ್ರೀಮಾನ್|| ಎ.ಮುನಿರೆಡ್ಡಿಯವರು
ನೀವುಗಳು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಲ್ಲಿರುವ,
–ಮಕ್ಕಳು, ಮೊಮ್ಮಕ್ಕಳು, ಮತ್ತು ಕುಟುಂಬವರ್ಗ

LOOKING TO BUILD, BUY OR SELL A PROPERTY
Please refer Classifieds on Sunday

13ನೇ ವರ್ಷದ ಪುಣ್ಯಸ್ಮರಣೆ

Birth: 19.04.1944 Expired: 26.06.2010

ಶ್ರೀಮತಿ ಸತ್ಯವತಿ
ವೈಕುಂಠವಾಸಿ ಶ್ರೀ. ಸಿ. ಟಿ. ರಾಮಚಂದ್ರನ್,
ಪಿಡಬ್ಲ್ಯೂಡಿ ಕಾರ್ಯನಿರ್ವಾಹಕ ಇಂಜಿನಿಯರ್ (ನಿವೃತ್ತ)
ರವರ ಧರ್ಮಪತ್ನಿ
ಕಾರ್ಯದರ್ಶಿ
ಎಸ್. ಎಸ್. ಬಿ. ಇಂಟರ್‌ನ್ಯಾಶನಲ್ ಸಂಸ್ಥೆಗಳ ಸಮೂಹ
ಇಂದಿರಾನಗರ, ಬೆಂಗಳೂರು – ೫೬೦ ೦೩೮.
ಪ್ರೀತಿಯ ಮಗ, ಮಗಳು ಮತ್ತು ಕುಟುಂಬ ವರ್ಗ.
ಮ್ಯಾನೇಜ್‌ಮೆಂಟ್ ಕಮಿಟಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು
ಎಸ್. ಎಸ್. ಬಿ. ಇಂಟರ್‌ನ್ಯಾಶನಲ್ ಸ್ಕೂಲ್
ಇಂದಿರಾನಗರ, ಬೆಂಗಳೂರು – ೫೬೦ ೦೩೮.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಚುಕ್ಕಾಣಿ ಹಿಡಿದು ಎಂಟು ತಿಂಗಳು ಪೂರ್ಣ

ಸಿಡಬ್ಲ್ಯುಸಿ ಸದಸ್ಯರ ನೇಮಕಕ್ಕೆ ಗ್ರಹಣ

ಪ್ರಜಾವಾಣಿ ವಾರ್ತೆ



ನವದೆಹಲಿ: ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷ ಸ್ಥಾನದ ಚುಕ್ಕಾಣಿ ಹಿಡಿದು ಸೋಮವಾರಕ್ಕೆ ಎಂಟು ತಿಂಗಳು ಪೂರ್ಣಗೊಂಡರೂ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ (ಸಿಡಬ್ಲ್ಯುಸಿ) ನಾಮನಿರ್ದೇಶನ ಪ್ರಕ್ರಿಯೆಯು ಇನ್ನೂ ನನೆಗುದಿಗೆ ಬಿದ್ದಿದೆ.

ಛತ್ತೀಸಗಢದ ರಾಯಪುರದಲ್ಲಿ ಪಕ್ಷದ 85ನೇ ಮಹಾಅಧಿವೇಶನದ ಭಾಗವಾಗಿ ಫೆಬ್ರುವರಿಯಲ್ಲಿ ನಡೆದ ಕಾಂಗ್ರೆಸ್ ಚಾಲನಾ ಸಮಿತಿ ಸಭೆಯು ಸಿಡಬ್ಲ್ಯುಸಿಗೆ ಸದಸ್ಯರ ನೇಮಕಕ್ಕೆ ಚುನಾವಣೆಯನ್ನು ನಡೆಸದಿರಲು ನಿರ್ಧರಿಸಿತ್ತು. ಈ ಸಮಿತಿಗೆ ಸದಸ್ಯರ ನಾಮನಿರ್ದೇಶನ ಮಾಡುವ ಸಂಪೂರ್ಣ ಅಧಿಕಾರವನ್ನು ಖರ್ಗೆ ಅವರಿಗೆ ಸರ್ವಾನುಮತದಿಂದ ನೀಡಿತ್ತು. ಆದರೆ, ಕಾರ್ಯಕಾರಿ ಸಮಿತಿಯು ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ.

'ಶೀಘ್ರವೇ, ಸಮಿತಿಗೆ ಸದಸ್ಯರ ನಾಮನಿರ್ದೇಶನವನ್ನು ಪ್ರಕಟಿಸಲಾಗುತ್ತದೆ. ಈ ನಿಟ್ಟಿನಲ್ಲಿ ಅಂತಿಮ ಹಂತದ ಸಮಾಲೋಚನೆಗಳು ನಡೆಯುತ್ತಿವೆ. ಸಮಿತಿಯಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಇಚ್ಛಿಸಿರುವ ನಾಯಕರು ಭಾರಿ ಲಾಬಿಯನ್ನೂ ನಡೆಸುತ್ತಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪ್ರಸ್ತುತ ಖರ್ಗೆ ಅವರು ಉನ್ನತ ನಾಯಕರ ಸಮಿತಿಯ ಜೊತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಸೋನಿಯಾ ಗಾಂಧಿ ಅಧ್ಯಕ್ಷರಾಗಿದ್ದ ವೇಳೆ ನೇಮಕಗೊಂಡಿದ್ದ ಕಾರ್ಯಕಾರಿ ಸಮಿತಿಯ ಸದಸ್ಯರೇ ಇದ್ದಾರೆ.

ಸಮಿತಿ ರಚನೆಗೆ ವಿಳಂಬ ಏಕೆ?: ಸಮಿತಿ ರಚನೆಯ ವಿಳಂಬಕ್ಕೆ ಹಲವು ಕಾರಣಗಳಿವೆ. ಕರ್ನಾಟಕದಲ್ಲಿ ನಡೆದ ವಿಧಾನಸಭಾ ಚುನಾವಣೆ ಮತ್ತು ಸರ್ಕಾರ ರಚನೆಗೆ ನಡೆದ ಕಸರತ್ತು ಕೂಡ ಈ ಪೈಕಿ ಒಂದಾಗಿದೆ. ಮತ್ತೊಂದೆಡೆ ಒಬಿಸಿ, ಎಸ್.ಸಿ ಮತ್ತು ಎಸ್.ಟಿ ಸೇರಿದಂತೆ ಯುವಕರು, ಮಹಿಳೆಯರಿಗೆ ಆದ್ಯತೆ ನೀಡಬೇಕಿರುವುದು ಕಸರತ್ತನ್ನು ಮತ್ತಷ್ಟು ಜಟಿಲಗೊಳಿಸಿದೆ ಎನ್ನುತ್ತವೆ ಮೂಲಗಳು.

ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ತರಲಾಗಿದ್ದು, ಸಮಿತಿಯ ಸದಸ್ಯರ ಸಂಖ್ಯೆಯನ್ನು 25ರಿಂದ 35ಕ್ಕೆ ಹೆಚ್ಚಿಸಲಾಗಿದೆ. ಅಲ್ಲದೇ, ಹಿಂದುಳಿದ ವರ್ಗ, ದಲಿತರು, ಬುಡಕಟ್ಟು ಜನರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು 50 ವರ್ಷಕ್ಕಿಂತ ಕಡಿಮೆ ವಯಸ್ಸಿನ ನಾಯಕರಿಗೆ ಈ ಸಮಿತಿಯಲ್ಲಿ ಶೇ 50ರಷ್ಟು ಮೀಸಲಾತಿ ಕಲ್ಪಿಸಬೇಕಿದೆ.

ಎಐಸಿಸಿ ಅಧ್ಯಕ್ಷರ ಆಯ್ಕೆ ಬಳಿಕ ಕಾಂಗ್ರೆಸ್ ಮಹಾಅಧಿವೇಶನದ ನಡೆಯಲಿದ್ದು, ಇದಾದ ಕೆಲವು ತಿಂಗಳಲ್ಲಿ ಸಿಡಬ್ಲ್ಯುಸಿಗೆ ಚುನಾವಣೆ ನಡೆಯುವುದು ಕಾಂಗ್ರೆಸ್ ಪಕ್ಷದಲ್ಲಿ ವಾಡಿಕೆಯಾಗಿತ್ತು. ಕಳೆದ ವರ್ಷದ ಅಕ್ಟೋಬರ್ 26ರಂದು ಖರ್ಗೆ ಪಕ್ಷದ ಚುಕ್ಕಾಣಿ ಹಿಡಿದರು. ಆದರೆ, ಮಹಾಅಧಿವೇಶನ ನಡೆದಿದ್ದು ಫೆಬ್ರುವರಿಯಲ್ಲಿ. ಬಳಿಕ ರಾಹುಲ್ ಗಾಂಧಿ 'ಭಾರತ್ ಜೋಡೊ' ಆರಂಭಿಸಿದರು. ಇದೇ ವೇಳೆ ಸಂಸತ್ ಅಧಿವೇಶನವೂ ಶುರುವಾಯಿತು. ಹಾಗಾಗಿ, ವಿಳಂಬವಾಗಿದೆ ಎನ್ನುತ್ತವೆ ಮೂಲಗಳು.

ಜೊತೆಗೆ, ಕರ್ನಾಟಕ ವಿಧಾನಸಭಾ ಚುನಾವಣೆ ಮತ್ತು ಸರ್ಕಾರದ ರಚನೆಯಲ್ಲಿ ಖರ್ಗೆ ಮುಳುಗಿ ಹೋದರು. ಈ ನಡುವೆಯೇ ರಾಹುಲ್ ಗಾಂಧಿ ಅಮೆರಿಕ ಪ್ರವಾಸಕ್ಕೆ ತೆರಳಿದ್ದು ಕೂಡ ವಿಳಂಬಕ್ಕೆ ಕಾರಣ ಎಂಬುದು ಮೂಲಗಳ ವಿವರಣೆ.

ಆದರೆ, ಖರ್ಗೆ ಅವರು ಬಲಿಷ್ಠ ಕಾರ್ಯಕಾರಿ ಸಮಿತಿಯ ರಚನೆಯೊಂದಿಗೆ ಕಾಂಗ್ರೆಸ್‌ಗೆ ಹೊಸ ಸ್ವರೂಪ ನೀಡುವ ಉಮೇದಿನಲ್ಲಿದ್ದಾರೆ. ಮತ್ತೊಂದೆಡೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಉತ್ತರ ಪ್ರದೇಶದ ಉಸ್ತುವಾರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವ ಪ್ರಿಯಾಂಕಾ ಗಾಂಧಿ ಅವರು ಹೊಸ ಜವಾಬ್ದಾರಿಯ ನಿರೀಕ್ಷೆಯಲ್ಲಿದ್ದಾರೆ.

ಮೋದಿ ಸುಳ್ಳುಗಾರ: ಸಿದ್ದರಾಮಯ್ಯ

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಸುಳ್ಳುಗಾರ ಎಂದು ಆರೋಪಿಸಿರುವ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು,'ಬಿಜೆಪಿ ನೇತೃತ್ವದ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮುನ್ನ ನೀಡಿದ್ದ ಭರವಸೆಯಂತೆ ಒಳ್ಳೆಯ ದಿನಗಳು ಎಲ್ಲಿ ಬಂದಿವೆ' ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಸಾಧಿಸಿದ್ದಕ್ಕೆ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಲು ಮಹಾರಾಷ್ಟ್ರ ಕಾಂಗ್ರೆಸ್ ಘಟಕವು ಸಾಂಗ್ಲಿಯಲ್ಲಿ ಆಯೋಜಿಸಿದ್ದ ಕನ್ನಡ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ದೇಶ, ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ನಾವೆಲ್ಲರೂ ಮತ್ತೊಂದು ಸ್ವಾತಂತ್ರ್ಯ ಹೋರಾಟವನ್ನು ನಡೆಸಬೇಕಿದೆ' ಎಂದು ಹೇಳಿದರು.

'ಬಿಜೆಪಿಯಿಂದಾಗಿ ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವವು ಅಪಾಯದಲ್ಲಿದೆ' ಎಂದು ಅವರು ಹೇಳಿದರು. ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಅವರ ಕುಟುಂಬದವರು ಸಿದ್ದರಾಮಯ್ಯ ಅವರನ್ನು ಸನ್ಮಾನಿಸಿದರು.

ಪುಣೆ ಜಿಲ್ಲೆಯ ಬಾರಾಮತಿಯಲ್ಲಿ ರಾಣಿ ಅಹಲ್ಯಾದೇವಿ ಹೋಳ್ಕರ್ ಅವರ 298ನೇ ಜನ್ಮದಿನದ ಕಾರ್ಯಕ್ರಮದಲ್ಲೂ ಅವರು ಪಾಲ್ಗೊಂಡಿದ್ದರು.

ಜಲಾವೃತ ರಸ್ತೆ ಗುರುಗ್ರಾಮದ ದೆಹಲಿ–ಗುರುಗ್ರಾಮ ಎಕ್ಸ್‌ಪ್ರೆಸ್‌ವೇನಲ್ಲಿ ಭಾನುವಾರ ಮಳೆನೀರು ಸಂಗ್ರಹಗೊಂಡು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು –ಪಿಟಿಐ ಚಿತ್ರ

ನಾರಿಯರ ಆಕ್ರೋಶಕ್ಕೆ ಸೇನೆ ಶರಣು

ಒಂದನೇ ಪುಟದಿಂದ...

ಯೋಧರು ಮತ್ತು ಮಹಿಳೆಯರ ನಡುವೆ ಒಂದು ಗಂಟೆ ವಾಗ್ವಾದ ನಡೆಯಿತು. ಹಾಗಾಗಿ, ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ತಲೆದೋರಿತ್ತು. ಇದರಿಂದ ಯೋಧರು ಇಕ್ಕಟ್ಟಿಗೆ ಸಿಲುಕಿದರು.

'ಕಾರ್ಯಾಚರಣೆಗೆ ಅಡ್ಡಿಪಡಿಸುವುದು ಕಾನೂನುಬಾಹಿರ ಎಂದು ಉದ್ರಿಕ್ತ ಗುಂಪಿಗೆ ಯೋಧರು ಹಲವು ಬಾರಿ ಮನವಿ ಮಾಡಿದ್ದಾರೆ. ಆದರೆ, ಇದಕ್ಕೆ ಅವರು ಒಪ್ಪಿಲ್ಲ. ಗುಂಪು ಚದುರಿಸಲು ಕಾರ್ಯಾಚರಣೆ ಕೈಗೊಂಡರೆ ಹೆಚ್ಚಿನ ಸಾವು–ನೋವು ಸಂಭವಿಸುವ ಅಪಾಯ ಅರಿತ ಕಮಾಂಡರ್, ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ಅಲ್ಲಿಂದ ವಾಪಸ್ ಮರಳಿದ್ದಾರೆ ಎಂದು ಭಾನುವಾರ ಅಧಿಕಾರಿಗಳು ತಿಳಿಸಿದ್ದಾರೆ.

20 ಯೋಧರನ್ನು ಹತ್ಯೆಗೈದ ಸಂಚುಕೋರ ಇದ್ದ!: 'ಗ್ರಾಮದಲ್ಲಿ ಅಡಗಿದ್ದ ಬಂಡುಕೋರರಲ್ಲಿ ಸ್ವಯಂಘೋಷಿತ ಲೆಫ್ಟಿನೆಂಟ್ ಕರ್ನಲ್ ಮೊಯಿರಾಂಗ್‌ಥೆಮ್ ತಾಂಬಾ ಅಲಿಯಾಸ್ ಉತ್ತಮ್ ಕೂಡ ಇದ್ದ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'2015ರಲ್ಲಿ 6ನೇ ಡೋಗ್ರಾ ರೆಜಿಮೆಂಟ್ ಮೇಲೆ ಬಂಡುಕೋರರು ಹೊಂಚು ಹಾಕಿ ದಾಳಿ ನಡೆಸಿದ್ದರು. ಈ ದಾಳಿಯಲ್ಲಿ 20 ಯೋಧರು ಹುತಾತ್ಮರಾಗಿದ್ದರು. ಉತ್ತಮ್ ಈ ದಾಳಿಯ ಸಂಚುಕೋರನಾಗಿದ್ದ. ಹಲವೆಡೆ ದಾಳಿ ನಡೆಸಿದ ಆರೋಪವು ಕೆವೈಕೆಎಲ್ ಗುಂಪಿನ ಮೇಲಿದೆ' ಎಂದು ತಿಳಿಸಿದ್ದಾರೆ.

ಮಣಿಪುರ ಹೊತ್ತಿ ಉರಿಯುತ್ತಿದ್ದರೂ ಪ್ರಧಾನಿ ಮೌನ: ಜೈರಾಮ್ ರಮೇಶ್

ನವದೆಹಲಿ (ಪಿಟಿಐ): 'ಮಣಿಪುರ ಹೊತ್ತಿ ಉರಿಯುತ್ತಿದ್ದರೂ ಪ್ರಧಾನಿ ನರೇಂದ್ರ ಮೋದಿ 'ಮೌನ'ವಾಗಿದ್ದಾರೆ, ಗೃಹ ಸಚಿವ ಅಮಿತ್ ಶಾ 'ನಿಷ್ಪ್ರಯೋಜಕ'ರಾಗಿದ್ದಾರೆ ಮತ್ತು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ 'ಕಾರ್ಯಹೀನ'ರಾಗಿದ್ದಾರೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಜೈರಾಮ್ ರಮೇಶ್ ವಾಗ್ದಾಳಿ ನಡೆಸಿದರು.

ಮಣಿಪುರ ಶಾಂತಿಗೆ ಸಂಬಂಧಿಸಿದಂತೆ ಇಲ್ಲಿನ ಹರ್‌ಕಿಶನ್ ಸಿಂಗ್ ಸರ್ಜೀತ್ ಭವನದಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, ಸಂಘರ್ಷಪೀಡಿತ ಮಣಿಪುರದ ಪರಿಸ್ಥಿತಿ ಉಲ್ಲೇಖಿಸಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

'ಯಾವುದೇ ವಿಚಾರವಾಗಿ ಸರ್ವಸಮ್ಮತಿ ಸೂಚಿಸಲು ಸಾಧ್ಯವಾಗದೇ ಇರಬಹುದು ಆದರೆ ಒಮ್ಮತಕ್ಕೆ ಬರಲು ಸಾಧ್ಯವಿದೆ. ಭಾರತ ಸಂವಿಧಾನ ರಚನೆಯಾಗಿದ್ದೇ ಹೀಗೆ... ಎಲ್ಲರಿಗೂ ಕಿವಿಯಾಗಿ, ಸಂವೇದನಾಶೀಲವಾಗಿದ್ದರೆ ಮಣಿಪುರದಲ್ಲಿ ಶಾಂತಿ ಪುನಃಸ್ಥಾಪನೆ ಸಾಧ್ಯವಿದೆ. ಇದು ಸುದೀರ್ಘ ಪ್ರಕ್ರಿಯೆ; ಒಂದು ವಾರದಲ್ಲಿ ಸಾಧ್ಯವಿಲ್ಲ. ಅದಕ್ಕೆ ಒಂದು ತಿಂಗಳು ಅಥವಾ ವರ್ಷಾನುಗಟ್ಟಲೆ ಸಮಯ ಬೇಕು' ಎಂದು ಹೇಳಿದರು.

'ಮಣಿಪುರದಲ್ಲಿ ಕೂಡಲೇ ಮುಖ್ಯಮಂತ್ರಿ ಬದಲಾವಣೆಯಾಗಬೇಕು' ಎಂದು ಆಗ್ರಹಿಸಿದರು.

'ಈಶಾನ್ಯ ರಾಜ್ಯದಲ್ಲಿ ಎರಡು ಮೂಲಭೂತ ಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಒಂದು; ಯಾವುದೇ ತಾರತಮ್ಯ ಇಲ್ಲದೆ ನಿರ್ದಾಕ್ಷಿಣ್ಯವಾಗಿ ಎಲ್ಲಾ ಸಶಸ್ತ್ರ ಗುಂಪನ್ನು ನಿಶ್ಶಸ್ತ್ರೀಕರಣಗೊಳಿಸಬೇಕು. ಎರಡನೆಯದಾಗಿ; ನಂಬಿಕೆ, ಸಾಮರಸ್ಯದ ವಾತಾವರಣವನ್ನು ನಿರ್ಮಿಸಬೇಕು' ಎಂದು ಹೇಳಿದರು. ಅನಂತರ ಟ್ವೀಟ್ ಮಾಡಿರುವ ಅವರು, 'ಹತ್ತು ಸಮಾನ ಮನಸ್ಕ ರಾಜಕೀಯ ಪಕ್ಷಗಳು ಆಯೋಜಿಸಿದ್ದ ಸಮಾವೇಶದಲ್ಲಿ ಪಾಲ್ಗೊಂಡು ಮಣಿಪುರದಲ್ಲಿ ಉದ್ಭವಿಸಿರುವ ರಾಜಕೀಯ, ಆಡಳಿತಾತ್ಮಕ ಅರಾಜಕತೆ ಕುರಿತು ಅಭಿಪ್ರಾಯ ಹಂಚಿಕೊಂಡೆ' ಎಂದು ತಿಳಿಸಿದ್ದಾರೆ.

ದೆಹಲಿ, ಮುಂಬೈಗೆ ಒಂದೇ ದಿನ ಮುಂಗಾರು

ನವದೆಹಲಿ/ಮುಂಬೈ (ಪಿಟಿಐ): 62 ವರ್ಷಗಳ ಬಳಿಕ ದೆಹಲಿ ಮತ್ತು ಮುಂಬೈ ನಗರಗಳಿಗೆ ಒಂದೇ ದಿನ ಮುಂಗಾರು ಪ್ರವೇಶಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಭಾನುವಾರ ಹೇಳಿದೆ.

1961 ಜೂನ್ 21ರಂದು ಎರಡೂ ನಗರಗಳಿಗೂ ಏಕ ಕಾಲಕ್ಕೆ ಮುಂಗಾರು ಪ್ರವೇಶಿಸಿತ್ತು. ಈ ಬಾರಿ ದೆಹಲಿಗೆ ವಾಡಿಕೆಗಿಂತ ಎರಡು ದಿನ ಮುಂಚಿತವಾಗಿ ಹಾಗೂ ಮುಂಬೈಗೆ ಎರಡು ವಾರ ವಿಳಂಬವಾಗಿ ಮುಂಗಾರು ತಲುಪಿದೆ ಎಂದು ಐಎಂಡಿಯ ಹಿರಿಯ ವಿಜ್ಞಾನಿ ಡಿ.ಎಸ್.ಪೈ ತಿಳಿಸಿದ್ದಾರೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ತಾಸುಗಳಲ್ಲಿ ದೆಹಲಿಯ ಸಫ್ದರ್‌ಜಂಗ್‌ನಲ್ಲಿರುವ ಹವಾಮಾನ ಕೇಂದ್ರದಲ್ಲಿ 48.3 ಮಿ.ಮೀ ಮಳೆ ದಾಖಲಾಗಿದೆ. ದಾಸ್ನಾದಲ್ಲಿ 80ಮಿ.ಮೀ., ಜಾಫರ್‌ಪುರ ಮತ್ತು ಲೋಧಿ ರಸ್ತೆಯಲ್ಲಿ 60ಮಿ.ಮೀ ಮಳೆ ಸುರಿದಿದೆ ಎಂದು ಮೂಲಗಳು ವಿವರಿಸಿವೆ.

ಮುಂಬೈ ಮತ್ತು ಅದರ ಉಪನಗರಗಳಲ್ಲಿ ಭಾರಿ ಮಳೆಯಾಗಿದ್ದು ಕೆಲವೆಡೆ ತಗ್ಗಿನ ಪ್ರದೇಶಗಳು ಜಲಾವೃತವಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿದ್ಯುತ್ ತಂತಿ ಸ್ಪರ್ಶಿಸಿ ಮಹಿಳೆ ಸಾವು: ನವದೆಹಲಿಯ ರೈಲು ನಿಲ್ದಾಣದಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಮಹಿಳೆಯೊಬ್ಬರು ಭಾನುವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಯೋಜನಾ ವೆಚ್ಚ ₹ 4.8 ಲಕ್ಷ ಕೋಟಿ ಹೆಚ್ಚಳ

ನವದೆಹಲಿ (ಪಿಟಿಐ): ಮೇ ಅಂತ್ಯಕ್ಕೆ ಕೊನೆಗೊಂಡ ಅವಧಿಯಲ್ಲಿ ದೇಶದ 408 ಮೂಲಸೌಕರ್ಯ ಯೋಜನೆಗಳ ಯೋಜನಾ ವೆಚ್ಚದಲ್ಲಿ ಭಾರಿ ಹೆಚ್ಚಳ ಕಂಡುಬಂದಿದೆ. ಇವುಗಳ ಯೋಜನಾ ವೆಚ್ಚದಲ್ಲಿ ₹ 4.80 ಲಕ್ಷ ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ವರದಿಯೊಂದು ಹೇಳುತ್ತದೆ.

ದೇಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ 1,691 ಯೋಜನೆಗಳ ಪೈಕಿ 408 ಯೋಜನೆಗಳ ಯೋಜನಾ ವೆಚ್ಚದಲ್ಲಿ ಹೆಚ್ಚಳವಾಗಿದ್ದರೆ, 814 ಯೋಜನೆಗಳ ಅನುಷ್ಠಾನವೇ ವಿಳಂಬವಾಗಿದೆ ಎಂದು ಇದೇ ವರದಿ ಹೇಳುತ್ತದೆ.

'ಅಧಿಕ ಜನಸಂಖ್ಯೆಗೂ ಪರಿಸರ ಮಾಲಿನ್ಯಕ್ಕೂ ಸಂಬಂಧ ಇಲ್ಲ'

ನವದೆಹಲಿ (ಪಿಟಿಐ): ಒಂದು ದೇಶ ದೊಡ್ಡ ಜನಸಂಖ್ಯೆ ಹೊಂದಿದೆ ಎಂದಾಕ್ಷಣ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಅನಿಲಗಳನ್ನು ಹೆಚ್ಚಾಗಿ ಹೊರಸೂಸುತ್ತಿವೆ ಎಂದರ್ಥವಲ್ಲ. ಈ ತಪ್ಪುಕಲ್ಪನೆಯನ್ನು ಹೋಗಲಾಡಿಸುವ ಅಗತ್ಯ ಇದೆ ಎಂದು ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (ಯುಎನ್‌ಎಫ್‌ಪಿಎ) ಯ ಅಧಿಕಾರಿ ಹೇಳಿದ್ದಾರೆ.

'ಜನಸಂಖ್ಯೆಗೂ, ಹೊರಸೂಸುವಿಕೆ ಪ್ರಮಾಣಕ್ಕೂ ಸಂಬಂಧ ಇಲ್ಲ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕಡಿಮೆ ಪ್ರಮಾಣದಲ್ಲಿ ಹಸಿರುಮನೆ ಅನಿಲಗಳನ್ನು ಹೊರಸೂಸುತ್ತವೆ. ಆದರೆ, ಈ ರಾಷ್ಟ್ರಗಳೇ ಹವಾಮಾನ ಬದಲಾವಣೆಯಿಂದಾಗುವ ಕೆಟ್ಟ ಪರಿಣಾಮಗಳನ್ನು ಹೆಚ್ಚು ಅನುಭವಿಸುತ್ತಿವೆ' ಎಂದು ಯುಎನ್‌ಎಫ್‌ಪಿಎ ನಿರ್ದೇಶಕಿ (ತಾಂತ್ರಿಕ ವಿಭಾಗ) ಡಾ.ಜೂಲಿಟ್ಟಾ ಒನಬಾಂಜೊ ಹೇಳಿದ್ದಾರೆ.

ವಿದೇಶ ಪ್ರಯಾಣ ಮೌಲ್ಯಯುತ ಹಕ್ಕು: ದೆಹಲಿ ಕೋರ್ಟ್

ನವದೆಹಲಿ (ಪಿಟಿಐ): ವಿದೇಶಕ್ಕೆ ಪ್ರಯಾಣಿಸುವುದು ಪ್ರತಿಯೊಬ್ಬರ ಮೌಲ್ಯಯುತ ಮೂಲಭೂತ ಹಕ್ಕಾಗಿದೆ ಎಂದು ಪ್ರತಿಪಾದಿಸಿರುವ ದೆಹಲಿ ನ್ಯಾಯಾಲಯವು, ಕೆಲವು ಅಸಾಧಾರಣ ಪ್ರಕರಣಗಳಲ್ಲಿ ಮಾತ್ರವೇ ಇದನ್ನು ಮೊಟಕುಗೊಳಿಸಬಹುದು ಎಂದು ಅಭಿಪ್ರಾಯಪಟ್ಟಿದೆ.

₹ 135 ಕೋಟಿ ಬ್ಯಾಂಕ್ ಸಾಲ ವಂಚನೆ ಪ್ರಕರಣದ ಆರೋಪ ಹೊತ್ತ ರಾಮನ್ ಸೇಥಿ ಎಂಬುವರು ಅಮೆರಿಕದಲ್ಲಿರುವ ತಮ್ಮ ಪುತ್ರನ ಪದವಿ ಪ್ರದಾನ ಸಮಾರಂಭಕ್ಕೆ ತೆರಳಲು ಮುಂದಾಗಿದ್ದರು. ಇದಕ್ಕೆ ಸಿಬಿಐ ಅನುಮತಿ ನೀಡಲು ಆಕ್ಷೇಪಿಸಿತ್ತು. ಇದನ್ನು ಅವರು ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಉಪಗ್ರಹ ತರಂಗಾಂತರ ಹರಾಜು ಬೇಡ: ಮಸ್ಕ್

ನವದೆಹಲಿ (ಪಿಟಿಐ): ಉದ್ಯಮಿ ಎಲಾನ್ ಮಸ್ಕ್ ಅವರು ಭಾರತದಲ್ಲಿ ಸ್ಟಾರ್‌ಲಿಂಕ್ ಮೂಲಕ ಉಪಗ್ರಹ ಆಧಾರಿತ ಇಂಟರ್ನೆಟ್ ಸೇವೆ ಒದಗಿಸಲು ಉತ್ಸುಕರಾಗಿದ್ದಾರೆ. ಆದರೆ, ಈಗ ಜಾರಿಯಲ್ಲಿ ಇರುವ ಪರವಾನಗಿ ವ್ಯವಸ್ಥೆಯು ಮಸ್ಕ್ ಮತ್ತು ಮುಕೇಶ್ ಅಂಬಾನಿ ಅವರ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಗೆ ಕಾರಣವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಮೆರಿಕದಲ್ಲಿ ಕಳೆದ ವಾರ ಭೇಟಿಯಾದ ನಂತರ ಮಸ್ಕ್ ಅವರು ಭಾರತದಲ್ಲಿ ಸ್ಟಾರ್‌ಲಿಂಕ್ ಸೇವೆ ಆರಂಭಿಸಲು ಉತ್ಸುಕರಾಗಿರುವುದಾಗಿ ಹೇಳಿದರು. ಈ ಸೇವೆಯು ದೇಶದ ಕುಗ್ರಾಮಗಳಲ್ಲಿಯೂ ಇಂಟರ್ನೆಟ್ ಸೇವೆ ಲಭ್ಯವಾಗುವಂತೆ ಮಾಡಬಲ್ಲದು.

ಆದರೆ, ಈ ಸೇವೆ ಒದಗಿಸಲು ಕೇಂದ್ರವು ಒಂದು ಪರವಾನಗಿ ನೀಡಬೇಕು; ಇಂಟರ್ನೆಟ್ ಸಿಗ್ನಲ್ ಹೊತ್ತೊಯ್ಯುವ ತರಂಗಾಂತರಗಳನ್ನು ಹರಾಜಿನ ಮೂಲಕವೇ ಖರೀದಿಸಬೇಕು ಎಂದು ಒತ್ತಾಯಿಸಬಾರದು ಎಂಬುದು ಸ್ಟಾರ್‌ಲಿಂಕ್ ಬಯಕೆ. ಟಾಟಾ ಸಮೂಹ, ಏರ್‌ಟೆಲ್, ಅಮೆಜಾನ್ ಕಂಪನಿಗಳ ನಿಲುವು ಕೂಡ ಇದೇ ಆಗಿದೆ. ಆದರೆ, ಅಂಬಾನಿ ಒಡೆತನದ ರಿಲಯನ್ಸ್ ಕಂಪನಿ ಸಾಂಪ್ರದಾಯಿಕ ದೂರಸಂಪರ್ಕ ಸೇವೆ ಒದಗಿಸುವ ಕಂಪನಿಗಳಿಗೆ ಸಮಾನ ಅವಕಾಶ ಸಿಗಬೇಕು ಎಂದಾದರೆ, ಉಪಗ್ರಹ ಆಧಾರಿತ ಸೇವೆ ಒದಗಿಸುವ ವಿದೇಶಿ ಕಂಪನಿಗಳಿಗೆ ತರಂಗಾಂತರಗಳ ಹಂಚಿಕೆಗೆ ಹರಾಜು ಪ್ರಕ್ರಿಯೆಯೇ ನಡೆಯಬೇಕು ಎಂದು ಪ್ರತಿಪಾದಿಸುತ್ತಿದೆ.

'ಭಾರತವು ಬಾಹ್ಯಾಕಾಶ ಆಧಾರಿತ ಸಂವಹನ ಸೇವೆಗಳ (ಎಸ್‌ಎಸ್) ತರಂಗಾಂತರ ವಿಚಾರದಲ್ಲಿ ಕೈಗೊಳ್ಳುವ ನಿರ್ಧಾರವು ಪ್ರಮುಖವಾಗುತ್ತದೆ. 2010ರಿಂದ ಮೊಬೈಲ್ ತರಂಗಾಂತರಗಳನ್ನು ಹರಾಜಿನ ಮೂಲಕ ಮಾರಾಟ ಮಾಡಲಾಗುತ್ತಿದೆ. ಈಗ ಹಲವು ಕಂಪನಿಗಳು ಎಸ್‌ಎಸ್ ವಿಚಾರವಾಗಿ ಆಸಕ್ತಿ ತಾಳಿವೆ' ಎಂದು ಬ್ರೋಕರೇಜ್ ಸಂಸ್ಥೆ ಸಿಎಲ್‌ಎಸ್‌ಎ ಹೇಳಿದೆ.

ಅಮೆಜಾನ್, ಟಾಟಾ, ಭಾರ್ತಿ ಏರ್‌ಟೆಲ್ ಬೆಂಬಲಿತ ಒನ್‌ವೆಬ್, ಲಾರ್ಸನ್ ಆ್ಯಂಡ್ ಟೂಬ್ರೊ ಕಂಪನಿಗಳು ಹರಾಜಿಗೆ ವಿರುದ್ಧವಾಗಿವೆ. ಆದರೆ ರಿಲಯನ್ಸ್ ಜಿಯೊ ಮತ್ತು ವೊಡಾಫೋನ್ ಐಡಿಯಾ ಹರಾಜಿನ ಪರ ಇವೆ ಎಂದು ಸಂಸ್ಥೆ ಹೇಳಿದೆ.

ಸರ್ಕಾರದ ಕೆಲವು ಅಧಿಕಾರಿಗಳು ತರಂಗಾಂತರ ಹಂಚಿಕೆಗೆ ಹರಾಜು ಪ್ರಕ್ರಿಯೆಯೇ ಅತ್ಯುತ್ತಮ ಎಂದು ಭಾವಿಸಿದ್ದಾರೆ ಎಂದು ಮೂಲಗಳು ಹೇಳುತ್ತವೆ. ಹೀಗೆ ಮಾಡುವುದರಿಂದ ಒಟಿಟಿ ಮೂಲಕ ಎಂತಹ ಕಾರ್ಯಕ್ರಮ ಪ್ರಸಾರ ಮಾಡಬಹುದು ಎಂಬ ವಿಚಾರವಾಗಿ ಒಂದಿಷ್ಟು ನಿಯಂತ್ರಣ ಸಾಧ್ಯವಾಗುತ್ತದೆ ಎಂದು ಅವರು ಭಾವಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹600
12 ಮೊಟ್ಟೆಗೆ	₹80

ಮೈಸೂರು

100 ಮೊಟ್ಟೆಗೆ	₹603

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹215-416

ದ್ವಿತಳಿ (ಬಿ.ವಿ) ₹187-544

ಏರುತ್ತಿದೆ ಟೊಮೆಟೊ ಧಾರಣೆ!

ಪ್ರಜಾವಾಣಿ ವಾರ್ತೆ

ಕೋಲಾರ: ಇಳುವರಿ ಕುಸಿತ, ಮಾರುಕಟ್ಟೆಯಲ್ಲಿ ತಗ್ಗಿದ ಆವಕ ಮತ್ತು ಹೊರರಾಜ್ಯಗಳಿಂದ ಕುದುರಿದ ಬೇಡಿಕೆಯಿಂದಾಗಿ 15 ದಿನಗಳಿಂದ ಟೊಮೆಟೊ ಧಾರಣೆ ಏರುಗತಿಯಲ್ಲಿ ಸಾಗಿದೆ.

ಕೋಲಾರ ಎಪಿಎಂಸಿ ಮಾರುಕಟ್ಟೆ ಹರಾಜಿನಲ್ಲಿ ಉತ್ತಮ ಗುಣಮಟ್ಟದ 15 ಕೆ.ಜಿ. ತೂಕದ ಬಾಕ್ಸ್ ಟೊಮೆಟೊಗೆ ₹1 ಸಾವಿರಕ್ಕೂ ಹೆಚ್ಚು ದರ ಸಿಗುತ್ತಿದೆ. ವಾರದ ಹಿಂದೆಯಷ್ಟೇ ಈ ಬೆಲೆ ₹550 ಇತ್ತು. ಕಳೆದ ತಿಂಗಳು ಕೇವಲ ₹200ಕ್ಕೆ 15 ಕೆ.ಜಿ. ಬಾಕ್ಸ್ ಟೊಮೆಟೊ ಹರಾಜಾಗಿತ್ತು.

ಈ ಬಾರಿ ಟೊಮೆಟೊ ಫಸಲು ಕಡಿಮೆ ಆಗಿದೆ. ಟೊಮೆಟೊ ಖರೀದಿಗೆಂದು ಹೊರರಾಜ್ಯದ ವರ್ತಕರು ಹೆಚ್ಚಿನ ಸಂಖ್ಯೆಯಲ್ಲಿ ಕೋಲಾರ ಮಾರುಕಟ್ಟೆಗೆ ಬರುತ್ತಿದ್ದಾರೆ. ಒಡಿಶಾ, ತಮಿಳುನಾಡು, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ, ಮಹಾರಾಷ್ಟ್ರ, ಗುಜರಾತ್, ಛತ್ತೀಸಗಡ, ರಾಜಸ್ಥಾನದಿಂದ ಹೆಚ್ಚಿನ ವರ್ತಕರು ಟೊಮೆಟೊ ಖರೀದಿಸಲು ಬರುತ್ತಿದ್ದಾರೆ. ಪ್ರತಿದಿನ ಇಲ್ಲಿಂದ 40ಕ್ಕೂ ಅಧಿಕ ಲಾರಿ ಲೋಡ್ ಟೊಮೆಟೊ ಹೊರ ರಾಜ್ಯಗಳಿಗೆ ಹೋಗುತ್ತಿದೆ. ಬಕ್ರೀದ್ ಕೂಡ ಸಮೀಪದಲ್ಲಿದ್ದು ಬೇಡಿಕೆ ಹೆಚ್ಚಿದೆ.

'ಊಜಿ ರೋಗದ ಕಾರಣ ಈ ಬಾರಿ ಟೊಮೆಟೊ ಇಳುವರಿ ಕಡಿಮೆ ಆಗಿದೆ. ಗುಣಮಟ್ಟ ತಗ್ಗಿದೆ. ಜೊತೆಗೆ ಹೊರರಾಜ್ಯಗಳ ವರ್ತಕರಿಂದಲೂ ಹೆಚ್ಚಿನ ಬೇಡಿಕೆ ಬರುತ್ತಿದೆ' ಎಂದು ಕೋಲಾರ ಎಪಿಎಂಸಿ ಮಾರುಕಟ್ಟೆಯ ಕಾರ್ಯದರ್ಶಿ ವಿಜಯಲಕ್ಷ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

ಶಿಕ್ಷಣ ಸಾಲ ಪಡೆಯುವುದು ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಒಳ್ಳೆಯ ಶಿಕ್ಷಣವು ಉತ್ತಮ ಭವಿಷ್ಯಕ್ಕೆ ಸೋಪಾನ. ವೃತ್ತಿ ಜೀವನದಲ್ಲಿ ಯಶಸ್ಸು ಕಾಣಬೇಕಾದರೆ ಉತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವುದು ಕೂಡ ಬಹಳ ಮುಖ್ಯವಾಗುತ್ತದೆ. ಆದರೆ ಶಿಕ್ಷಣದ ವೆಚ್ಚ ದಿನದಿಂದ ದಿನಕ್ಕೆ ದುಬಾರಿ ಆಗುತ್ತಿರುವುದರಿಂದ ಬಯಸಿದ ಕೋರ್ಸ್‌ಅನ್ನು ಒಳ್ಳೆಯ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವುದು ಆರ್ಥಿಕವಾಗಿ ಸವಾಲಾಗಿ ಪರಿಣಮಿಸುತ್ತಿದೆ. ಅಂದಾಜಿನ ಪ್ರಕಾರ ವರ್ಷದಿಂದ ವರ್ಷಕ್ಕೆ ಶಿಕ್ಷಣದ ವೆಚ್ಚ ಶೇಕಡ 15ರಿಂದ ಶೇ 20ರಷ್ಟು ಹೆಚ್ಚಳವಾಗುತ್ತಿದೆ.ಇಂತಹ ಸಂದರ್ಭದಲ್ಲಿ ನಿಮಗೆ ಹಣಕಾಸಿನ ನೆರವು ಒದಗಿಸಲು ಶಿಕ್ಷಣ ಸಾಲ ನೆರವಿಗೆ ಬರುತ್ತದೆ.

1. ಶಿಕ್ಷಣ ಸಾಲ ಎಂದರೇನು?: ದೇಶ ಅಥವಾ ವಿದೇಶದಲ್ಲಿ ಶಿಕ್ಷಣದ ಉದ್ದೇಶಕ್ಕಾಗಿ ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಒದಗಿಸುವ ಹಣಕಾಸಿನ ನೆರವು ಇದು. ಬ್ಯಾಂಕುಗಳು, ಶೈಕ್ಷಣಿಕ ಅರ್ಹತೆ ಮತ್ತು ಅಧ್ಯಯನ ಮಾಡಲು ಬಯಸಿರುವ ಕೋರ್ಸ್ ಆಧರಿಸಿ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ಒದಗಿಸುತ್ತವೆ.

2. ಶಿಕ್ಷಣ ಸಾಲ ಯಾವುದಕ್ಕೆ ಹಣ ಒದಗಿಸುತ್ತದೆ?: ನಿರ್ದಿಷ್ಟ ಕೋರ್ಸ್‌ನ ಶುಲ್ಕ ಭರಿಸುವ ಜೊತೆಗೆ ವಸತಿ ವೆಚ್ಚ, ಪುಸ್ತಕ, ಇತರ ಪಾಠೋಪಕರಣಗಳ ಖರ್ಚಿಗೂ ಶಿಕ್ಷಣ ಸಾಲದ ಹಣವನ್ನು ಬಳಸಬಹುದು.

3. ಯಾರು ಅರ್ಜಿ ಸಲ್ಲಿಸಬಹುದು?: ವಿದ್ಯಾರ್ಥಿಗಳು ಶಿಕ್ಷಣ ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ತಂದೆ–ತಾಯಿ, ಪತಿ-ಪತ್ನಿ, ಸೋದರ-ಸೋದರಿ ಸಹ-ಅರ್ಜಿದಾರ ಆಗಬಹುದು.

4. ಶಿಕ್ಷಣ ಸಾಲ ಯಾರಿಗೆ ಸಿಗುತ್ತದೆ?: ಭಾರತದಲ್ಲಿ ವಿದ್ಯಾಭ್ಯಾಸ ಮಾಡಬೇಕು ಎನ್ನುವವರಿಗೆ ಅಥವಾ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ಬಯಸುವವರಿಗೆ ಶಿಕ್ಷಣ ಸಾಲ ಸಿಗುತ್ತದೆ. ₹50 ಸಾವಿರದಿಂದ ಹಿಡಿದು ₹1 ಕೋಟಿಯವರೆಗೂ ಸಾಲ ಸೌಲಭ್ಯವನ್ನು ಬ್ಯಾಂಕುಗಳು ಒದಗಿಸುತ್ತವೆ.

5. ಯಾವ ಕೋರ್ಸ್‌ಗಳಿಗೆ ಸಾಲ ಸಿಗುತ್ತದೆ?: ಶಿಕ್ಷಣ ಸಾಲವನ್ನು ಪಾರ್ಟ್ ಟೈಂ ಕೋರ್ಸ್, ಫುಲ್ ಟೈಂ ಕೋರ್ಸ್, ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್, ಆಡಳಿತ ನಿರ್ವಹಣೆ ಪದವಿ, ವೈದ್ಯಕೀಯ ಶಿಕ್ಷಣ, ಹೋಟೆಲ್ ಮ್ಯಾನೇಜ್ಮೆಂಟ್ ಸೇರಿದಂತೆ ಹಲವು ವೃತ್ತಿಪರ ಕೋರ್ಸ್‌ಗಳಿಗೆ ಪಡೆಯಬಹುದು. ಯಾವ ಕೋರ್ಸ್‌ಗೆ ಸಾಲ ಕೊಡಬಹುದು ಎನ್ನುವುದರ ನಿರ್ಣಯ ಮಾಡುವಾಗ ಬ್ಯಾಂಕಿನ ಪಾತ್ರವೂ ಮುಖ್ಯವಾಗುತ್ತದೆ.

6. ಅರ್ಹತೆಗಳೇನು?: ಶಿಕ್ಷಣ ಸಾಲ ಪಡೆಯುವ ವಿದ್ಯಾರ್ಥಿ ಭಾರತೀಯ ಪ್ರಜೆಯಾಗಿರಬೇಕು. ವಯಸ್ಸು 18ರಿಂದ 35 ವರ್ಷಗಳ ಒಳಗಿರಬೇಕು. ನಿರ್ದಿಷ್ಟ ವಿದ್ಯಾರ್ಥಿಗೆ ದೇಶ ಅಥವಾ ವಿದೇಶದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ದೊರಕುವುದು ಖಾತರಿಯಾಗಿರಬೇಕು. ಸಾಲ ಪಡೆಯಲು ವಿದ್ಯಾರ್ಥಿ ತಂದೆ-ತಾಯಿ, ಪತಿ-ಪತ್ನಿ ಅಥವಾ ಸೋದರ-ಸೋದರಿಯನ್ನು ಸಹ ಅರ್ಜಿದಾರರನ್ನಾಗಿಸುವುದು ಮುಖ್ಯವಾಗುತ್ತದೆ.

ಸಹ ಅರ್ಜಿದಾರರು ನಿಗದಿತ ಮಾಸಿಕ ಆದಾಯ ಹೊಂದಿರಬೇಕು. ಇದಲ್ಲದೆ ಅರ್ಜಿದಾರ ಶೈಕ್ಷಣಿಕ ದಾಖಲೆಗಳು, ಕೆವೈಸಿ ದಾಖಲೆಗಳನ್ನು ಒದಗಿಸಬೇಕು. ಉತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಒಳ್ಳೆಯ ಕೋರ್ಸ್‌ಗೆ ಸೇರಲು ಸಾಲ ಕೋರಿ ಅರ್ಜಿ ಸಲ್ಲಿಸಿದಾಗ ಮತ್ತು ಉತ್ತಮ ಶ್ರೇಣಿ ಹೊಂದಿದ್ದಾಗ ಶಿಕ್ಷಣ ಸಾಲ ಬೇಗ ಸಿಗುತ್ತದೆ.

7. ಎಷ್ಟು ಮಾದರಿಯ ಸಾಲಗಳಿವೆ?: ಶಿಕ್ಷಣ ಸಾಲದಲ್ಲಿ ಎರಡು ಮಾದರಿಗಳಿವೆ. ಒಂದನೆಯದು ಭದ್ರತೆ (ಸೆಕ್ಯೂರ್ಡ್) ಆಧರಿಸಿ ನೀಡುವ ಸಾಲ. ಮತ್ತೊಂದು, ಭದ್ರತೆಯಿಲ್ಲದೆ (ಅನ್ ಸೆಕ್ಯೂರ್ಡ್) ನೀಡುವ ಸಾಲ. ಸಾಮಾನ್ಯವಾಗಿ ₹4 ಲಕ್ಷದವರೆಗಿನ ಸಾಲಕ್ಕೆ ಬ್ಯಾಂಕ್‌ಗಳು ಭದ್ರತೆ ಕೇಳುವುದಿಲ್ಲ. ಈ ಸಾಲಕ್ಕೆ ಬಡ್ಡಿ ದರ ಹೆಚ್ಚಿಗೆ ಇರುತ್ತದೆ.

ಬ್ಯಾಂಕುಗಳು ಪೋಷಕರನ್ನು ಸಹ ಅರ್ಜಿದಾರರನ್ನಾಗಿ ಮಾಡುತ್ತವೆ. ಇಂತಹ ಸಾಲಗಳನ್ನು ಭದ್ರತೆ (ಸೆಕ್ಯೂರ್ಡ್) ಸಾಲ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ ವಿದ್ಯಾರ್ಥಿ ಸಾಲ ಮರುಪಾವತಿ ತಪ್ಪಿಸಿದರೆ ಪೋಷಕರು ಅದರ ಜವಾಬ್ದಾರಿ ಹೊರಬೇಕಾಗುತ್ತದೆ. ಸಾಮಾನ್ಯವಾಗಿ ₹4 ಲಕ್ಷದಿಂದ ₹8 ಲಕ್ಷದ ವರೆಗಿನ ಸಾಲಕ್ಕೆ ಜಾಮೀನುದಾರರು ಬೇಕಾಗುತ್ತಾರೆ. ಸಾಲದ ಮೊತ್ತ ₹8 ಲಕ್ಷಕ್ಕಿಂತ ಅಧಿಕವಾದರೆ ಕೃಷಿ ಭೂಮಿ, ನಿವೇಶನ, ಮನೆ, ಇನ್ನಿತರ ಆಸ್ತಿಗಳನ್ನು ಅಡಮಾನದ ರೂಪದಲ್ಲಿ ಇಡಬೇಕಾಗುತ್ತದೆ.

8. ಶಿಕ್ಷಣ ಸಾಲದ ಬಡ್ಡಿ ದರ: ಶಿಕ್ಷಣ ಸಾಲದ ಮೊತ್ತ ಮತ್ತು ಅವಧಿ ಆಧರಿಸಿ ಬಡ್ಡಿ ದರ ನಿರ್ಧಾರವಾಗುತ್ತದೆ. ಒಂದೊಂದು ಬ್ಯಾಂಕಿನಲ್ಲಿ ಒಂದೊಂದು ಮಾದರಿಯ ಬಡ್ಡಿ ದರವಿದೆ. ಸಾಮಾನ್ಯವಾಗಿ ಶೇ 8.20ರಿಂದ ಶೇ 16ರವರೆಗೂ ಬಡ್ಡಿ ವಿಧಿಸಲಾಗುತ್ತದೆ. ರೆಪೊ ದರಕ್ಕೆ ಅನುಗುಣವಾಗಿ ಅದು ಬದಲಾಗುತ್ತದೆ.

9. ಸಾಲ ಮರುಪಾವತಿ ಹೇಗೆ?: ಸಾಮಾನ್ಯವಾಗಿ ಕೋರ್ಸ್ ಮುಗಿಸಿದ 1 ವರ್ಷ ಅಥವಾ ಕೆಲಸಕ್ಕೆ ಸೇರಿದ 6 ತಿಂಗಳ ಬಳಿಕ ಶಿಕ್ಷಣ ಸಾಲದ ಮರುಪಾವತಿ ಆರಂಭವಾಗುತ್ತದೆ. ಸಾಲದ ಮರುಪಾವತಿಗೆ 5ರಿಂದ 7 ವರ್ಷಗಳ ಮಿತಿಯಿದ್ದರೂ ಬ್ಯಾಂಕಿಗೆ ಮನವಿ ಸಲ್ಲಿಸಿ ಅವಧಿ ವಿಸ್ತರಿಸಿಕೊಳ್ಳಬಹುದು. ಪಡೆದಿರುವ ಸಾಲಕ್ಕೆ ಕೋರ್ಸ್‌ನ ಅವಧಿಯಲ್ಲಿ ಬ್ಯಾಂಕ್ ಬಡ್ಡಿಯನ್ನು ವಿಧಿಸುತ್ತದೆ. ಅದನ್ನೂ ಸೇರಿಸಿ ಮರುಪಾವತಿ ಮಾಡಬೇಕಾಗುತ್ತದೆ.

10. **ತೆರಿಗೆ ವಿನಾಯಿತಿ ಏನು?:** ಶಿಕ್ಷಣ ಸಾಲದ ಮೇಲಿನ ಬಡ್ಡಿ ಪಾವತಿಗೆ ಆದಾಯ ತೆರಿಗೆಯ ಸೆಕ್ಷನ್ 80ಇ ಅಡಿ ವಿನಾಯಿತಿ ಸಿಗುತ್ತದೆ. ತೆರಿಗೆ ವಿನಾಯಿತಿಯನ್ನು ವಿದ್ಯಾರ್ಥಿ ಅಥವಾ ಆತನ ಪೋಷಕರು ಪಡೆದುಕೊಳ್ಳಬಹುದು. ಉದಾಹರಣೆಗೆ ತೆರಿಗೆಗೆ ಒಳಪಡುವ ನಿಮ್ಮ ವಾರ್ಷಿಕ ಆದಾಯ ₹12 ಲಕ್ಷವಿದ್ದು ₹2 ಲಕ್ಷವನ್ನು ಶಿಕ್ಷಣ ಸಾಲದ ಬಡ್ಡಿ ಬಾಬ್ತಿಗೆ ಕಟ್ಟಿದ್ದೀರಿ ಎಂದಾದರೆ ₹10 ಲಕ್ಷದ ಮೇಲೆ ಮಾತ್ರ ತೆರಿಗೆ ಕಟ್ಟಬೇಕಾಗುತ್ತದೆ. ₹12 ಲಕ್ಷದ ಮೇಲೆ ತೆರಿಗೆ ಕಟ್ಟಬೇಕಾಗುವುದಿಲ್ಲ.

ಶಿಕ್ಷಣ ಸಾಲ ಒಂದು ಒಳ್ಳೆಯ ಸಾಧನ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ನಿಮಗೆ ನೌಕರಿ ಖಾತರಿಪಡಿಸದ ಕೋರ್ಸ್‌ಗಳನ್ನು ಓದಲು ಶಿಕ್ಷಣ ಸಾಲ ಪಡೆಯಬೇಡಿ. ಇದರಿಂದ ಯಾವುದೇ ಪ್ರಯೋಜನವಾಗದು. ಸಾಲದ ಹೊರೆ ಅನಗತ್ಯವಾಗಿ ನಿಮ್ಮ ಮೇಲೆ ಬೀಳುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ನಾಲ್ಕು ವಾರಗಳ ಬಳಿಕ ಕುಸಿತ

ಸತತ ನಾಲ್ಕು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಸೆನ್ಸೆಕ್ಸ್ ಕುಸಿತ ಕಂಡಿದೆ. ಜೂನ್ 23ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆಯಾಗಿವೆ. 62,979 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.63ರಷ್ಟು ಕುಸಿತ ಕಂಡಿದೆ. 18,665 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.85ರಷ್ಟು ಇಳಿಕೆ ದಾಖಲಿಸಿದೆ. ಅಮೆರಿಕ ಫೆಡರಲ್ ಬ್ಯಾಂಕ್ ಮುಂದಿನ ದಿನಗಳಲ್ಲಿ ಮತ್ತಷ್ಟು ಬಡ್ಡಿ ಹೆಚ್ಚಳ ಮಾಡಲಿದೆ ಎಂಬ ಮುನ್ಸೂಚನೆ, ಬ್ಯಾಂಕ್ ಆಫ್ ಇಂಗ್ಲೆಂಡ್‌ನಿಂದ ಬಡ್ಡಿ ಹೆಚ್ಚಳ ಮತ್ತು ಮುಂಗಾರು ವಿಳಂಬವು ಷೇರು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ಎಲ್ಲ ಕ್ಷೇತ್ರಗಳೂ ಕುಸಿತ ದಾಖಲಿಸಿವೆ. ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 3.6ರಷ್ಟು ಕುಸಿದಿದೆ. ಲೋಹ ಸೂಚ್ಯಂಕ ಶೇ 3ರಷ್ಟು, ಅನಿಲ ಹಾಗೂ ತೈಲ, ಎಫ್‌ಎಂಸಿಜಿ ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕಗಳು ತಲಾ ಶೇ 2ರಷ್ಟು ಕುಸಿತ ದಾಖಲಿಸಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಹೆಚ್ಚು ಖರೀದಿ ಮಾಡಿಲ್ಲ. ಆದರೆ ದೇಶಿ ಸಾಂಸ್ಥಿಕ ಹೂಡಿಕೆದಾರರು ₹1,693.08 ಕೋಟಿ ಮೌಲ್ಯದ ಷೇರುಗಳನ್ನು ಪಡೆದುಕೊಂಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಎಂಟರ್‌ಪ್ರೈಸಸ್, ಅವೆನ್ಯೂ ಸೂಪರ್‌ಮಾರ್ಟ್, ಅಂಬುಜಾ ಸಿಮೆಂಟ್ಸ್, ಟಾಟಾ ಮೋಟರ್ಸ್ - ಡಿವಿಆರ್, ಬಂಧನ್ ಬ್ಯಾಂಕ್, ಅದಾನಿ ಟ್ರಾನ್ಸ್‌ಮಿಷನ್, ಎಸ್‌ಬಿಐ ಕಾರ್ಡ್ಸ್ ಆ್ಯಂಡ್ ಪೇಮೆಂಟ್ಸ್ ಮತ್ತು ಪೇಟಿಎಂ ಶೇ 6ರಿಂದ ಶೇ 10ರಷ್ಟು ಕುಸಿದಿವೆ.

ಮುನ್ನೋಟ: ಜುಲೈನಿಂದ ಕಂಪನಿಗಳ ಎರಡನೇ ತ್ರೈಮಾಸಿಕ ಫಲಿತಾಂಶ ಪ್ರಕಟಗೊಳ್ಳಲಿದ್ದು ಹೂಡಿಕೆದಾರರು ಅತ್ತ ಗಮನ ಹರಿಸಿದ್ದಾರೆ. ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕುಗಳು ಬಡ್ಡಿ ದರ ಹೇಗೆ ನಿಗದಿ ಮಾಡಲಿವೆ ಎನ್ನುವುದು ಕೂಡ ಜಾಗತಿಕ ಮಾರುಕಟ್ಟೆಗಳ ಮೇಲೆ ಪರಿಣಾಮ ಉಂಟುಮಾಡಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿ ಬೆಳವಣಿಗೆಗಳು ಷೇರುಪೇಟೆ ಮೇಲೆ ಪ್ರಭಾವ ಬೀರಲಿವೆ.

ಚಿಲ್ಲರೆ ಹಣದುಬ್ಬರ ಶೇ 4ಕ್ಕೆ ಇಳಿಸಲು ಪ್ರಯತ್ನ

ಹಣದುಬ್ಬರ ತಗ್ಗಿಸಲು ಎಲ್‌ನಿನೊ ಸವಾಲು: ಆರ್‌ಬಿಐ ಗವರ್ನರ್

ಮುಂಬೈ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರ ದರವನ್ನು ಶೇಕಡ 4ಕ್ಕೆ ತಗ್ಗಿಸುವ ಪ್ರಯತ್ನ ನಡೆಸಲಾಗುವುದು. ಆದರೆ, ಇದಕ್ಕೆ ಎಲ್–ನಿನೊ ಸವಾಲಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್‌ಬಿಐ ಅಂದಾಜು ಮಾಡಿರುವಂತೆಯೇ ದೇಶದ ಆರ್ಥಿಕತೆಯು ಶೇ 6.5ರಷ್ಟು ಬೆಳವಣಿಗೆ ಕಾಣುವ ವಿಶ್ವಾಸವಿದೆ ಎಂದು ಅವರು ತಿಳಿಸಿದ್ದಾರೆ.

ಮುಂಗಾರು ವಾಡಿಕೆಯಂತೆ ಇರುವ ನಿರೀಕ್ಷೆ ಇದ್ದರೂ ಎಲ್–ನಿನೊದ ಆತಂಕ ಇದೆ. ಇದರ ಪರಿಣಾಮ ಎಷ್ಟು ತೀವ್ರವಾಗಿ ಇರಲಿದೆ ಎನ್ನುವುದನ್ನು ನೋಡಬೇಕಿದೆ. ಹವಾಮಾನವು ಯಾವ ರೀತಿಯಲ್ಲಿ ಇರಲಿದೆ ಎನ್ನುವುದನ್ನೂ ಗಮನಿಸಬೇಕಿದೆ. ಅದು ಸಹ ಆಹಾರ ಹಣದುಬ್ಬರದ ಮೇಲೆ ಪರಿಣಾಮ ಬೀರಲಿದೆ ಎಂದು ದಾಸ್ ಹೇಳಿದ್ದಾರೆ.

ಕಳೆದ ವರ್ಷದ ಮೇ ತಿಂಗಳಿನಿಂದ ಈವರೆಗೆ ಒಟ್ಟು ರೆಪೊ ದರವನ್ನು 250 ಮೂಲಾಂಶದಷ್ಟು ಹೆಚ್ಚಿಸಲಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರವು ಪೂರೈಕೆ ವ್ಯವಸ್ಥೆಯನ್ನು ಸುಧಾರಿಸಲು ಹಲವು ಕ್ರಮಗಳನ್ನು ತೆಗೆದುಕೊಂಡಿತು. ಈ ಕಾರಣಗಳಿಂದಾಗಿ ಚಿಲ್ಲರೆ ಹಣದುಬ್ಬರವು ಮೇ ತಿಂಗಳಿನಲ್ಲಿ ಶೇ 4.25ಕ್ಕೆ ಇಳಿಕೆ ಕಂಡಿದೆ ಎಂದು ವಿವರಿಸಿದ್ದಾರೆ.

ಹಣದುಬ್ಬರದ ಪರಿಸ್ಥಿತಿಯನ್ನು ನಾವು ನಿರಂತರವಾಗಿ ಪರಿಶೀಲಿಸುತ್ತಿದ್ದೇವೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರವು ಶೇ 5.1ರಲ್ಲಿ ಇರುವ ನಿರೀಕ್ಷೆ ಇದೆ. ಅದನ್ನು ಶೇ 4ಕ್ಕೆ ಇಳಿಸುವ ಪ್ರಯತ್ನವನ್ನು ಮುಂದುವರಿಸಲಾಗುವುದು ಎಂದು ಹೇಳಿದ್ದಾರೆ.

ಸಾಲದ ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವ ಕುರಿತು ಮಾತನಾಡಿದ ಅವರು, 'ಬಡ್ಡಿದರಗಳು ಹಣದುಬ್ಬರದೊಂದಿಗೆ ನೇರವಾದ ಸಂಬಂಧ ಹೊಂದಿವೆ. ಹಣದುಬ್ಬರವು ಶೇ 4ಕ್ಕೆ ಇಳಿಕೆ ಕಂಡಲ್ಲಿ ಆರ್‌ಬಿಐ ಬಡ್ಡಿದರ ಕಡಿತ ಮಾಡಬಹುದು' ಎಂದಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧದಿಂದಾಗಿ ಸರಕುಗಳ ದರ ಏರಿಕೆ ಕಂಡಿತು. ಅದರಿಂದಾಗಿ ಹಣದುಬ್ಬರ ಪ್ರಮಾಣ ಹೆಚ್ಚಾಯಿತು. ಹಣದುಬ್ಬರದ ದೃಷ್ಟಿಯಿಂದ ಕಚ್ಚಾ ತೈಲ ದರವು ಆತಂಕ ಪಡುವ ಮಟ್ಟದಲ್ಲಿ ಇಲ್ಲ. ಕಚ್ಚಾ ತೈಲ ದರವು ಸದ್ಯ ಬ್ಯಾರಲ್‌ಗೆ 76 ಡಾಲರ್‌ಗೆ ಇಳಿದಿದೆ ಎಂದು ದಾಸ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಶೇ 16ರ ಮಟ್ಟದಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಗತಿ
- ಕಾರ್ಪೊರೇಟ್ ವಲಯದಿಂದ ಸಾಲಕ್ಕೆ ಹೆಚ್ಚಿನ ಬೇಡಿಕೆ
- ನಿರ್ವಹಿಸಬಹುದಾದ ಮಟ್ಟದಲ್ಲಿ ಚಾಲ್ತಿ ಖಾತೆ ಕೊರತೆ

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584 133, ರಾಯಚೂರು, ಕರ್ನಾಟಕ, ಭಾರತ

Email:- registrarrur@gmail.com, +918532200972 https://raichuruniversity.ac.in

ಕ್ರ.ಸಂ. ರಾವಿರಾ/ಆಡಳಿತ/ಟಿ9/2022–23/244 Date:23/06/2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ವತಿಯಿಂದ ವಿಶ್ವವಿದ್ಯಾಲಯಕ್ಕೆ ಅವಶ್ಯಕ ವಿರುವ ಗಣಕ ಯಂತ್ರ, ಲ್ಯಾಪಟಾಪ್, ಪ್ರಿಂಟರ್ ಹಾಗೂ ಇತರೇ, ವಿದ್ಯುನ್ಮಾನ ಉಪಕರಣಗಳನ್ನು ಖರೀದಿಸಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಶುಲ್ಕ ಹಾಗೂ ಇಎಂಡಿಯನ್ನು ಇ–ಪೋರ್ಟಲ್ ಪ್ರಕಾರ (ಕೊನೆಯ ದಿನಾಂಕ: 30/06/2023) ಸಲ್ಲಿಸಬೇಕು. ಹೆಚ್ಚಿನ ಮಾಹಿತಿಯನ್ನು www.eproc. karnataka. gov ರಿಂದ ಪಡೆಯಬಹುದು.

ವಿ.ಸೂ: ಟೆಂಡರ್‌ನಲ್ಲಿ ಯಾವುದೇ ಬದಲಾವಣೆಯಾದಲ್ಲಿ ಇ–ಟೆಂಡರ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

DIP/RCR/42/KSMC&A/Job No.37/2023-24

ಡಬ್ಲ್ಯುಎಫ್‌ಐ: ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಕಾರಣಕ್ಕೆ ಅಸ್ಸಾಂ ಕುಸ್ತಿ ಸಂಸ್ಥೆ ತಕರಾರು

ಚುನಾವಣೆಗೆ ಹೈಕೋರ್ಟ್ ತಡೆಯಾಜ್ಞೆ

ಗುವಾಹಟಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಚುನಾವಣೆಯ ದಿನಾಂಕವನ್ನು ಈಗಾಗಲೇ ಹಲವು ಬಾರಿ ಮುಂದೂಡಲಾಗಿತ್ತು. ಇದೀಗ ಮತ್ತೊಮ್ಮೆ ಮುಂದೂಡಲಾಗುತ್ತಿದೆ.

ಜುಲೈ 11ರಂದು ನಿಗದಿಯಾಗಿರುವ ಚುನಾವಣೆಗೆ ಗುವಾಹಟಿ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಚುನಾವಣೆಗಾಗಿ ಸಿದ್ಧಪಡಿಸಲಾಗಿರುವ ಮತದಾರರ ಪಟ್ಟಿಯಲ್ಲಿ ತಮ್ಮ ಸಂಸ್ಥೆಯ ಹೆಸರು ಇಲ್ಲವೆಂದು ಆರೋಪಿಸಿರುವ ಅಸ್ಸಾಂ ಕುಸ್ತಿ ಸಂಸ್ಥೆಯು ಗುವಾಹಟಿ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದೆ. ಈ ಕುರಿತು ವಿಚಾರಣೆ ನಡೆಸಿದ ನ್ಯಾಯಾಲಯವು ಚುನಾವಣೆಗೆ ತಡೆಯಾಜ್ಞೆ ನೀಡಿದೆ.

ಡಬ್ಲ್ಯುಎಫ್‌ಐ ಚುನಾವಣೆಯನ್ನು ಅಡ್‌ಹಾಕ್ ಸಮಿತಿಯು ಜುಲೈ 11ಕ್ಕೆ ನಿಗದಿ ಮಾಡಿತ್ತು. ಅದಕ್ಕಾಗಿ ಮತದಾರರ ಪಟ್ಟಿಯನ್ನು ಅಂತಿಮಗೊಳಿಸಲು ಜೂನ್ 25 ಕೊನೆಯ ದಿನಾಂಕವಾಗಿತ್ತು.

'ತಮ್ಮ ಸಂಸ್ಥೆಗೆ ಮಾನ್ಯತೆ ನೀಡಬೇಕು ಎಂದು 2014ರ ನವೆಂಬರ್ 25ರಂದು ಗೊಂಡಾದಲ್ಲಿ ನಡೆದಿದ್ದ ಡಬ್ಲ್ಯುಎಫ್‌ಐ ಸರ್ವಸದಸ್ಯರ ಮಹಾಸಭೆಯಲ್ಲಿ ಶಿಫಾರಸು ಮಾಡಲಾಗಿತ್ತು. ಮಾನ್ಯತೆ ಪಡೆಯುವ ಎಲ್ಲ ಅರ್ಹತೆಗಳಿದ್ದರೂ ಮತದಾರ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿಲ್ಲ. ರಾಜ್ಯದಲ್ಲಿ ಕುಸ್ತಿ ಕ್ರೀಡೆಯ ಬೆಳವಣಿಗೆಗೆ ನಿರಂತರವಾಗಿ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ. ಡಬ್ಲ್ಯುಎಫ್‌ಐ ಮಾರ್ಗದರ್ಶನದಲ್ಲಿ ರಾಜ್ಯ ಟೂರ್ನಿಗಳನ್ನು ಆಯೋಜಿಸಲಾಗುತ್ತಿದೆ' ಎಂದು ಅಸ್ಸಾಂ ಕುಸ್ತಿ ಸಂಸ್ಥೆ ನ್ಯಾಯಾಲಯಕ್ಕೆ ತಿಳಿಸಿದೆ.

ಈ ಪ್ರಕರಣದ ವಿಚಾರಣೆಗೆ ಮುಂದಿನ ದಿನಾಂಕ ಪ್ರಕಟಿಸುವವರೆಗೂ ಚುನಾವಣೆಯನ್ನು ನಡೆಸುವಂತಿಲ್ಲ ಎಂದು ಡಬ್ಲ್ಯುಎಫ್‌ಐ ಹಾಗೂ ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಹೈಕೋರ್ಟ್ ಸೂಚಿಸಿದೆ. ಮುಂದಿನ ವಿಚಾರಣೆ ಜುಲೈ 17ರಂದು ನಡೆಯಲಿದೆ.

ಬೀದಿಗಿಳಿಯುವುದಿಲ್ಲ (ನವದೆಹಲಿ ವರದಿ): 'ಬ್ರಿಜ್‌ಭೂಷಣ್ ವಿರುದ್ಧದ ಹೋರಾಟ ಇನ್ನು ನ್ಯಾಯಾಲಯದಲ್ಲಿ ಮುಂದುವರಿಯಲಿದೆ. ಮತ್ತೆ ಬೀದಿಗಿಳಿದು ಪ್ರತಿಭಟನೆ ನಡೆಸುವುದಿಲ್ಲ' ಎಂದು ಕುಸ್ತಿಪಟುಗಳು ಹೇಳಿದ್ದಾರೆ.

'ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಯಲಿದೆ. ಈ ಹೋರಾಟ ಕೋರ್ಟ್‌ನಲ್ಲಿ ನಡೆಯಲಿದೆಯೇ ಹೊರತು, ಬೀದಿಯಲ್ಲಿ ಅಲ್ಲ' ಎಂದು ಸಾಕ್ಷಿ, ವಿನೇಶಾ ಮತ್ತು ಬಜರಂಗ್ ಟ್ವೀಟ್ ಮಾಡಿದ್ದಾರೆ. ಕೆಲದಿನಗಳ ಕಾಲ ಸಾಮಾಜಿಕ ಮಾಧ್ಯಮಗಳಲ್ಲಿ ಯಾವುದೇ ಪೋಸ್ಟ್ ಹಾಕುವುದಿಲ್ಲ ಎಂದೂ ಅವರು ತಿಳಿಸಿದ್ದಾರೆ.

ಪತ್ರ ಬಹಿರಂಗ ಮಾಡಿದ ವಿನೇಶಾ

ವಿನೇಶಾ

ನವದೆಹಲಿ (ಪಿಟಿಐ): ಪ್ರತಿಭಟನೆನಿರತ ಕುಸ್ತಿಪಟುಗಳು ತಾವು ಏಷ್ಯನ್ ಕ್ರೀಡಾಕೂಟದ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸುವ ಕುರಿತು ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಬರೆದಿದ್ದ ಪತ್ರವೊಂದನ್ನು ಕುಸ್ತಿಪಟು ವಿನೇಶಾ ಫೋಗಟ್ ಬಹಿರಂಗಪಡಿಸಿದ್ದಾರೆ.

ವಿನೇಶಾ ಅವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿರುವ ಈ ಪತ್ರದಲ್ಲಿ ದಿನಾಂಕದ ಉಲ್ಲೇಖವಿಲ್ಲ. ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರಿಗೆ ಪತ್ರ ಬರೆಯಲಾಗಿದೆ.

'ಈ ಪತ್ರದಲ್ಲಿ ಉಲ್ಲೇಖಿಸಲಾಗಿರುವ ಕುಸ್ತಿಪಟುಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಆದ್ದರಿಂದ ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಾಗಿ ನಡೆಯುವ ಟ್ರಯಲ್ಸ್‌ನಲ್ಲಿ ಭಾಗವಹಿಸುವ ಮುನ್ನ ಪೂರ್ವಸಿದ್ಧತೆಗಾಗಿ ಸಮಯಾವಕಾಶ ನೀಡಲು ಕೋರುತ್ತೇವೆ' ಎಂದು ಬರೆಯಲಾಗಿದೆ.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಬಜರಂಗ್ ಪೂನಿಯಾ (65ಕೆ.ಜಿ), ಸಾಕ್ಷಿ ಮಲಿಕ್ (62 ಕೆ.ಜಿ), ಸತ್ಯವ್ರತ್ ಕಾದಿಯಾನ್ (97 ಕೆ.ಜಿ), ಸಂಗೀತಾ ಫೋಗಟ್ (57ಕೆ.ಜಿ), ಜಿತೇಂದರ್ ಕುಮಾರ್ (86ಕೆ.ಜಿ) ಮತ್ತು ವಿನೇಶಾ ಫೋಗಟ್ ಅವರಿಗೆ ಕಾಲಾವಕಾಶ ನೀಡುವಂತೆ ಕೋರಲಾಗಿತ್ತು. ಈ ಆರು ಕುಸ್ತಿಪಟುಗಳೂ ಪತ್ರಕ್ಕೆ ಸಹಿ ಹಾಕಿದ್ದಾರೆ.

' ಈ ಕುಸ್ತಿಪಟುಗಳಿಗೆ 2023ರ ಆಗಸ್ಟ್ 10ರ ನಂತರ ಟ್ರಯಲ್ಸ್ ಆಯೋಜಿಸಬೇಕು' ಎಂದೂ ಮನವಿ ಮಾಡಲಾಗಿತ್ತು.

'ಧರನಿನಿರತ ಕುಸ್ತಿಪಟುಗಳು ಟ್ರಯಲ್ಸ್ ದಿನಾಂಕ ಮುಂದೂಡಲು ಮಾತ್ರ ಕೋರಿದ್ದರು. ಕಳೆದ ಆರು ತಿಂಗಳುಗಳಿಂದ ಧರಣಿಯಲ್ಲಿ ನಿರತರಾಗಿರುವುದರಿಂದ ಅಭ್ಯಾಸಕ್ಕಾಗಿ ಹೆಚ್ಚು ಸಮಯ ಸಿಕ್ಕಿಲ್ಲ. ಆದ್ದರಿಂದ ಈ ಮನವಿ ಮಾಡಿದ್ದೆವು' ಎಂದು ವಿನೇಶಾ ತಮ್ಮ ಟ್ವಿಟರ್‌ನಲ್ಲಿ ಬರೆದಿದ್ದಾರೆ.

ಬಜರಂಗ್ ಹೇಳಿಕೆ ಸುಳ್ಳು: ದತ್ ಕಿಡಿ

ಯೋಗೇಶ್ವರ್

'ನನ್ನ ವಿರುದ್ಧ ಕುಸ್ತಿ ಬೌಟ್‌ಗಳಲ್ಲಿ ಉದ್ದೇಶಪೂರ್ವಕವಾಗಿ ಸೋಲುವಂತೆ ಬಜರಂಗ್ ಅವರನ್ನು ಯಾವತ್ತೂ ಕೇಳಿಕೊಂಡಿಲ್ಲ. ಬಜರಂಗ್ ಅಪ್ಪಟ ಸುಳ್ಳು ಹೇಳುತ್ತಿದ್ದಾರೆ' ಎಂದು ಒಲಿಂಪಿಯನ್ ಕುಸ್ತಿಪಟು ಯೋಗೇಶ್ವರ್ ದತ್ ಕಿಡಿ ಕಾರಿದ್ದಾರೆ.

'2016ರ ಒಲಿಂಪಿಕ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಬಜರಂಗ್ ಕೂಡ 65 ಕೆ.ಜಿ ವಿಭಾಗದಲ್ಲಿದ್ದರು. ಆದರೆ ನಾವಿಬ್ಬರೂ ಹಣಾಹಣಿ ಮಾಡಿರಲಿಲ್ಲ. ಅಮಿತ್ ಧನಕರ್ ವಿರುದ್ಧ ಬಜರಂಗ್ ಸೋತಿದ್ದರು. ಫೈನಲ್ ಬೌಟ್‌ನಲ್ಲಿ ನಾನು ಅಮಿತ್ ಎದುರು ಸೆಣಸಾಡಿದ್ದೆ' ಎಂದಿದ್ದಾರೆ.

'ಪ್ರೊ ರೆಸ್ಲಿಂಗ್ ಲೀಗ್ ನಲ್ಲಿ ನಾವಿಬ್ಬರೂ ಹಣಾಹಣಿ ನಡೆಸಿದ್ದೆವು. ಅದರಲ್ಲಿ ನಾನು 3–0ಯಿಂದ ಗೆದ್ದಿದ್ದೆ. ನಾನು ಅವಾಗ ಮನಸ್ಸು ಮಾಡಿದ್ದರೆ ಇನ್ನೂ ಹೆಚ್ಚು ಅಂಕಗಳನ್ನು ಗಳಿಸಬಹುದಿತ್ತು. ಆದರೆ ಅದೊಂದು ಪ್ರದರ್ಶನ ಬೌಟ್ ಎಂಬುದು ಎಲ್ಲರಿಗೂ ಗೊತ್ತಿತ್ತು' ಎಂದು ದತ್ ಹೇಳಿದರು.

'2016ರ ಒಲಿಂಪಿಕ್‌ಗಿಂತ ಮೊದಲು ವಿದೇಶಕ್ಕೆ ಹೋದಾಗಲೆಲ್ಲ ನನ್ನೊಂದಿಗೆ ಬಜರಂಗ್ ಅವರನ್ನು ಕರೆದುಕೊಂಡು ಹೋಗುತ್ತಿದ್ದೆ. ಜೊತೆಯಾಗಿ ಅಭ್ಯಾಸ ಮಾಡಿದ್ದೆವು. ನನ್ನ ತೇಜೋವಧೆ ಮಾಡಲು ಅವರು ಏಕೆ ಪ್ರಯತ್ನಿಸುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ' ಎಂದಿದ್ದಾರೆ.

'2018ರಲ್ಲಿ ಬಜರಂಗ್ ಅವರು ತಾವು ಏಷ್ಯನ್ ಗೇಮ್ಸ್‌ಗೆ ಹಾಗೂ ನಾನು ಕಾಮನ್‌ವೆಲ್ತ್ ಕೂಟಕ್ಕೆ ಹೋಗಬೇಕೆಂದು ಹೇಳಿದ್ದರು. ಅದಕ್ಕೆ ನಾನು ಒಪ್ಪಿರಲಿಲ್ಲ. ಟ್ರಯಲ್ಸ್ ಮೂಲಕವೇ ಅರ್ಹತೆ ಪಡೆಯಲು ನಿರ್ಧರಿಸಿದ್ದೆ. ಅದರಿಂದಾಗಿ ಸಿಟ್ಟಿಗೆದ್ದಿದ್ದ ಬಜರಂಗ್ ನನ್ನೊಂದಿಗೆ ಮಾತುಕತೆ ಬಿಟ್ಟಿದ್ದರು' ಎಂದು ಹೇಳಿದ್ದಾರೆ.

ಯೋಗೇಶ್ವರ್ ಅವರು ತಮ್ಮೊಂದಿಗೆ ಹಲವು ಬಾರಿ ಕುಸ್ತಿ ಬೌಟ್‌ಗಳಲ್ಲಿ ಸೋಲುವಂತೆ ಕೇಳಿಕೊಂಡಿದ್ದರು ಎಂದು ಬಜರಂಗ್, ಶನಿವಾರ ಸಾಮಾಜಿಕ ಜಾಲತಾಣದ ಲೈವ್‌ನಲ್ಲಿ ಹೇಳಿದ್ದರು.

ಸರ್ವಿಸಸ್ ತಂಡಕ್ಕೆ ಪ್ರಶಸ್ತಿ

76ನೇ ರಾಷ್ಟ್ರೀಯ ವಾಟರ್ ಪೋಲೊ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಿಸಸ್ ತಂಡದವರು ಇಲ್ಲಿ ಕೊನೆಗೊಂಡ 76ನೇ ರಾಷ್ಟ್ರೀಯ ವಾಟರ್ ಪೋಲೊ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಬಸವನಗುಡಿ ಈಜುಕೇಂದ್ರದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಸರ್ವಿಸಸ್ 12–10 ಗೋಲುಗಳಿಂದ ರೈಲ್ವೇಸ್ ತಂಡವನ್ನು ಮಣಿಸಿತು. ಪೊಲೀಸ್ ತಂಡ, ಕಂಚಿನ ಪದಕ ತನ್ನದಾಗಿಸಿಕೊಂಡಿತು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಪೊಲೀಸ್ ತಂಡವನ್ನು 9–8 ರಲ್ಲಿ ಮಣಿಸಿದ ಕೇರಳ ತಂಡ ಚಾಂಪಿಯನ್ ಆದರೆ, ಮಹಾರಾಷ್ಟ್ರ ತಂಡ ಮೂರನೇ ಸ್ಥಾನ ಗಳಿಸಿತು.

ಪುರುಷರ ವಿಭಾಗದಲ್ಲಿ ಸರ್ವಿಸಸ್‌ನ ತಪಸ್ ಮೊಂಡಲ್ ಮತ್ತು ಮಹಿಳೆಯರ ವಿಭಾಗದಲ್ಲಿ ಕೇರಳದ ಆರ್.ಆರ್.ಕೃಪಾ ಅವರು 'ಶ್ರೇಷ್ಠ ಸ್ಪರ್ಧಿಗಳು' ಗೌರವಕ್ಕೆ ಪಾತ್ರರಾದರು.

ಪಲಕ್, ಸುರಜಿತ್ ಮಿಂಚು: ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ನಡೆದ ಡೈವಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸರ್ವಿಸಸ್‌ನ ಸುರಜಿತ್ ರಾಜಬನ್ಶಿ, ಪುರುಷರ 3ಮೀ. ಸ್ಪ್ರಿಂಗ್‌ಬೋರ್ಡ್‌ನಲ್ಲಿ ಅಗ್ರಸ್ಥಾನ ಪಡೆದರು. ಅವರು 333. 20 ಪಾಯಿಂಟ್ಸ್ ಸಂಗ್ರಹಿಸಿದರು. ಉತ್ತರ ಪ್ರದೇಶದ ಸತೀಶ್ ಕುಮಾರ್ ಪ್ರಜಾಪತಿ ಹಾಗೂ ಸರ್ವಿಸಸ್‌ನ ಲಂಡನ್ ಸಿಂಗ್ ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದ ಪ್ರಶಸ್ತಿಯನ್ನು ಮಧ್ಯಪ್ರದೇಶದ ಪಲಕ್ ಶರ್ಮಾ (181.60 ಪಾಯಿಂಟ್ಸ್) ತಮ್ಮದಾಗಿಸಿಕೊಂಡರು. ರೈಲ್ವೇಸ್‌ನ ಇಶಾ ವಾಘ್ಮೋರೆ ಮತ್ತು ಹೃತಿಕಾ ಶ್ರೀರಾಮ್ ಬಳಿಕದ ಸ್ಥಾನಗಳನ್ನು ಪಡೆದರು.

ವಾಟರ್ ಪೋಲೊ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಸರ್ವಿಸಸ್‌ನ ಅಂಕಿತ್ ಪ್ರಸಾದ್ (ಬಲ)ಗೋಲು ಗಳಿಸಲು ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ವಿಶೇಷ ಒಲಿಂಪಿಕ್ಸ್: ಭಾರತಕ್ಕೆ 157 ಪದಕ

ಬರ್ಲಿನ್ (ಪಿಟಿಐ): ಇಲ್ಲಿ ನಡೆಯುತ್ತಿರುವ ವಿಶೇಷ ಒಲಿಂಪಿಕ್ಸ್‌ನಲ್ಲಿ ಭಾರತದ ರೋಲರ್ ಸ್ಕೇಟಿಂಗ್ ಸ್ಪರ್ಧಿಗಳ ಪಾರುಪತ್ಯ ಮುಂದುವರಿಯಿತು. ಸ್ಪರ್ಧೆಯ ಕೊನೆಯ ದಿನ 2 ಚಿನ್ನ ಮತ್ತು ಮೂರು ಬೆಳ್ಳಿಯನ್ನು ಜಯಿಸುವ ಮೂಲಕ ಭಾರತ ಒಟ್ಟು 150 ಪದಕಗಳ ಗಡಿ ದಾಟಲು ನೆರವಾದರು.

ಕೂಟದ ತೆರೆಗೆ ಒಂದು ದಿನ ಬಾಕಿ ಇರುವಂತೆ ಭಾರತವು 157 ಪದಕಗಳನ್ನು ಗೆದ್ದುಕೊಂಡಿದೆ. ಅದರಲ್ಲಿ 66 ಚಿನ್ನ, 50 ಬೆಳ್ಳಿ, 41 ಕಂಚಿನ ಪದಕಗಳು ಸೇರಿಕೊಂಡಿವೆ.

ರೋಲರ್ ಸ್ಕೇಟರ್‌ಗಳಾದ ಅರ್ಯಾನ್ (300 ಮೀ) ಮತ್ತು ದೀಪನ್ (1000 ಮೀ) ಚಿನ್ನ ಗೆದ್ದರು. ಪುರುಷರ 5x5 ಬ್ಯಾಸ್ಕೆಟ್‌ಬಾಲ್ ತಂಡವು ಪೋರ್ಚುಗಲ್ ತಂಡವನ್ನು 6-3 ಅಂತರದಿಂದ ಮಣಿಸಿ ಚಿನ್ನ ಗೆದ್ದಿತು. ಆದರೆ, ಮಹಿಳೆಯರ 5x5 ತಂಡ ಫೈನಲ್‌ನಲ್ಲಿ ಸ್ವೀಡನ್ ವಿರುದ್ಧ ಸೋತು ಬೆಳ್ಳಿಗೆ ತೃಪ್ತಿಪಟ್ಟುಕೊಂಡಿತು.

ಮಹಿಳೆಯರ ವಾಲಿಬಾಲ್‌ನಲ್ಲಿ ಭಾರತವು ಯುಎಇ ತಂಡವನ್ನು ಮಣಿಸಿ ಚಿನ್ನ ಗೆದ್ದಿತು. ಪುರುಷರ ತಂಡ ಕಂಚು ಗೆದ್ದಿತು. ಮಹಿಳಾ ಹ್ಯಾಂಡ್‌ಬಾಲ್ ತಂಡವು ಬೆಳ್ಳಿ ಗೆದ್ದುಕೊಂಡಿತು. ಟೆನಿಸ್‌ನ ಪುರುಷರ ಸಿಂಗಲ್ಸ್‌ನಲ್ಲಿ ಸ್ವರಾಜ್ ಸಿಂಗ್ ಬೆಳ್ಳಿ ಗೆದ್ದರು.

16 ಕ್ರೀಡೆಗಳಲ್ಲಿ ಸ್ಪರ್ಧಿಸಲು ಭಾರತದ 198 ಅಥ್ಲೀಟ್‌ಗಳು ಭಾಗವಹಿಸಿದ್ದರು.

ಗಾಲ್ಫ್: ದೀಕ್ಷಾಗೆ ಕಿರೀಟ

ಬೆರೌನ್, ಜೆಕ್ ರಿಪಬ್ಲಿಕ್ (ಪಿಟಿಐ): ಭಾರತದ ಪ್ರತಿಭಾನ್ವಿತ ಗಾಲ್ಫರ್ ದೀಕ್ಷಾ ಡಾಗರ್, ಲೇಡಿಸ್ ಯುರೋಪಿಯನ್ ಟೂರ್‌ನಲ್ಲಿ (ಎಲ್‌ಇಟಿ) ಎರಡನೇ ಪ್ರಶಸ್ತಿ ಗೆದ್ದ ಸಾಧನೆ ಮಾಡಿದರು.

22 ವರ್ಷದ ದೀಕ್ಷಾ ಭಾನುವಾರ ಕೊನೆಗೊಂಡ ಟಿಪ್‌ಸ್ಪೋರ್ಟ್ ಜೆಕ್ ಲೇಡಿಸ್ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆದರು. ಅವರು ತಮ್ಮ ಮೊದಲ ಎಲ್‌ಇಟಿ ಪ್ರಶಸ್ತಿಯನ್ನು 2019 ರಲ್ಲಿ ಗೆದ್ದಿದ್ದರು. ಆ ವರ್ಷ ದಕ್ಷಿಣ ಆಫ್ರಿಕಾ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದರು. ಇದೀಗ ನಾಲ್ಕು ವರ್ಷಗಳ ಬಿಡುವಿನ ಬಳಿಕ ಮತ್ತೊಂದು ಕಿರೀಟ ಮುಡಿಗೇರಿಸಿಕೊಂಡರು.

ಎಲ್‌ಇಟಿ ಟೂರ್‌ನಲ್ಲಿ ಪ್ರಶಸ್ತಿ ಗೆದ್ದಿರುವ ಭಾರತದ ಗಾಲ್ಫರ್‌ಗಳು ಇಬ್ಬರು ಮಾತ್ರ. ಅದಿತಿ ಅಶೋಕ್ ಅವರು 2016 ರಲ್ಲಿ ಮೊದಲ ಬಾರಿ ಈ ಸಾಧನೆ ಮಾಡಿದ್ದರು. ಹರಿಯಾಣದ ದೀಕ್ಷಾ, ಎಲ್‌ಇಟಿ ಟೂರ್‌ನಲ್ಲಿ ಒಂಬತ್ತು ಸಲ 'ಟಾಪ್ 10' ರಲ್ಲಿ ಕಾಣಿಸಿಕೊಂಡಿದ್ದಾರೆ. ಈ ಋತುವಿನಲ್ಲಿ ನಾಲ್ಕು ಬಾರಿ ಅಂತಹ ಸಾಧನೆ ಮಾಡಿದ್ದಾರೆ.

ಭಾನುವಾರ ನಡೆದ ಅಂತಿಮ ಸುತ್ತಿನ ಸ್ಪರ್ಧೆಯನ್ನು ದೀಕ್ಷಾ, 69 ಸ್ಟ್ರೋಕ್‌ಗಳೊಂದಿಗೆ ಕೊನೆಗೊಳಿಸಿದರು. ಮೂರು ಸುತ್ತುಗಳಲ್ಲಿ (69–65–69) ಒಟ್ಟು 203 ಸ್ಕೋರ್ (13 ಅಂಡರ್) ಮಾಡಿದರು. ಭಾರತದ ಆಟಗಾರ್ತಿಗೆ ತಕ್ಕ ಪೈಪೋಟಿ ನೀಡಿದ ಥಾಯ್ಲೆಂಡ್‌ನ ತ್ರಿಚಟ್ ಚೀನ್‌ಗ್ಲಾಬ್ (73–70–64) ಎರಡನೇ ಸ್ಥಾನ ಪಡೆದರೆ, ಫ್ರಾನ್ಸ್‌ನ ಸೆಲಿನ್ ಹೆರ್ಬಿನ್ (69–72–67) ಮೂರನೇ ಸ್ಥಾನ ಗಳಿಸಿದರು. ತ್ರಿಚಟ್ ಅವರು ಕೊನೆಯ ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿದರಾದರೂ, ಮೊದಲ ಎರಡು ಸುತ್ತುಗಳಲ್ಲಿ ಹೆಚ್ಚಿನ ಸ್ಟ್ರೋಕ್‌ಗಳನ್ನು ತೆಗೆದುಕೊಂಡದ್ದು ಮುಳುವಾಗಿ ಪರಿಣಮಿಸಿತು. ದೀಕ್ಷಾ ಐದು ಶಾಟ್‌ಗಳ ಮುನ್ನಡೆಯೊಂದಿಗೆ ಅಂತಿಮ ಸುತ್ತಿನಲ್ಲಿ ಕಣಕ್ಕಿಳಿದಿದ್ದರು.

ಪ್ರಶಸ್ತಿಯೊಂದಿಗೆ ದೀಕ್ಷಾ ಡಾಗರ್

ಪ್ರಣವಿಗೆ 17ನೇ ಸ್ಥಾನ: ಕಣದಲ್ಲಿದ್ದ ಭಾರತದ ಇನ್ನೊಬ್ಬಳು ಆಟಗಾರ್ತಿ, ಪ್ರಣವಿ ಅರಸ್ ಜಂಟಿ 17ನೇ ಸ್ಥಾನ ಪಡೆದರು. ಮೂರು ಸುತ್ತುಗಳನ್ನು (75-68-69) ಪೂರೈಸಲು ಅವರು ಒಟ್ಟು 212 ಸ್ಟ್ರೋಕ್‌ಗಳನ್ನು (4 ಅಂಡರ್) ತೆಗೆದುಕೊಂಡರು. ಮೈಸೂರಿನ ಪ್ರಣವಿ ಅವರು ಎಲ್‌ಇಟಿನಲ್ಲಿ ತೋರಿದ ಉತ್ತಮ ಪ್ರದರ್ಶನ ಇದಾಗಿದೆ.

ಕರ್ನಾಟಕ ಒಲಿಂಪಿಕ್ ಸಂಸ್ಥೆಯ ವತಿಯಿಂದ ಭಾನುವಾರ ಕಂಠೀರವ ಕ್ರೀಡಾಂಗಣದಲ್ಲಿ ಒಲಿಂಪಿಕ್ ದಿನಾಚರಣೆಯ ಪ್ರಯುಕ್ತ ಆಯೋಜಿಸಿದ್ದ ಓಟಕ್ಕೆ ಬೆಂಗಳೂರು ನಗರದ ಪೊಲೀಸ್ ಕಮಿಷನರ್ ಬಿ. ದಯಾನಂದ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ, ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್, ಅಂತರರಾಷ್ಟ್ರೀಯ ಅಥ್ಲೀಟ್ ಪ್ರಮೀಳಾ ಅಯ್ಯಪ್ಪ ಚಾಲನೆ ನೀಡಿದರು. ಕೆಒಎ ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜು ಇದ್ದರು. ಓಟದಲ್ಲಿ ಕ್ರೀಡಾಪಟುಗಳು, ವಿದ್ಯಾರ್ಥಿಗಳು ಮತ್ತು ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್‌ಗಳು ಭಾಗವಹಿಸಿದ್ದರು.

ಹಾಕಿ ಶಿಬಿರ: 39 ಮಂದಿ ಆಯ್ಕೆ

ನವದೆಹಲಿ (ಪಿಟಿಐ): ಭಾರತ ಪುರುಷರ ಹಾಕಿ ತಂಡದ ಶಿಬಿರವನ್ನು ಸೋಮವಾರದಿಂದ ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಈ ತಂಡದಲ್ಲಿ 39 ಆಟಗಾರರು ಸ್ಥಾನ ಪಡೆದಿದ್ದಾರೆ. ಜುಲೈ 19ರವರೆಗೆ ಶಿಬಿರವು ನಡೆಯಲಿದೆ. ನಂತರ ತಂಡವು ಸ್ಪೇನ್‌ನ ಟೆರಾಸ್ಸಾಕ್ಕೆ ಪ್ರಯಾಣ ಬೆಳೆಸಲಿದೆ. ಜುಲೈ 25ರಿಂದ 30ರವರೆಗೆ ನಡೆಯಲಿರುವ ಸ್ಪ್ಯಾನಿಷ್ ಹಾಕಿ ಫೆಡರೇಷನ್ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಇಂಗ್ಲೆಂಡ್, ನೆದರ್ಲೆಂಡ್ ಮತ್ತು ಆತಿಥೇಯ ತಂಡದ ವಿರುದ್ಧ ಸ್ಪರ್ಧಿಸಲಿದೆ.

ಆಗಸ್ಟ್ 3ರಿಂದ ಚೆನ್ನೈನಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ನಡೆಯಲಿದ್ದು, ಅದರಲ್ಲಿ ಭಾರತ ಸೇರಿದಂತೆ ಕೊರಿಯಾ, ಮಲೇಷ್ಯಾ, ಪಾಕಿಸ್ತಾನ, ಜಪಾನ್ ಮತ್ತು ಚೀನಾ ತಂಡಗಳು ಭಾಗವಹಿಸಲಿವೆ.

ತಂಡ: ಗೋಲ್‌ಕೀಪರ್: ಕ್ರಿಶನ್ ಬಹದ್ದೂರ್ ಪಾಠಕ್, ಪಿ.ಆರ್. ಶ್ರೀಜೇಶ್, ಸೂರಜ್ ಕರ್ಕೇರ, ಪವನ್ ಮಲಿಕ್ ಮತ್ತು ಪ್ರಶಾಂತ್ ಕುಮಾರ್ ಚೌಹಾಣ್.

ಡಿಫೆಂಡರ್: ಹರ್ಮನ್‌ಪ್ರೀತ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ಸುರೇಂದರ್ ಕುಮಾರ್, ವರುಣ್ ಕುಮಾರ್, ಅಮಿತ್ ರೋಹಿದಾಸ್, ಗುರಿಂದರ್ ಸಿಂಗ್, ಜುಗ್ರಾಜ್ ಸಿಂಗ್, ಮನದೀಪ್ ಮೋರ್, ನೀಲಂ ಸಂಜೀಪ್, ಸಂಜಯ್, ಯಶದೀಪ್ ಸಿವಾಚ್, ದಿಪ್ಸನ್ ಟಿರ್ಕಿ ಮತ್ತು ಮಂಜೀತ್.

ಮಿಡ್‌ಫೀಲ್ಡರ್: ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಮೊಯರಂಗತೇಮ್ ರವಿಚಂದ್ರ ಸಿಂಗ್, ಶಂಶೇರ್ ಸಿಂಗ್, ನೀಲಕಂಠ ಶರ್ಮಾ, ರಾಜ್‌ಕುಮಾರ್ ಪಾಲ್, ಸುಮಿತ್, ಆಕಾಶದೀಪ್ ಸಿಂಗ್, ಗುರ್ಜಂತ್ ಸಿಂಗ್, ಮೊಹಮ್ಮದ್, ರಾಹೀಲ್ ಮೌಸೀನ್ ಮತ್ತು ಮಣಿಂದರ್ ಸಿಂಗ್.

ಫಾರ್ವರ್ಡ್: ಎಸ್. ಕಾರ್ತಿ, ಮನ್‌ದೀಪ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಅಭಿಷೇಕ್, ದಿಲ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಸಿಮ್ರಂಜೀತ್ ಸಿಂಗ್, ಶಿಲಾನಂದ್ ಲಾಕ್ರಾ ಮತ್ತು ಪವನ್ ರಾಜ್‌ಭರ್.

ಚೆಸ್: ಗಂಗಾಸ್‌ಗೆ ಮೊದಲ ಸೋಲು

ದುಬೈ (ಪಿಟಿಐ): ಸತತ ಮೂರು ಗೆಲುವುಗಳನ್ನು ಪಡೆದಿದ್ದ ಗಂಗಾಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡ, ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಭಾನುವಾರ ಮುಂಬಾ ಮಾಸ್ಟರ್ಸ್ ಎದುರು ಪರಾಭವಗೊಂಡಿತು.

ವಿಶ್ವನಾಥನ್ ಆನಂದ್ ಅವರು ಮ್ಯಾಕ್ಸಿಮ್ ಲಾಗ್ರೇವ್ ಎದುರು ಗೆದ್ದರೂ, ತಂಡದ ಇತರ ಸ್ಪರ್ಧಿಗಳು ನಿರಾಸೆ ಅನುಭವಿಸಿದರು. ಡಿ.ಹರಿಕಾ ಅವರು ಬೆಲಾ ಕೊಟೆನಶ್ವಿಲಿ ವಿರುದ್ಧ ಜಯಿಸಿ ಮುಂಬಾಗೆ ಉತ್ತಮ ಆರಂಭ ನೀಡಲು ಯಶಸ್ವಿಯಾದರು.

ಮತ್ತೊಂದು ಪಂದ್ಯದಲ್ಲಿ ಎಸ್‌ಜಿ ಅಲ್ಪೈನ್ ವಾರಿಯರ್ಸ್ 11–6 ರಲ್ಲಿ ಚಿಂಗಾರಿ ಗಲ್ಫ್ ಟೈಟನ್ಸ್ ತಂಡವನ್ನು ಮಣಿಸಿತು.

ಸ್ಯಾಫ್: ಬಾಂಗ್ಲಾದೇಶ, ಲೆಬನಾನ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶ ತಂಡದವರು ಮಾಲ್ಡೀವ್ಸ್ ವಿರುದ್ಧ ಗೆದ್ದು, ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸುವ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಪಂದ್ಯವನ್ನು ಬಾಂಗ್ಲಾದೇಶ 3–1 ಗೋಲುಗಳಿಂದ ಜಯಿಸಿತು. ಹಮ್ಜಾ ಮೊಹಮ್ಮದ್ ಅವರು 17ನೇ ನಿಮಿಷದಲ್ಲಿ ಮಾಲ್ಡೀವ್ಸ್ ತಂಡಕ್ಕೆ ಮುನ್ನಡೆ ತಂದಿತ್ತರೂ, ಬಾಂಗ್ಲಾ ತಂಡ ತಿರುಗೇಟು ನೀಡಿತು. ರಕೀಬ್ ಹೊಸೇನ್ (42), ತಾರಿಖ್ ಖಾಜಿ (67) ಹಾಗೂ ಶೇಕ್ ಮೊರ್ಸಲಿನ್ (90) ಅವರು ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಎರಡು ಪಂದ್ಯಗಳನ್ನು ಆಡಿರುವ ಬಾಂಗ್ಲಾದೇಶ ಮತ್ತು ಮಾಲ್ಡೀವ್ಸ್ ತಂಡಗಳು ತಲಾ ಮೂರು ಪಾಯಿಂಟ್ಸ್ ಹೊಂದಿವೆ. ಜೂನ್ 28 ರಂದು ನಡೆಯಲಿರುವ ಕೊನೆಯ ಲೀಗ್ ಪಂದ್ಯದಲ್ಲಿ ಇವೆರಡು ತಂಡಗಳು ಕ್ರಮವಾಗಿ ಲೆಬನಾನ್ ಹಾಗೂ ಭೂತಾನ್ ತಂಡಗಳನ್ನು ಎದುರಿಸಲಿವೆ. ಸೆಮಿಫೈನಲ್ ಪ್ರವೇಶಿಸಬೇಕಾದರೆ ಉಭಯ ತಂಡಗಳಿಗೂ ಕೊನೆಯ ಪಂದ್ಯದಲ್ಲಿ ದೊಡ್ಡ ಅಂತರದ ಗೆಲುವು ಅನಿವಾರ್ಯ.

ಸೆಮಿಗೆ ಲೆಬನಾನ್: ದಿನದ ಎರಡನೇ ಪಂದ್ಯದಲ್ಲಿ ಲೆಬನಾನ್ 4–1 ಗೋಲುಗಳಿಂದ ಭೂತಾನ್ ತಂಡವನ್ನು ಮಣಿಸಿತಲ್ಲದೆ, ಒಟ್ಟು ಆರು ಪಾಯಿಂಟ್ಸ್‌ಗಳೊಂದಿಗೆ ಸೆಮಿಫೈನಲ್ ಪ್ರವೇಶಿಸಿತು. ಮೊಹಮ್ಮದ್ ಸಾದಿಕ್ (11 ನೇ ನಿ.), ಅಲಿ ಅಲ್ ಹಾಜ್ (23), ಖಲೀಲ್ ಬದರ್ (35) ಮತ್ತು ಮಹ್ದಿ ಝ್ಯೆನ್ (43) ಅವರು ಲೆಬನಾನ್ ಪರ ಗೋಲು ಗಳಿಸಿದರು.

ಐಹಿಕಾ (ಎಡ) ಹಾಗೂ ಸುತೀರ್ಥಾ

ಟಿಟಿ: ಸುತೀರ್ಥಾ–ಐಹಿಕಾ ಚಾಂಪಿಯನ್

ನವದೆಹಲಿ (ಪಿಟಿಐ): ಭಾರತದ ಸುತೀರ್ಥಾ ಮುಖರ್ಜಿ ಮತ್ತು ಐಹಿಕಾ ಮುಖರ್ಜಿ ಅವರು ಟುನೀಷಿಯಾದಲ್ಲಿ ನಡೆದ ವಿಶ್ವ ಟೇಬಲ್ ಟೆನಿಸ್ ಕಂಟೆಂಡರ್ ಟೂರ್ನಿಯ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 11-5, 11-6, 5-11, 13-11 ರಿಂದ ಜಪಾನ್‌ನ ಮಿಯು ಕಿಹಾರ– ಮಿವಾ– ಹರಿಮೊಟೊ ಅವರನ್ನು ಮಣಿಸಿತು.

ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್‌.ರಾಹುಲ್ ಅವರು ಭಾನುವಾರ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ ಮಂಜುನಾಥ ಸ್ವಾಮಿಯ ದರ್ಶನ ಪಡೆದು ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಜತೆ ಮಾತುಕತೆ ನಡೆಸಿದರು. ಹೇಮಾವತಿ ವಿ.ಹೆಗ್ಗಡೆ, ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರೇಯಸ್ ಕುಮಾರ್ ಇದ್ದರು

‘ಸರ್ಫರಾಜ್ ಖಾನ್ ಫಿಟ್‌ನೆಸ್, ನಡವಳಿಕೆ ಸುಧಾರಣೆ ಅಗತ್ಯ’

ನವದೆಹಲಿ (ಪಿಟಿಐ): 'ಸರ್ಫರಾಜ್ ಖಾನ್ ತಮ್ಮ ಫಿಟ್‌ನೆಸ್ ಉತ್ತಮಪಡಿಸಿಕೊಳ್ಳಬೇಕು ಹಾಗೂ ಮೈದಾನದಾಚೆಯ ನಡವಳಿಕೆಯನ್ನು ಸುಧಾರಿಸಬೇಕು. ಆಗ ಅವರಿಗೆ ಭಾರತ ತಂಡದಲ್ಲಿ ಆಡುವ ಅವಕಾಶ ಸಿಗಬಹುದು' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ವೆಸ್ಟ್ ಇಂಡೀಸ್ ಪ್ರವಾಸಕ್ಕೆ ಆಯ್ಕೆ ಮಾಡಲಾಗಿರುವ ತಂಡದಲ್ಲಿ ಸರ್ಫರಾಜ್ ಖಾನ್ ಅವರಿಗೆ ಅವಕಾಶ ನೀಡದಿ ರುವ ಕುರಿತು ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಶನಿವಾರ ಅಸಮಾಧಾನ ವ್ಯಕ್ತಪಡಿಸಿದ್ದರು. ರಣಜಿ ಟ್ರೋಫಿ ಟೂರ್ನಿಗಳಲ್ಲಿ ಉತ್ತಮ ರನ್ ಪೇರಿಸಿರುವ ಸರ್ಫರಾಜ್‌ಗೆ ಅವಕಾಶ ನೀಡಬೇಕಿತ್ತು ಎಂದು ಅವರು ಪ್ರತಿಪಾದಿಸಿದ್ದರು.

ಈ ಕುರಿತು ಪ್ರತಿಕ್ರಿಯಿಸಿರುವ ಮಂಡಳಿಯ ಅಧಿಕಾರಿಯೊಬ್ಬರು, 'ಆಯ್ಕೆಯಾಗದಿರುವ ಕುರಿತು ಬರುತ್ತಿರುವ ಹೇಳಿಕೆಗಳನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ, ಸರ್ಫರಾಜ್ ಅವರನ್ನು ಪರಿಗಣಿಸದಿರುವ ಹಿಂದೆ ಕೆಲವು ಕಾರಣಗಳಿವೆ. ಆದರೆ ಅವರ ಕ್ರಿಕೆಟ್ ಸಾಧನೆ ಬಗ್ಗೆ ಎರಡು ಮಾತಿಲ್ಲ' ಎಂದಿದ್ದಾರೆ.

'ರಣಜಿ ಋತುಗಳಲ್ಲಿ ಸತತವಾಗಿ 900 ಕ್ಕೂ ಹೆಚ್ಚು ರನ್ ಗಳಿಸಿರುವ ಅವರನ್ನು ಪರಿಗಣಿಸದಿರಲು ಆಯ್ಕೆಗಾರರೇನು ಮೂರ್ಖರಲ್ಲ. ಇದರ ಹಿಂದೆ ಬಲವಾದ ಕಾರಣಗಳಿರಲೇಬೇಕಲ್ಲವೇ? ಪ್ರಮುಖವಾಗಿ ಅವರ ಫಿಟ್‌ನೆಸ್ ಅಂತರರಾಷ್ಟ್ರೀಯ ದರ್ಜೆಗೆ ಸರಿಹೊಂದುವಂತಿಲ್ಲ. ಅದಕ್ಕಾಗಿ ಅವರು ಬಹಳಷ್ಟು ಕಠಿಣ ಪ್ರಯತ್ನ ಮಾಡಬೇಕಿದೆ. ದೇಹತೂಕ ಇಳಿಸಿಕೊಳ್ಳುವುದು ಮುಖ್ಯ ವಾಗಿದೆ. ಕೇವಲ ಬ್ಯಾಟಿಂಗ್ ಮಾತ್ರವಲ್ಲದೆ ಉಳಿದ ವಿಭಾಗಗಳಲ್ಲಿಯೂ ಅವರು ಸಮರ್ಥರಾಗಿ ಆಡಬೇಕು' ಎಂದು ಹೇಳಿದ್ದಾರೆ.

ಸರ್ಫರಾಜ್ ಖಾನ್

ಕಳೆದ ವರ್ಷದ ದೆಹಲಿ ಎದುರಿನ ರಣಜಿ ಪಂದ್ಯವೊಂದರಲ್ಲಿ ಶತಕ ಬಾರಿಸಿದ ನಂತರ ಸರ್ಫರಾಜ್ ಸಂಭ್ರಮಿಸುವಾಗ ತೋರಿದ್ದ ಹಾವಭಾವ ಕೂಡ ಆಕ್ಷೇಪಾರ್ಹವಾಗಿದ್ದವು ಎನ್ನಲಾಗಿದೆ.

'ಮಯಂಕ್ ಅಗರವಾಲ್ ಒಂದು ಋತುವಿನಲ್ಲಿ ಸಾವಿರ ರನ್ ಗಳಿಸಿದ್ದಾಗ ಭಾರತ ತಂಡಕ್ಕೆ ಆಯ್ಕೆಯಾದರು. ಅದೇ ರೀತಿ ಹನುಮವಿಹಾರಿ ಭಾರತ ಎ ತಂಡದಲ್ಲಿ ತೋರಿದ್ದ ಆಟವನ್ನು ಪರಿಗಣಿಸಲಾಗಿತ್ತು. ಆಗಿನ ಆಯ್ಕೆ ಸಮಿತಿ ಮುಖ್ಯಸ್ಥ ಎಂ.ಎಸ್.ಕೆ. ಪ್ರಸಾದ್ ಅವರು ಈ ಆಟಗಾರರ ಐಪಿಎಲ್ ಸಾಧನೆಯನ್ನು ನೋಡಿರಲಿಲ್ಲ. ಈಗ ಶಿವಸುಂದರ್ ದಾಸ್ ಸಮಿತಿಯೂ ಅದೇ ಹಾದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ' ಎಂದೂ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶೂಟಿಂಗ್: ದರ್ಶನಾ, ಗನೀಮತ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಯುವ ಶೂಟರ್ ಗನೀಮತ್ ಸೆಖೊ ಮತ್ತು ದರ್ಶನಾ ರಾಠೋಡ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಮತ್ತು ಏಷ್ಯನ್ ಗೇಮ್ಸ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್, ಏಷ್ಯನ್ ಗೇಮ್ಸ್‌ಗೆ ತಂಡ; ಟ್ರ್ಯಾಪ್ (ಪುರುಷರ ವಿಭಾಗ): ಪೃಥ್ವಿರಾಜ್ ತೊಂಡೈಮನ್, ಕೈನನ್ ಚೆನಾಯ್, ಜೊರಾವರ್ ಸಿಂಗ್ ಸಂಧು; ಮಹಿಳೆಯರು: ಮನೀಷಾ ಕೀರ್, ಪ್ರೀತಿ ರಜಕ್, ರಾಜೇಶ್ವರಿ ಕುಮಾರಿ

ಸ್ಕೀಟ್ (ಪುರುಷರು): ಅನಂತ್‌ಜೀತ್ ಸಿಂಗ್, ಅಂಗದ್‌ವೀರ್ ಸಿಂಗ್, ಗುರುಜೋತ್ ಸಿಂಗ್.; ಮಹಿಳೆಯರು: ಗನೀಮತ್ ಸೆಖೊ, ಪರಿನಾಜ್ ಧಾಲೀವಾಲ್, ದರ್ಶನಾ ರಾಠೋಡ್

ಟ್ರ್ಯಾಪ್ ಮಿಕ್ಸಡ್ (ಏಷ್ಯನ್ ಗೇಮ್ಸ್‌ಗೆ ಮಾತ್ರ): ಪೃಥ್ವಿರಾಜ್/ ಮನೀಷಾ ಹಾಗೂ ಕೈನನ್/ ಪ್ರೀತಿ

ಸ್ಕೀಟ್ ಮಿಕ್ಸಡ್: ಅನಂತ್‌ಜೀತ್/ ಗನೀಮತ್ ಹಾಗೂ ಅಂಗದ್/ ಪರಿನಾಜ್

ರೈಸಿಂಗ್ ಸ್ಟಾರ್ ತಂಡಕ್ಕೆ ಜಯ

ಬೆಂಗಳೂರು: ರೈಸಿಂಗ್ ಸ್ಟಾರ್ ಬಿಸಿ ಮೈಸೂರು ತಂಡವು ರಾಜ್ಯ 'ಬಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಕೋರಮಂಗಲ ಎಸ್‌ಸಿ ತಂಡವನ್ನು 72–49ರಲ್ಲಿ ಮಣಿಸಿತು. ಅರ್ಪಣ್ (23 ಪಾಯಿಂಟ್ಸ್) ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇನ್ನೊಂದು ಪಂದ್ಯದಲ್ಲಿ ವಿವೇಕ್ಸ್ ಎಸ್‌ಸಿ ತಂಡವು 70–60ರ ಅಂತರದಲ್ಲಿ ಜೆಎಸ್‌ಸಿ ತಂಡವನ್ನು ಸೋಲಿಸಿತು.



VISIT YOUR NEAREST NEXA DEALERSHIP OR LOG ON TO WWW.NEXAEXPERIENCE.COM TO BOOK YOUR TEST DRIVE.

Contact us at 1800-200-[6392] 1800-102-[NEXA]
www.nexaexperience.com
NOW YOU CAN ALSO BOOK ONLINE

CONTACT YOUR NEAREST NEXA DEALER: WEST BANGALORE: NEXA NAGARBHAVI (BIMAL AUTO AGENCY PH: 08030693069), NEXA RAJAJINAGAR (VARUN MOTORS PVT. LTD. PH: 8884000042), NEXA RR NAGAR (KALYANI MOTORS PH: 9590990011), NORTH BANGALORE: NEXA HEBBAL ORR (VARUN MOTORS PVT. LTD. PH: 9513838777), NEXA YELAHANKA (MANDOVI MOTORS PVT. LTD. PH: 9916805500), EAST BANGALORE: NEXA ORR MARATHALLI (BIMAL AUTO AGENCY PH: 08030693069), NEXA BANASWADI (KALYANI MOTORS PH: 9590990011), CENTRAL BANGALORE: NEXA MUSEUM ROAD (PRATHAM MOTORS PH: 9880006006), NEXA PALACE (MANDOVI MOTORS PH: 7022623068), SOUTH BANGALORE: NEXA ELECTRONIC CITY (SURAKSHAA CAR CARE PVT. LTD. PH: 80-25732229, 8884442229), NEXA JP NAGAR (KALYANI MOTORS PH: 9590990011), NEXA SARJAPUR ROAD (PRATHAM MOTORS PH: 9008455550), NEXA KORAMANGALA (KATARIA AUTOMOBILES PVT. LTD. PH: 8046837002), TUMKUR: NEXA SIRA ROAD (SAKETH AUTOMOBILES PH: 9900500051).

Accessories and features shown may not be part of standard equipment. Black glass on the vehicle is due to lighting effect. Images used are for illustration purposes only.